ಭಾನುವಾರ, ಏಪ್ರಿಲ್ 27, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾಯ್ನೆಲದ ಪ್ರೀತಿ

ಪಾಕಿಸ್ತಾನವು ಭಾರತೀಯ ಪ್ರಜೆಗಳ ವೀಸಾ ರದ್ದು ಮಾಡಿದ ನಂತರ ವಾಘಾ ಗಡಿ ಮೂಲಕ ಸ್ವದೇಶಕ್ಕೆ ಮರಳಿದ ವೃದ್ಧೆಯೊಬ್ಬರು ಬಾಲಕನನ್ನು ಆಲಂಗಿಸಿದರು



Godrej | PROPERTIES
PRESENTING
GODREJ MSR CITY
DEVANAHALLI, BENGALURU
2 & 3 BHK HOMES IN
A MEDITERRANEAN-THEMED TOWNSHIP,
₹1.23 CR* ONWARDS
62-ACRE
TOWNSHIP
10 MINS**
FROM KEMPEGOWDA
INTERNATIONAL AIRPORT
50+
AMENITIES
Stock images for representation purpose only.
8506044677/8506051399
The Project is being developed by M S RAMAIAH VENTURES LLP, a part of Godrej Properties Limited Group. The project is registered as "BARCA AT GODREJ MSR CITY" with RERA No: PRM/KA/RERA/1250/303/PR/010425/007644, available at website: http://rera.karnataka.gov.in. Site Address: Barca at Godrej MSR City, KHATHA NO. 73/24/2/37/23-75/24/4/37/28-98/33/3/37/30-97/33, PID NO. 150300201900300149. Sy nos 37/17 (part), 37/23 (part), 37/24, 37/26 (part), 37/28 (part), 37/29 (part) & 37/30 of Akalenahalli - Mallenahalli Village, Kasaba Hobli, Devanahalli, Bengaluru rural. Stock images for representation purpose only. The Sale is subject to terms of Application Form and Agreement for Sale. All specifications of the unit shall be as per the final agreement between the Parties. Recipients are advised to apprise themselves of the necessary and relevant information of the project prior to making any purchase decisions. The official website of Godrej Properties Ltd. is www.godrejproperties.com. Please do not rely on the information provided on any other website. **Distance/duration mentioned is as per google maps. *T&C Apply.

ಭಾನುವಾರ, ಏಪ್ರಿಲ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 116 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

ಬಾಂಗ್ಲಾದೇಶದ ಅಕ್ರಮ ವಲಸಿಗರು ವಶಕ್ಕೆ 9
ಆರ್‌ಎಸ್‌ಎಸ್ ವಿರುದ್ಧ 'ಸಂವಿಧಾನ ಶಾಖೆ' 7
ಮಧ್ಯಮ ವರ್ಗಕ್ಕೆ ಚಿನ್ನ ಭಾರ 8
ಪಾಕ್ ಪಾಲಿನ ನೀರು ಗರಿಷ್ಠ ಬಳಕೆಯತ್ತ ಚಿತ್ತ 4

ಶಂಕಿತ ಉಗ್ರರ ಮನೆಗಳು ಧ್ವಂಸ

ಪಹಲ್ಗಾಮ್ ದಾಳಿ: ಭದ್ರತಾ ಪಡೆಗಳಿಂದ ನೂರಾರು ಮಂದಿ ವಶಕ್ಕೆ

• ಜುಲ್ಫೀಕರ್ ಮಜೀದ್

ಶ್ರೀನಗರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿ 26 ಜನರನ್ನು ಹತ್ಯೆ ಮಾಡಿದ ಬೆನ್ನಲ್ಲೇ ಭಯೋತ್ಪಾದಕರು ಹಾಗೂ ಅವರಿಗೆ ಬೆಂಬಲ ನೀಡುವವರ ನಿಗ್ರಹ ಕಾರ್ಯಾಚರಣೆಯನ್ನು ಚುರುಕುಗೊಳಿಸಿರುವ ಭದ್ರತಾ ಪಡೆಗಳು, ಲಷ್ಕರ್‌-ಎ-ತಯಬಾದ (ಎಲ್‌ಇಟಿ) ಐವರು ಉಗ್ರರ ಮನೆಗಳು ಸೇರಿ ಒಟ್ಟು ಆರು ಮನೆಗಳನ್ನು ಧ್ವಂಸಗೊಳಿಸಿದ್ದು, ನೂರಾರು ಶಂಕಿತರನ್ನು ಶನಿವಾರ ವಶಕ್ಕೆ ಪಡೆದಿವೆ.

'ನಮ್ಮ ಸಂಬಂಧಿಗಳು ಮಾಡಿದ ಕೃತ್ಯಕ್ಕಾಗಿ ಅಧಿಕಾರಿಗಳು ನಮಗೆ ಶಿಕ್ಷೆ ವಿಧಿಸುತ್ತಿದ್ದಾರೆ' ಎಂದು ಉಗ್ರರ ಕುಟುಂಬಗಳ ಸದಸ್ಯರು ಆರೋಪಿಸಿದ್ದಾರೆ.

ಜಮ್ಮು-ಕಾಶ್ಮೀರ ಪೊಲೀಸರ ತಂಡ ಹಾಗೂ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸುತ್ತಿವೆ.

ಪುಲ್ವಾಮಾ ಜಿಲ್ಲೆಯ ಮುರ್ರಾನ್ ಗ್ರಾಮದಲ್ಲಿ ಅಹ್ಸಾನ್ ಉಲ್ ಹಕ್ ಶೇಖ್‌ಗೆ ಸೇರಿದ ಎರಡು ಅಂತಸ್ತಿನ ಮನೆಯನ್ನು ಸ್ಫೋಟಕಗಳನ್ನು ಬಳಸಿ ನೆಲಸಮಗೊಳಿಸಲಾಗಿದೆ. 2023ರಲ್ಲಿ ಈತ ಎಲ್‌ಇಟಿ ಸೇರಿದ್ದ ಎನ್ನಲಾಗಿದೆ.

4ನೇ ಪುಟ ನೋಡಿ

ಕುಲ್ಗಾಮ್ ಜಿಲ್ಲೆ ಕೈಮೋಹದಲ್ಲಿರುವ ಶಂಕಿತ ಉಗ್ರ ಝಾಕೀರ್ ಅಹ್ಮದ್ ಗಾನಿ ಮನೆಯನ್ನು ಶನಿವಾರ ನೆಲಸಮಗೊಳಿಸಲಾಗಿದೆ —ಪಿಟಿಐ ಚಿತ್ರ

14 ಉಗ್ರರ ಪಟ್ಟಿ ಸಿದ್ಧ

ಜಮ್ಮು-ಕಾಶ್ಮೀರದಲ್ಲಿ ಸಕ್ರಿಯವಾಗಿರುವ 14 ಜನ ಸ್ಥಳೀಯ ಉಗ್ರರ ಪಟ್ಟಿಯನ್ನು ಭದ್ರತಾ ಪಡೆಗಳು ಸಿದ್ಧಪಡಿಸಿವೆ ಎಂದು ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ.

ಆದಿಲ್ ರೆಹಮಾನ್ ಡೆಂಟೂ(21), ಆಸಿಫ್ ಅಹ್ಮದ್ ಶೇಖ್(28), ಅಹ್ಸಾನ್ ಅಹ್ಮದ್ ಶೇಖ್(23), ಹ್ಯಾರಿಸ್ ನಜೀರ್ (20), ಆಮೀರ್ ನಜೀರ್ ವಾನಿ (20), ಯಾವರ್ ಅಹ್ಮದ್ ಭಟ್(24), ಆಸಿಫ್ ಅಹ್ಮದ್ ಖಂಡೆ(24), ನಾಸೀರ್ ಅಹ್ಮದ್ ವಾನಿ (21), ಶಹೀದ್ ಅಹ್ಮದ್ ಕುಟೆ(27), ಆಮೀರ್ ಅಹ್ಮದ್ ದರ್, ಜುಬೇರ್ ಅಹ್ಮದ್ ವಾನಿ(39), ಹರೂನ್ ರಶೀದ್ ಗಾನಿ(32) ಹಾಗೂ ಝಾಕೀರ್ ಅಹ್ಮದ್ ಗಾನಿ(29) ಹೆಸರು ಪಟ್ಟಿಯಲ್ಲಿವೆ.

4ನೇ ಪುಟ ನೋಡಿ

ಸೇನೆ ಕ್ರಮಕ್ಕೆ ಆಕ್ರೋಶ

ಉಗ್ರರು ಹಾಗೂ ಅವರಿಗೆ ನೆರವು ನೀಡಿದ ಆರೋಪ ಎದುರಿಸುತ್ತಿರುವವ ಮನೆಗಳನ್ನು ಧ್ವಂಸ ಮಾಡಿರುವರ ಭದ್ರತಾ ಪಡೆಗಳ ಕ್ರಮಕ್ಕೆ ಅವರ ಕುಟುಂಬಗಳಿಂದ ಆಕ್ರೋಶ ವ್ಯಕ್ತವಾಗಿದೆ.

4ನೇ ಪುಟ ನೋಡಿ

ನೀರು ನಿಲ್ಲಿಸಿದರೆ ರಕ್ತಪಾತ: ಭುಟ್ಟೊ

ಇಸ್ಲಾಮಾಬಾದ್ (ಪಿಟಿಐ/ ಎಎಫ್‌ಪಿ): 'ಪಾಕಿಸ್ತಾನಕ್ಕೆ ಹರಿಯುವ ನೀರನ್ನು ನಿಲ್ಲಿಸಲು



ಭಾರತವು ಮುಂದಾದರೆ ರಕ್ತಪಾತ ಆಗಲಿದೆ' ಎಂದು ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಅಧ್ಯಕ್ಷ ಬಿಲಾವಲ್ ಭುಟ್ಟೊ ಜರ್ದಾರಿ ಬೆದರಿಕೆ ಹಾಕಿದ್ದಾರೆ.

4ನೇ ಪುಟ ನೋಡಿ

ಒಳನೋಟ

ಚತುಷ್ಪಥದ ಕನವರಿಕೆಗೆ ಕೊನೆ ಎಂದು?

ಮಂಗಳೂರು: ವಾಯುಮಾರ್ಗ, ಜಲಮಾರ್ಗ, ಭೂಮಾರ್ಗ (ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ)... ಈ ಮೂರೂ ಬಗೆಯ ಸಂಪರ್ಕವನ್ನು ಹೊಂದಿರುವುದರ ಹೊರತಾಗಿಯೂ ಕರಾವಳಿಯ ಮಂಗಳೂರು ಮಳೆಗಾಲದಲ್ಲಿ ಯಾವುದೇ ಸಂದರ್ಭದಲ್ಲೂ ದ್ವೀಪವಾಗುವ, ಹೊರಗಿನ ಸಂಪರ್ಕ ವನ್ನೇ ಕಡಿದುಕೊಳ್ಳುವ ಅಪಾಯವನ್ನು ಎದುರಿಸುತ್ತಿದೆ. ಪಶ್ಚಿಮ ಘಟ್ಟದ ಘಾಟಿ ರಸ್ತೆಗಳಲ್ಲಿ ಆಗಾಗ ಸಂಭವಿಸುವ ಭೂಕುಸಿತವು ರೈಲು ಮಾರ್ಗ, ಹೆದ್ದಾರಿ ಸಂಚಾರವನ್ನು ತಡೆದರೆ, ವಿಪರೀತ ಮಳೆಯಿಂದ ಕೆಲವೊಮ್ಮೆ ವಿಮಾನ ಸಂಚಾರವೂ ಕೈಕೊಡುತ್ತದೆ. ಕಳೆದ ಕೆಲವು ವರ್ಷಗಳಿಂದ ಇದು 'ಸಂಪ್ರದಾಯ' ಎಂಬಂತೆ ನಡೆಯುತ್ತಿದೆ.

ವರದಿ ಪುಟ 6

ಚಿನಕುರುಳಿ
ಪ್ರಕಾಶ್ ಶೆಟ್ಟಿ

ರಾಜ್ಯದಲ್ಲಿ ದೀರ್ಘಾವಧಿ ವೀಸಾದಡಿ 88 ಮಂದಿ, ನಾಲ್ವರು ಅನಧಿಕೃತ ವಾಸ

ಪಾಕ್ ಪ್ರಜೆಗಳ ಪತ್ತೆ ಕಾರ್ಯ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಅನಧಿಕೃತವಾಗಿ ವಾಸವಾಗಿರುವ ಪಾಕಿಸ್ತಾನದ ಪ್ರಜೆಗಳ ಪತ್ತೆ ಕಾರ್ಯ ಚುರುಕುಗೊಂಡಿದೆ.

ಅಧಿಕೃತ ಹಾಗೂ ಅನಧಿಕೃತವಾಗಿ ನೆಲಸಿರುವ ಪಾಕ್ ಪ್ರಜೆಗಳ ತಪಾಸಣೆಯನ್ನು ಕೇಂದ್ರ ಗುಪ್ತಚರ ವಿಭಾಗದ ಅಧಿಕಾರಿಗಳು ನಡೆಸುತ್ತಿದ್ದಾರೆ. 88 ಮಂದಿ ದೀರ್ಘಾವಧಿ ವೀಸಾ (ಲಾಂಗ್ ಟರ್ಮ್ ವೀಸಾ) ಪಡೆದು ನೆಲಸಿದ್ದಾರೆ. ಉಳಿದವರು ಅಲ್ಪಾವಧಿ ವೀಸಾ ಪಡೆದು ನೆಲಸಿದ್ದರು. ಅನಧಿಕೃತ ವಾಸಿಗಳ ಗಡಿಪಾರಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

'ದೇಶದಲ್ಲಿರುವ ಪಾಕಿಸ್ತಾನಿ ಪ್ರಜೆಗಳನ್ನು ಪತ್ತೆಹಚ್ಚಿ ಗಡುವಿನೊಳಗೆ ಹೊರಹಾಕಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೂಚನೆ ನೀಡಿದ ಬೆನ್ನಲ್ಲೇ ಕರ್ನಾಟಕದಲ್ಲೂ ಕಾರ್ಯಾಚರಣೆ ಆರಂಭವಾಗಿದೆ. ಗುಪ್ತಚರ ವಿಭಾಗದ ಅಧಿಕಾರಿಗಳು ಪಾಕಿಸ್ತಾನ ಪ್ರಜೆಗಳ ಪತ್ತೆ ಕಾರ್ಯದಲ್ಲಿ ತೊಡಗಿದ್ದಾರೆ. ದಾಖಲೆ ಪಡೆದು ಅವುಗಳ ನೈಜತೆಯ ಪರಿಶೀಲನೆ ನಡೆಸುತ್ತಿದ್ದಾರೆ. ಅಕ್ರಮ ವಾಸ ಎಂಬುದು ಕಂಡುಬಂದರೆ ಅವರಿಗೆ ದೇಶ ತೊರೆಯುವಂತೆ ಅಧಿಕಾರಿಗಳು ಸೂಚನೆ ನೀಡುತ್ತಿದ್ದಾರೆ' ಎಂದು ಗೊತ್ತಾಗಿದೆ. ಅನಧಿಕೃತ ವಾಸಿಗಳು ಎರಡು ದಿನಗಳ ಒಳಗಾಗಿ ಕರ್ನಾಟಕದಿಂದ ಹೊರಕ್ಕೆ ಹೋಗುವಂತೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

4ನೇ ಪುಟ ನೋಡಿ

ಕೆಂಪೇಗೌಡ ಬಡಾವಣೆ ಅಭಿವೃದ್ಧಿಗೆ ವೇಗ

ರಸ್ತೆಗಳಿಗೆ ಡಾಂಬರೀಕರಣ, ಮತ್ತೊಂದು ವಿದ್ಯುತ್ ಉಪಕೇಂದ್ರ ನಿರ್ಮಾಣ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸುವ ಕಾರ್ಯಕ್ಕೆ ವೇಗ ನೀಡಲಾಗಿದೆ.

ಒಂಬತ್ತು ಬ್ಲಾಕ್‌ಗಳಲ್ಲೂ ರಸ್ತೆ, ವಿದ್ಯುತ್, ಚರಂಡಿ ವ್ಯವಸ್ಥೆ ಸೇರಿ ಮುಂತಾದ ಮೂಲಸೌಕರ್ಯ ಒದಗಿಸುವ ಕಾಮಗಾರಿಗಳು ನಡೆಯುತ್ತಿದೆ. ಶೇಕಡ 80ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಗಳು ಭರದಿಂದ ಸಾಗುತ್ತಿವೆ.

ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆ ನಡುವೆ ನಿರ್ಮಿಸಿರುವ ಈ ಬಡಾವಣೆಯ ನಿವೇಶನಗಳು 2016 ಮತ್ತು 2018ರಲ್ಲಿ ಹಂಚಿಕೆ ಆಗಿದ್ದವು. ಬಡಾವಣೆಯಲ್ಲಿ 9 ಬ್ಲಾಕ್‌ಗಳಿವೆ. 29 ಸಾವಿರ ನಿವೇಶನಗಳಿವೆ. 70 ಕುಟುಂಬಗಳಷ್ಟೇ ಮನೆ ನಿರ್ಮಿಸಿಕೊಂಡಿವೆ. 50ಕ್ಕೂ ಅಧಿಕ ಮನೆಗಳು ನಿರ್ಮಾಣ ಹಂತದಲ್ಲಿವೆ.

2022ರಿಂದ ಬಡಾವಣೆಯ ನಿವಾಸಿಗಳು, ನಿವೇಶನದಾರರು ಮೂಲ ಸೌಕರ್ಯ ಕಲ್ಪಿಸಲು ಕೋರಿ ನಗರಾಭಿವೃದ್ಧಿ ಇಲಾಖೆ, ರೇರಾ, ವಿಧಾನ ಮಂಡಲದ ಅರ್ಜಿ ಸಮಿತಿಗೂ ಮನವಿ ಸಲ್ಲಿಸಿದ್ದರು. ಭೂಸ್ವಾಧೀನ ವಿಳಂಬ ಹಾಗೂ ಹಣದ ಕೊರತೆಯಿಂದ ಮೂಲಸೌಕರ್ಯ ಒದಗಿಸುವ ಗಡುವು ವಿಸ್ತರಿಸಲಾಗುತ್ತಿತ್ತು. ಈಗ ಬಿಡಿಎ, ಅಭಿವೃದ್ಧಿಗೆ ವೇಗ ನೀಡಿದೆ.

'ವಿದ್ಯುತ್ ಪೂರೈಕೆ ಇಲ್ಲ. ಒಳಚರಂಡಿ ವ್ಯವಸ್ಥೆ ಸರಿ ಆಗಿಲ್ಲ. ಮನೆ ನಿರ್ಮಾಣಕ್ಕೆ ನೀರು ಸಿಗುತ್ತಿಲ್ಲ. ಹಾಗಾಗಿ ಮನೆ ಕಟ್ಟಲು ನಿವೇಶನ ಮಾಲೀಕರು ಮುಂದಾಗುತ್ತಿಲ್ಲ. ಕಾಮಗಾರಿ ಮುಗಿದಿದ್ದರೂ ಕೊಮ್ಮಘಟ್ಟ ವಿದ್ಯುತ್ ಉಪಕೇಂದ್ರ ಕಾರ್ಯಾರಂಭ ಮಾಡಿಲ್ಲ. ಮನೆ ನಿರ್ಮಾಣ ಪ್ರಾರಂಭಿಸಿರುವವರು ಹಾಗೂ ನಿವಾಸಿಗಳು ಸ್ವಂತ ವೆಚ್ಚದಲ್ಲಿ ಅಕ್ಕಪಕ್ಕದ ಹಳ್ಳಿಗಳು, ಖಾಸಗಿ ಬಡಾವಣೆಗಳ ವಿದ್ಯುತ್ ಕಂಬಗಳ ಮೂಲಕ ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾಗಿದೆ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆಯ ಜಂಟಿ ಕಾರ್ಯದರ್ಶಿ ಸೂರ್ಯಕಿರಣ್ ಆರೋಪಿಸಿದರು.

'ಕೆಂಪೇಗೌಡ ಬಡಾವಣೆಯ 1, 2, 3, 4, 8 ಮತ್ತು 9ನೇ ಬ್ಲಾಕ್‌ನ ರಸ್ತೆಗಳ ಡಾಂಬರೀಕರಣಕ್ಕೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿ ಪೂರ್ಣಗೊಳಿಸಲು 24 ತಿಂಗಳು ನೀಡಲಾಗಿದೆ. 6 ಮತ್ತು 7ನೇ ಬ್ಲಾಕ್ ರಸ್ತೆಗಳ ಡಾಂಬರೀಕರಣ ಶೇಕಡ 90 ಹಾಗೂ 5ನೇ ಬ್ಲಾಕ್ ರಸ್ತೆ ಡಾಂಬರೀಕರಣ ಶೇಕಡ 60 ಪೂರ್ಣಗೊಂಡಿದೆ' ಎಂದು ಬಿಡಿಎ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದರು.

3ನೇ ಪುಟ ನೋಡಿ

ಕೊಮ್ಮಘಟ್ಟದಲ್ಲಿ ನಿರ್ಮಿಸಿರುವ ವಿದ್ಯುತ್ ಉಪಕೇಂದ್ರ

107 ಸಿ.ಎ ನಿವೇಶನ

ಕೆಂಪೇಗೌಡ ಬಡಾವಣೆಯನ್ನು 4,043 ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ನಾಗರಿಕ ಸೌಲಭ್ಯ ನಿವೇಶನ (ಸಿ.ಎ) ಉದ್ದೇಶಕ್ಕೆ 387 ಎಕರೆ 20 ಗುಂಟೆ ಮೀಸಲಿಡಲಾಗಿದೆ.

ಭೂಸ್ವಾಧೀನ ಸಮಸ್ಯೆಯಿಂದಾಗಿ ಸದ್ಯ 2,694 ಎಕರೆ 24 ಗುಂಟೆ ಪ್ರದೇಶದಲ್ಲಿ ಬಡಾವಣೆ ಅಭಿವೃದ್ಧಿಪಡಿಸುತ್ತಿದ್ದು 232 ಎಕರೆ 2 ಗುಂಟೆಯಲ್ಲಿ 177 ಸಿ.ಎ ನಿವೇಶನ ರಚಿಸಬೇಕಿದೆ. ಸದ್ಯ 107 ನಿವೇಶನ ರಚಿಸಲಾಗಿದೆ. ಈ ಪೈಕಿ 90 ಅನ್ನು ಗುತ್ತಿಗೆ ಆಧಾರದಲ್ಲಿ ನೀಡಲು ಅಧಿಸೂಚನೆ ಹೊರಡಿಸಲಾಗಿದೆ.

ಚಿನ್ನ ಕಳ್ಳಸಾಗಣೆಗೆ ಆಫ್ರಿಕಾ ನಂಟು • ಜಾಂಬಿಯಾದಲ್ಲಿ ಭಾರತೀಯನ ಬಂಧನ

ಇಂಟರ್‌ಪೋಲ್‌ನ ಮಾಹಿತಿ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಂಬಿಯಾದಿಂದ ದುಬೈ ಮಾರ್ಗವಾಗಿ ಬೆಂಗಳೂರಿಗೆ 7 ಕೆ.ಜಿ. ಚಿನ್ನ ಕಳ್ಳಸಾಗಣೆ ಮಾಡಲು ಯತ್ನಿಸಿದ್ದ ಭಾರತೀಯನನ್ನು, ಜಾಂಬಿಯಾ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೊಳ್ಳಿ ಎಂದು ಇಂಟರ್‌ಪೋಲ್‌ಗೆ ಸಿಬಿಐ ಪತ್ರ ಬರೆದಿದೆ.

'ಜಾಂಬಿಯಾದ ರಾಜಧಾನಿ ಲೂಸಾಕದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇದೇ ಏಪ್ರಿಲ್ 19ರಂದು 27 ವರ್ಷದ ಭಾರತೀಯನನ್ನು ಅಲ್ಲಿನ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ. ಬಂಧಿತ ಭಾರತೀಯನಿಂದ ತಲಾ 1 ಕೆ.ಜಿ ತೂಕದ ಏಳು ಚಿನ್ನದ ಗಟ್ಟಿಗಳನ್ನು ವಶಕ್ಕೆ ಪಡೆದಿದ್ದಾರೆ' ಎಂದು ಸಿಬಿಐ ಮೂಲಗಳು ತಿಳಿಸಿವೆ.

'ಈ ವ್ಯಕ್ತಿ ಲೂಸಾಕದಿಂದ ದುಬೈಗೆ ವಿಮಾನಯಾನ ಟಿಕೆಟ್ ಖರೀದಿಸಿದ್ದು, ಅಲ್ಲಿಂದ ಬೆಂಗಳೂರಿಗೆ ಟಿಕೆಟ್ ಕಾಯ್ದಿರಿಸಿದ್ದ. ಈತನ ಹಿಂದೆ ದೊಡ್ಡ ಕಳ್ಳಸಾಗಣೆ ಜಾಲ ಇರುವ ಶಂಕೆ ಇದೆ. ಈ ಸಂಬಂಧ ಇಂಟರ್‌ಪೋಲ್‌ನ ನೆರವು ಕೇಳಲಾಗಿದೆ ಎಂದು ಜಾಂಬಿಯಾ ಕಸ್ಟಮ್ಸ್ ಅಧಿಕಾರಿಗಳು ಪ್ರಕಟಣೆ ಹೊರಡಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಜಾಂಬಿಯಾದಲ್ಲಿ ಬಂಧಿತನಾಗಿರುವ ಭಾರತೀಯ ವ್ಯಕ್ತಿ, ಆತನ ಮೂಲ ಮತ್ತು ವಿಮಾನ ಪ್ರಯಾಣದ ವಿವರಗಳನ್ನು ಹಂಚಿಕೊಳ್ಳುವಂತೆ ಇಂಟರ್‌ಪೋಲ್‌ಗೆ ಮನವಿ ಸಲ್ಲಿಸಲಾಗಿದೆ. ಜಾಂಬಿಯಾ ಕಸ್ಟಮ್ಸ್ ಅಧಿಕಾರಿಗಳು ಆ ವ್ಯಕ್ತಿಯ ವಿವರಗಳನ್ನು ಈಗಾಗಲೇ ಇಂಟರ್‌ಪೋಲ್ ಜತೆಗೆ ಹಂಚಿಕೊಂಡಿದ್ದು, ಅವು ಶೀಘ್ರವೇ ಸಿಬಿಐ ಅಧಿಕಾರಿಗಳಿಗೆ ಲಭ್ಯವಾಗುವ ನಿರೀಕ್ಷೆ ಇದೆ' ಎಂದು ಹೇಳಿವೆ.

'ಚಿನ್ನ ಕಳ್ಳಸಾಗಣೆ ಆರೋಪದಲ್ಲಿ ಬೆಂಗಳೂರಿನಲ್ಲಿ ನಟಿ ರನ್ಯಾ ರಾವ್ ಮತ್ತು ಮುಂಬೈನಲ್ಲಿ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈ ಎರಡೂ ಪ್ರಕರಣಗಳಲ್ಲಿ ಚಿನ್ನವನ್ನು ಆಫ್ರಿಕಾದಿಂದ ದುಬೈಗೆ ಸಾಗಿಸಿ, ಅಲ್ಲಿಂದ ಭಾರತಕ್ಕೆ ತಂದಿರುವ ಮಾಹಿತಿ ಇದೆ. ಜಾಂಬಿಯಾದಲ್ಲಿ ದಾಖಲಾದ ಪ್ರಕರಣಕ್ಕೂ, ಈ ಪ್ರಕರಣಗಳಿಗೂ ಸಂಬಂಧ ಇದೆಯೇ ಎಂದು ಪರಿಶೀಲಿಸಲಾಗುತ್ತಿದೆ' ಎಂದು ವಿವರಿಸಿವೆ.

ಇದೇ ಮಾರ್ಚ್‌ನಲ್ಲಿ ನಟಿ ರನ್ಯಾ ರಾವ್ ಅವರು ಚಿನ್ನ ಕಳ್ಳಸಾಗಣೆ ಮಾಡುವಾಗ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರೆವಿನ್ಯು ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಬಂಧಿಸಿತ್ತು. ಫೆಬ್ರುವರಿ ಕೊನೆಯ ವಾರದಲ್ಲಿ ಅದೇ ರೀತಿ ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಬ್ಬರು ವ್ಯಕ್ತಿಗಳನ್ನು ಡಿಆರ್‌ಐ ಬಂಧಿಸಿತ್ತು. ಈ ಎರಡೂ ಪ್ರಕರಣದಲ್ಲಿ ತನಿಖೆಗೆ ನೆರವು ನೀಡುವಂತೆ ಡಿಆರ್‌ಐ, ಸಿಬಿಐಗೆ ಪತ್ರ ಬರೆದಿತ್ತು.

ಪ್ರಕರಣದ ದಾಖಲಿಸಿಕೊಂಡಿದ್ದ ಸಿಬಿಐ, ಕಳ್ಳಸಾಗಣೆಯಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ ಕಸ್ಟಮ್ಸ್ ಅಧಿಕಾರಿಗಳ ಪಾತ್ರವಿದೆಯೇ ಎಂಬ ದಿಕ್ಕಿನಲ್ಲಿ ತನಿಖೆ ಆರಂಭಿಸಿತ್ತು. ಮುಂಬೈ ವಿಮಾನ ನಿಲ್ದಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೂವರು ಮತ್ತು ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಕರ್ತವ್ಯದಲ್ಲಿದ್ದ ಇಬ್ಬರು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. 'ಈ ಎರಡೂ ಪ್ರಕರಣಗಳಲ್ಲಿ ಆಫ್ರಿಕಾದಲ್ಲಿ ಚಿನ್ನ ಖರೀದಿಸಿ, ದುಬೈ ಮೂಲಕ ಭಾರತಕ್ಕೆ ಕಳ್ಳಸಾಗಣೆ ಮಾಡಿರುವ ಸಾಧ್ಯತೆ ದಟ್ಟವಾಗಿದೆ' ಎಂದು ಸಿಬಿಐ ಮೂಲಗಳು ಹೇಳಿದ್ದವು.

ಮುಖ್ಯಾಂಶಗಳು
- ಜಾಂಬಿಯಾದಿಂದ ದುಬೈ ಮೂಲಕ ಭಾರತಕ್ಕೆ ಚಿನ್ನ ಕಳ್ಳಸಾಗಣೆಗೆ ಯತ್ನ
- ಜಾಂಬಿಯಾದಲ್ಲಿ 27 ವರ್ಷದ ಭಾರತೀಯ ಪ್ರಜೆಯ ಬಂಧನ
- ದುಬೈನಿಂದ ಬೆಂಗಳೂರಿಗೆ ಟಿಕೆಟ್ ಖರೀದಿಸಿದ್ದ ಆರೋಪಿ

ಸುಧಾ, ಮಯೂರ ಓದಿರಿ

AIR FORCE SCHOOL, ASTE
GV Camp, Murugeshpalya, Bengaluru - 560 017
(Ph:080-25276920/ 25272332)

invites applications for the posts of

S.No	Post	Nature of Appointment
1	PGT (Business Studies)	Regular
2	PGT (Accountancy)	Regular
3	TGT (Social Studies)	Contractual
4	PRT	Regular and Contractual
5	Office Superintendent	Regular
6	Computer Lab Attendant	Contractual
7	Dance Teacher	Part-time
8	Helpers – Male/ Female	Regular and Panel

Details of qualifications and documents required to be checked on **www.afsaste.edu.in.** Hard copies of resume/CV, along with copies of education and experience testimonials, Aadhaar card, PAN card, one passport size photograph and covering letter stating the post applied for with complete contact details (i.e. present address, mobile nos, email id) should be submitted/posted to Air Force School, ASTE, **GV Camp, Murugeshpalya, Bengaluru - 560 017. Last date of receipt is 12 May 2025 upto 1200 hrs.**

School Management Committee (SMC) reserves the right of cancelling the selection process at any stage even after the advertisement without any notice or assigning any reason. Shortlisted candidates will be notified about the dates of the selection process through **e-mail only.**

PARAS

PARAS

ಅಂಬೇಡ್ಕರ್ ಅವರ ಬಗ್ಗೆ ಹಗುರ ಮಾತು ನಿಲ್ಲಿಸಿ: ಮಲ್ಲಿಕಾರ್ಜುನ ಖರ್ಗೆ

‘ದಲಿತರು ತಿರುಗಿ ಬಿದ್ದರೆ ಕಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಬೇಡ್ಕರ್ ಬಗ್ಗೆ ಹಗುರವಾದ ಮಾತುಗಳನ್ನು ಆಡುವುದನ್ನು ನಿಲ್ಲಿಸಿ. ದಲಿತರು ತಿರುಗಿ ಬಿದ್ದರೆ ತಡೆಯುವುದು ಕಷ್ಟ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಸಿದರು.

ಆನಂದ ಸೋಷಿಯಲ್ ಆ್ಯಂಡ್ ಎಜುಕೇಶನಲ್ ಟ್ರಸ್ಟ್, ಡಾ.ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಏರ್ಪಡಿಸಿದ್ದ ಕಾರ್ಯಕ್ರಮ ದಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ಅನಾವರಣಗೊಳಿಸಿ ಮತ್ತು ಒಳರೋಗಿಗಳ ಕಟ್ಟಡ ಮತ್ತು ಮಹಿಳಾ ವಸತಿ ನಿಲಯವನ್ನು ಉದ್ಘಾಟಿಸಿ ಅವರು ಶನಿವಾರ ಮಾತನಾಡಿದರು.

‘ಡಾ.ಬಿ.ಆರ್.ಅಂಬೇಡ್ಕರ್ ಅವರು ಮಾಡಿರುವ ಕೆಲಸವನ್ನು ಇನ್ನೂ ಕೆಲವರಿಗೆ ಮೆಚ್ಚಿಕೊಳ್ಳಲು ಆಗುತ್ತಿಲ್ಲ. ಅಂಬೇಡ್ಕರ್ ಒಬ್ಬರೇ ಸಂವಿಧಾನ ಮಾಡಿರೋದಾ ಎಂಬ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ದಲಿತರು ತಿರುಗಿ ಬಿದ್ದರೆ ತಡೆಯುವುದು ಕಷ್ಟ. ಇನ್ನು ಮುಂದೆ ಆ ರೀತಿಯ ಮಾತುಗಳನ್ನು ಯಾರೂ ಆಡಬಾರದು’ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಬುದ್ಧನ ಪ್ರತಿಮೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವ ಶರಣ ಪ್ರಕಾಶ ಪಾಟೀಲ ವಂದಿಸಿದರು ಪ್ರಜಾವಾಣಿ ಚಿತ್ರ

‘ಸಂವಿಧಾನ ಕರಡು ರಚನಾ ಸಮಿತಿಯಲ್ಲಿ ಅಂಬೇಡ್ಕರ್ ಒಬ್ಬರೇ ಇದ್ದಿದ್ದಲ್ಲ, ನಮ್ಮ ಜನರೂ ಇದ್ದರು ಎಂದೆಲ್ಲ ಮಾತನಾಡಿದ್ದಾರೆ. ಸಂವಿಧಾನ ಜಾರಿಯಾಗುವ ತನಕ ಪ್ರತಿ ಹಂತದಲ್ಲೂ ಅಂಬೇಡ್ಕರ್ ಕೊಡುಗೆ ಅಪಾರವಾಗಿತ್ತು. ಪ್ರತಿ ಆರ್ಟಿಕಲ್ ರಚಿಸಲು, ಮಂಡಿಸಲು ಗಾಢ ಅಧ್ಯಯನ ನಡೆಸಿದ್ದರು’ ಎಂದರು.

‘ಕರಡು ರಚನೆಯಲ್ಲಿ ಉಳಿದವರ ಪಾತ್ರ ಏನು ಎಂಬುದು ಸಂವಿಧಾನ ಜಾರಿಗಿಂತ ಹಿಂದಿನ ಸಭೆಯ ಭಾಷಣಗಳನ್ನು ಓದಿ ತಿಳಿದುಕೊಳ್ಳಲಿ. ದಲಿತರು ನಾನಾ ಕಾರಣಗಳಿಂದ ಹಿಂದೆ ಉಳಿದಿರಬಹುದು. ಮಾತನಾಡದೇ ಇದ್ದಿರಬಹುದು. ಇನ್ನು ಸುಮ್ಮನಿರುವುದಿಲ್ಲ. ಕೇವಲವಾಗಿ ಮಾತನಾಡುವವರು ಇದನ್ನು ಗಮನಿಸಬೇಕು’ ಎಂದು ಹೇಳಿದರು.

ಕರ್ನಾಟಕ ಪ್ರಗತಿ ಪರ ರಾಜ್ಯ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ ಎಂದು ಶ್ಲಾಘಿಸಿದರು.

ಸಚಿವರಾದ ದಿನೇಶ್ ಗುಂಡೂ ರಾವ್, ಶರಣ ಪ್ರಕಾಶ ಪಾಟೀಲ, ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕರಾದ ಎ.ಸಿ. ಶ್ರೀನಿವಾಸ್, ಎ.ಆರ್. ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಅಂಬೇಡ್ಕರ್ ಮಾಡಿರುವ ಕೆಲಸವನ್ನು ಇನ್ನೂ ಕೆಲವರಿಗೆ ಮೆಚ್ಚಿಕೊಳ್ಳಲು ಆಗುತ್ತಿಲ್ಲ
- ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ಕೊಡುಗೆ ಅಪಾರ

ಕ್ರೀಡೆ–ಸಾಂಸ್ಕೃತಿಕ ಕಾರ್ಯಕ್ರಮದ ವಿಜೇತರಿಗೆ ಬಹುಮಾನ

ಚುಂಚಾದ್ರಿ ಉತ್ಸವ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸಬಲೀಕರಣಕ್ಕಾಗಿ ಆಯೋಜಿಸಿದ್ದ ಎರಡು ದಿನಗಳ ‘ಚುಂಚಾದ್ರಿ ಉತ್ಸವ’ ಶನಿವಾರ ಸಂಪನ್ನವಾಯಿತು.

ರಾಜ್ಯ ಚುಂಚಾದ್ರಿ ಮಹಿಳಾ ಪ್ರತಿಷ್ಠಾನ, ಮಾತೃ ಮಿಲನ ಕ್ರೀಡೆ ಹಾಗೂ ಸಾಂಸ್ಕೃತಿಕ ಸಂಘ, ವಿಶ್ವ ಒಕ್ಕಲಿಗರ ಮಹಿಳಾ ವೇದಿಕೆ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಈ ಉತ್ಸವದ ಸಮಾರೋಪದಲ್ಲಿ, ಆದಿಚುಂಚನಗಿರಿ ಮಹಾಸಂಸ್ಥಾನದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

‘ನಮ್ಮ ಸತ್ಕರ್ಮಗಳಿಂದ ಮಾತ್ರ ನಮ್ಮನ್ನ ಟೀಕಿಸುವವರಿಗೆ ಉತ್ತರ ಕೊಡಲು ಸಾಧ್ಯ. ಬದುಕಿನಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶ ಸಿಗುವುದು ಪುಣ್ಯದ ಕೆಲಸ. ಆ ನಿಟ್ಟಿನಲ್ಲಿ ಈ ಪ್ರಯತ್ನ ಪ್ರಶಂಸನೀಯ’ ಎಂದು ಹೇಳಿದರು.

ಚುಂಚಾದ್ರಿ ಮಹಿಳಾ ಪ್ರತಿಷ್ಠಾನದ ಅಧ್ಯಕ್ಷೆ ಭಾರತಿ ಶಂಕರ್, ‘ಮಹಿಳೆಯರು ತಮ್ಮ ಅದಮ್ಯ ಸಾಮರ್ಥ್ಯ ಬಳಸಿಕೊಳ್ಳುವಂತೆ ಪ್ರೇರಣೆ ತುಂಬಲು ನಮ್ಮ ಸಂಘಟನೆ ರೂಪತಾಳಿದೆ. ಎಲ್ಲ ವರ್ಗದ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಿದ್ದೇವೆ. ಮಹಿಳೆ ಅಡುಗೆ ಮನೆಗೆ ಸೀಮಿತವಾಗಬಾರದು ಎಂಬ ಕಾರಣಕ್ಕೆ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ’ ಎಂದರು.

ಹೇಮಲತಾ ಗೋಪಾಲಯ್ಯ ಮತ್ತು ಭಾರತಿ ಶಂಕರ್ ಅವರು ಅಡಿಕೆ ಹೊಂಬಾಳೆ ಬಿಡಿಸುವುದರ ಮೂಲಕ ಚುಂಚಾದ್ರಿ ಉತ್ಸವ ಸಮಾರೋಪ ಸಮಾರಂಭ ಉದ್ಘಾಟಿಸಿದರು. (ಎಡದಿಂದ) ಅನಸೂಯ ಆನಂದ್, ಡಾ. ಪಲ್ಲವಿ ವಿ.ಆರ್, ಪ್ರಸನ್ನನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಎಂ.ಜಿ. ಬಾಲಕೃಷ್ಣ ಮತ್ತು ರಶ್ಮಿ ಅವಿಕಿರಣ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬಿಬಿಎಂಪಿ ಮಾಜಿ ಉಪ ಮೇಯರ್ ಹೇಮಲತಾ ಗೋಪಾಲಯ್ಯ ಹಾಗೂ ಕಿದ್ವಾಯಿ ಆಸ್ಪತ್ರೆಯ ಡಾ.ಪಲ್ಲವಿ ವಿ.ಆರ್. ಅವರಿಗೆ ‘ಯಶೋದರಾ ದಾಸಪ್ಪ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾದವರಿಗೆ ನಗದು ಬಹುಮಾನ ನೀಡಲಾಯಿತು. ಆದಿ ಚುಂಚನಗಿರಿ ಶಾಖಾಮಠ ಬೆಂಗಳೂರಿನ ಕಾರ್ಯದರ್ಶಿ ಸೌಮ್ಯನಾಥ ಸ್ವಾಮೀಜಿ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಈಸ್ಟ್ ವೆಸ್ಟ್ ಶಿಕ್ಷಣ ಸಂಸ್ಥೆಯ ರಶ್ಮಿ ರವಿಕಿರಣ, ಎಸ್‌ಎಂಇ ಎಂಟರ್ ಪ್ರೈಸಸ್‌ನ ಲೀಲಾ ರಾಜಶೇಖರ್, ವಿದ್ಯಾ ಪುಟ್ಟಣ್ಣ ಉಪಸ್ಥಿತರಿದ್ದರು.

ಪ್ರೆಸಿಡೆನ್ಸಿ ವಿವಿ: ಸಾಂಸ್ಕೃತಿಕ ಉತ್ಸವ

ಬೆಂಗಳೂರು: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯವು ನಗರದಲ್ಲಿ ಹಮ್ಮಿಕೊಂಡಿದ್ದ ‘ಯುಫೋರಿಯಾ’ ಸಾಂಸ್ಕೃತಿಕ ಉತ್ಸವ ಅದ್ದೂರಿಯಾಗಿ ನಡೆಯಿತು.

ವಿವಿಧ ನೃತ್ಯ ಪ್ರಕಾರಗಳ ಮೆರವಣಿಗೆಯೊಂದಿಗೆ ಪ್ರಾರಂಭವಾದ ಈ ಉತ್ಸವದಲ್ಲಿ, ಹುಲಿ ವೇಷ, ಡೊಳ್ಳು ಕುಣಿತ, ಕಂಸಾಳೆ ಸೇರಿ ವಿವಿಧ ಜಾನಪದ ನೃತ್ಯಗಳು ಪ್ರದರ್ಶನಗೊಂಡವು. ಯಕ್ಷಗಾನ ವೇಷಧಾರಿಗಳು ಗಮನಸೆಳೆದರು.

ವಿಶ್ವವಿದ್ಯಾಲಯದ ಕುಲಪತಿ ನಿಸ್ಸಾರ್ ಅಹ್ಮದ್ ಅಧ್ಯಕ್ಷತೆ ವಹಿಸಿ ದ್ದರು. ಉಪ ಕುಲಪತಿಗಳಾದ ವಿಜಯನ್ ಇಮ್ಯಾನುಯೆಲ್, ವಿದ್ಯಾ ಶಂಕರ್ ಶೆಟ್ಟಿ, ಶಿವ ಪೆರುಮಾಳ್ (ಶೈಕ್ಷಣಿಕ), ಸಮೀರುದ್ದೀನ್ ಖಾನ್ (ಎಂಜಿನಿಯರಿಂಗ್) ಮತ್ತು ರಿಜಿಸ್ಟ್ರಾರ್ ಸಮೀನಾ ನೂರ್ ಪನಾಲಿ ಉಪಸ್ಥಿತರಿದ್ದರು.

ಸೇನೆಯ ನಿವೃತ್ತ ಉಪ ಮುಖ್ಯಸ್ಥ ಪಟ್ಟಾಭಿರಾಮನ್ ನಿಧನ

ನವದೆಹಲಿ (ಪಿಟಿಐ): ಭಾರತೀಯ ಸೇನೆಯ ನಿವೃತ್ತ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಎಸ್. ಪಟ್ಟಾಭಿರಾಮನ್ (78) ಶನಿವಾರ ನಿಧನರಾಗಿದ್ದಾರೆ ಎಂದು ಸೇನೆ ತಿಳಿಸಿದೆ. 40 ವರ್ಷ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ಅವರು 2006ರಲ್ಲಿ ನಿವೃತ್ತರಾಗಿದ್ದರು.

ಅಪಘಾತದಲ್ಲಿ ಗಾಯಗೊಂಡ ಕೆಎಸ್‌ಆರ್‌ಟಿಸಿ ಸಂಸ್ಥೆಯ ನೌಕರರು ಮತ್ತು ಮೃತಪಟ್ಟವರ ಕುಟುಂಬಕ್ಕೆ, ಅನಾರೋಗ್ಯ ಕಾರಣದಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ಶನಿವಾರ ಪರಿಹಾರದ ಚೆಕ್ ವಿತರಿಸಲಾಯಿತು

‘ಬಡ್ಡಿ ಆಸೆಯಲ್ಲಿ ಪರಿಹಾರ ಧನ ಕಳೆದುಕೊಳ್ಳಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತ, ಇನ್ನಿತರ ಕಾರಣದಿಂದ ಮೃತಪಟ್ಟ ಕೆಎಸ್‌ಆರ್‌ಟಿಸಿ ನೌಕರರ ಕುಟುಂಬದವರು, ವಿಮಾ ಪರಿಹಾರ ಮೊತ್ತವನ್ನು ಬಡ್ಡಿಯ ವ್ಯಾಮೋಹಕ್ಕೆ ಒಳಗಾಗಿ ಹಣ ಕಳೆದು-ಕೊಳ್ಳಬಾರದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಅಪಘಾತದಲ್ಲಿ ಗಾಯಗೊಂಡ ಕೆಎಸ್‌ಆರ್‌ಟಿಸಿ ನೌಕರರಿಗೆ, ಮೃತಪಟ್ಟವರ ಕುಟುಂಬಕ್ಕೆ, ಅಪಘಾತ ಹೊರತುಪಡಿಸಿ ಅನಾರೋಗ್ಯ ಕಾರಣದಿಂದ ಮೃತಪಟ್ಟ ನೌಕರರ ಕುಟುಂಬದವರಿಗೆ ಶನಿವಾರ ವಿಮಾ ಪರಿಹಾರದ ಚೆಕ್ ವಿತರಿಸಿ ಅವರು ಮಾತನಾಡಿದರು. ‘ಹಣ ಇದ್ದರೆ ಎಲ್ಲರೂ ನೆಂಟರೇ. ಯಾರಿಗೋ ನೀಡಿ ಹಣ ಕಳೆದುಕೊಳ್ಳುವುದಕ್ಕಿಂತ ಮಕ್ಕಳ ವಿದ್ಯಾಭ್ಯಾಸ, ಮನೆ ನಿರ್ಮಾಣ ಇನ್ನಿತರ ಉತ್ತಮ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಿ’ ಎಂದು ಹೇಳಿದರು.

ಅಪಘಾತದಿಂದ ಬಲಗಾಲಿನ ಮಂಡಿಯ ಕೆಳಗೆ ಕಾಲು ಕಳೆದುಕೊಂಡಿದ್ದ ಹಾಸನ ವಿಭಾಗದ ಅರಕಲಗೂಡು ಘಟಕದ ಚಾಲಕ ಕಂ ನಿರ್ವಾಹಕ ಸುನೀಲ್ ಕುಮಾರ್ ಬಿ.ಡಿ. ಅವರಿಗೆ ₹ 25 ಲಕ್ಷ ವಿತರಿಸಲಾಯಿತು. ಅಫಘಾತದಲ್ಲಿ ಅಂಗಾಂಗ ಊನ ಆದವರಿಗೆ ಇದೇ ಮೊದಲಬಾರಿಗೆ ಪರಿಹಾರ ನೀಡಲಾಗಿದೆ. ಅಲ್ಲದೇ 8 ತಿಂಗಳು 14 ದಿನ ಅವರಿಗೆ ಐಒಡಿ (ಕರ್ತವ್ಯದಲ್ಲಿ ಗಾಯ) ರಜೆ ನೀಡಲಾಗಿದೆ.

ಅಪಘಾತದಲ್ಲಿ ಮೃತಪಟ್ಟಿದ್ದ ಇಬ್ಬರ ಕುಟುಂಬಕ್ಕೆ ತಲಾ ₹1 ಕೋಟಿ ವಿಮಾ ಪರಿಹಾರ ವಿತರಿಸಲಾಯಿತು.ಈವರೆಗೆ 26 ನೌಕರರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ವಿತರಿಸಲಾಗಿದೆ. ಹೃದಯಾಘಾತ, ಕ್ಯಾನ್ಸರ್ ಇನ್ನಿತರ ಕಾರಣಗಳಿಂದ ಮೃತಪಟ್ಟ 31 ಸಿಬ್ಬಂದಿಯ ಕುಟುಂಬಕ್ಕೆ ನೌಕರರ ಕುಟುಂಬ ಕಲ್ಯಾಣ ಪರಿಹಾರ ಯೋಜನೆಯಡಿ ಪರಿಹಾರದ ಚೆಕ್ ವಿತರಿಸಲಾಯಿತು. ಈ ಹಿಂದೆ 94 ಸಿಬ್ಬಂದಿಯ ಕುಟುಂಬಕ್ಕೆ ಪರಿಹಾರ ನೀಡಲಾಗಿತ್ತು.

ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ಮಹಮ್ಮದ್ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್, ನಿರ್ದೇಶಕಿ ನಂದಿನಿ ದೇವಿ ಉಪಸ್ಥಿತರಿದ್ದರು.

ಚಿತ್ರಾವಳಿ

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ‘ಸೀತಾ ಕಲ್ಯಾಣಂ’ ಶೀರ್ಷಿಕೆಯಡಿ ವಿನಯ್ ವಾರಣಾಸಿ ಮತ್ತು ವಿವೇಕ್ ಸದಾಶಿವಮ್ ಅವರು ಕಥಾ ನಿರೂಪಣೆ ಹಾಗೂ ಗಾಯನವನ್ನು ಶನಿವಾರ ಪ್ರಸ್ತುತಪಡಿಸಿದರು

ನಗರದ ಅಂಚೆ ಮುಖ್ಯ ಕಚೇರಿಯಲ್ಲಿ ಅಂಬೇಡ್ಕರ್ ಅವರ ಪುತ್ಥಳಿಯನ್ನು ಶನಿವಾರ ಅನಾವರಣಗೊಳಿಸಲಾಯಿತು. ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್, ಅಂಚೆ ಸೇವೆಗಳ ನಿರ್ದೇಶಕಿ (ಮುಖ್ಯ ಕಚೇರಿ) ವಿ.ತಾರಾ, ಸಂದೇಶ್ ಮಹದೇವಪ್ಪ, ಮುಖ್ಯ ಪೋಸ್ಟ್ ಮಾಸ್ಟರ್ ಎಚ್.ಎಂ. ಮಂಜೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರಗಳು

ಬನಶಂಕರಿ ಠಾಣೆ ಪೊಲೀಸರಿಂದ ಸಾಫ್ಟ್‌ವೇರ್ ಎಂಜಿನಿಯರ್ ಬಂಧನ

ಪ್ರೀತಿ ನಿರಾಕರಿಸಿದ್ದಕ್ಕೆ ಕಿರುಕುಳ, ಹಲ್ಲೆ

ಪ್ರಜಾವಾಣಿ ವಾರ್ತೆ

ಶ್ರೀಕಾಂತ್

ಬೆಂಗಳೂರು: ಮನೆಯಲ್ಲಿ ಬಾಡಿಗೆಗಿದ್ದ ಯುವತಿ ತನ್ನ ಪ್ರೀತಿ ನಿರಾಕರಿಸಿದ್ದಕ್ಕೆ ಸಿಟ್ಟಿಗೆದ್ದು ಕಟರ್‌ನಿಂದ ಹಲ್ಲೆ ನಡೆಸಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಶ್ರೀಕಾಂತ್ (36) ಎಂಬಾತನನ್ನು ಬನಶಂಕರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಏಪ್ರಿಲ್ 21ರಂದು ದೇವೇಗೌಡ ಪೆಟ್ರೋಲ್ ಬಂಕ್ ಬಳಿ ಯುವತಿ ಹಾಗೂ ಆಕೆಯ ಸ್ನೇಹಿತ ಇದ್ದಾಗ, ಅಲ್ಲಿಗೆ ಬಂದಿದ್ದ ಆರೋಪಿಯು ಯುವತಿಗೆ ಹಲ್ಲೆ ನಡೆಸಿದ್ದ. ಯುವತಿ ನೀಡಿದ ದೂರು ಆಧರಿಸಿ ಆರೋಪಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಶ್ರೀಕಾಂತ್ ಮನೆಯಲ್ಲಿ ಯುವತಿ ಹಾಗೂ ಆಕೆಯ ಕುಟುಂಬಸ್ಥರು ಕೆಲ ವರ್ಷದಿಂದ ಬಾಡಿಗೆಗೆ ಇದ್ದರು. ವಿವಾಹಿತನಾಗಿದ್ದ ಆರೋಪಿ ಪ್ರೀತಿಸುವಂತೆ ಯುವತಿಗೆ ಪೀಡಿಸುತ್ತಿದ್ದ. ಯುವತಿ ಅಂತರ ಕಾಯ್ದುಕೊಂಡಿದ್ದಳು. ಶ್ರೀಕಾಂತ್ ಕಿರುಕುಳ ಮುಂದುವರೆಸಿದ್ದ. ಈ ವಿಚಾರವನ್ನು ಆರೋಪಿಯ ಪತ್ನಿಗೂ ಯುವತಿ ತಿಳಿಸಿದ್ದಳು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮನೆ ಖಾಲಿ ಮಾಡಿದ್ದ ಯುವತಿ: ‘ಕಿರುಕುಳದಿಂದ ಯುವತಿ ಹಾಗೂ ಅವರ ಕುಟುಂಬಸ್ಥರು ಬೇಸತ್ತು ಬಾಡಿಗೆ ಮನೆಯನ್ನು ಖಾಲಿ ಮಾಡಿ ಕುರುಬರಹಳ್ಳಿಯಲ್ಲಿ ಮತ್ತೊಂದು ಮನೆಗೆ ಸ್ಥಳಾಂತರಗೊಂಡಿದ್ದರು. ಅದಾದ ಮೇಲೆ ಆರೋಪಿಗೆ ಯುವತಿಯನ್ನು ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ಮೂರು ತಿಂಗಳಿಂದ ಶ್ರೀಕಾಂತ್ ಮತ್ತೆ ಯುವತಿಗೆ ಕಿರುಕುಳ ನೀಡಲು ಆರಂಭಿಸಿದ್ದ. ಆಕೆಯನ್ನು ಹಿಂಬಾಲಿಸುತ್ತಿದ್ದ. ಕಾಲೇಜು ಕ್ಯಾಂಪಸ್‌ಗೂ ಹೋಗಿ ಕಿರುಕುಳ ನೀಡಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಏಪ್ರಿಲ್ 8ರಂದು ದೇವೇಗೌಡ ಪೆಟ್ರೋಲ್ ಬಂಕ್‌ನ ಬಳಿಯ ಬಸ್ ನಿಲ್ದಾಣದಲ್ಲಿ ಯುವತಿ, ಆಕೆಯ ಸ್ನೇಹಿತ ಕುಳಿತಿದ್ದರು. ಆಗ ಆರೋಪಿ ಶ್ರೀಕಾಂತ್, ‘ನೀನು ಇವನನ್ನು ಪ್ರೀತಿ ಮಾಡುತ್ತಿದ್ದೀಯಾ?’ ಎಂದು ಕಪಾಳಕ್ಕೆ ಹೊಡೆದಿದ್ದ. ಅಲ್ಲದೇ ಕಟರ್‌ನಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಎಂಟನೇ ವರ್ಷದ ದಿಂಡಿ ಮಹೋತ್ಸವ: ಬೆಳಿಗ್ಗೆ 7ಕ್ಕೆ ದೇವಾಲಯದ ಎಲ್ಲ ದೇವರಿಗೆ ಅಭಿಷೇಕ, ಹೂವಿನ ಅಲಂಕಾರ, ಮಂಗಳಾರತಿ, 8.30ಕ್ಕೆ ಪಂಢರೀ ಸಾಂಪ್ರದಾಯಿಕ ಭಜನೆ, ವಿಣೇಕರಿ: ಲಕ್ಷ್ಮೀಕಾಂತ ಬಾಂಬೊರೆ, 9.30ಕ್ಕೆ ದಿಂಡಿ ಮಹೋತ್ಸವದ ಮೆರವಣಿಗೆ, ಮಧ್ಯಾಹ್ನ 12ಕ್ಕೆ ಕೀರ್ತನೆ: ಭಾನುದಾಸ ಸರ್ವದೆ ಬಂಕಾಪುರ, ಅತಿಥಿಗಳು: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಪ್ರದೀಪ್ ಕೃಷ್ಣಪ್ಪ, ಆಯೋಜನೆ: ಪಶ್ಚಿಮ ಬೆಂಗಳೂರು ಭಾವಸಾರ ಕ್ಷತ್ರಿಯ ಸಮಾಜ, ಸ್ಥಳ: ವೀರಾಂಜನೇಯ ಸ್ವಾಮಿ ದೇವಸ್ಥಾನದ ಆವರಣ, ಹಂಪಿನಗರ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಮಾಧುರಿ ಪವನ್ ಭಟ್, ಅತಿಥಿಗಳು: ಉಷಾ ಬಸಪ್ಪ, ಸಂತೋಷ್ ಆನಂದರಾಮ್, ವೈ.ಕೆ. ಸಂಧ್ಯಾ ಶರ್ಮ, ನಾಗಶ್ರೀ ಕೆ. ಶ್ರೀನಿವಾಸ್, ಆಯೋಜನೆ: ಸಾಧನ ಡಾನ್ಸ್ ಸೆಂಟರ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಬೆಳಿಗ್ಗೆ 9.45

ಶಿವಕುಮಾರ ಸ್ವಾಮೀಜಿ ಜಯಂತಿ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಶಿವಸಿದ್ಧೇಶ್ವರ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ಉದ್ಘಾಟನೆ: ಬಿ.ಎಸ್. ಪಾಟೀಲ, ಅಧ್ಯಕ್ಷತೆ: ಎಸ್. ಕಲ್ಯಾಣ್ ಬಸವರಾಜು, ಅತಿಥಿಗಳು: ಶಂಕರ ಮಹಾದೇವ ಬಿದರಿ, ಎಸ್.ಎಸ್. ಮಿಟ್ಟಲಕೋಡ್, ಕಿರಣ್ ಎಸ್. ಜವಳಿ, ಬಿ.ಎಸ್. ಪುಟ್ಟರಾಜು, ಉಪಸ್ಥಿತಿ: ಪ್ರಮಿಳಾ ನೇಸರ್ಗಿ, ಬಿ.ಎಸ್. ಪರಮಶಿವಯ್ಯ, ವಿವೇಕ್ ಸುಬ್ಬಾರೆಡ್ಡಿ, ಎಚ್.ಎಸ್. ಚಂದ್ರಮೌಳಿ, ಆಯೋಜನೆ: ಬಸವ ವಕೀಲ್ ಬ್ರಿಗೇಡ್, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ಹೊಸಹಳ್ಳಿ ಮೆಟ್ರೊ ನಿಲ್ದಾಣದ ಪಕ್ಕ, ವಿಜಯನಗರ, ಬೆಳಿಗ್ಗೆ 10ರಿಂದ



ಸಿದ್ಧಲಿಂಗ ಸ್ವಾಮೀಜಿ

ರಾಯಲ್ ಐಕಾನ್ ಪ್ರಶಸ್ತಿ-2025: ಸಾನ್ನಿಧ್ಯ: ಆದಿತ್ಯಸ್ವಾಮಿ, ಆಯೋಜನೆ: ಶ್ರೀ ಕ್ಷೇತ್ರ ಆದಿತ್ಯಸ್ವಾಮಿ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ಗುರುರಾಜ್ ಆಚಾರ್ ಜಾಗೀರ್‌ದಾರ್, ನಾರಾಯಣ ಆಚಾರ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಹಕಾರನಗರ, ಬೆಳಿಗ್ಗೆ 10

ದಿನಕ್ಕೊಂದು ಕಿವಿಮಾತು: ‘ಲಕ್ಷಾಧಿಪತಿಯ ಗುಣಲಕ್ಷಣಗಳು ಮತ್ತು ಸಿರಿವಂತಿಕೆಗೆ ಸರಳ ಸೂತ್ರಗಳು’ ಪುಸ್ತಕಗಳ ಬಿಡುಗಡೆ: ಅತಿಥಿ: ಡಾ. ಕಿರಣ್ ಆಚಾರ್ಯ, ಉಪಸ್ಥಿತಿ: ರಂಗಸ್ವಾಮಿ ಮೂಕನಹಳ್ಳಿ, ಕೆ. ನಲ್ಲತಂಬಿ, ಚಂದ್ರಶೇಖರ್ ಮದಭಾವಿ, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ದ್ರಾವ್ಯ ಸಿ. ಕಮ್ಮಾರ್, ಅತಿಥಿಗಳು: ಕೆ. ಚಂದ್ರಶೇಖರ ನಾವಡ, ಎನ್. ಅನಂತರಾಮನ್, ಆಯೋಜನೆ: ನಾಟ್ಯಶೈಲಿ, ಸ್ಥಳ: ಎಡಿಎ ರಂಗ ಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 9

ದ್ರಾವ್ಯ ಸಿ. ಕಮ್ಮಾರ್

ಡಾ. ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಕರೋಕೆ ಗಾಯನ, ರಸಪ್ರಶ್ನೆ, ಸನ್ಮಾನ ಕಾರ್ಯಕ್ರಮ: ಸನ್ಮಾನಿತರು: ಶ್ರೀಧರ್, ರೂಪಶ್ರೀ ಮೋಹನ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ವಾಸವಿ ಕಲಾ ಸೇವಾ ಟ್ರಸ್ಟ್, ರಾಜಾಜಿನಗರ, ಬೆಳಿಗ್ಗೆ 10

ದಶಮಾನೋತ್ಸವ ಸಮಾರಂಭ: ಉದ್ಘಾಟನೆ: ದೊಡ್ಡರಂಗೇಗೌಡ, ಅಧ್ಯಕ್ಷತೆ: ರು. ಬಸಪ್ಪ, ಅತಿಥಿಗಳು: ವೂಡೇ ಪಿ. ಕೃಷ್ಣ, ಹೇಮಲತಾ ಗೋಪಾಲಯ್ಯ, ರಾಂ.ಕೆ. ಹನುಮಂತಯ್ಯ, ಬಿ. ಶೃಂಗೇಶ್ವರ್, ಆಯೋಜನೆ: ಅಕ್ಷರ ಐಸಿರಿ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30

ಚೈತ್ರಾ ಶಿವಯೋಗಿಮಠ ಅನುವಾದಿಸಿ ‘ಆಕಾಶ ನದಿ ಬಯಲು’ ಪುಸ್ತಕ ಬಿಡುಗಡೆ: ಎಚ್.ಎಸ್. ರಾಘವೇಂದ್ರ ರಾವ್, ಪುಸ್ತಕದ ಕುರಿತು: ಓ.ಎಲ್. ನಾಗಭೂಷಣಸ್ವಾಮಿ, ಉಪಸ್ಥಿತಿ: ಸುಮಿತ್ ಮೇತ್ರಿ, ಆಯೋಜನೆ: ಸುಗಮ ಪುಸ್ತಕ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣ, ಎರಡನೇ ಮಹಡಿ, ಶೇಷಾದ್ರಿಪುರ, ಬೆಳಿಗ್ಗೆ 10.30

‘ಬಾರಹಮಾಸಿ’ ಅರೆ ಶಾಸ್ತ್ರೀಯ ಸಂಗೀತ: ಕನಕಶ್ರೀ ಭಟ್, ಸಾವ್ನಿ ಭಟ್, ಆಯೋಜನೆ: ಬೆಂಗಳೂರು ಕ್ರಿಯೇಟಿವ್ ಸರ್ಕಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11

ಪ್ರೊ.ಎ.ವಿ. ನರಸಿಂಹಮೂರ್ತಿ, ಡಾ.ಎಂ.ಎಚ್. ಕೃಷ್ಣ ಸ್ಮಾರಕ ದತ್ತಿ ಉಪನ್ಯಾಸ: ‘ಪಾರಂಪರಿಕ ಶಿಲ್ಪಕಲೆಯ ಇಂದಿನ ಬೇಡಿಕೆ, ಅವಕಾಶ ಹಾಗೂ ಅದರಿಂದ ಅನುಕೂಲ ಮತ್ತು ಅನಾನುಕೂಲ ಒಂದು ವಿಶ್ಲೇಷಣೆ’ ಉಪನ್ಯಾಸ: ಸೂರಾಲು ವೆಂಕಟರಮಣ ಭಟ್, ‘ಆಗಮ ಮತ್ತು ವಾಸ್ತುಶಾಸ್ತ್ರ ಗ್ರಂಥಗಳು–ಗಮನಾರ್ಹ ಅಂಶಗಳು’ ಉಪನ್ಯಾಸ: ಮನೋಜ್ ಗುಂಡಣ್ಣ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಸಂಸ್ಥಾಪನಾ ದಿನಾಚರಣೆ: ಭಾಷಣಕಾರ: ಸುಭಾಷ್ ದಾಸ್‌ಗುಪ್ತಾ, ಆಯೋಜನೆ: ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್), ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಚಕೋರ–ಕವಿತಾ ಗೀತಗಾಯನ: ಕುಣಿಗಲ್ ರಾಮಚಂದ್ರ ಮತ್ತು ತಂಡ, ಉದ್ಘಾಟನೆ: ಲತಾ ಕುಂದರಗಿ, ಅಧ್ಯಕ್ಷತೆ: ಚ.ಹ. ರಘುನಾಥ, ಪ್ರಾಸ್ತಾವಿಕ ನುಡಿ: ಲಕ್ಷ್ಮಿ ಶ್ರೀನಿವಾಸ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಅಸೆಂಟ್ ಕಾಲೇಜಿನ ಎದುರು, ಹೆಸರಘಟ್ಟ ಮುಖ್ಯರಸ್ತೆ, ಬೆಳಿಗ್ಗೆ 11

ಮಾವು ಉತ್ಸವ: ಉದ್ಘಾಟನೆ: ಜಿ.ಪರಮೇಶ್ವರ, ಎಸ್.ಎಸ್. ಮಲ್ಲಿಕಾರ್ಜುನ, ತೇಜಸ್ವಿ ಸೂರ್ಯ, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಉದಯ್ ಗರುಡಾಚಾರ್, ಆರ್.ವಿ. ದೇವರಾಜ್, ಮೀನಾಕ್ಷಿ ಕೃಷ್ಣ ಬೈರೇಗೌಡ, ಆಯೋಜನೆ: ವಾಸವಿ ಕಾಂಡಿಮೆಂಟ್ಸ್, ಸ್ಥಳ: ನ್ಯಾಷನಲ್ ಕಾಲೇಜು ಆಟದ ಮೈದಾನ, ಬಸವನಗುಡಿ, ಬೆಳಿಗ್ಗೆ 11

ಶಿವಶ್ರೀ ಪ್ರಶಸ್ತಿ ಪ್ರದಾನ, ಶಿವರಾಜ ವಿ. ಪಾಟೀಲ ಅವರ ‘ಸಂಜೆಗೊಂದು ನುಡಿಚಿಂತನೆ-365’ ಪುಸ್ತಕ ಬಿಡುಗಡೆ: ಮಲ್ಲಿಕಾರ್ಜುನ ಖರ್ಗೆ, ಪ್ರಶಸ್ತಿ ಸ್ವೀಕರಿಸುವವರು: ಶಾಮನೂರು ಶಿವಶಂಕರಪ್ಪ, ಅತಿಥಿ: ಎಸ್.ಎಸ್. ಮಲ್ಲಿಕಾರ್ಜುನ, ಆಯೋಜನೆ: ನ್ಯಾಯ ಮೂರ್ತಿ ಶಿವರಾಜ ವಿ. ಪಾಟೀಲ ಪ್ರತಿಷ್ಠಾನ, ಸ್ಥಳ: ತರಳಬಾಳು ಕೇಂದ್ರದ ಸಭಾಂಗಣ, ಬಿಡಿಎ ಕಾಂಪ್ಲೆಕ್ಸ್ ಪಕ್ಕ, ಆರ್.ಟಿ. ನಗರ, ಬೆಳಿಗ್ಗೆ 11

‘ಪುಣ್ಯಕೋಟಿ’ ನಾಟಕ ಪ್ರದರ್ಶನ: ನಿರ್ದೇಶನ: ಮಹೇಶ್ ಕುಮಾರ್, ರಚನೆ: ಲೀಲಾ ಮಣ್ಣಾಲ, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 4.30

‘ಶೋ–ಮ್ಯಾನ್ ರಾಜ್‌ಕಪೂರ್’ ಜನ್ಮಶತಾಬ್ಧಿ, ಚಲನಚಿತ್ರಗಳಿಗೆ ಅವರ ಕುಟುಂಬದ ಕೊಡುಗೆ ಕುರಿತ ಕಾರ್ಯಕ್ರಮ: ಅತಿಥಿಗಳು: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ವಿನಯಾ ಪ್ರಕಾಶ್, ಆಯೋಜನೆ: ಸೃಜನ ಲಲಿತಕಲಾ ವೇದಿಕೆ, ಸ್ಥಳ: ಜ್ಞಾನಸೌಧ, ಗೋವಿಂದರಾಜನಗರ, ವಿಜಯನಗರ, ಸಂಜೆ 5ರಿಂದ

‘ಪುಕ್ಕಟೆ ಸಲಹೆ’ ನಾಟಕ ಪ್ರದರ್ಶನ: ರಚನೆ: ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಸಿ. ಅಶ್ವತ್ಥ್ ಕಲಾ ಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 5

ಡಾ. ರಾಜ್‌ಕುಮಾರ್ ಅಭಿಮಾನಿ ಪುರಸ್ಕಾರ ಸಮಾರಂಭ, ಡಾ. ರಾಜ್‌ಕುಮಾರ್ ಅವರ ಗೀತೆಗಳ ಗಾಯನ ಸಂಜೆ: ಉದ್ಘಾಟನೆ: ಗಿರಿಜಾ ಲೋಕೇಶ್, ಅಭಿಮಾನಿ ಪುರಸ್ಕಾರ ಪ್ರದಾನ: ಎಲ್. ಶಿವಶಂಕರ್, ಅಧ್ಯಕ್ಷತೆ: ಮೋಹನ್ ಕೃಷ್ಣ, ಅಭಿಮಾನಿ ಪುರಸ್ಕಾರ ಸ್ವೀಕರಿಸುವವರು: ಜಿ. ಗುರುಪ್ರಸಾದ್, ಆರ್. ರಮೇಶ್, ಮಂಜುನಾಥ್, ಆಯೋಜನೆ: ಸಂಸ್ಕೃತಿ ಸೌರಭ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಸಂಗೀತ ಕಛೇರಿ: ಗಾಯನ: ಟಿ.ಎಸ್. ಪಟ್ಟಾಭಿರಾಮ್ ಪಂಡಿತ್, ಪಿಟೀಲು: ಕೇಶವ ಮೋಹನ್ ಕುಮಾರ್, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಮೂರನೇ ಅಡ್ಡರಸ್ತೆ, ಮೂರನೇ ಹಂತ, ಜೆ.ಪಿ. ನಗರ, ಸಂಜೆ 5.30

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಎಸ್. ವಿ. ನಾರಾಯಣಸ್ವಾಮಿ ರಾವ್ ಗ್ಲೋಬಲ್ ಅವಾರ್ಡ್ ಸ್ವೀಕರಿಸುವವರು: ಉಸ್ತಾದ್ ಶಾಹಿದ್ ಪರ್ವೇಜ್, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ಶಾಹಿದ್ ಪರ್ವೇಜ್ ಮತ್ತು ತಂಡ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5.45ರಿಂದ

ಸಾರಿಗೆ ಬಸ್‌ಗಳಲ್ಲಿ ನೈಜ ಸಮಯದ ಟ್ರ್ಯಾಕಿಂಗ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾವು ಪ್ರಯಾಣಿಸಬೇಕಾದ ಕೆಎಸ್‌ಆರ್‌ಟಿಸಿ ಬಸ್ ಎಲ್ಲಿದೆ ಎಂಬುದನ್ನು ಮೊಬೈಲ್ ಅಪ್ಲಿಕೇಶನ್ ಮೂಲಕ ತಿಳಿಯುವ ನೈಜ-ಸಮಯ ಟ್ರ್ಯಾಕಿಂಗ್ ವ್ಯವಸ್ಥೆ ಆಗಸ್ಟ್‌ನಲ್ಲಿ ಜಾರಿಯಾಗಲಿದೆ.

ವೆಹಿಕಲ್ ಟ್ರ್ಯಾಕಿಂಗ್ ಆ್ಯಂಡ್ ಮಾನಿಟರಿಂಗ್ ಸಿಸ್ಟಮ್ (ವಿಟಿಎಂಎಸ್) ಯೋಜನೆಯು ಬಸ್ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸಲಿದೆ. ಎಲ್ಲ ವಾಹನಗಳಿಗೆ ಹೈಟೆಕ್ ಟ್ರ್ಯಾಕಿಂಗ್ ಸಾಧನಗಳನ್ನು ಅಳವಡಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿಯ ಐಟಿ ವಿಭಾಗದ ವ್ಯವಸ್ಥಾಪಕರು ತಿಳಿಸಿದ್ದಾರೆ.

8,800 ಬಸ್‌ಗಳಲ್ಲಿ ವಿಟಿಎಂಎಸ್ ಅಳವಡಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಅಂತಿಮಗೊಂಡ ಮೇಲೆ ಅಳವಡಿಕೆ ಕಾರ್ಯ ಆರಂಭವಾಗಲಿದೆ. ಇತ್ತೀಚೆಗೆ ರಸ್ತೆಗೆ ಇಳಿದಿರುವ 1,400 ಹೊಸ ಬಸ್‌ಗಳಲ್ಲಿ ಈ ತಂತ್ರಜ್ಞಾನ ಇದೆ. ಅದನ್ನು ಅಪ್ಲಿಕೇಶನ್ ಜೊತೆಗೆ ಜೋಡಿಸಬೇಕಿದೆ. ಉಳಿದ ಬಸ್‌ಗಳಲ್ಲಿ ವಿಟಿಎಂಎಸ್ ಅಳವಡಿಕೆ ಆಗಸ್ಟ್ ಹೊತ್ತಿಗೆ ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದ್ದಾರೆ.

ಅತ್ಯಾಧುನಿಕ ಟ್ರ್ಯಾಕಿಂಗ್ ಸಾಧನಗಳೊಂದಿಗೆ ಅಳವಡಿಸಲಾಗುವುದು. ಈ ಬಸ್‌ಗಳನ್ನು ವಿಟಿಎಂಎಸ್‌ಗೆ ಸಂಯೋಜಿಸಲಾಗುವುದು. ತುರ್ತು ಎಚ್ಚರಿಕೆ ಬಟನ್‌ಗಳನ್ನು ವಿಎಲ್‌ಟಿಡಿ ಒಳಗೊಂಡಿರುತ್ತದೆ. ಪ್ರತಿಯೊಂದು ಬಸ್ ತನ್ನ ನೈಜ-ಸಮಯದ ಸ್ಥಳವನ್ನು ಕೇಂದ್ರ ನಿಯಂತ್ರಣ ವ್ಯವಸ್ಥೆಗೆ ರವಾನಿಸುವ ಸಾಧನವನ್ನು ಹೊಂದಿರುತ್ತದೆ.

ಜಿಪಿಎಸ್, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ), ಡೇಟಾ ವಿಶ್ಲೇಷಣೆ ಮತ್ತು ಮೊಬೈಲ್ ಪ್ಲಾಟ್‌ಫಾರ್ಮ್‌ಗಳು ಇದರಲ್ಲಿ ಇರುವುದರಿಂದ ಬಸ್ ಕಾರ್ಯಾಚರಣೆಯೂ ಸುಲಭವಾಗಲಿದೆ. ಜೊತೆಗೆ ಪ್ರಯಾಣಿಕರ ಸುರಕ್ಷತೆಗೂ ಆದ್ಯತೆ ದೊರೆಯಲಿದೆ. ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಎಚ್‌ಪಿಸಿಎಲ್) ನೈಜ-ಸಮಯದ ಟ್ರಕ್ ಟ್ರ್ಯಾಕಿಂಗ್ ಮಾದರಿಯನ್ನು ಕೆಎಸ್‌ಆರ್‌ಟಿಸಿ ಅಧ್ಯಯನ ಮಾಡಿದೆ. ₹30 ಕೋಟಿ ವೆಚ್ಚದಲ್ಲಿ ವಿಟಿಎಂಎಸ್ ಅಳವಡಿಕೆಯಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಯಾಣಿಕರಿಗೆ ಅನುಕೂಲ: ಸಚಿವ


ರಾಮಲಿಂಗಾರೆಡ್ಡಿ

ಹೊಸ ವ್ಯವಸ್ಥೆಯಿಂದ ಪ್ರತಿದಿನ ಲಕ್ಷಾಂತರ ಪ್ರಯಾಣಿಕರಿಗೆ ಪ್ರಯೋಜನವಾಗಲಿದೆ. ಇದು ನಗರ ವ್ಯಾಪ್ತಿಯಲ್ಲಿ ಶಟಲ್ ಸೇವೆಗಳನ್ನು ಬಳಸುವವರಿಗೆ ಹಾಗೂ ಗ್ರಾಮೀಣ ಬಸ್‌ಗಳಿಗಾಗಿ ಕಾಯುತ್ತಿರುವವರಿಗೆ ವಿಶೇಷವಾಗಿ ಸಹಾಯಕವಾಗಿದೆ. ಬಸ್ ಎಲ್ಲಿದೆ ಮತ್ತು ತಲುಪಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬುದನ್ನು ನಿಖರವಾಗಿ ನೋಡಲು ಸಾಧ್ಯವಾಗುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿ ಯಾವಾಗಲೂ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು, ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಸದಾ ಮುಂಚೂಣಿಯಲ್ಲಿದೆ. ಅದರ ಮುಂದುವರಿದ ಭಾಗವಾಗಿ ವಿಟಿಎಂಎಸ್ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ಮಾಹಿತಿ ನೀಡಿದರು.

‘ಮರು ಪರೀಕ್ಷೆ ಎಲ್ಲರಿಗೂ ನಡೆಸಿ’

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ (384) ಪೂರ್ವಭಾವಿ ಪರೀಕ್ಷೆ ಬರೆದಿದ್ದ ಎಲ್ಲ ಅಭ್ಯರ್ಥಿಗಳಿಗೂ ಮರು ಪರೀಕ್ಷೆಗೆ ಅವಕಾಶ ನೀಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ದೋಷಪೂರಿತ ಪ್ರಶ್ನೆಪತ್ರಿಕೆಗಳನ್ನು ನೀಡಿ, ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಲಾಗಿದೆ. ಮರು ಪರೀಕ್ಷೆಯ ಪತ್ರಿಕೆಗಳಲ್ಲಿ 79 ದೋಷಗಳಿದ್ದವು. ಆದರೆ, ಕೆಪಿಎಸ್‌ಸಿ ಐದು ಪ್ರಶ್ನೆಗಳಿಗೆ ಮಾತ್ರ ಕೃಪಾಂಕ ನೀಡಿ ಕನ್ನಡದ ಅಭ್ಯರ್ಥಿಗಳಿಗೆ ಮತ್ತೆ ಅನ್ಯಾಯ ಮಾಡಿತ್ತು ಎಂದು ದೂರಿದ್ದಾರೆ.

ನಮಗೆ ನಿದ್ರೆ ಮತ್ತು ಮೆದುಳಿನ ಆರೋಗ್ಯವನ್ನು ತಿಳಿಯಲು ಸಹಾಯ ಮಾಡಿ!

HUBDATA IIIT HYDERABAD

ನಿದ್ರೆಯ ಕುರಿತಾದ ಅಧ್ಯಯನಕ್ಕಾಗಿ ಸ್ಟ್ರೋಕ್ (ಮಿದುಳಿನ ಅಟ್ಯಾಕ್) ಪೀಡಿತ ರೋಗಿಗಳಿಗೆ ಕರೆ

ನಿಮ್ಹಾನ್ಸ್ ಮತ್ತು ಐಐಐಟಿ-ಹೈದ್ರಾಬಾದ್ ಸಹಯೋಗದಲ್ಲಿ ನಿದ್ರೆಯ ಮೇಲ್ವಿಚಾರಣೆಗೆ ಧರಿಸಬಹುದಾದ ಉಪಕರಣಗಳ ಪರಿಣಾಮಕಾರಿತ್ವವನ್ನು ಪರಿಶೀಲಿಸಲು ಈ ಸಂಶೋಧನೆಯು ನಡೆಯುತ್ತಿದೆ.

ನಿದ್ರೆ ಯಾಕೆ ಮುಖ್ಯ?

ಒಳ್ಳೆಯ ನಿದ್ರೆ ಮೆಮೊರಿ (ಜ್ಞಾಪಕ ಶಕ್ತಿ) ಬೆಳವಣಿಗೆಗೆ ಮತ್ತು ಮೆದುಳಿನ ಪುನಶ್ಚೇತನಕ್ಕೆ ಅಗತ್ಯವಾಗಿದೆ.

70–80% ಸ್ಟ್ರೋಕ್ ರೋಗಿಗಳಿಗೆ ನಿದ್ರೆ ಸಂಬಂಧಿತ ಅಸ್ವಸ್ಥತೆಗಳು ಇರುತ್ತವೆ ಆದರೆ ಅವು ಗುರುತಿಸಲಾಗಿಲ್ಲ – ಕಾರಣ: ಸರಿಯಾದ ಮತ್ತು ರೋಗಿಗಳಿಗೆ ಅನುಕೂಲವಾಗುವ ಪರಿಕರಗಳ ಕೊರತೆ.

ಈ ಅಧ್ಯಯನವು ಆ ಕೊರತೆಯನ್ನು ಪೂರೈಸಲು ಧರಿಸಬಹುದಾದ ಉಪಕರಣಗಳನ್ನು ಮೌಲ್ಯಮಾಪನ ಮಾಡುತ್ತಿದೆ.

ಯಾರು ಭಾಗವಹಿಸಬಹುದು?

✓ 30 ರಿಂದ 65 ವಯಸ್ಸಿನವರು

✓ ಕನಿಷ್ಟ 3 ತಿಂಗಳ ಹಿಂದೆ ಸ್ಟ್ರೋಕ್ ಅನುಭವಿಸಿದ್ದವರು

× ತೀವ್ರ ಅಂಗವಿಕಲತೆ ಹೊಂದಿರುವವರು ಅಥವಾ ಮಲಗಿರುವ ಸ್ಥಿತಿಯಲ್ಲಿರುವವರು ಅರ್ಹರಾಗಿರುವುದಿಲ್ಲ

× ಇತರ ನರವೈಜ್ಞಾನಿಕ, ವೈದ್ಯಕೀಯ ಅಥವಾ ಮಾನಸಿಕ ಸಮಸ್ಯೆಗಳಿಲ್ಲದವರು ಮಾತ್ರ

ನಿಮಗೆ ಇದರ ಮೂಲಕ ಏನು ಸಿಗುತ್ತದೆ?

- ಮೆದುಳಿನ ಕಾರ್ಯಕ್ಷಮತೆಯ ಮೌಲ್ಯಮಾಪನ
- ಸ್ಲೀಪ್ ಲ್ಯಾಬ್ ಅನುಭವ: ನಿದ್ರೆಯ ಗುಣಮಟ್ಟ ಅಳೆಯುವ ಪರೀಕ್ಷೆ (ಪಾಲಿಸೊಮ್ನೋಗ್ರಫಿ)
- ಧರಿಸಬಹುದಾದ ಉಪಕರಣ ಬಳಕೆ: 1 ವಾರದ ಕಾಲ ಕೈಗೆ ಧರಿಸಬಹುದಾದ ಬ್ಯಾಂಡ್ ಮತ್ತು ಹೃದಯ ಸ್ಪಂದನ ಪರೀಕ್ಷೆಯ ಪ್ಯಾಚ್
- ಪ್ರಯಾಣ ಭತ್ಯೆ ಮತ್ತು ಸಮಯದ ಪರಿಹಾರ

ಇಂದೇ ಸಂಪರ್ಕಿಸಿ!

ಕರೆ ಅಥವಾ SMS: 96748 00735, 79750 22448

ಇಮೇಲ್: nimhans.sleepresearch@gmail.com

ಸಮಯ: ಸೋಮವಾರದಿಂದ ಶನಿವಾರದವರೆಗೆ, ಬೆಳಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ

ಈ ಅಧ್ಯಯನವನ್ನು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಧನ ಸಹಾಯ ಮಾಡಿದೆ.

ಸಂತೋಷದಿಂದ ಬದುಕಿ. ಸುಂದರವಾದ ಉಡುಗೆ ಧರಿಸಿ ನಿಮ್ಮೊಂದಿಗೆ ಉಸಿರಾಡುವ ಲಿನಿನ್ ಬಟ್ಟೆಗಳೊಂದಿಗೆ!

LINEN PARK®

SHIRTS • TROUSERS • FABRICS

By RAMRAJ

ಲಿನೆನ್ ಪಾರ್ಕ್‌ನೊಂದಿಗೆ ಮಧುರವಾದ ಜಗತ್ತಿನಲ್ಲಿ ಸರಳವಾಗಿ ಹೆಜ್ಜೆ ಹಾಕಿ. ರಾಮ್‌ರಾಜ್ ಕಾಟನ್ ಸಂಸ್ಥೆಯು ಅತ್ಯುತ್ತಮವಾದ ಲಿನೆನ್‌ನಿಂದ ನೇಯ್ದು ತಯಾರಿಸಿರುವ ಪ್ರತಿ ಶರ್ಟ್‌ಗಳೂ, ಮೃದುವಾದ ಆರಾಮದಾಯಕ ಹಾಗೂ ಉತ್ತಮ ಗುಣಮಟ್ಟದ ಸಂಕೇತದಂತೆ ಗೋಚರಿಸುತ್ತವೆ. ಗಡಿಬಿಡಿಯಿಂದ ತುಂಬಿರುವ ಕೆಲಸದ ದಿನವಾದರೂ ಆಗಿರಲಿ, ವಿಶ್ರಾಂತಿಯ ವಾರಾಂತ್ಯದ ದಿನವಾದರೂ ಆಗಿರಲಿ, ಲಿನೆನ್ ಪಾರ್ಕ್ ನಿಮ್ಮೊಂದಿಗೆ ಸಂಚರಿಸುತ್ತಿರುತ್ತದೆ - ತಂಪಾಗಿ, ಆತ್ಮವಿಶ್ವಾಸ ತುಂಬುವ ನಂಬಿಕೆಯೊಂದಿಗೆ, ಮೃದುತ್ವವನ್ನು ಕಳೆದುಕೊಳ್ಳದೆ!

STORE LOCATION

RAMRAJ COTTON SHOWROOMS

BENGALURU : KG Road : Opp. Bhoomika Theatre • Opp. Janatha Bazaar • Shivaji Nagar • Ulsoor • Gandhi Bazar • Malleshwaram Koramangala • Rajaji Nagar • R.T. Nagar • Jayanagar : 30th Cross Road • Vijayanagar • Banashankari • Yeshwanthpur Yelachenahalli • Uttarahalli • HSR Layout • Ramamurthy Nagar • J.P. Nagar • RR Nagar • Marathahalli • KR Puram • Kengeri Hesaragatta • Yelhanka • Nelamangala • Devanahalli • Chintamani • Kanakapura • Ramnagara • Tumkur • Chandapura Attibele • Chambenahalli (Sarjapur) • Singanaikanahalli • New Thippasandra • Chikkagollarahatti

Available at Ramraj Showrooms and All Leading Textile Shops | Shop Online at www.ramrajcotton.in

ಬಿ.ಎಸ್‌ಸಿ ಕೃಷಿ: 5,288 ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿ ಮೂಲಕ ಬಿ.ಎಸ್‌ಸಿ ಕೃಷಿ ಕೋರ್ಸ್ ಸೀಟುಗಳನ್ನು ಪಡೆಯಲು ಸಲ್ಲಿಕೆಯಾಗಿದ್ದ 5,288 ಅರ್ಜಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿರಸ್ಕರಿಸಿದೆ.

2025–26ನೇ ಸಾಲಿನಲ್ಲಿ ಕೃಷಿ ಕೋಟಾದಡಿ ಸೀಟು ಪಡೆಯಲು 18,244 ಅರ್ಜಿಗಳು ಸಲ್ಲಿಕೆಯಾಗಿದ್ದವು. ಕೃಷಿ ಕೋಟಾದ ಸೀಟುಗಳನ್ನು ಪಡೆಯಲು ಅಗತ್ಯ ದಾಖಲೆಗಳನ್ನು ಸಲ್ಲಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಕೃಷಿ ಪ್ರಮಾಣಪತ್ರ, ವಂಶವೃಕ್ಷ, ವಿದ್ಯಾರ್ಥಿ ಅವಿಭಜಿತ ಕುಟುಂಬಕ್ಕೆ ಸೇರಿದ್ದರೆ ಅಂತಹ ಕುಟುಂಬದ ಸದಸ್ಯರ ಮಾಹಿತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರ, ಕೃಷಿಯೇ ಕುಟುಂಬದ ಏಕೈಕ ಆದಾಯದ ಮೂಲ ಎಂದು ಘೋಷಣಾ ಪ್ರಮಾಣಪತ್ರ ಸೇರಿದಂತೆ ಕೆಲ ದಾಖಲೆಗಳನ್ನು ಸಲ್ಲಿಸಬೇಕು. ಶೇ 50ರಷ್ಟು ಕೃಷಿ ಕೋಟಾದ ಸೀಟುಗಳನ್ನು ಪಡೆಯಲು ಪೋಷಕರ ವಾರ್ಷಿಕ ಆದಾಯ ಮಿತಿ ₹8 ಲಕ್ಷ ಮೀರಬಾರದು. ಈ ದಾಖಲೆಗಳನ್ನು ಸಿಇಟಿ ಅರ್ಜಿ ಜತೆಗೇ ಸಲ್ಲಿಸಬೇಕು.

ಪ್ರಾಥಮಿಕ ಪರಿಶೀಲನೆ ನಂತರ ಎಲ್ಲ ಅರ್ಜಿಗಳನ್ನು ಪ್ರಾಯೋಗಿಕ ಪರೀಕ್ಷೆಗೆ ಬೆಂಗಳೂರಿನ ಕೃಷಿ ವಿ.ವಿಗೆ ಕಳುಹಿಸುತ್ತದೆ. ಅಲ್ಲಿ ಎರಡನೇ ಹಂತದ ಪರಿಶೀಲನೆ ನಡೆಸಲಾಗುತ್ತದೆ. ಈ ಸಮಯದಲ್ಲಿ ಹಲವು ವಿದ್ಯಾರ್ಥಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸಿಲ್ಲ ಎಂದು ಕೆಇಎ ಹೇಳಿದೆ. ಎಂದು ತಿಳಿಸಿದೆ.

ಒಳ ಮೀಸಲು: ಮುಖಂಡರ ಸಭೆ ಇಂದು

ಪ್ರಜಾವಾಣಿ ವಾರ್ತೆ

ಎಚ್. ಆಂಜನೇಯ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೊಳಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿಯ ಕುಟುಂಬಗಳ ದತ್ತಾಂಶ ಸಂಗ್ರಹಕ್ಕೆ ಮೇ 5ರಿಂದ ಆರಂಭವಾಗಲಿರುವ ಸಮೀಕ್ಷೆ ವೇಳೆ ‘ಮಾದಿಗರ ಪಾತ್ರವೇನು’ ಎಂಬ ವಿಷಯ ಕುರಿತು ಚರ್ಚಿಸಲು ಭಾನುವಾರ (ಏಪ್ರಿಲ್ 27) ಸಭೆ ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಎಚ್. ಆಂಜನೇಯ ತಿಳಿಸಿದ್ದಾರೆ.

ಕರ್ನಾಟಕ ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿಯ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮಧ್ಯಾಹ್ನ 3 ಗಂಟೆಗೆ ಸಭೆ ನಡೆಯಲಿದೆ. ಸಮೀಕ್ಷೆಯ ಕುರಿತಂತೆ ಮಾದಿಗ ಮತ್ತು ಸಂಬಂಧಿತ ಜಾತಿಗಳಲ್ಲಿ ಜಾಗೃತಿ ಮೂಡಿಸಲು ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂದು ಹೇಳಿದ್ದಾರೆ.

‘ಒಳಮೀಸಲಾತಿ ಜಾರಿಗಾಗಿ ಹೋರಾಟ ನಡೆಸಿದ ಎಡ ಗುಂಪಿನಲ್ಲಿ ಗುರುತಿಸಿಕೊಂಡಿರುವ ಮಾದಿಗ ಮತ್ತು ಸಂಬಂಧಿತ ಜಾತಿಗಳ ಮುಖಂಡರು, ಸಂಘಟನೆಗಳ ಪದಾಧಿಕಾರಿಗಳು, ಸಮುದಾಯದ ಹಾಲಿ–ಮಾಜಿ ಸಚಿವರು, ಶಾಸಕರು, ಸಂಸದರು, ಬುದ್ಧಿಜೀವಿಗಳು, ಚಿಂತಕರು ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ’ ಎಂದಿದ್ದಾರೆ.

ಕೆಂಪೇಗೌಡ ಬಡಾವಣೆ ಅಭಿವೃದ್ಧಿಗೆ ವೇಗ

ಒಂದನೇ ಪುಟದಿಂದ...

ಆದರೆ, ಬಡಾವಣೆ ನಿವಾಸಿಗಳ ವಾದವೇ ಬೇರೆ. ‘ಶಿವರಾಮ ಕಾರಂತ ಬಡಾವಣೆ ನಿರ್ಮಾಣ ಯೋಜನೆಯಲ್ಲಿ ಒಂಬತ್ತು ಏಜೆನ್ಸಿಗಳನ್ನು (ಪ್ರತಿ ಬ್ಲಾಕ್‌ಗೆ ಒಂದು) ಬಿಡಿಎ ಬಳಸಿತ್ತು. ಇದರಿಂದ ಕಾಮಗಾರಿ ಬೇಗ ಪೂರ್ಣಗೊಂಡಿತ್ತು. ಅದೇ ಮಾದರಿಯಲ್ಲಿ ಅಭಿವೃದ್ಧಿ ಪಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಪ್ರಗತಿಯಲ್ಲಿ ಅಭಿವೃದ್ಧಿ ಕಾಮಗಾರಿ

‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಬಿಡಿಎ ಆಯುಕ್ತ ಎನ್.ಜಯರಾಂ, ‘ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಶೇಕಡ 80ರಷ್ಟು ಮುಗಿದಿದೆ. ಕೆಲಸವೇ ನಡೆದಿಲ್ಲ ಎಂಬ ಆರೋಪ ಸರಿಯಲ್ಲ. ಕೆಲ ಜಮೀನು ಮಾಲೀಕರು ಹೈಕೋರ್ಟ್‌ಗೆ ಹೋಗಿದ್ದರು. ಹಾಗಾಗಿ ವಿಳಂಬವಾಗಿತ್ತು. ಈಗ ಕೆಲಸಕ್ಕೆ ವೇಗ ನೀಡಿದ್ದು, ಶೀಘ್ರದಲ್ಲಿ ಪೂರ್ಣಗೊಳ್ಳಲಿವೆ’ ಎಂದು ಹೇಳಿದರು.

‘ನೀರು, ರಸ್ತೆ, ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಮುಖ್ಯರಸ್ತೆಗಳಿಗೆ ಡಾಂಬರೀಕರಣ ಆಗಿದೆ. ಒಳರಸ್ತೆಗಳ ಡಾಂಬರೀಕರಣ ಬಾಕಿ ಇದೆ. ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಮತ್ತೊಂದು ವಿದ್ಯುತ್ ಉಪ ಕೇಂದ್ರವನ್ನು ಸಹ ನಿರ್ಮಿಸಲಾಗುತ್ತಿದೆ’ ಎಂದರು.

ಕರ್ನಾಟಕ ಸರ್ಕಾರ   ಗಾಂಧಿ ಭಾರತ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸರ್ಕಾರದ ಎರಡು ವರ್ಷದ ಸಾಧನಾ ಸಮಾವೇಶ

ಹಾಗೂ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ

ಮತ್ತು ಫಲಾನುಭವಿಗಳಿಗೆ ಸವಲತ್ತು ವಿತರಣೆ ಕಾರ್ಯಕ್ರಮ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ದಿನಾಂಕ: 27-04-2025 ಭಾನುವಾರ ಸಮಯ: ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಭೈರದೇನಹಳ್ಳಿ ಕೈಗಾರಿಕಾಭಿವೃದ್ಧಿ ಪ್ರದೇಶ, ಕುಂದಾಣ ಹೋಬಳಿ ದೇವನಹಳ್ಳಿ ತಾಲ್ಲೂಕು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಿಂದ 5000 ಕೋಟಿ ರೂ.ಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

- ನಿವೇಶನ ರಹಿತರಿಗೆ ನಿವೇಶನ ಹಕ್ಕುಪತ್ರ ವಿತರಣೆ — 10 ಸಾವಿರ ಫಲಾನುಭವಿಗಳು
- ಶಂಕುಸ್ಥಾಪನೆ ಕಾಮಗಾರಿಗಳ ಒಟ್ಟು ಮೊತ್ತ — 256 ಕೋಟಿ
- ಸಿ.ಎಸ್.ಆರ್. ನಿಧಿಯಿಂದ ಶಂಕು ಸ್ಥಾಪನೆ ಕಾಮಗಾರಿಗಳ ಒಟ್ಟು ಮೊತ್ತ — 125 ಕೋಟಿ
- ಉದ್ಘಾಟನೆ ಕಾಮಗಾರಿಗಳ ಒಟ್ಟು ಮೊತ್ತ — 465 ಕೋಟಿ
- ಸವಲತ್ತು ವಿತರಣೆ ಹಾಗೂ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆಗಳ ಒಟ್ಟು ಮೊತ್ತ — 1000 ಕೋಟಿ

ಪ್ರಮುಖ ಉದ್ಘಾಟನೆ ಕಾಮಗಾರಿಗಳ ವಿವರ

- ರೂ. 406 ಕೋಟಿ ವೆಚ್ಚದಲ್ಲಿ ದೇವನಹಳ್ಳಿ ತಾಲ್ಲೂಕಿನ ಹರಳೂರು ಮುದ್ದೇನಹಳ್ಳಿ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಹಂತ 2 ರಲ್ಲಿ ನಿರ್ಮಿಸಿರುವ 220/66/11 ಕೆ.ವಿ ವಿದ್ಯುತ್ ಉಪಕೇಂದ್ರ ಉದ್ಘಾಟನೆ.
- ರೂ. 9.91 ಕೋಟಿ ವೆಚ್ಚದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಹೆಚ್ಚುವರಿ ಕಟ್ಟಡ ಉದ್ಘಾಟನೆ.
- ರೂ. 6 ಕೋಟಿ ವೆಚ್ಚದಲ್ಲಿ ವಿಶ್ವನಾಥಪುರ ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿಯ ಸಂಪನ್ಮೂಲ ಕೇಂದ್ರ ಕಟ್ಟಡ ಮತ್ತು ವಾಣಿಜ್ಯ ಸಂಕೀರ್ಣ ಕಟ್ಟಡ ಉದ್ಘಾಟನೆ.
- ರೂ. 4.6 ಕೋಟಿ ವೆಚ್ಚದಲ್ಲಿ ದೊಡ್ಡಬಳ್ಳಾಪುರ ನಗರದ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಪರಿಸರ ಪರಿಹಾರ ನಿಧಿಯಡಿ ಡಿ ಕ್ರಾಸ್ ರಸ್ತೆಯಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ.

ಪ್ರಮುಖ ಶಂಕುಸ್ಥಾಪನೆ ಕಾಮಗಾರಿಗಳ ವಿವರ

- ರೂ.100 ಕೋಟಿ ವೆಚ್ಚದಲ್ಲಿ ದೇವನಹಳ್ಳಿಯಲ್ಲಿ 600 ಬಂದಿಗಳ ಸಾಮರ್ಥ್ಯದ ನೂತನ ಕೇಂದ್ರದ ಕಾರಾಗೃಹ ನಿರ್ಮಾಣ ಕಾಮಗಾರಿ.
- ರೂ.40 ಕೋಟಿ ವೆಚ್ಚದಲ್ಲಿ ದೇವನಹಳ್ಳಿ ನಗರದಲ್ಲಿ ಹಾಲಿ ಇರುವ ಹೆಚ್.ಟಿ ಮತ್ತು ಎಲ್.ಟಿ ಮೇಲ್ತಂತಿ ಮಾರ್ಗಗಳನ್ನು ಭೂಗತ ಕೇಬಲ್ ಗಳಾಗಿ ಪರಿವರ್ತಿಸುವ ಕಾಮಗಾರಿ.
- ರೂ.09 ಕೋಟಿ ವೆಚ್ಚದಲ್ಲಿ ದೇವನಹಳ್ಳಿ ತಾಲ್ಲೂಕು ರಾಜ್ಯ ಹೆದ್ದಾರಿ 170 ನಂದಿ ಗ್ರಾಮದಿಂದ ಆಂಧ್ರ ಪ್ರದೇಶದ ಗಡಿಯವರೆಗೆ ಸೇರುವ ರಸ್ತೆಯ ಮಾರ್ಗ ವಿಜಯಪುರ, ಶಿಡ್ಲಘಟ್ಟ, ದಿಬ್ಬೂರಹಳ್ಳಿ, ಇ-ತಿಮ್ಮಸಂದ್ರ, ಚೇಳೂರು ರಸ್ತೆಯ ಸರಪಳಿ 14.53 ರಿಂದ 15.35 ಕಿ.ಮೀ ವರೆಗೆ ನಾಲ್ಕು ಪಥದ ಕಾಂಕ್ರಿಟ್ ರಸ್ತೆ ನಿರ್ಮಾಣ ಕಾಮಗಾರಿ(ಶಿಡ್ಲಘಟ್ಟ ಜಂಕ್ಷನ್ ಅಭಿವೃದ್ಧಿ).

ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವರಾದ ಶ್ರೀ ಕೆ. ಹೆಚ್. ಮುನಿಯಪ್ಪರವರು ಅನ್ನಭಾಗ್ಯ ಯೋಜನೆಗೆ ಚಾಲನೆ ನೀಡಿರುವ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು.

ನುಡಿದಂತೆ ನಡೆದಿದ್ದೇವೆ...

ನಮ್ಮ ಕರ್ನಾಟಕ ಗ್ಯಾರಂಟಿ ಕರ್ನಾಟಕ

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg ಆಹಾರಧಾನ್ಯ | ಗೃಹಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000 | ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

“ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು” -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕಣಿವೆಯಲ್ಲಿ ನಿಲ್ಲದ ಕಣ್ಣೀರು

ಪ್ರಜಾವಾಣಿ
ಭಾನುವಾರ • ಏಪ್ರಿಲ್ 27, 2025

ಭಾರತದಲ್ಲಿಯೇ ಉಳಿಯಲು ಅವಕಾಶ: ಪಾಕ್ ಮಹಿಳೆ ಮನವಿ

ಪ್ರಜಾವಾಣಿ ವಾರ್ತೆ

ಲಖನೌ: ಗಡಿ ದಾಟಿ ಬಂದು, ಉತ್ತರ ಪ್ರದೇಶದ ಸಚಿನ್ ಮೀನಾ ಅವರನ್ನು ಮದುವೆಯಾಗಿರುವ ಪಾಕಿಸ್ತಾನದ ಮಹಿಳೆ ಸೀಮಾ ಹೈದರ್, ತನಗೆ ಭಾರತದಲ್ಲಿಯೇ ಉಳಿದುಕೊಳ್ಳಲು ಅವಕಾಶ ನೀಡಬೇಕು ಹಾಗೂ ಯಾವುದೇ ಕಾರಣಕ್ಕೂ ಗಡೀಪಾರು ಮಾಡಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಮನವಿ ಮಾಡಿದ್ದಾರೆ.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದ ಬೆನ್ನಲ್ಲೇ, ದೇಶದಲ್ಲಿರುವ ಪಾಕಿಸ್ತಾನ ಪ್ರಜೆಗಳನ್ನು ಹೊರಹಾಕಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ. ಹೀಗಾಗಿ, ತನ್ನನ್ನು ಪಾಕಿಸ್ತಾನಕ್ಕೆ ಗಡೀಪಾರು ಮಾಡದಂತೆ ಸೀಮಾ ಹೈದರ್ ಮನವಿ ಮಾಡಿದ್ದಾರೆ.

ತಮ್ಮ ಮನವಿಯ ವಿಡಿಯೊವನ್ನು ಸೀಮಾ ಬಿಡುಗಡೆ ಮಾಡಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಸಚಿನ್–ಸೀಮಾ ದಂಪತಿ ಗ್ರೇಟರ್ ನೋಯ್ಡಾದಲ್ಲಿ ವಾಸಿಸುತ್ತಿದ್ದು, ಒಂದು ಹೆಣ್ಣು ಮಗುವಿದೆ.

ಕೆಲ ವರ್ಷಗಳ ಹಿಂದೆ, ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದ ಸಚಿನ್ ಅವರೊಂದಿಗೆ ಸೀಮಾ ಅವರಿಗೆ ಪ್ರೇಮಾಂಕುರವಾಗಿತ್ತು. ಸಚಿನ್ ಮದುವೆಯಾಗಬೇಕು ಎಂಬ ಉದ್ದೇಶದಿಂದ ತನ್ನ ನಾಲ್ಕು ಮಕ್ಕಳೊಂದಿಗೆ ಅವರು ನೇಪಾಳ ಮೂಲಕ ಭಾರತಕ್ಕೆ ಬಂದಿದ್ದರು. ಸಚಿನ್ ಹಾಗೂ ಸೀಮಾ ಅವರನ್ನು ಬಂಧಿಸಿದ್ದ ಪೊಲೀಸರು, ಬಳಿಕ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಿದ್ದರು.

‘ನಾನು ಪಾಕಿಸ್ತಾನದ ಮಗಳಾಗಿದ್ದೆ. ಆದರೆ, ಈಗ ನಾನು ಭಾರತದ ಸೊಸೆ. ಸಚಿನ್ ಜೊತೆ ಮದುವೆ ನಂತರ ಹಿಂದೂ ಧರ್ಮಕ್ಕೆ ಮತಾಂತರಗೊಂಡಿರುವೆ. ನಾನೀಗ ಪಾಕಿಸ್ತಾನಕ್ಕೆ ಹೋಗಲು ಬಯಸುವುದಿಲ್ಲ. ನನಗೆ ಇಲ್ಲಿಯೇ ಉಳಿದುಕೊಳ್ಳುವುದಕ್ಕೆ ಅವಕಾಶ ನೀಡುವಂತೆ ಸರ್ಕಾರವನ್ನು ಕೋರುತ್ತೇನೆ’ ಎಂದು ಸೀಮಾ ಮನವಿ ಮಾಡಿರುವುದು ವಿಡಿಯೊದಲ್ಲಿದೆ.

ಸಚಿನ್ ಮೀನಾ ಹಾಗೂ ಸೀಮಾ ಹೈದರ್ ದಂಪತಿ

‘ಸೀಮಾ ಭಾರತೀಯ ಪ್ರಜೆಯನ್ನು ಮದುವೆಯಾಗಿರುವ ಕಾರಣ ಅವರನ್ನು ಪಾಕಿಸ್ತಾನಕ್ಕೆ ಗಡೀಪಾರು ಮಾಡುವುದಿಲ್ಲ ಎಂಬ ಭರವಸೆ ಇದೆ’ ಎಂದು ಅವರ ಪರ ವಕೀಲರು ಹೇಳಿದ್ದಾರೆ.

ಸೀಮಾ ಅವರ ಮೊದಲ ಪತಿ, ಪಾಕಿಸ್ತಾನ ಪ್ರಜೆ ಗುಲಾಮ್ ಹೈದರ್ ಇತ್ತೀಚೆಗೆ ವಿಡಿಯೊವೊಂದನ್ನು ಬಿಡುಗಡೆ ಮಾಡಿದ್ದಾರೆ. ‘ಸೀಮಾ ಪಾಕಿಸ್ತಾನಕ್ಕೆ ಮರಳಿದ ನಂತರ ಆಕೆಗೆ ಹೊಡೆಯುತ್ತೇನೆ’ ಎಂದು ಚಪ್ಪಲಿ ತೋರಿಸುತ್ತಾ ಹೇಳಿರುವುದು ವಿಡಿಯೊದಲ್ಲಿದೆ.

ಸಿಂಧೂ ಜಲ ಒಪ್ಪಂದ ಅಮಾನತು • ಅಧ್ಯಯನಕ್ಕೆ ಮುಂದಾದ ಕೇಂದ್ರ

ಪಾಕ್ ಪಾಲಿನ ನೀರು ಗರಿಷ್ಠ ಬಳಕೆ?

ನವದೆಹಲಿ (ಪಿಟಿಐ): ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿದ ಬೆನ್ನಲ್ಲೇ, ಪಾಕಿಸ್ತಾನಕ್ಕೆ ಪ್ರತ್ಯುತ್ತರ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಸಿಂಧೂ ಜಲ ಒಪ್ಪಂದವನ್ನು ಅಮಾನತು ಮಾಡಿದೆ. ಈ ಮೊದಲು ಈ ಒಪ್ಪಂದದಡಿ ಪಾಕಿಸ್ತಾನವು ಮೂರು ನದಿಗಳ ನೀರು ಬಳಕೆ ಮಾಡಿಕೊಳ್ಳುತ್ತಿತ್ತು.

ಈಗ ಒಪ್ಪಂದವನ್ನು ಅಮಾನತು ಮಾಡಿರುವುದರಿಂದ, ಪಾಕಿಸ್ತಾನ ಪಾಲಿನ ನೀರಿನ ಪೈಕಿ ಗರಿಷ್ಠ ಪ್ರಮಾಣದ ನೀರು ಬಳಕೆ ಮಾಡಿಕೊಳ್ಳುವ ಮಾರ್ಗಗಳ ಕುರಿತು ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ, ಈ ಕುರಿತ ಪ್ರಸ್ತಾವವನ್ನು ಮಂಡಿಸಲಾಗಿದೆ.

ವಿಶ್ವ ಬ್ಯಾಂಕ್ ಮಧ್ಯಸ್ಥಿಕೆಯಲ್ಲಿ 1960ರಲ್ಲಿ ಏರ್ಪಟ್ಟ ಈ ಒಪ್ಪಂದದಡಿ, ಪೂರ್ವದ ಸಟ್ಲೆಜ್, ರಾವಿ, ಬ್ಯಾಸ್ ನದಿಗಳ ನೀರಿನ ಹಕ್ಕುಗಳು ಸಂಪೂರ್ಣ ಭಾರತಕ್ಕೆ ಸೇರಿದರೆ, ಪಶ್ಚಿಮದ ಸಿಂಧೂ, ಝೇಲಮ್ ಹಾಗೂ ಚಿನಾಬ್ ನದಿಗಳ ನೀರಿನ ಮೇಲಿನ ಹಕ್ಕು ಪಾಕಿಸ್ತಾನದ್ದು.

ಸಟ್ಲೆಜ್, ರಾವಿ, ಬ್ಯಾಸ್ ನದಿಗಳಲ್ಲಿ ವಾರ್ಷಿಕವಾಗಿ ಸರಾಸರಿ 3.3 ಕೋಟಿ ಎಕರೆ ಅಡಿಗಳಷ್ಟು ನೀರು ಹರಿಯುತ್ತದೆ. ಸಿಂಧೂ, ಝೇಲಮ್ ಹಾಗೂ ಚಿನಾಬ್‌ನಲ್ಲಿ ವಾರ್ಷಿಕವಾಗಿ ಸರಾಸರಿ 13.5 ಕೋಟಿ ಎಕರೆ ಅಡಿಗಳಷ್ಟು ನೀರು ಹರಿಯುತ್ತದೆ. ಈ ಲೆಕ್ಕದಲ್ಲಿ, ಪಾಕಿಸ್ತಾನಕ್ಕೆ ಹಂಚಿಕೆಯಾಗಿರುವ ನೀರಿನ ಪ್ರಮಾಣ ಅಧಿಕ.

ಈಗ ಜಲ ಒಪ್ಪಂದವನ್ನು ಅಮಾನತು ಮಾಡಿರುವುದರಿಂದ, ಸಿಂಧೂ, ಝೇಲಂ ಹಾಗೂ ಚಿನಾಬ್ ನದಿಗಳ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುವ ಮಾರ್ಗೋಪಾಯಗಳ ಕುರಿತು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ.

ಶುಕ್ರವಾರ ನಡೆದ ಉನ್ನತ ಮಟ್ಟದ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ್ದ ಜಲ ಶಕ್ತಿ ಸಚಿವ ಸಿ.ಆರ್. ಪಾಟೀಲ ಅವರು, ‘ಪಾಕಿಸ್ತಾನಕ್ಕೆ ಒಂದು ಹನಿ ನೀರನ್ನೂ ಹರಿಯಲು ಬಿಡುವುದಿಲ್ಲ. ಇದನ್ನು ಖಾತ್ರಿಪಡಿಸುವ ಕಾರ್ಯತಂತ್ರವನ್ನು ಸರ್ಕಾರ ರೂಪಿಸುತ್ತಿದೆ’ ಎಂದು ಹೇಳಿದ್ದರು.

ಸಭೆಯಲ್ಲಿ ಕೈಗೊಂಡ ನಿರ್ಧಾರಗಳನ್ನು ದೀರ್ಘಾವಧಿ ವರೆಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೂಡ ಸರ್ಕಾರ ಯೋಜಿಸುತ್ತಿದೆ ಎಂದು ಮೂಲಗಳು ಹೇಳಿವೆ.

ಜಮ್ಮು–ಕಾಶ್ಮೀರದ ರಿಯಾಸಿ ಬಳಿ ಸಿಂಧೂ ನದಿಗೆ ನಿರ್ಮಿಸಿರುವ ಅಣೆಕಟ್ಟು — ಪಿಟಿಐ ಚಿತ್ರ

‘ಮೂಲಸೌಕರ್ಯಗಳ ಕೊರತೆ’

ಜಲ ಒಪ್ಪಂದವನ್ನು ಅಮಾನತು ಮಾಡಿರುವ ಕಾರಣ, ಮೂರು ನದಿಗಳ ನೀರನ್ನು ಅಧಿಕ ಪ್ರಮಾಣದಲ್ಲಿ ಬಳಸುವುದಕ್ಕೆ ಕೇಂದ್ರ ಸರ್ಕಾರ ಯೋಜಿಸಿದೆಯಾದರೂ, ಅದಕ್ಕೆ ಅಗತ್ಯವಿರುವ ಮೂಲಸೌಕರ್ಯಗಳ ಕೊರತೆ ಇದೆ ಎಂದು ತಜ್ಞರು ಹೇಳಿದ್ದಾರೆ.

‘ಮುಖ್ಯವಾಗಿ, ಪಶ್ಚಿಮದ ನದಿಗಳ ನೀರು ಬಳಕೆಗೆ ಅಗತ್ಯವಿರುವ ಮೂಲಸೌಕರ್ಯಗಳು ಇಲ್ಲ. ಇದು, ಪಾಕಿಸ್ತಾನಕ್ಕೆ ನೀರಿನ ಹರಿವು ತಡೆಯುವ ಪ್ರಯತ್ನಕ್ಕೆ ಅಡ್ಡಿಯಾಗುತ್ತದೆ’ ಎಂದು ಸೌತ್ ಏಷ್ಯನ್ ನೆಟ್‌ವರ್ಕ್ ಆನ್ ಡ್ಯಾಮ್ಸ್, ರಿವರ್ಸ್ ಅಂಡ್ ಪೀಪಲ್ (ಎಸ್‌ಎಎನ್‌ಡಿಆರ್‌ಪಿ)ನ ಹಿಮಾಂಶು ಠಕ್ಕರ್ ಹೇಳುತ್ತಾರೆ.

‘ಚಿನಾಬ್ ನದಿಪಾತ್ರದಲ್ಲಿ ಹಲವು ಯೋಜನೆಗಳು ಪ್ರಗತಿಯಲ್ಲಿದ್ದು, ಇವು ಪೂರ್ಣಗೊಳ್ಳಲು 5–7 ವರ್ಷಗಳು ಬೇಕು. ಅಲ್ಲಿಯವರೆಗೆ ನದಿಯ ನೀರು ಪಾಕಿಸ್ತಾನಕ್ಕೆ ಹರಿಯಲಿದೆ. ಈ ಯೋಜನೆಗಳು ಪೂರ್ಣಗೊಂಡಾಗ ನೀರಿನ ಹರಿವು ನಿಯಂತ್ರಿಸುವ ತಾಂತ್ರಿಕತೆ ಭಾರತ ಹೊಂದಲಿದೆ’ ಎಂದು ಠಕ್ಕರ್ ಹೇಳಿದ್ದಾರೆ.

‘ಪಾಕಿಸ್ತಾನಕ್ಕೆ ನೀರಿನ ಹರಿವು ತಡೆಯಲು ಅಗತ್ಯವಿರುವ ಪ್ರಮುಖ ಮೂಲಸೌಕರ್ಯ ನಮ್ಮಲ್ಲಿ ಇಲ್ಲ’ ಎಂದು ಮಂಥನ ಅಧ್ಯಯನ ಕೇಂದ್ರದ ಸ್ಥಾಪಕ ಹಾಗೂ ಪರಿಸರ ಹೋರಾಟಗಾರ ಶ್ರೀಪಾದ ಧರ್ಮಾಧಿಕಾರಿ ಹೇಳುತ್ತಾರೆ.

ಬೈಸರನ್ ಕಣಿವೆ ಪ್ರವಾಸಿಗರಿಗೆ ಮುಕ್ತವಾಗುವ ವಿಚಾರ: ವಿಪಕ್ಷ ಆರೋಪ

‘ತಪ್ಪು ಮಾಹಿತಿ ನೀಡಿದ ಸರ್ಕಾರ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೈಸರನ್ ಕಣಿವೆ ಪ್ರದೇಶವನ್ನು ನಿಗದಿತ ಸಮಯಕ್ಕೆ ಮುಂಚಿತವಾಗಿ ಭದ್ರತಾ ಪಡೆಗಳಿಗೆ ತಿಳಿಸದೆ ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ ಎಂದು ಸರ್ವಪಕ್ಷ ಸಭೆಯಲ್ಲಿ ಹೇಳುವ ಮೂಲಕ ಕೇಂದ್ರ ಸರ್ಕಾರವು ನಾಯಕರನ್ನು ದಾರಿ ತಪ್ಪಿಸಿದೆ ಎಂದು ವಿಪಕ್ಷಗಳು ಶನಿವಾರ ಆರೋಪಿಸಿದವು. ಆದರೆ, ಈ ಪ್ರದೇಶವು ವರ್ಷದ ಬಹುಪಾಲು ತೆರೆದಿರುತ್ತದೆ ಎಂದು ಪ್ರವಾಸ ನಿರ್ವಾಹಕರು ಪ್ರತಿಪಾದಿಸಿದರು.

ಸಚಿವ ರಾಜನಾಥ ಸಿಂಗ್ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ಗುರುವಾರ ನಡೆದಿತ್ತು. ಭದ್ರತಾ ಪಡೆಗಳಿಗೆ ತಿಳಿಸದೆಯೇ ಏ.20ರಂದು ಕಣಿವೆಗೆ ಪ್ರವಾಸಿಗರ ಪ್ರವೇಶಕ್ಕೆ ಅನುವು ಮಾಡಿಕೊಡಲಾಗಿತ್ತು ಎಂದು ಗುಪ್ತಚರ ಬ್ಯೂರೊದ ಹಿರಿಯ ಅಧಿಕಾರಿಗಳು ಹಾಗೂ ಸಿಆರ್‌ಪಿಎಫ್ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದ್ದರು. ಆದರೆ, ಜೂನ್‌ನಲ್ಲಿ ಮಾತ್ರ ಪ್ರವಾಸಿಗರು ಹಾಗೂ ಅಮರನಾಥ ಯಾತ್ರಿಕರು ಈ ಪ್ರದೇಶಕ್ಕೆ ಬರಬಹುದು ಎಂಬುದು ಅವರ ವಾದವಾಗಿತ್ತು.

‘ಸರ್ವಪಕ್ಷ ಸಭೆಗೆ ಸರಿಯಾಗಿ ಮಾಹಿತಿ ನೀಡಲಾಗಿಲ್ಲ ಎಂದು ತೋರುತ್ತದೆ. ವಾಸ್ತವವಾಗಿ ಕಣಿವೆ ಬಗ್ಗೆ ತಪ್ಪು ಮಾಹಿತಿ ನೀಡಲಾಗಿದೆ ಎಂದು ತೋರುತ್ತದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ. ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಅಧ್ಯಕ್ಷ ಪವನ್ ಖೇರಾ, ‘ಸರ್ವಪಕ್ಷ ಸಭೆಗೆ ಬಿಜೆಪಿ ಸುಳ್ಳು ಹೇಳಿದೆ’ ಎಂದು ಆರೋಪಿಸಿದರು.

ತೃಣಮೂಲ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯೆ ಸಾಗರಿಕಾ ಘೋಷ್, ‘ಬೈಸರನ್ ಕಣಿವೆಗೆ ಪ್ರವಾಸಿಗರ ಪ್ರವೇಶಕ್ಕೆ ಪೊಲೀಸರಿಗೆ ಅನುಮತಿ ಪಡೆದಿಲ್ಲ ಎಂದು ಹೇಳುವ ಮೂಲಕ ಗೃಹ ಸಚಿವ ಅಮಿತ್ ಶಾ ಹಾಗೂ ಮೋದಿ ಸರ್ಕಾರವು ವಿರೋಧ ಪಕ್ಷಗಳನ್ನು ತಪ್ಪುದಾರಿಗೆಳೆದಿದ್ದಾರೆ’ ಎಂದು ದೂರಿದರು.

‘ಬೈಸರನ್ ಕಣಿವೆಯು 2020ರಿಂದ ತೆರೆದಿದೆ. ಹಿಮ ಬೀಳುವ ತಿಂಗಳುಗಳಲ್ಲಿ ಮಾತ್ರ ಇದನ್ನು ಮುಚ್ಚಲಾಗುತ್ತದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯು ಲೆಫ್ಟಿನೆಂಟ್ ಗವರ್ನರ್ ಅಡಿಯಲ್ಲಿದೆ. ಅಮಿತ್ ಶಾ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಅವರು ಹೇಳಿದರು.

‘ಮೋದಿ ಸರ್ಕಾರವು ದಿಕ್ಕು ತಪ್ಪಿಸುವ ಹೇಳಿಕೆ ನೀಡಿದೆ. ಉಗ್ರರ ದಾಳಿಗೆ ಗುಪ್ತಚರ ವೈಫಲ್ಯವೇ ಪ್ರಮುಖ ಕಾರಣ’ ಎಂದು ಸಿಪಿಐ ರಾಜ್ಯಸಭಾ ಸದಸ್ಯ ಪಿ.ಸಂತೋಷ್ ಕುಮಾರ್ ಹೇಳಿದರು.

ಸರ್ವಪಕ್ಷ ಸಭೆಗೆ ಪ್ರಧಾನಿ ಗೈರು: ಖರ್ಗೆ ಅಸಮಾಧಾನ

ಬೆಂಗಳೂರು: ‘ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ವಿಚಾರವಾಗಿ ರಕ್ಷಣಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷ ಸಭೆಗೆ ಗೈರಾದ ಪ್ರಧಾನಿ ನರೇಂದ್ರ ಮೋದಿ ಅವರ ನಡೆ ಸರಿಯಲ್ಲ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿ, ‘ಲೋಕಸಭೆ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲರೂ ಸಭೆಯಲ್ಲಿ ಭಾಗಿ ಆಗಿದ್ದೆವು. ಕೇಂದ್ರ ಸರ್ಕಾರದ ವತಿಯಿಂದ ಪ್ರಧಾನಿ ಹಾಜರಿರಬೇಕಿತ್ತು. ಹಾಜರಾಗದಿರುವುದನ್ನು ನೋಡಿದರೆ, ಅವರು ಸಭೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎನ್ನುವುದನ್ನು ತೋರಿಸುತ್ತದೆ’ ಎಂದರು.

‘ಚುನಾವಣಾ ಭಾಷಣ ಮಾಡಲು ಬಿಹಾರಕ್ಕೆ ಹೋಗಿದ್ದ ಮೋದಿ, ಅಲ್ಲಿ ಇಂಗ್ಲಿಷ್, ಹಿಂದಿಯಲ್ಲಿ ಮಾತನಾಡುವ ಬದಲು ಸಭೆಗೆ ಬಂದು ಸಮಜಾಯಿಷಿ ನೀಡಬೇಕಿತ್ತು’ ಎಂದರು.

‘ಭದ್ರತಾ ವೈಫಲ್ಯ ಎಂದು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಆ ಕಾರಣಕ್ಕೆ ಸಭೆ ಕರೆದಿದ್ದೇವೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದರು. ಇದನ್ನು ಸವಾಲಾಗಿ ತೆಗೆದುಕೊಳ್ಳಬೇಕೆಂದು ಶಾ ಅವರಿಗೆ ಹೇಳಿದ್ದೇವೆ. ಇನ್ನು ಮುಂದೆ ಈ ರೀತಿ ಆಗುವುದಿಲ್ಲವೆಂದು ಅವರು ಭರವಸೆ ನೀಡಿದ್ದಾರೆ’ ಎಂದರು.

ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನ ಹುಲ್ಲುಗಾವಲಿನ ಈ ಸ್ಥಳದಲ್ಲಿಯೇ ಉಗ್ರರು ಮಂಗಳವಾರ ಪ್ರವಾಸಿಗರ ಮೇಲೆ ಗುಂಡಿನ ದಾಳಿ ನಡೆಸಿದ್ದರು —ಪಿಟಿಐ ಚಿತ್ರ

ಪಾಕ್ ಪ್ರಜೆಗಳ ಪತ್ತೆ ಕಾರ್ಯ ಚುರುಕು

ಒಂದನೇ ಪುಟದಿಂದ...

ದೀರ್ಘಾವಧಿ ವೀಸಾದ ಮೇಲೆ ಉತ್ತರ ಕನ್ನಡ ಜಿಲ್ಲೆಯಲ್ಲಿ 15 ಮಂದಿ ನೆಲಸಿದ್ದಾರೆ. ಕೆಲವು ಪಾಕ್ ಮಹಿಳೆಯರು ಉತ್ತರ ಕನ್ನಡ ಜಿಲ್ಲೆಯ ಸ್ಥಳೀಯ ಯುವಕರನ್ನು ವಿವಾಹವಾಗಿದ್ದಾರೆ. ಇವರನ್ನು ಗಡಿಪಾರು ಮಾಡುವ ಅಗತ್ಯವಿಲ್ಲ ಎಂದು ಮೂಲಗಳು ತಿಳಿಸಿವೆ.

ಶೈಕ್ಷಣಿಕ ವೀಸಾದ ಮೇಲೆ ಬಂದಿರುವ ಪಾಕ್ ವಿದ್ಯಾರ್ಥಿಯೊಬ್ಬ ದಾವಣಗೆರೆಯ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ನಗರದ ಬಸವನಗುಡಿ, ಮೈಸೂರು, ಮಂಗಳೂರು ಸೇರಿ ರಾಜ್ಯದ ವಿವಿಧ ಕಡೆ ದೀರ್ಘಾವಧಿ ವೀಸಾದ ಮೇಲೆ 88 ಮಂದಿ ನೆಲಸಿದ್ದಾರೆ.

ವೈದ್ಯಕೀಯ ವೀಸಾದ ಅಡಿ ಬಂದಿರುವವರು ಏ.29ರವರೆಗೆ ಮಾತ್ರ ದೇಶದಲ್ಲಿರುವಂತೆ ಕೇಂದ್ರ ಸರ್ಕಾರ ಹೇಳಿದೆ. ನಂತರ ಅವರೂ ದೇಶ ತೊರೆಯಬೇಕು ಎಂದು ಮೂಲಗಳು ತಿಳಿಸಿವೆ.

‘ಬಾಂಗ್ಲಾ ಹಾಗೂ ಪಾಕಿಸ್ತಾನದ ಅಕ್ರಮ ವಲಸಿಗರ ಪತ್ತೆ ಕಾರ್ಯವನ್ನು ಕೇಂದ್ರ ಸರ್ಕಾರದ ಅಧಿಕಾರಿಗಳೇ ನಡೆಸುತ್ತಿದ್ದಾರೆ. ಪಾಕಿಸ್ತಾನದ ಎಷ್ಟು ಮಂದಿ ಅಕ್ರಮ ವಲಸಿಗರು ರಾಜ್ಯದಲ್ಲಿ ನೆಲಸಿದ್ದಾರೆ ಎಂಬ ಖಚಿತ ಮಾಹಿತಿ ಇಲ್ಲ’ ಎಂದು ರಾಜ್ಯ ಗುಪ್ತಚರ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊಂಬತ್ತಿ ಹಿಡಿದು.... ಕಾಂಗ್ರೆಸ್ ಕಾರ್ಯಕರ್ತರು ಶ್ರೀನಗರದಲ್ಲಿ ಶನಿವಾರ ಮೊಂಬತ್ತಿ ಬೆಳಗಿ ಮೆರವಣಿಗೆ ನಡೆಸುವ ಮೂಲಕ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ಬಲಿಯಾದ ಸಂತ್ರಸ್ತರಿಗೆ ನಮನ ಸಲ್ಲಿಸಿದರು - ಪಿಟಿಐ ಚಿತ್ರ

ಶಂಕಿತ ಉಗ್ರರ ಮನೆ ಧ್ವಂಸ

ಒಂದನೇ ಪುಟದಿಂದ...

ಶೋಪಿಯಾನ್ ಜಿಲ್ಲೆಯ ಚೋಟಿಪುರದಲ್ಲಿ ಎಲ್‌ಇಟಿಯ ಕಮಾಂಡರ್ ಶಹೀದ್ ಅಹ್ಮದ್ ಮನೆಯನ್ನು ನೆಲಸಮಗೊಳಿಸಲಾಗಿದೆ. ಈತ ಕಳೆದ 3–4 ವರ್ಷಗಳಿಂದ ಭಯೋತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದ. ದೇಶ ವಿರೋಧಿ ಚಟುವಟಿಕೆಗಳಲ್ಲಿಯೂ ನಿರತನಾಗಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಲ್ಗಾಮ್ ಜಿಲ್ಲೆಯ ಕೈಮೋಹ್ ಪ್ರದೇಶದಲ್ಲಿರುವ ಝಾಕೀರ್ ಅಹ್ಮದ್ ಗಾನೀ ಮನೆಯನ್ನು ಧ್ವಂಸಗೊಳಿಸಲಾಗಿದೆ. ಈತ ಕಳೆದ ವರ್ಷ ಎಲ್‌ಇಟಿ ಸೇರಿದ್ದ ಎಂದೂ ತಿಳಿಸಿದ್ದಾರೆ.

ಅನಂತನಾಗ್ ಜಿಲ್ಲೆ ಬಿಜ್‌ಬಿಹಾರದಲ್ಲಿ ಎಲ್‌ಇಟಿ ಉಗ್ರ ಆದಿಲ್ ಹುಸೇನ್ ಠೋಕರ್ ಅಲಿಯಾಸ್ ಆದಿಲ್ ಗೋಜ್ರಿ ಹಾಗೂ ಪುಲ್ವಾಮಾದ ತ್ರಾಲ್‌ನಲ್ಲಿ ಉಗ್ರ ಆಸಿಫ್ ಶೇಖ್‌ಗೆ ಸೇರಿದ ಮನೆಗಳನ್ನು ಶುಕ್ರವಾರವಷ್ಟೆ ಧ್ವಂಸಗೊಳಿಸಲಾಗಿತ್ತು.

ಕುಪ್ವಾರಾ ಜಿಲ್ಲೆಯಲ್ಲಿ ಫಾರೂಕ್ ಅಹ್ಮದ್ ಮತ್ತು ಮಿಸ್ಕೀನ್ ಅಹ್ಮದ್ ಎಂಬ ಉಗ್ರರಿಗೆ ಸೇರಿದ ಮನೆ ಧ್ವಂಸಗೊಳಿಸಲಾಗಿದೆ.

‘ಪಹಲ್ಗಾಮ್ ನರಮೇಧಕ್ಕೆ ನೀಡುವ ದೃಢವಾದ ಮತ್ತು ಸಮನ್ವಯದ ಪ್ರತಿಕ್ರಿಯೆಯ ಭಾಗವಾಗಿ ಉಗ್ರರ ಮನೆಗಳನ್ನು ಧ್ವಂಸಗೊಳಿಸಲಾಗಿದೆ’ ಎಂದು ಭದ್ರತಾ ಪಡೆಗಳು ಹೇಳಿವೆ.

‘ಇದು ಆರಂಭ ಮಾತ್ರ. ನರಮೇಧಕ್ಕೆ ನೆರವು ನೀಡಿದವರೂ ಶಿಕ್ಷೆ ಅನುಭವಿಸಲಿದ್ದಾರೆ. ತನಿಖೆ ಪ್ರಗತಿಯಲ್ಲಿದ್ದು, ಮತ್ತಷ್ಟು ತೀವ್ರ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಪಹಲ್ಗಾಮ್‌ನಲ್ಲಿ ನಡೆದಂತಹ ದಾಳಿಗಳು ಭವಿಷ್ಯದಲ್ಲಿ ನಡೆಯಬಾರದು ಎಂಬ ಉದ್ದೇಶದಿಂದ ಈ ಕಾರ್ಯಾಚರಣೆ ಕೈಗೆತ್ತಿಕೊಳ್ಳಲಾಗಿದೆ’ ಎಂದಿದ್ದಾರೆ.

ವಶಕ್ಕೆ: ಅನಂತನಾಗ್, ಕುಲ್ಗಾಮ್, ಪುಲ್ವಾಮಾ ಹಾಗೂ ಶೋಪಿಯಾನ್ ಜಿಲ್ಲೆಗಳಲ್ಲಿ ವ್ಯಾಪಕ ಕಾರ್ಯಾಚರಣೆ ನಡೆಸಿ, ಉಗ್ರರಿಗೆ ಸಹಕಾರ ನೀಡುತ್ತಿದ್ದ ಆರೋಪದ ಮೇಲೆ ನೂರಾರು ಜನ ಸ್ಥಳೀಯರನ್ನು ವಶಕ್ಕೆ ಪಡೆಯಲಾಗಿದೆ.

ಉಗ್ರರಿಗೆ ಸಹಕಾರ ನೀಡುತ್ತಿರುವ ಸ್ಥಳೀಯರ ಶೋಧ ಕಾರ್ಯವನ್ನು ಶ್ರೀನಗರಕ್ಕೆ ಶನಿವಾರ ವಿಸ್ತರಿಸಲಾಗಿದೆ. ಶ್ರೀನಗರದ ಸಫಾ ಕದಲ್, ಸೌರಾ, ಸೇರಿದಂತೆ 12 ಸ್ಥಳಗಳಲ್ಲಿ ವ್ಯಾಪಕ ಶೋಧ ನಡೆಸಲಾಗಿದೆ.

14 ಉಗ್ರರ ಪಟ್ಟಿ ಸಿದ್ಧ

ಒಂದನೇ ಪುಟದಿಂದ...

‘ಈ 14 ಜನರಿಗೂ ಹಾಗೂ ಪಹಲ್ಗಾಮ್‌ನಲ್ಲಿ ನಡೆದ ದಾಳಿಯಲ್ಲಿ ಶಾಮೀಲಾದವರಿಗೂ ಇರುವ ನಂಟಿನ ಕುರಿತು ಭದ್ರತಾ ಪಡೆಗಳು ತನಿಖೆ ನಡೆಸುತ್ತಿವೆ. ಎನ್‌ಐಎ ಹಾಗೂ ಇತರ ತನಿಖಾ ಸಂಸ್ಥೆಗಳು ಜಮ್ಮು–ಕಾಶ್ಮೀರ ಪೊಲೀಸರಿಗೆ ಈ ತನಿಖೆಗೆ ನೆರವು ನೀಡುತ್ತಿವೆ’ ಎಂದು ಮೂಲಗಳು ಹೇಳಿವೆ.

ತನಿಖೆಗೆ ಸಹಕರಿಸಲು ಸಿದ್ಧ: ಪಾಕ್ ಪ್ರಧಾನಿ

ಪಹಲ್ಗಾಮ್ ದಾಳಿಗೆ ಸಂಬಂಧಿಸಿದಂತೆ ನಡೆಸುವ ‘ತಟಸ್ಥ, ಪಾರದರ್ಶಕ ಮತ್ತು ವಿಶ್ವಾಸಾರ್ಹ’ ತನಿಖೆಗೆ ಸಹಕರಿಸಲು ತಮ್ಮ ದೇಶ ಸಿದ್ಧ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಶನಿವಾರ ಹೇಳಿದ್ದಾರೆ.

ದಾಳಿಯ ಹಿಂದೆ ಪಾಕಿಸ್ತಾನದ ಕೈವಾಡವಿದೆ ಎಂದು ಭಾರತ ಮಾಡಿರುವ ಆರೋಪವನ್ನು ಅವರು ಅಲ್ಲಗಳೆದರು. ‘ನಮ್ಮ ಧೀರ ಸಶಸ್ತ್ರ ಪಡೆಗಳು ದೇಶದ ಸಾರ್ವಭೌಮತ್ವವನ್ನು ರಕ್ಷಿಸಲು ಸಮರ್ಥವಾಗಿದ್ದು, ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ಧವಾಗಿವೆ’ ಎಂದು ಅಬೋಟಾಬಾದ್‌ನಲ್ಲಿ ನಡೆದ ಮಿಲಿಟರಿ ಸಮಾರಂಭವೊಂದರಲ್ಲಿ ತಿಳಿಸಿದ್ದಾರೆ.

ಸೇನೆ ಕ್ರಮಕ್ಕೆ ಆಕ್ರೋಶ

ಒಂದನೇ ಪುಟದಿಂದ...

‘ನನ್ನ ಒಬ್ಬ ಸಹೋದರ ಜೈಲಿನಲ್ಲಿ ಇದ್ದಾನೆ. ಮತ್ತೊಬ್ಬ ಮುಜಾಹಿದ್(ಧಾರ್ಮಿಕ ಯೋಧ) ಆಗಿದ್ದರೆ, ನಾವು ಇಬ್ಬರು ಸಹೋದರಿಯರು ಇದ್ದೇವೆ. ಪೊಲೀಸರು ನನ್ನ ಕುಟುಂಬದ ಸದಸ್ಯರನ್ನು ಕರೆದೊಯ್ದಿದ್ದಾರೆ’ ಎಂದು ಆದಿಲ್ ಠೋಕರ್ ಸಹೋದರಿ ಯಾಸ್ಮೀನಾ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾವು ಅಮಾಯಕರು. ಆದರೂ ಅವರು ನಮ್ಮ ಮನೆಗಳನ್ನು ಧ್ವಂಸ ಮಾಡಿದ್ದಾರೆ’ ಎಂದು ಹೇಳಿದರು.

ಮತ್ತೊಬ್ಬ ಉಗ್ರನ ಸಂಬಂಧಿ ಮಾತನಾಡಿ,‘ಎಲ್‌ಇಟಿ ಸೇರಿದ ನಂತರ ಆತನೊಂದಿಗೆ ನಮಗೆ ಸಂಪರ್ಕ ಇಲ್ಲ. ಆತನ ನಿರ್ಧಾರಗಳಿಗೆ ನಮ್ಮನ್ನು ಹೇಗೆ ಹೊಣೆಗಾರರನ್ನಾಗಿ ಮಾಡಲಾಗುತ್ತದೆ’ ಎಂದು ಪ್ರಶ್ನಿಸಿದರು.

ಯುದ್ಧ ಅಗತ್ಯವಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: ‘ಪಾಕಿಸ್ತಾನದ ಮೇಲೆ ಯುದ್ಧ ಸಾರುವ ಅಗತ್ಯವಿಲ್ಲ. ಕಾಶ್ಮೀರದ ಪ್ರದೇಶದಲ್ಲಿ ಭದ್ರತಾ ಕ್ರಮಗಳನ್ನು ಬಿಗಿಗೊಳಿಸಲು ಕ್ರಮ ಕೈಗೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಇಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ನಾವು ಯುದ್ಧದ ಪರ ಇಲ್ಲ, ಶಾಂತಿ ನೆಲೆಸಲು ಕೇಂದ್ರ ಸರ್ಕಾರ ಭದ್ರತೆ ಹೆಚ್ಚಿಸಬೇಕು’ ಎಂದರು.

ಸಿದ್ದರಾಮಯ್ಯ

‘ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಸ್ಥಳಕ್ಕೆ ಹೆಚ್ಚಿನ ಭದ್ರತೆ ಒದಗಿಸಬೇಕಿತ್ತು. ಹಿಂದೆ ಪುಲ್ವಾಮಾದಲ್ಲಿಯೂ 40 ಯೋಧರು ಪ್ರಾಣ ಕಳೆದುಕೊಂಡಿದ್ದರು. ಈ ಘಟನೆಯಲ್ಲಿ ಭದ್ರತಾ ವೈಫಲ್ಯವಾಗಿದೆ. ಪ್ರವಾಸಿಗರು ಕೇಂದ್ರ ಸರ್ಕಾರದವರನ್ನು ನಂಬಿ ಹೋಗಿದ್ದರು. ಈಗ ಯಾವುದೇ ಕ್ರಮಗಳನ್ನು ಕೇಂದ್ರ ಕೈಗೊಂಡರೂ, 26 ಜನ ಮತ್ತೆ ಬದುಕಿ ಬರಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

ಸರ್ವಪಕ್ಷ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಗೈರು ಕುರಿತು ಪ್ರತಿಕ್ರಿಯಿಸಿ, ‘ಅವರಿಗೆ ಈ ಸಭೆಗಿಂತ ಬಿಹಾರದ ಚುನಾವಣಾ ಪ್ರಚಾರವೇ ಮುಖ್ಯವೆಂದು ಕಾಣುತ್ತದೆ. ಪ್ರಧಾನಿಯವರು ಜನರಿಗೆ ಟೋಪಿ ಹಾಕುತ್ತಿದ್ದಾರೆ’ ಎಂದರು.

‘ಕೇಂದ್ರ ಸರ್ಕಾರದ ಸೂಚನೆಯಂತೆ, ಕರ್ನಾಟಕದಲ್ಲಿರಬಹುದಾದ ಪಾಕಿಸ್ತಾನಿ ಪ್ರಜೆಗಳ ಬಗ್ಗೆ ಮಾಹಿತಿ ಕಲೆಹಾಕಿ, ಅವರನ್ನು ವಾಪಸ್ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು. ಬೆಂಗಳೂರಿನಲ್ಲಿ ಪಾಕಿಸ್ತಾನಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ’ ಎಂದರು.

ಸಿದ್ದರಾಮಯ್ಯಗೆ ಪರಿಜ್ಞಾನ ಇಲ್ಲ: ಅಶೋಕ

ಬೆಂಗಳೂರು: ಎರಡು ಬಾರಿ ಮುಖ್ಯಮಂತ್ರಿ ಆಗಿರುವ ಸಿದ್ದರಾಮಯ್ಯ ಅವರಿಗೆ ಯಾವಾಗ ಏನು ಮಾತನಾಡಬೇಕು ಎನ್ನುವ ಕನಿಷ್ಠ ಪರಿಜ್ಞಾನ ಇಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ನಾಲ್ಕು ದಶಕಗಳ ಸುದೀರ್ಘ ರಾಜಕೀಯ ಅನುಭವ ಇರುವ ಸಿದ್ದರಾಮಯ್ಯ ಅವರು ದೇಶ ಸಂಕಷ್ಟದಲ್ಲಿರುವಾಗ ಆಡಿರುವ ಮಾತು ಆಘಾತ ತಂದಿದೆ. ಮತ ಸಿಕ್ಕಿದರೆ ಸಾಕು ಎಂಬ ಅವರ ಮನಸ್ಥಿತಿ ನಾಚಿಕೆಗೇಡಿನ ಸಂಗತಿ. ಈ ಕುರಿತು ಜನರ ಬಳಿ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಸರ್ಕಾರದ ನಿರ್ಧಾರವನ್ನು ಬೆಂಬಲಿಸುವುದಾಗಿ ಹೇಳಿದ್ದಾರೆ. ಇಲ್ಲಿ ಸಿದ್ದರಾಮಯ್ಯ ‘ಕಾಶ್ಮೀರದಲ್ಲಿ ಭಯೋತ್ಪಾದಕರು ಪ್ರವಾಸಿಗರ ಹತ್ಯೆ ಮಾಡಿದ್ದಾರೆ. ಹೋದ ಜೀವಗಳನ್ನು ವಾಪಸ್ ತರಲು ಸಾಧ್ಯವಿಲ್ಲ’ ಎನ್ನುವ ಮೂಲಕ ಮನೆ ಮುರಿಯುವ ಮಾತನಾಡಿದ್ದಾರೆ ಎಂದು ದೂರಿದರು.

ಸಿ.ಎಂ. ಹೇಳಿಕೆಗೆ ವಿಜಯೇಂದ್ರ ಖಂಡನೆ

ಬೆಂಗಳೂರು: ಪಾಕಿಸ್ತಾನದ ವಿರುದ್ಧ ಭಾರತ ದಿಟ್ಟ ಹೆಜ್ಜೆ ಇಡಲು ಹೊರಟಿರುವ ಸಮಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾರತೀಯ ಸೈನಿಕರ ನೈತಿಕ ಸ್ಥೈರ್ಯ ಕುಗ್ಗಿಸಲು ಹೊರಟಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ಭಾರತ ಎಂದೂ ಯುದ್ಧದಾಹ ಪ್ರದರ್ಶಿಸಿಲ್ಲ. ಪಾಕಿಸ್ತಾನ ಭಾರತವನ್ನು ಕೆಣಕಿದ ಪರಿಣಾಮ ಯುದ್ಧಗಳು ನಡೆದಿವೆ. ಆ ವೇಳೆ ದಿಟ್ಟ ಹೆಜ್ಜೆ ಇಟ್ಟು ಮಣಿಸಲಾಗಿದೆ. ಕಾಶ್ಮೀರದಲ್ಲಿ ಪ್ರವಾಸಿಗರ ಮಾರಣಹೋಮ ನಡೆಸಿದಾಗಲೂ ‘ತಾವು ಯುದ್ಧದ ಪರ ಅಲ್ಲ’ ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ದೇಶಕ್ಕೆ ಯಾವ ಸಂದೇಶ ನೀಡುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ಪಾಕಿಸ್ತಾನ ಎಷ್ಟೇ ಉಪಟಳ ನೀಡಿದರೂ, ಜನರ ಪ್ರಾಣ ತೆಗೆದರೂ ಭಾರತ ಯುದ್ಧ ಮಾಡದೇ ಶಾಂತಿ ಮಂತ್ರ ಪಠಿಸಬೇಕೇ? ಯುದ್ಧ ಆದ್ಯತೆ ಅಲ್ಲದಿದ್ದರೂ ರಾಷ್ಟ್ರದ ಸುರಕ್ಷತೆ, ಭಾರತೀಯರ ಜೀವಗಳ ರಕ್ಷಣೆ ಅದಕ್ಕಿಂತಲೂ ಮುಖ್ಯ ಎಂದಿದ್ದಾರೆ.

‘ಸಿದ್ದರಾಮಯ್ಯ, ಉಗ್ರರಿಗೆ ವ್ಯತ್ಯಾಸವಿಲ್ಲ’

ಹುಬ್ಬಳ್ಳಿ: ‘ಕಾಶ್ಮೀರದ ಪಹಲ್ಗಾಮ್‌ನಲ್ಲಿ ಧರ್ಮದ ಹೆಸರು ಕೇಳಿ ಯಾರೂ ಗುಂಡು ಹೊಡೆದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಯೋತ್ಪಾದಕರ ಕೃತ್ಯ ಸಮರ್ಥಿಸಿಕೊಳ್ಳುವುದು ನೋಡಿದರೆ, ಅವರಿಗೆ ಮತ್ತು ಭಯೋತ್ಪಾದಕರಿಗೆ ಯಾವ ವ್ಯತ್ಯಾಸ ಇಲ್ಲ ಎಂಬಂತೆ ಕಾಣುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆಕ್ರೋಶ ವ್ಯಕ್ತಪಡಿಸಿದರು.

‘ದೇಶದ ಮೇಲೆ ಪಾಕಿಸ್ತಾನದ ಭಯೋತ್ಪಾದಕರು ದಾಳಿ ನಡೆಸಿದಾಗಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಸ್ಲಿಮರ ಪರ ಮಾತನಾಡುತ್ತಾರೆ. ದೇಶದ ಭದ್ರತೆ ವಿಷಯ ಬಂದಾಗ ಧರ್ಮ, ಜಾತಿಯ ಯಾವ ಗುಂಗೂ ಇರಬಾರದು. ಪಾಕಿಸ್ತಾನದ ವಿರುದ್ಧ ಯುದ್ಧ ನಡೆದರೆ ರಾಜ್ಯದ ಮುಸ್ಲಿಮರು ಏನೆಂದುಕೊಳ್ಳುತ್ತಾರೋ ಎಂದು ಅವರು ಬಾಲಿಶ ಹೇಳಿಕೆ ನೀಡುತ್ತಾರೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ನೀರು ನಿಲ್ಲಿಸಿದರೆ ರಕ್ತಪಾತ’

ಒಂದನೇ ಪುಟದಿಂದ...

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತ್ಯುತ್ತರವಾಗಿ ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸುವ ಭಾರತದ ನಿರ್ಧಾರಕ್ಕೆ ಅವರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

‘ಸಿಂಧೂ ನದಿ ನೀರು ನಮಗೆ ಸೇರಿದ್ದು ಮತ್ತು ಅದು ಎಂದೆಂದಿಗೂ ನಮ್ಮದೇ ಆಗಿರುತ್ತದೆ. ನಮ್ಮ ಪಾಲಿನ ನೀರು ಅದರ ಮೂಲಕ ಹರಿಯುವುದೋ ಅಥವಾ ಅವರ ರಕ್ತ ಹರಿಯುವುದೋ ಎಂಬುದು ಮುಂದೆ ನಿರ್ಧಾರವಾಗಲಿದೆ’ ಎಂದು ಸಿಂಧ್ ಪ್ರಾಂತ್ಯದ ಸುಕೂರ್ ಪ್ರದೇಶದಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಬಿಲಾವಲ್ ಹೇಳಿದ್ದಾಗಿ ‘ದಿ ನ್ಯೂಸ್’ ವರದಿ ಮಾಡಿದೆ.

‘ಸಿಂಧೂ ನದಿ ಈ ಪ್ರಾಂತ್ಯದ ಮೂಲಕ ಹರಿಯುತ್ತದೆ ಮತ್ತು ಮೊಹೆಂಜೊದಾರೊ ನಾಗರಿಕತೆಯು ಸಿಂಧೂ ನದಿ ಪಾತ್ರದಲ್ಲಿ ಮೈದಳೆದಿದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಈ ನಾಗರಿಕತೆಯು ಭಾರತಕ್ಕೆ ಸೇರಿದ್ದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿಕೊಂಡಿದ್ದಾರೆ. ಆದರೆ, ಈ ನಾಗರಿಕತೆಯು ಲಡ್ಕಾನಾದ ಮೊಹೆಂಜೊ ದಾರೊದಲ್ಲಿದೆ. ಅದರ ನೈಜ ಮಾಲೀಕರು ನಾವೇ ಆಗಿದ್ದೇವೆ ಮತ್ತು ಅದನ್ನು ರಕ್ಷಿಸುತ್ತೇವೆ’ ಎಂದಿದ್ದಾರೆ.

‘ಭಾರತ ಸರ್ಕಾರವು ಪಾಕಿಸ್ತಾನದ ನೀರಿನ ಮೇಲೆ ಕಣ್ಣಿಟ್ಟಿದೆ. ನಮ್ಮ ಪಾಲಿನ ನೀರನ್ನು ರಕ್ಷಿಸಲು ಪಾಕಿಸ್ತಾನದ ನಾಲ್ಕೂ ಪ್ರಾಂತ್ಯಗಳ ಜನರು ಒಗ್ಗಟ್ಟು ಪ್ರದರ್ಶಿಸಬೇಕು’ ಎಂದು ಕರೆಕೊಟ್ಟರು.

‘ಮೋದಿ ಅವರ ‘ಯುದ್ಧೋನ್ಮಾದ’ ಮನಸ್ಥಿತಿ ಮತ್ತು ಸಿಂಧೂ ನದಿ ನೀರನ್ನು ಬೇರೆಡೆ ತಿರುಗಿಸುವ ಯಾವುದೇ ಪ್ರಯತ್ನವನ್ನು ಪಾಕಿಸ್ತಾನದ ಜನರು ಅಥವಾ ಅಂತರರಾಷ್ಟ್ರೀಯ ಸಮುದಾಯವು ಸಹಿಸುವುದಿಲ್ಲ. ಸಿಂಧೂ ನದಿ ನೀರಿಗೆ ತಡೆಯೊಡ್ಡುವುದನ್ನು ಒಪ್ಪಲಾಗದು ಎಂಬ ಸಂದೇಶವನ್ನು ಜಗತ್ತಿಗೆ ರವಾನಿಸುತ್ತೇವೆ’ ಎಂದು ಹೇಳಿದ್ದಾರೆ.

ಪಾಕಿಸ್ತಾನದಿಂದ ಅಪ್ರಚೋದಿತ ದಾಳಿ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ/ನವದೆಹಲಿ: ಪಾಕಿಸ್ತಾನದ ಮಿಲಿಟರಿಯು ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಅಪ್ರಚೋದಿತವಾಗಿ ಗುಂಡಿನ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಭಾರತೀಯ ಸೇನೆ ಕೂಡ ದಾಳಿ ನಡೆಸಿದೆ ಎಂದು ಮಿಲಿಟರಿ ಮೂಲಗಳು ಹೇಳಿವೆ.

ಪಾಕಿಸ್ತಾನ ಸೇನೆಯ ದಾಳಿಯಿಂದಾಗಿ 778 ಕಿ.ಮೀ ಉದ್ದ ನಿಯಂತ್ರಣ ರೇಖೆಯುದ್ದಕ್ಕೂ ಶಾಂತಿಗೆ ಭಂಗ ಉಂಟಾಗಿದೆ.

ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ದಾಳಿ ನಡೆಸಿ 26 ಜನರನ್ನು ಹತ್ಯೆ ಮಾಡಿದ ನಂತರದಲ್ಲಿ ಭಾರತ ಮತ್ತು ಪಾಕಿಸ್ತಾನದ ಗಡಿಯಲ್ಲಿ ಪರಿಸ್ಥಿತಿ ಬಿಗುವಿನಿಂದ ಕೂಡಿದೆ. ಪಾಕಿಸ್ತಾನದ ಸೇನೆಯು ಸತತ ಎರಡನೆಯ ರಾತ್ರಿಯೂ ಗುಂಡಿನ ದಾಳಿ ನಡೆಸಿದೆ.

ಕಾಶ್ಮೀರದಲ್ಲಿ ಶುಕ್ರವಾರ ಮತ್ತು ಶನಿವಾರ ರಾತ್ರಿ ನಿಯಂತ್ರಣ ರೇಖೆಯ ಉದ್ದಕ್ಕೂ ಪಾಕಿಸ್ತಾನದ ಕಡೆಯಿಂದ ಗುಂಡಿನ ದಾಳಿ ನಡೆಯಿತು. ಇದಕ್ಕೆ ಭಾರತದ ಸೇನಾಪಡೆಯಿಂದ ತಕ್ಕ ಪ್ರತ್ಯುತ್ತರ ನೀಡಲಾಯಿತು ಎಂದು ಮೂಲಗಳು ವಿವರಿಸಿವೆ.

ಸಚಿವ ಆರ್.ಬಿ. ತಿಮ್ಮಾಪುರ ಪ್ರಶ್ನೆ

ದಾಳಿ ವೇಳೆ ಧರ್ಮ ಕೇಳಲು ‘ಆಗುವುದೇ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕಾಶ್ಮೀರದ ಪಹಲ್ಗಾಮ್‌ನಲ್ಲಿ ದಾಳಿ ಮಾಡುವವನು ಧರ್ಮ ಕೇಳುತ್ತಾ ಕೂರಲು ಆಗುವುದೇ? ಕೇಳಿರಲಿಕ್ಕಿಲ್ಲ ಎಂಬ ಭಾವನೆ ನನ್ನದು. ಒಂದು ವೇಳೆ ಕೇಳಿದ್ದರೂ, ಧರ್ಮದ ಹೆಸರಿನಲ್ಲಿ ಎಲ್ಲವನ್ನೂ ಜೋಡಿಸುವುದು ಸರಿಯಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

‘ಬೇಹುಗಾರಿಕೆ ವೈಫಲ್ಯ ಮುಚ್ಚಿ ಹಾಕಲು ಹಿಂದೂ–ಮುಸ್ಲಿಂ ಬಣ್ಣ ಕಟ್ಟುವುದು ಮತ್ತು ಚುನಾವಣೆ ದೃಷ್ಟಿಯಿಂದ ಎಲ್ಲವನ್ನೂ ನೋಡುವುದು ಸರಿಯಲ್ಲ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಪಹಲ್ಗಾಮ್ ಅಲ್ಲದೇ ಕಾರ್ಗಿಲ್ ಮತ್ತು ಪುಲ್ವಾಮಾ ದಾಳಿಗೂ ಬೇಹುಗಾರಿಕೆ ವೈಫಲ್ಯವೇ ಕಾರಣ. ಸತ್ತವರ ಹೆಸರಿನಲ್ಲಿ ಲಾಭ ತೆಗೆದುಕೊಳ್ಳುವುದು ಮತ್ತು ದೇಶ ಸಂಕಷ್ಟದಲ್ಲಿದ್ದರೂ ರಾಜಕೀಯ ಮಾಡುವುದು ಬಿಜೆಪಿಯವರ ಧ್ಯೇಯ’ ಎಂದರು.

‘ಉಗ್ರರಿಗೆ ಧರ್ಮ, ಮಾನವೀಯತೆಯಿಲ್ಲ’

ಬೆಂಗಳೂರು: ‘ಇತ್ತೀಚೆಗೆ ಕಾಶ್ಮೀರದಲ್ಲಿ ನಡೆದ ಭಯೋತ್ಪಾದಕರ ದಾಳಿ ಖಂಡನೀಯ. ಭಯೋತ್ಪಾದಕರು ಧರ್ಮದ ಹೆಸರನ್ನು ಬಳಸಿಕೊಳ್ಳುತ್ತಾರೆಯೇ ಹೊರತು, ಅವರಿಗೆ ಧರ್ಮ ಮತ್ತು ಮಾನವೀಯತೆ ಎರಡೂ ಇಲ್ಲ’ ಎಂದು ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ತಿಳಿಸಿದೆ.

‘ಪ್ರವಾಸಿಗರ ಮೇಲೆ ಗುಂಡು ಹಾರಿಸಿ, ಹತ್ಯೆಗೈದ ಕೃತ್ಯ ಅಮಾನವೀಯ. ದೇಶದಲ್ಲಿ ಭಯೋತ್ಪಾದನೆ ನಿರ್ಮೂಲನವಾಗಿಲ್ಲ ಎಂಬುದಕ್ಕೆ ಇದು ಸಾಕ್ಷಿ. ಅಮಾಯಕ ಜನರನ್ನು ಹತ್ಯೆ ಮಾಡಿದ ತಂಡವನ್ನು ಕ್ಷಮಿಸಲಾಗದು. ಈ ವೇಳೆ ಜನರಿಗೆ ಭದ್ರತೆಯ ಭರವಸೆ ಬೇಕಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಸಂಘಟನೆಯ ಪರವಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹಿಸಿದ್ದಾರೆ.

‘ಭಯೋತ್ಪಾದಕರ ಹೀನ ಕೃತ್ಯಕ್ಕೆ ಜೀವತೆತ್ತ ಎಲ್ಲ ಕುಟುಂಬದವರ ದುಃಖದಲ್ಲಿ ನಾವು ಭಾಗಿಯಾಗಿದ್ದೇವೆ. ಕಾಶ್ಮೀರದಲ್ಲಿ ನಡೆದ ಈ ಅಮಾನವೀಯ ಕೃತ್ಯದ ಸಂದರ್ಭದಲ್ಲಿ ಅಲ್ಲಿನ ಸ್ಥಳೀಯರು ಜಾತಿ, ಧರ್ಮವನ್ನು ಮೀರಿ, ಸಂತ್ರಸ್ತರ ನೆರವಿಗೆ ಬಂದದ್ದು ಮಾನವೀಯ ನಡೆಯಾಗಿದೆ. ಮಾನವೀಯ ಸಮಾಜವೇ ನಮ್ಮ ಆದ್ಯತೆಯಾಗಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ದಾಳಿ ನಡೆದಿರುವುದಕ್ಕೆ ಭದ್ರತಾ ವೈಫಲ್ಯವೇ ಕಾರಣ ಎನ್ನುವುದರಲ್ಲಿ ಹುರುಳಿಲ್ಲ. ದಾಳಿ ನೆಪವಾಗಿಸಿಕೊಂಡು ಯಾರೂ ರಾಜಕಾರಣ ಮಾಡಬಾರದು. ಕುಹಕದ ಹೇಳಿಕೆ ನೀಡಬಾರದು

ರಕ್ಷಾ ಖಡ್ಸೆ, ಕೇಂದ್ರ ಯುವಜನ ಸಬಲೀಕರಣ ಮತ್ತು ಕ್ರೀಡಾ ರಾಜ್ಯ ಖಾತೆ ಸಚಿವೆ

ಸುತ್ತೋಲೆ ವಾಪಸ್ ಪಡೆಯಲು ಒತ್ತಾಯಿಸಿ ಮುಖ್ಯ ಆಯುಕ್ತರಿಗೆ ಪದ್ಮನಾಭ ರೆಡ್ಡಿ ಪತ್ರ

‘ಕಸ: ಬಳಕೆದಾರರ ಶುಲ್ಕ ಕೈಬಿಡಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಒಂದೆರಡು ಕೆ.ಜಿ ಕಸ ಉತ್ಪಾದಿಸುವ ಕಟ್ಟಡಗಳಿಗೂ ಲಕ್ಷಾಂತರ ಶುಲ್ಕ
- ಘನತ್ಯಾಜ್ಯ ಬಳಕೆದಾರರ ಶುಲ್ಕದಿಂದ ಮನೆಗಳ ಬಾಡಿಗೆ ಹೆಚ್ಚಳ
- ಶಾಲಾ ಕಾಲೇಜು, ಆಸ್ಪತ್ರೆಗಳ ವೆಚ್ಚ ಅಧಿಕ

ಬೆಂಗಳೂರು: ‘ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕವನ್ನು ಕಾನೂನು-ಬಾಹಿರವಾಗಿ ಜಾರಿ ಮಾಡಲಾಗಿದ್ದು, ಕೂಡಲೇ ಸುತ್ತೋಲೆ ವಾಪಸ್ ಪಡೆಯಬೇಕು’ ಎಂದು ಬಿಬಿಎಂಪಿಯ ಮಾಜಿ ವಿರೋಧ ಪಕ್ಷದ ನಾಯಕ ಪದ್ಮನಾಭ ರೆಡ್ಡಿ ಆಗ್ರಹಿಸಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿರುವ ಅವರು, ‘ನಗರಾಭಿವೃದ್ಧಿ ಇಲಾಖೆಯ ಪತ್ರದಲ್ಲಿ ಆಡಳಿತಗಾರರು ಸರ್ಕಾರದ ವಿರುದ್ಧ ತೀರ್ಮಾನ ತೆಗೆದುಕೊಂಡಿದ್ದಾರೆ. ಇದು ಕಾನೂನಿನ ಉಲ್ಲಂಘನೆ. ದೇಶದ ಯಾವುದೇ ನಗರದಲ್ಲಿ ಘನತ್ಯಾಜ್ಯ ನಿರ್ವಹಣಾ ಸೆಸ್ ಮತ್ತು ಘನತ್ಯಾಜ್ಯ ಬಳಕೆದಾರರ ಶುಲ್ಕ ಎರಡನ್ನೂ ವಿಧಿಸಿಲ್ಲ. ಈಗಾಗಲೇ ಆಸ್ತಿ ತೆರಿಗೆ ಜೊತೆಗೆ ಶೇ 26ರಷ್ಟು ಸೆಸ್ ಸಂಗ್ರಹಿಸಲಾಗುತ್ತಿದೆ. ಬಳಕೆದಾರರ ಶುಲ್ಕ ಏಕೆ ಬೇಕು’ ಎಂದು ಪ್ರಶ್ನಿಸಿದ್ದಾರೆ.

ಪದ್ಮನಾಭ ರೆಡ್ಡಿ

‘ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರ ಪತ್ರದಲ್ಲಿ ಘನತ್ಯಾಜ್ಯ ನಿರ್ವಹಣೆ ಬೈ-ಲಾದಲ್ಲಿ ಎಲ್ಲ ವಿಧದ ವಸತಿ ಕಟ್ಟಡಗಳಿಗೆ ಪ್ರತಿ ತಿಂಗಳು ₹200 ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ಎಂದು ಸೂಚಿಸಲಾಗಿದೆ. ಇದನ್ನು ಪರಿಷ್ಕರಿಸಿ ಕಟ್ಟಡದ ವಿಸ್ತೀರ್ಣಕ್ಕೆ ಅನುಗುಣವಾಗಿ ವಿಧಿಸಲಾಗಿದೆ. ಖಾಲಿ ನಿವೇಶನ, ವಸತಿಯೇತರ ಕಟ್ಟಡ, ಹೋಟೆಲ್‌ಗಳಿಗೆ ದರ ನಿಗದಿ ಮಾಡಲಾಗಿದೆ. ಇದು ಶೇ 20ರಿಂದ ಶೇ 200ರಷ್ಟು ಹೆಚ್ಚಾಗಿದ್ದು, ಅವೈಜ್ಞಾನಿಕವಾಗಿದೆ’ ಎಂದು ಉದಾಹರಣೆ ಸಹಿತ ವಿವರಿಸಿದ್ದಾರೆ.

‘ಸಣ್ಣ ನಿವೇಶನಗಳಲ್ಲಿ ಇರುವ ವಾಣಿಜ್ಯ ಕಟ್ಟಡಗಳ ಕಚೇರಿ, ಬ್ಯಾಂಕ್‌ಗಳಿಗೆ ತ್ಯಾಜ್ಯ ನಿರ್ವಹಣೆಯನ್ನು ಆಸ್ತಿ ತೆರಿಗೆ ಪೋರ್ಟಲ್‌ನಲ್ಲಿ ಘನತ್ಯಾಜ್ಯ ನಿರ್ವಹಣೆ ಬೈ-ಲಾ ಪ್ರಕಾರ ಘೋಷಿಸಿಕೊಳ್ಳಲು ಅವಕಾಶ ಕಲ್ಪಿಸಿಲ್ಲ. ಹೀಗಾಗಿ ಪ್ರತಿ ದಿನ ಎರಡರಿಂದ ಮೂರು ಕೆ.ಜಿ ತ್ಯಾಜ್ಯ ಉತ್ಪಾದನೆಯಾಗುವ ಕಟ್ಟಡಗಳೂ ಲಕ್ಷಾಂತರ ರೂಪಾಯಿ ಘನತ್ಯಾಜ್ಯ ನಿರ್ವಹಣಾ ಶುಲ್ಕ ಪಾವತಿಸಬೇಕಾಗಿದೆ’ ಎಂದು ಹೇಳಿದ್ದಾರೆ.

‘ಅಪಾರ್ಟ್‌ಮೆಂಟ್, ಗೇಟೆಡ್ ಕಮ್ಯುನಿಟಿಯವರು ಅವರೇ ತ್ಯಾಜ್ಯ ಸಂಸ್ಕರಣೆ ಮತ್ತು ಕಸ ನಿರ್ವಹಣೆ ವ್ಯವಸ್ಥೆ ಹೊಂದಿದ್ದಾರೆ. ಅವರಿಗೂ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ವಿಧಿಸಲಾಗುತ್ತಿದೆ. ಅದೇ ರೀತಿ, ವಾಣಿಜ್ಯ ಕಟ್ಟಡ, ಹೋಟೆಲ್, ಶಾಲಾ ಕಾಲೇಜು, ಆಸ್ಪತ್ರೆಗಳಿಗೆ ಲಕ್ಷಾಂತರ ಶುಲ್ಕ ವಿಧಿಸುತ್ತಿರುವುದು ಕಾನೂನು ಬಾಹಿರ’ ಎಂದು ಹೇಳಿದ್ದಾರೆ.

‘ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕವನ್ನು ಅಧಿಕವಾಗಿ ವಿಧಿಸುವುದರಿಂದ ನಾಗರಿಕರು ಆಂತಕಕ್ಕೆಒಳಗಾಗಿದ್ದಾರೆ. ಮನೆಗಳ ಬಾಡಿಗೆ ಹೆಚ್ಚಲಿದೆ. ಅಂಗಡಿ, ವಾಣಿಜ್ಯ ಕಟ್ಟಡಗಳ ಬಾಡಿಗೆಯೂ ಅಧಿಕವಾಗುತ್ತದೆ. ಶಾಲಾ ಶುಲ್ಕ, ಆಸ್ಪತ್ರೆ ವೆಚ್ಚ, ಹೋಟೆಲ್ ತಿಂಡಿ ದರ, ಕಲ್ಯಾಣ ಮಂಟಪಗಳ ಬಾಡಿಗೆ ಹೆಚ್ಚಾಗುತ್ತದೆ. ಒಟ್ಟಾರೆ ನಾಗರಿಕರು ನರಳಾಡುವ ಸ್ಥಿತಿಗೆ ಬರುತ್ತಾರೆ. ಆದ್ದರಿಂದ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ವಿಧಿಸುವ ಸುತ್ತೋಲೆಯನ್ನು ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿದ್ದಾರೆ.

ವೀರೇಂದ್ರ ಹೆಗ್ಗಡೆ ವ್ಯಕ್ತಿತ್ವದ ಮೆಲುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜಮುಖಿ ಕಾರ್ಯಗಳ ಮೂಲಕ ರಾಜ್ಯದ ಮನೆ ಮನಗಳಲ್ಲಿ ಮಂಜುನಾಥನ ಆಶೀರ್ವಾದದ ಜ್ಯೋತಿಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಬೆಳಗಿದ್ದಾರೆ ಎಂದು ಬೇಲಿಮಠದ ಶಿವರುದ್ರ ಸ್ವಾಮೀಜಿ ಹೇಳಿದರು.

‘ನಿಮಿತ್ತಮಾತ್ರಂ’ ಸಿಟಿಜನ್ಸ್ ಫೋರಮ್ ಶನಿವಾರ ನಗರದಲ್ಲಿ ಹಮ್ಮಿಕೊಂಡಿದ್ದ ಧರ್ಮಸ್ಥಳದ ಐದು ದಶಕಗಳ ಸೇವಾಪಥದ ಅನಾವರಣ ‘ಧರ್ಮದರ್ಶನ’ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪರಂಪರೆಯಿಂದ ಬಂದ ಅಧಿಕಾರ, ಅವಕಾಶ ಮತ್ತು ಜವಾಬ್ದಾರಿಯನ್ನು ವೀರೇಂದ್ರ ಹೆಗ್ಗಡೆಯವರು ಸಣ್ಣ ವಯಸ್ಸಿನಲ್ಲಿಯೇ ಹೊತ್ತುಕೊಂಡು ಸಮರ್ಥವಾಗಿ ನಿರ್ವಹಿಸಿದ್ದಾರೆ. ಧಾರ್ಮಿಕ ಸಂಸ್ಥೆಗಳು ತಮ್ಮ ಜಮೀನುಗಳನ್ನು ಇತರರ ಕಬಳಿಕೆಯಿಂದ ಉಳಿಸಿ ಸಾಮಾಜಿಕ ಉದ್ದೇಶಗಳಿಗೆ ಬಳಸಿಕೊಳ್ಳಲು ಅವರು ಕಾರಣರಾಗಿದ್ದಾರೆ ಎಂದು ಶ್ಲಾಘಿಸಿದರು.

‘ಧರ್ಮದರ್ಶನ’ ವಿಚಾರ ಸಂಕಿರಣದಲ್ಲಿ ಸುರೇಂದ್ರ ಕುಮಾರ್, ಟಿ.ಎಸ್. ನಾಗಾಭರಣ, ಶಿವರುದ್ರ ಸ್ವಾಮೀಜಿ, ಡಾ.ಎಂ. ಮೋಹನ ಆಳ್ವ ಭಾಗವಹಿಸಿದ್ದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಮೋಹನ ಆಳ್ವ ಮಾತನಾಡಿ, ‘ಧಾರ್ಮಿಕ ಮತ್ತು ಸಾಮಾಜಿಕವಾದ ನೂರಾರು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ವೀರೇಂದ್ರ ಹೆಗ್ಗಡೆ ಮರ್ಯಾದಾ ಪುರುಷೋತ್ತಮ’ ಎಂದು ಬಣ್ಣಿಸಿದರು.

ಸಮಾರೋಪ ಸಮಾರಂಭದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ಎಲ್. ಶಂಕರ್ ಮಾತನಾಡಿ, ‘ಸುಳ್ಳನ್ನು ವಿಜೃಂಭಿಸುವ ಕೆಲಸಗಳನ್ನು ತಡೆಗಟ್ಟಲು ಧರ್ಮದರ್ಶನದಂತಹ ಕಾರ್ಯಕ್ರಮ ಅಗತ್ಯ’ ಎಂದು ಪ್ರತಿಪಾದಿಸಿದರು. ಶಿಕ್ಷಣ ತಜ್ಞ ಗೋಪಾಲ್ ನಾಯ್ಕ್ ಉಪಸ್ಥಿತರಿದ್ದರು.

ವಿಚಾರ ಸಂಕಿರಣದಲ್ಲಿ ಧರ್ಮಸ್ಥಳದ ಮತ್ತು ವೀರೇಂದ್ರ ಹೆಗ್ಗಡೆಯವರ ಜೀವನ ಸಾಧನೆ ಕುರಿತಾದ 26 ಗೋಷ್ಠಿಗಳು ನಡೆದವು. ಚಕ್ರವರ್ತಿ ಸೂಲಿಬೆಲೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಸಹಿತ ಅನೇಕರು ವಿಚಾರ ಮಂಡಿಸಿದರು.

‘ರಕ್ತನಾಳ ಸಮಸ್ಯೆ ಪತ್ತೆಗೆ ಆದ್ಯತೆ’

ಉತ್ತಮ ಜೀವನಶೈಲಿಯಿಂದ ನಿಯಂತ್ರಣ ಸಾಧ್ಯ: ಡಾ.ಕೆ.ಎಸ್.ರವೀಂದ್ರನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೃದಯದ ಸ್ನಾಯುಗಳಿಗೆ ರಕ್ತದ ಪೂರೈಕೆಯಲ್ಲಿ ವ್ಯತ್ಯಯವಾದರೆ ಜೀವಕ್ಕೇ ಅಪಾಯ ಎದುರಾಗಲಿದೆ. ಆದ್ದರಿಂದ ರಕ್ತನಾಳಗಳಲ್ಲಿನ ಅಡಚಣೆ ಪತ್ತೆಗೆ ಆದ್ಯತೆ ನೀಡಬೇಕಿದೆ’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್.ರವೀಂದ್ರನಾಥ್ ಅಭಿಪ್ರಾಯಪಟ್ಟರು.

ರಕ್ತನಾಳದ ಸಮಸ್ಯೆ ಹಾಗೂ ಚಿಕಿತ್ಸೆ ಬಗ್ಗೆ ಅರಿವು ಕಾರ್ಯಕ್ರಮದಲ್ಲಿ ತಜ್ಞ ವೈದ್ಯರು ಭಾಗವಹಿಸಿದ್ದರು

ವ್ಯಾಸ್ಕುಲರ್ ಸರ್ಜನ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ವ್ಯಾಸ್ಕುಲರ್ ಸೊಸೈಟಿ ಆಫ್ ಇಂಡಿಯಾ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಕ್ತನಾಳದ ಸಮಸ್ಯೆ ಹಾಗೂ ಚಿಕಿತ್ಸೆಯ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಧೂಮಪಾನ, ಮಾದಕ ವಸ್ತುಗಳ ಸೇವನೆ, ಅನುವಂಶೀಯತೆ ಸೇರಿ ವಿವಿಧ ಕಾರಣಗಳಿಂದ ರಕ್ತನಾಳದ ಸಮಸ್ಯೆಗಳು ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ಜತೆಗೆ ನಿಯಂತ್ರಣಕ್ಕೆ ಆದ್ಯತೆ ನೀಡಲಾಗಿದೆ. ಹುಬ್ಬಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಸಂಸ್ಥೆಯ ಶಾಖೆಯಲ್ಲಿ ರಕ್ತನಾಳ ವಿಭಾಗ ಪ್ರಾರಂಭ ಮಾಡಲಾಗುತ್ತಿದೆ’ ಎಂದರು.

‘ಈಗಾಗಲೇ ಬೆಂಗಳೂರು, ಮೈಸೂರು ಹಾಗೂ ಕಲಬುರಗಿಯಲ್ಲಿ ರಕ್ತನಾಳ ವಿಭಾಗ ಕಾರ್ಯಾರಂಭಿಸಿದೆ. ಅತ್ಯಾಧುನಿಕ ಚಿಕಿತ್ಸಾ ಸೌಕರ್ಯಗಳನ್ನು ಬಳಸಲಾಗುತ್ತಿದೆ. ಉತ್ತಮ ಜೀವನಶೈಲಿಯಿಂದ ರಕ್ತನಾಳದ ಸಮಸ್ಯೆ ನಿಯಂತ್ರಿಸಬಹುದು‘ ಎಂದು ಹೇಳಿದರು.

ರಕ್ತನಾಳದ ಶಸ್ತ್ರಚಿಕಿತ್ಸಕ ಡಾ.ಕೆ. ಆರ್.ಸುರೇಶ್, ‘ದೇಹ ರಕ್ತನಾಳಗಳಿಂದ ಕೂಡಿದ ಸಂಕೀರ್ಣ ವ್ಯವಸ್ಥೆಯಾಗಿದೆ. ಶೇ 80ರಷ್ಟು ರಕ್ತನಾಳದ ಸಮಸ್ಯೆಗಳನ್ನು ಔಷಧ, ಜೀವನಶೈಲಿ ಬದಲಾವಣೆಯಂತಹ ಕ್ರಮಗಳಿಂದ ತಪ್ಪಿಸಬಹುದಾಗಿದೆ‘ ಎಂದು ಹೇಳಿದರು.

ಜಯದೇವ ಹೃದ್ರೋಗ ಸಂಸ್ಥೆಯ ರಕ್ತನಾಳದ ವಿಭಾಗದ ಮುಖ್ಯಸ್ಥ ಡಾ.ಮುರಳಿಕೃಷ್ಣ ನೆಕ್ಕಂಟಿ, ‘ರಕ್ತನಾಳದ ಸಮಸ್ಯೆಯಿಂದ ಗ್ಯಾಂಗ್ರಿನ್ ಕೂಡಾ ಕಾಡಬಹುದು. ಈ ರೀತಿ ಸಮಸ್ಯೆಗೆ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಒಳಗಾಗುತ್ತಿದ್ದಾರೆ. ರಕ್ತನಾಳದ ಸಮಸ್ಯೆ ಪತ್ತೆಗೆ ಸಂಬಂಧಿಸಿದಂತೆ ವೈದ್ಯರಿಗೂ ಅಗತ್ಯ ತರಬೇತಿ ನೀಡಲಾಗುತ್ತಿದೆ’ ಎಂದು ತಿಳಿಸಿದರು.

ವ್ಯಾಸ್ಕುಲರ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಡಾ.ವೆಂಕಟೇಶ್ ರೆಡ್ಡಿ, ಕಾರ್ಯದರ್ಶಿ ಡಾ.ವಿಷ್ಣು ಎಂ., ಶಸ್ತ್ರಚಿಕಿತ್ಸಕ ಡಾ.ಆಂಜಿನಪ್ಪ, ರಕ್ತನಾಳೀಯ ಶಸ್ತ್ರಚಿಕಿತ್ಸಕರಾದ ಡಾ.ಚಂದ್ರಶೇಖರ್, ಡಾ.ವಿನಯ್ ಕೆ.ಎಸ್., ಡಾ.ಶ್ರವಣ್, ಡಾ.ಪೂರ್ಣಿಮಾ ಉಪಸ್ಥಿತರಿದ್ದರು.

ನಿಧನ ವಾರ್ತೆ

ನಿರ್ಮಲಾ ಜಾಮದಾರ

ಬೆಳಗಾವಿ: ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ, ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ. ಜಾಮದಾರ ಅವರ ಪತ್ನಿ ನಿರ್ಮಲಾ ಜಾಮದಾರ (68) ಅವರು ಬೆಂಗಳೂರಿನಲ್ಲಿ ಶನಿವಾರ ನಿಧನರಾದರು.

ಅವರಿಗೆ ಪತಿ, ಮೂವರು ಪುತ್ರಿಯರು, ಪುತ್ರ ಇದ್ದಾರೆ. ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ನಿರ್ಮಲಾ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಏ.28ರಂದು ಮಧ್ಯಾಹ್ನ ಇಲ್ಲಿನ ಸದಾಶಿವ ನಗರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಬಂಧುಗಳು ತಿಳಿಸಿದ್ದಾರೆ. ಎಸ್.ಎಂ.ಜಾಮದಾರ ಅವರು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ತೋರಗಲ್ಲ ಗ್ರಾಮದವರು.

ಪಾರ್ಥಿವ ಶರೀರವನ್ನು ಶನಿವಾರ ರಾತ್ರಿ ಬೆಳಗಾವಿಗೆ ತರಲಾಗುತ್ತಿದ್ದು, ಕೆಎಲ್‌ಇ ಆಸ್ಪತ್ರೆ ಶವಾಗಾರದಲ್ಲಿ ಇಡಲಾಗುವುದು. ಹಿರಿಯ ಪುತ್ರ ಅಮೆರಿಕದಲ್ಲಿದ್ದು, ಅವರು ಬರುವವರೆಗೆ (ಏ.28) ಕಾಯಲಾಗುವುದು ಎಂದು ಕುಟುಂಬದವರು ಮಾಹಿತಿ ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ಸೈಬರ್ ಅಪರಾಧ ವಿರುದ್ಧ ಜಾಗೃತಿ ಮೂಡಿಸುವ ಪೋಸ್ಟರ್ ಬಿಡುಗಡೆ ಮಾಡಲಾಯಿತು. ರವಿಸುಬ್ರಮಣ್ಯ, ಎಂ.ಆರ್.ವೆಂಕಟೇಶ್, ಕೆ.ಎನ್.ಯಶವಂತ್ ಕುಮಾರ್, ವಿಜಯ್ ಹಡಗಲಿ ಇದ್ದಾರೆ

ಸೈಬರ್ ವಂಚನೆ: ಜಾಗ್ರತೆಗೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ಎನ್.ಆರ್. ಕಾಲೊನಿಯ ಶ್ರೀರಾಮ ಮಂದಿರದಲ್ಲಿ ಶನಿವಾರ ಸೈಬರ್ ಅಪರಾಧಗಳನ್ನು ತಡೆಗಟ್ಟಲು ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಕಾರ್ಯಾಗಾರ ನಡೆಯಿತು.

ಸೈಬರ್ ಅಪರಾಧ ತಡೆ ಕುರಿತ ಭಿತ್ತಿ ಫಲಕಗಳನ್ನು ಪ್ರದರ್ಶಿಸಿ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ರವಿ ಸುಬ್ರಮಣ್ಯ, ‘ಯಾವುದೇ ಬ್ಯಾಂಕ್‌ನಲ್ಲಿ ಎರಡು ಖಾತೆಗಳನ್ನು ನಿರ್ವಹಿಸಿ, ಒಂದರಲ್ಲಿ ಕನಿಷ್ಠ ಮೊತ್ತದಲ್ಲಿ ವ್ಯವಹರಿಸಬೇಕು ಹಾಗೂ ಮತ್ತೊಂದು ಖಾತೆಯ ವ್ಯವಹಾರದ ಬಗ್ಗೆ ಗೋಪ್ಯತೆ ಕಾಪಾಡಬೇಕು’ ಎಂದು ಸಲಹೆ ನೀಡಿದರು.

ಸುಶಿಕ್ಷಿತ ಜನರು, ಹಿರಿಯರು, ಹೆಣ್ಣು ಮಕ್ಕಳು ಸೈಬರ್ ವಂಚನೆಗಳಿಗೆ ಒಳಗಾಗುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅನಗತ್ಯವಾಗಿ ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬಾರದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಆರ್.ವೆಂಕಟೇಶ್, ಸೈಬರ್ ಅಪರಾಧಗಳನ್ನು ತಡೆಗಟ್ಟುವಲ್ಲಿ ಸರ್ಕಾರಗಳ ಪಾತ್ರ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಸೈಬರ್ ಅಪರಾಧ ವಿಭಾಗವನ್ನು ಆಧುನೀಕರಣಗೊಳಿಸಬೇಕು. ಸಹಕಾರ ಬ್ಯಾಂಕ್‌ಗಳಲ್ಲಿ ಡಿಜಿಟಲ್ ವಹಿವಾಟಿಗೆ ಉತ್ತೇಜನ ನೀಡಬೇಕು ಎಂದರು.

ಬನಶಂಕರಿ ಸೈಬರ್ ಅಪರಾಧ ವಿಭಾಗದ ಸಹಾಯಕ ಪೊಲೀಸ್ ಕಮಿಷನರ್ ವಿಜಯ್ ಹಡಗಲಿ ಅವರು ಸೈಬರ್ ಅಪರಾಧಗಳ ಕುರಿತು ಮಾಹಿತಿ ನೀಡಿದರು.

ಸಿಐಡಿ ಘಟಕದ ಸೈಬರ್ ಅಪರಾಧ ವಿಭಾಗದ ಡಿವೈಎಸ್‌ಪಿ ಕೆ.ಎನ್. ಯಶವಂತ್ ಕುಮಾರ್ ಅವರು ವಿವಿಧ ರೀತಿಯ ಅಪರಾಧಗಳು ಮತ್ತು ಅವುಗಳ ತಡೆಗೆ ವಹಿಸಬೇಕಾಗಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಿಸಿದರು.

ವಿವಿಧ ಪಟ್ಟಣ ಸಹಕಾರ ಬ್ಯಾಂಕ್‌ಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಸೊಸೈಟಿಗಳ ನಿರ್ದೇಶಕರು ಭಾಗವಹಿಸಿದ್ದರು.

ಬಲಾಢ್ಯ ಪುರುಷ, ಮಹಿಳೆ ಸ್ಪರ್ಧೆ

ಬೆಂಗಳೂರು: ಆರ್ ಆ್ಯಂಡ್ ಎಸ್ ಸ್ಟ್ರೆಂತ್ ಸ್ಪೋರ್ಟ್ಸ್ ವತಿಯಿಂದ ಮೇ 31 ಮತ್ತು ಜೂನ್ 1ರಂದು ನಗರದ ಜಕ್ಕೂರು 80 ಅಡಿ ರಸ್ತೆಯ ಕ್ರಾಸ್‌ಫಿಟ್ ಯುವಾದಲ್ಲಿ ‘ಭಾರತದ ಬಲಾಢ್ಯ ಪುರುಷ ಮತ್ತು ಮಹಿಳೆ ಸ್ಪರ್ಧೆ’ ನಡೆಯಲಿದೆ. ದೇಶ-ವಿದೇಶಗಳ ಸ್ಪರ್ಧಿಗಳು ಈ ಸ್ಪರ್ಧೆಯಲ್ಲಿ ಕಣಕ್ಕಿಳಿಯಲಿದ್ದಾರೆ.

ದೇಶದಲ್ಲಿ ಈ ಪ್ರಮುಖ ಸ್ಪರ್ಧೆ–ಆಫೀಷಿಯಲ್ ಸ್ಟ್ರಾಂಗ್‌ಮನ್ ಗೇಮ್ಸ್ (ಒಎಸ್‌ಜಿ) ಕ್ವಾಲಿಫೈಯರ್ ಅನ್ನು– ಇದೇ ಮೊದಲ ಬಾರಿ ಮಹಿಳೆಯರೇ (ರಾಧಿಕಾ ಗಾಂಧಿ ಮತ್ತು ಸುಹಾನಿ ಗಾಂಧಿ) ಸೇರಿಕೊಂಡು ನಡೆಸುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪುರುಷರು ಮತ್ತು ಮಹಿಳೆಯರಿಗೆ ಒಟ್ಟು ನಾಲ್ಕು ವಿಭಾಗಗಳಲ್ಲಿ ವಿವಿಧ ವೇಟ್ ಕ್ಲಾಸ್‌ಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಫಾರ್ಮರ್ಸ್ ವಾಕ್, ಒನ್‌ಹ್ಯಾಂಡ್ ಡಂಬೆಲ್‌ಪ್ರೆಸ್, ಡೆಡ್‌ಲಿಫ್ಟ್ (ರೆಪ್ಸ್), ಸ್ಲೆಜ್ ಪುಲ್ ವಿಭಾಗಗಳಲ್ಲಿ ಸ್ಪರ್ಧೆಗಳು ನಿಗದಿಯಾಗಿವೆ. ನೋಂದಣಿ ಆರಂಭವಾಗಿದ್ದು, ಹೆಸರು ನೋಂದಾಯಿಸಲು ರಾಧಿಕಾ ಗಾಂಧಿ (ಮೊ: 8433507128) ಅವರನ್ನು ಸಂಪರ್ಕಿಸಬಹುದು.

ನೈರುತ್ಯ ರೈಲ್ವೆ

ಟೆಂಡರ್ ನೋಟಿಸ್ ಸಂಖ್ಯೆ ಪ್ರಕಟಣೆ: ಇ-ಜಿಎಸ್‌ಯು-ಇಎಲ್‌ಇ-2024-25-ಒಟಿ-14ಎ ದಿನಾಂಕ 22.04.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಹರಾಜನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಸಿಎಚ್ ನಂ. 337/800-337/900ರ ನಡುವೆ ಹೂಡಿ ಹಾಲ್ಟ್ ಸ್ಟೇಷನ್ ಸಮೀಪ ಪ್ರಸ್ತಾವಿತ ಟ್ರಾಕ್ ನ ಕ್ವಾಡ್ರುಪ್ಲಿಂಗ್‌ಗೆ ಬದಲಾಗಿ ಅಸ್ತಿತ್ವದಲ್ಲಿರುವ 66 ಕೆವಿ ಡಿಸಿ ಹೂಡಿ ಲಿಲೊ ಮಾರ್ಗದ ಬದಲಾವಣೆ. ಇದು ಪ್ರಸ್ತಾವಿತ 132ಕೆವಿ ಕ್ಲಾಸ್ 1000ಎಸ್‌ಕ್ಯೂಎಂಎಂ ಭೂಗತ ಕೇಬಲ್‌ಗೆ ಬದಲಾಗಿ.	ರೂ. 14,62,02,012.28

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14-05-2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್, ಗತಿ ಶಕ್ತಿ ಘಟಕ, ಬೆಂಗಳೂರು

ಪಿಯುಬಿ/64/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

South Western Railway - SWR | SWRRLY | SWRRLY

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಜಯನಗರ ವಿಭಾಗ,
39ನೇ ಅಡ್ಡ ರಸ್ತೆ, 18ನೇ ಮೇನ್, ಜಯನಗರ, 4ನೇ "ಟಿ" ಬ್ಲಾಕ್,
ಬೆಂಗಳೂರು - 560041. ದೂರವಾಣಿ : 8022975711.
E-mail : eejayanagarbbmp@gmail.com

ಸಂಖ್ಯೆ: ಕಾ.ಪಾಅ.(ಜನ)/ಡಿಎಂ/ಇ-ಪ್ರೊಕ್/01/2025-26 ದಿನಾಂಕ: 24-04-2025

ಅಲ್ಪ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಇವರು ಆಯುಕ್ತರು, ಬೃಬೆಂಮಪಾ, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ವಾಹನ ನಿಲುಗಡೆ ಶುಲ್ಕ ಸಂಗ್ರಹಣೆಯಲ್ಲಿ ಅನುಭವ ಹೊಂದಿರುವ ಪ್ರತಿಷ್ಠಿತ ಹಾಗೂ ಅನುಭವಿ ಗುತ್ತಿಗೆ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕೆಲಸದ ಹೆಸರು
1	ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ವಾಹನ ನಿಲುಗಡೆ ಶುಲ್ಕ ಸಂಗ್ರಹಣೆ (ಕರೆ-4). **ಇಎಂಡಿ:** ರೂ.1,70,349/-. **ಗುತ್ತಿಗೆ ಮಾದರಿ:** ಒಟ್ಟಾರೆ ಮೊತ್ತ

ವೇಳಾ ಪಟ್ಟಿ : 1) ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 08.05.2025 ರಂದು ಸಂಜೆ 16:00 ಗಂಟೆಯವರೆಗೆ. 2) ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ ಹಾಗೂ ಸಮಯ: 09-05-2025 ರಂದು ಸಂಜೆ 16:05 ಗಂಟೆಗೆ. 3) ಇ-ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: 12-05-2025 ರಂದು ಸಂಜೆ 16.05 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ.

ಸಹಿ/- ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ

ನೈರುತ್ಯ ರೈಲ್ವೆ

ಮುಕ್ತ ಟೆಂಡರ್ ಪ್ರಕಟಣೆ ಸಂಖ್ಯೆ 07/ಎಸ್‌ಬಿಸಿ/25 ರ 15.04.2025 ಇ-ಟೆಂಡರಿಂಗ್ ಮೂಲಕ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿದವರು, ಈ ಕೆಳಗಿನ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು ಧರ್ಮಾವರಂ ವಿಭಾಗ: 110 ಕೆಎಂಪಿಚ್‌ನಿಂದ 130 ಕೆಎಂಪಿಎಚ್‌ಗೆ ವಿಭಾಗೀಯ ವೇಗವನ್ನು ಹೆಚ್ಚಿಸುವ ಕೆಲಸಕ್ಕೆ ಸಂಬಂಧಿಸಿದಂತೆ 26.2 ಕಿಮೀ ಉದ್ದದ ಗಡಿಗೋಡೆ ನಿರ್ಮಾಣ. ನಿರ್ವಹಣೆ ಅವಧಿ 12 ತಿಂಗಳುಗಳು (ಎರಡು ಪ್ಯಾಕೆಟ್)	ರೂ. 21,55,83,667
2	ಬೆಂಗಳೂರು-ಸಂಪಿಗೆ ರಸ್ತೆ ವಿಭಾಗ: 110 ಕೆಎಂಪಿಚ್ ನಿಂದ 130 ಕೆಎಂಪಿಚ್‌ಗೆ ವಿಭಾಗೀಯ ವೇಗವನ್ನು ಹೆಚ್ಚಿಸುವ ಕೆಲಸಕ್ಕೆ ಸಂಬಂಧಿಸಿದಂತೆ 14 ಕಿಮೀ ಉದ್ದದ ಗಡಿಗೋಡೆ. ನಿರ್ವಹಣೆ ಅವಧಿ 12 ತಿಂಗಳುಗಳು (ಎರಡು ಪ್ಯಾಕೆಟ್)	ರೂ. 11,51,97,379
3	ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪವಿಭಾಗ: 2 ವರ್ಷಗಳ ಅವಧಿಗೆ ಕುಡಿಯುವ ನೀರು ಸರಬರಾಜು ಮಾಡುವ ಪ್ರಸ್ತಾವನೆ (ಮಲ್ಲೇಶ್ವರಂ ಸಂಪಿಗೆ ರಸ್ತೆ, ಯಶವಂತಪುರ-ಯಲಹಂಕ, ಯಲಹಂಕ - ಚಿಂತಾಮಣಿ, ಚನ್ನಸಂದ್ರ-ರಾಜಾನುಕುಂಟೆ ವಿಭಾಗಗಳು)	ರೂ. 1,08,00.000
4	ಬೆಂಗಳೂರು ಸಂಪಿಗೆ ರಸ್ತೆ ವಿಭಾಗ: ಮಲ್ಲಸಂದ್ರ ಮತ್ತು ಗುಬ್ಬಿ ನಿಲ್ದಾಣಗಳ ನಡುವೆ ಕಿ ಮೀ 81/500-600 ರಲ್ಲಿ ಲೆವೆಲ್ ಕ್ರಾಸಿಂಗ್ ಸಂಖ್ಯೆ 48ರ ಬದಲಿಗೆ 7.5ಮೀ x 4.65ಮೀ ಗಾತ್ರದ ರಸ್ತೆ ಕೆಳ ಸೇತುವೆ ನಿರ್ಮಾಣದ ಪ್ರಸ್ತಾವನೆ. ಇದು ಲಾಂಚಿಂಗ್ ವಿಧಾನದ ಮೂಲಕ (ಡಬಲ್ ಟ್ರ್ಯಾಕ್). ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮುಂಗಾರು ಅವಧಿ. ಯಾವುದು ನಂತರವೊ ಅದು (ಎರಡು ಪ್ಯಾಕೆಟ್)	ರೂ. 10,60,40,438
5	ಚಿಕ್ಕ ಬಾಣಾವರ-ಹಾಸನ ವಿಭಾಗ:ನೆಲಮಂಗಲ ನಿಲ್ದಾಣದ ಬಳಿ ರೈಲ್ವೆ ಕಿ ಮೀ 20/750 ನಲ್ಲಿ ಸೇತುವೆ ಸಂಖ್ಯೆ 39-ಎ - ಬಾಕ್ಸ್ ತಳ್ಳುವ ವಿಧಾನದಿಂದ ಆರ್‌ಸಿಸಿ ಬಾಕ್ಸ್ ಗಾತ್ರ 1ಮೀ x 5.0 ಮೀ x 4.25 ಮೀಟರ್ ನ ಪ್ರಸ್ತಾಪಿತ ಹೊಸ ಸೇತುವೆ ನಿರ್ಮಾಣ (ಯೆತ್ತಿನಹೊಳೆ ಯೋಜನೆ ವಿಭಾಗ ಸಂಖ್ಯೆ 4ರ ಡೆಪಾಸಿಟ್ ಕೆಲಸ). ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮುಂಗಾರು ಅವಧಿ ಯಾವುದು ನಂತರವೊ ಅದು.	ರೂ. 2,07,65,877
6	ಬೆಂಗಳೂರು ಸೇಲಂ ವಿಭಾಗ: ತೊಪ್ಪೂರ್ (ಟಿಪಿಪಿ) ನಿಲ್ದಾಣದಲ್ಲಿ ಪಾದಚಾರಿ ಮೇಲ್ಸೇತುವೆ (ಫುಟ್ ಓವರ್ ಬ್ರಿಡ್ಜ್) ನಿರ್ಮಾಣ. ನಿರ್ವಹಣೆ ಅವಧಿ 12 ತಿಂಗಳುಗಳು	ರೂ. 2,20,81,473
7	ಬೆಂಗಳೂರು-ಸೇಲಂ ವಿಭಾಗ:ಎಸ್‌ಎಸ್‌ಇ/ಪಿ ವೇ/ಡಿಪಿಜೆ(ಎಸ್) ವಿಭಾಗದಲ್ಲಿ ತೊಪ್ಪೂರ್ (ಟಿಪಿಪಿ) ಮತ್ತು ಮುತ್ತಂಪಟ್ಟಿ (ಎಂಪಿಸಿ) ನಿಲ್ದಾಣಗಳ ನಡುವೆ ಕಿಮೀ 50/500-600 ರಿಂದ ಕಟಿಂಗ್‌ಗಳಲ್ಲಿ ತಂತಿಯಿಂದ ಇಳಿಜಾರು ಸ್ಥಿರೀಕರಣ ಕೆಲಸ. ಇಳಿಜಾರುಗಳ ಬಲೆ ನಿರ್ಮಾಣ. ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮುಂಗಾರು ಅವಧಿ ಯಾವುದು ನಂತರವೊ ಅದು.	ರೂ. 4,25,09,056
8	ಚಿಕ್ಕಬಾಣಾವರ ವಿಭಾಗ: ದಡಗಳನ್ನು ಬಲಪಡಿಸುವ ಕೆಲಸ. ಪ್ರಮಾಣಿತ ಅಗಲದ ಮೂಲಕ ಮತ್ತು 3/870 ರಿಂದ 79/530 (ಎಸ್‌ಎಲ್) ವರೆಗಿನ ಪ್ರತ್ಯೇಕ ಸ್ಥಳಗಳಲ್ಲಿ 16.65 ಕಿಮೀ ಉದ್ದದ ಒಳಚರಂಡಿಯನ್ನು ಸುಧಾರಿಸುವುದು. ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮುಂಗಾರು ಅವಧಿ. ಯಾವುದು ನಂತರವೊ ಅದು.	ರೂ. 1,59,11,060
9	ವಿಭಾಗೀಯ ಇಂಜಿನಿಯರ್/ದಕ್ಷಿಣ/ಬೆಂಗಳೂರು: ಸೆಸ್ ದುರಸ್ತಿ/ ಬೆಂಗಳೂರು-ಸೇಲಂ ವಿಭಾಗದ ಕಾಮಗಾರಿಗೆ ಸಂಬಂಧಿಸಿದಂತೆ ಅಗಲೀಕರಣ ಕಾರ್ಯ: ಪ್ರಮಾಣಿತ ಅಗಲವನ್ನು ಒದಗಿಸುವ ಮೂಲಕ ದಂಡೆಯನ್ನು ಬಲಪಡಿಸುವುದು ಮತ್ತು ಕಿ ಮೀ 68/100 ರಿಂದ 143/400 ಎಸ್‌ಎಲ್ ವರೆಗೆ 17.26 ಕಿಮೀ ಉದ್ದದ ಪ್ರತ್ಯೇಕ ಸ್ಥಳಗಳಲ್ಲಿ ಒಳಚರಂಡಿಯನ್ನು ಸುಧಾರಿಸುವುದು. ನಿರ್ವಹಣೆ ಅವಧಿ 6 ತಿಂಗಳು ಅಥವಾ ಒಂದು ಮುಂಗಾರು ಅವಧಿ. ಯಾವುದು ನಂತರವೊ ಅದು.	ರೂ. 1,62,13,883
10	ವಿಭಾಗೀಯ ಇಂಜಿನಿಯರ್/ದಕ್ಷಿಣ/ಬೆಂಗಳೂರು ವಿಭಾಗ: ಪಿಆರ್‌ಎನ್‌ಟಿ (ಪೆರಿಯಾ ನಾಗತುನ್ನೈ) ಡಿಪೋದಲ್ಲಿ ಮೆಷಿನ್ ಕ್ರಷಡ್ ಟ್ರಾಕ್ ಬ್ಯಾಲೆಸ್ಟ್‌ನ ಸ್ಟೇಕಿಂಗ್, ಪೂರೈಕೆ ಮತ್ತು ಉತ್ಪಾದನಾ ಕೆಲಸ. ಬೆಂಗಳೂರು-ಸೇಲಂ ವಿಭಾಗದ ಕೆಲಸಕ್ಕೆ ಸಂಬಂಧಿಸಿದಂತೆ ಲೋಡಿಂಗ್ ಕೆಲಸ. 52ಕೆಜಿ ಪಿಎಸ್‌ಸಿ ಯಲ್ಲಿ ಅಸ್ತಿತ್ವದಲ್ಲಿರುವ 52ಕೆಜಿ ಹಳಿಗಳ ಸಂಪೂರ್ಣ ಟ್ರ್ಯಾಕ್ ನವೀಕರಣ (ಪಿ) 1540 ಸಂಖ್ಯೆಗಳಿಂದ/ಕಿ.ಮೀ ಮತ್ತು 60 ಕೆಜಿಆರ್ 60 ಕೆ.ಜಿ ಬೇಸ್ ಸ್ಲೀಪರ್ ಜೊತೆಗೆ 60ಕೆಜಿ ಅಗಲದವರೆಗೆ ಸಹಾಯಕ ವಿಭಾಗೀಯ ಇಂಜಿನಿಯರ್/ಧರ್ಮಪುರಿ ವಿಭಾಗದಲ್ಲಿ ಕಿ ಮೀ 45/000-54/000, 55/100-900 ಮತ್ತು 56/100-66/500 (ಎಸ್‌ಎಲ್) ನಿಂದ 20.2 ಕಿಮೀ ಉದ್ದಕ್ಕೆ 1660/ಕಿಮೀವರೆಗೆ	ರೂ. 2,74,30,830
11	ಚಿಕ್ಕ ಬಾಣಾವರ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ಕುಣಿಗಲ್ ವಿಭಾಗದಲ್ಲಿ 7.473 ಕಿಮೀ ಉದ್ದಕ್ಕೆ ಲೂಪ್ ಲೈನ್‌ಗಳಲ್ಲಿ ಬ್ಯಾಲೆಸ್ಟ್ ರಿಕೌಪ್‌ಮೆಂಟ್ (ಟಿಬಿಆರ್)	ರೂ. 87,39,091
12	ಬೆಂಗಳೂರು ಸೇಲಂ ವಿಭಾಗ: ಅಗಲೀಕರಣದ ಮೂಲಕ ಇಳಿಜಾರು ಸ್ಥಿರೀಕರಣ ಕೆಲಸ. ಕರುವಳ್ಳಿ (ಕೆವಿಎಲ್‌ಆರ್) ಮತ್ತು ಮುತ್ತಂಪಟ್ಟಿ (ಎಂಪಿಸಿ) ನಿಲ್ದಾಣಗಳ ನಡುವೆ ಎಸ್‌ಎಸ್‌ಇ/ಪಿ ವೇ/ಟಿಪಿಪಿ ಯಲ್ಲಿ ಕಿ ಮೀ 33/100-600, 40/250-450 ಮತ್ತು 45/750-950 ರಿಂದ ಇಳಿಜಾರು ನಿರ್ವಹಣೆ. ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮುಂಗಾರು ಅವಧಿ. ಯಾವುದು ನಂತರವೊ ಅದು.	ರೂ. 7,91,18,735

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **12.05.2025 ರಂದು 15.00 ಗಂಟೆಗಳವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಇಂಜಿನಿಯರ್/ಸಮನ್ವಯ, ಬೆಂಗಳೂರು

ಪಿಯುಬಿ/55/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

South Western Railway - SWR | SWRRLY | SWRRLY

ವಿಲ್ಲಾ ಮೇಳಕ್ಕೆ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬಿಡಿಎ ಆಯೋಜನೆ

ಬಿಡಿಎ ವಿಲ್ಲಾ ಮೇಳದಲ್ಲಿ ಭಾಗವಹಿಸಿದ್ದ ಸಾರ್ವಜನಿಕರು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಡಾ. ಪುನೀತ್ ರಾಜ್ ಕುಮಾರ್ ವಸತಿ ಸಂಕೀರ್ಣದಲ್ಲಿ (ಹುಣ್ಣಿಗೆರೆ) ಆಯೋಜಿಸಿದ್ದ 'ವಿಲ್ಲಾ ಮೇಳ'ಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ವಿವಿಧ ಅಳತೆಯ 4 ಬಿಎಚ್‌ಕೆಯ 121, 3 ಬಿಎಚ್‌ಕೆಯ 118 ವಿಲ್ಲಾ ಮತ್ತು 1 ಬಿಎಚ್‌ಕೆಯ 320 ಫ್ಲ್ಯಾಟ್‌ಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲು ಮೇಳ ಆಯೋಜಿಸಲಾಗಿತ್ತು.

ಸುಮಾರು 400ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದು, ಇದರಲ್ಲಿ ಸುಮಾರು 130 ಮಂದಿ ವಿಲ್ಲಾದ ಪ್ರಾರಂಭಿಕ ಠೇವಣಿಯನ್ನು ಸ್ಥಳದಲ್ಲಿಯೇ ಪಾವತಿಸಿದರು. ಈ ಪೈಕಿ 70 ಮಂದಿಗೆ ಹಂಚಿಕೆ ಪತ್ರ ನೀಡಲಾಯಿತು. ಉಳಿದವರಿಗೆ ಮುಂದಿನ ದಿನಗಳಲ್ಲಿ ಹಂಚಿಕೆ ಪತ್ರ ನೀಡಲಾಗುವುದು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೌತ್ ಇಂಡಿಯನ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ ಪ್ರತಿನಿಧಿಗಳು ಹಾಜರಿದ್ದರು.

ಬಿಡಿಎ ಆರ್ಥಿಕ ಸದಸ್ಯ ಎ. ಲೋಕೇಶ್, ಎಂಜಿನಿಯರ್ ಮಲ್ಲಿಕಾರ್ಜುನ ಸ್ವಾಮಿ, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಕೃಷ್ಣಮೂರ್ತಿ ಭಾಗವಹಿಸಿದ್ದರು.

ಪಿಎಫ್‌ಐ ಕೈವಾಡ: ಅನುಪಮಾ ಆರೋಪ

ಪ್ರಜಾವಾಣಿ ವಾರ್ತೆ

ಮಂಗಳೂರು: 'ನಿವೃತ್ತ ಡಿಜಿಪಿ ಮತ್ತು ಐಜಿಪಿ ಓಂಪ್ರಕಾಶ್ ಅವರ ಹತ್ಯೆ ಪ್ರಕರಣದಲ್ಲಿ ನಿಷೇಧಿತ ಸಂಘಟನೆ ಪಿಎಫ್‌ಐ ಕೈವಾಡವಿದೆ. ಅವರ ಪತ್ನಿ ಪಲ್ಲವಿ ಅವರನ್ನು ಸಿಲುಕಿಸಲಾಗಿದೆ. ಅಲ್ಪಸಂಖ್ಯಾತರ ಓಲೈಕೆಗೆ ಮುಖ್ಯಮಂತ್ರಿ, ಗೃಹಸಚಿವರು ಈ ರೀತಿ ಮಾಡಿದ್ದಾರೆ' ಎಂದು ಭಾರತೀಯ ಜನಶಕ್ತಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ, ಮಾಜಿ ಡಿವೈಎಸ್‌ಪಿ ಅನುಪಮಾ ಶೆಣೈ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಪಲ್ಲವಿಯವರು ವಾಟ್ಸ್‌ಆ್ಯಪ್ ಗ್ರೂಪ್ ಒಂದರಲ್ಲಿ ಓಂಪ್ರಕಾಶ್ ಅವರಿಗೆ ನಿಷೇಧಿತ ಪಿಎಫ್‌ಐ ಸಂಘಟನೆಯ ನಂಟು ಇದ್ದ ಬಗ್ಗೆ ಉಲ್ಲೇಖಿಸಿದ್ದರು. ಓಂಪ್ರಕಾಶ್ ಅವರು ಡಿಜಿಪಿ ಮತ್ತು ಐಜಿಪಿಯಾಗಿದ್ದಾಗ ಪಿಎಫ್‌ಐ ಸದಸ್ಯರನ್ನು ಇಲಾಖೆಗೆ ನೇಮಕ ಮಾಡಲು ಒತ್ತಡವಿತ್ತೇ ಎಂದು ಪರಿಶೀಲಿಸಬೇಕು' ಎಂದರು.

'ಪ್ರಕರಣದಲ್ಲಿ ಪಿಎಫ್‌ಐ ಕೈವಾಡದ ಬಗ್ಗೆ ಸಾಕಷ್ಟು ಪುರಾವೆಗಳನ್ನು ಸಂಗ್ರಹಿಸಿ ಇಲಾಖೆಯ ಈಗಿನ ಡಿಜಿಪಿ ಮತ್ತು ಐಜಿಪಿ ಅಲೋಕ್ ಮೋಹನ್ ಅವರಿಗೆ ಪತ್ರ ಬರೆದಿದ್ದೇನೆ' ಎಂದರು. ಆರೋಪಗಳಿಗೆ ಪುರಾವೆಗಳೇನು ಎಂಬ ಪ್ರಶ್ನೆಗೆ, 'ಅದನ್ನು ಮಾಧ್ಯಮಗಳ ಎದುರು ಬಹಿರಂಗಪಡಿಸಲು ಸಾಧ್ಯವಿಲ್ಲ' ಎಂದರು.

ಬಾಲಕಿ ಮೇಲೆ ಅತ್ಯಾಚಾರ ಆರೋಪ: ವೃದ್ಧ ಬಂಧನ

ಶಿಗ್ಗಾವಿ: ಮನೆಯಲ್ಲಿ ಆಟವಾಡುತ್ತಿದ್ದ ಏಳು ವರ್ಷದ ಬಾಲಕಿಗೆ ಹಣ್ಣು ಕೊಡಿಸುವ ಆಸೆ ತೋರಿಸಿ ಅತ್ಯಾಚಾರ ಎಸಗಿದ ಆರೋಪದ ಮೇಲೆ ಮದರ್ಾನ ಪಟೇಲ್ ಸಣ್ಣ ಮಹಬೂಬಗೌಡ ಪಾಟೀಲರನ್ನು(66)ಹುಲಗೂರ ಪೊಲೀಸರು ಬಂಧಿಸಿದ್ದಾರೆ. ಪೋಕ್ಸೊ ಕಾಯ್ದೆಯಡಿ ಆರೋಪಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ' ಎಂದು ಪಿಎಸ್‌ಐ ಪಿ.ಎಫ್.ನೀರೋಳ್ಳಿ ತಿಳಿಸಿದ್ದಾರೆ.

'ಅರ್ಹರಿಗೆ ಸಾಗುವಳಿ ಚೀಟಿ ನೀಡಿ'

ಪ್ರಜಾವಾಣಿ ವಾರ್ತೆ

ಜನಸ್ಪಂದನಾ ಕಾರ್ಯಕ್ರಮವನ್ನು ಶಾಸಕ ಎಸ್.ಟಿ. ಸೋಮಶೇಖರ್, ಪಂಚಾಯಿತಿ ಅಧ್ಯಕ್ಷ ಡಿ. ಆನಂದಸ್ವಾಮಿ ಉದ್ಘಾಟಿಸಿದರು. ಎಸ್.ಟಿ. ಕುಬೇರಸ್ವಾಮಿ, ಚಿಕ್ಕರಾಜು, ರೇವಣಸಿದ್ದಯ್ಯ, ಬಿಂದು, ಟಿ.ಎಲ್. ಚಂದ್ರಶೇಖರ್ ಭಾಗವಹಿಸಿದ್ದರು

ರಾಜರಾಜೇಶ್ವರಿನಗರ: 'ನಿಜವಾದ ಫಲಾನುಭವಿಗಳಿಗೆ, ಜಮೀನು ಇಲ್ಲದವರಿಗೆ ಸಾಗುವಳಿ ಚೀಟಿ, ಖಾತೆ ನೀಡಬೇಕು. ಅವರನ್ನು ಕಚೇರಿಯಿಂದ ಕಚೇರಿಗೆ ಅಲೆಸಬೇಡಿ' ಎಂದು ಶಾಸಕ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಮಾಗಡಿ ಮುಖ್ಯರಸ್ತೆಯ ಮಾರೇನಹಳ್ಳಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜನಸ್ಪಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಒಂದು ಗುಂಟೆ ಜಮೀನೂ ಇಲ್ಲ', 'ಸಾಗುವಳಿ ಮಾಡುತ್ತಿರುವ ನಮಗೆ ಸಾಗುವಳಿ ಚೀಟಿ ಕೊಡಿಸಿ', 'ಪಹಣಿ ತಿದ್ದುಪಡಿ ಆಗುತ್ತಿಲ್ಲ' 'ಜಲಜೀವನ್ ಅವಾಂತರ ಉಂಟು ಮಾಡಿದೆ' ಹೀಗೆ ವಿವಿಧ ಸಮಸ್ಯೆಗಳನ್ನು ಅನೇಕರು ಶಾಸಕರ ಮುಂದಿಟ್ಟರು.

ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಡಿ.ಆನಂದಸ್ವಾಮಿ ಅವರು, 'ಅನಾದಿಕಾಲದಲ್ಲಿ ಠಾಣಾಗಡಿ ನಿಗದಿಯಾಗಿದ್ದು, ವಿಸ್ತರಿಸಲು ಸರ್ಕಾರ ಕ್ರಮಕೈಗೊಳ್ಳಬೇಕು. ಪ್ರತಿ ಗ್ರಾಮದಲ್ಲಿ ಸ್ಮಶಾನಕ್ಕೆ ಜಾಗವನ್ನು ಕಾಯ್ದಿರಿಸಬೇಕು' ಎಂದು ಒತ್ತಾಯಿಸಿದರು.

ಶಾಲಾ ಮಕ್ಕಳಿಗೆ ಕ್ರೀಡಾ ಸಾಮಾಗ್ರಿ ರೈತರಿಗೆ ನೀರು ಸಿಂಪಡಣೆ ಸಾಧನ, ಕಳೆ ತೆಗೆಯುವ ಯಂತ್ರ, ಮೇವಿನ ಬೀಜ, ವಿವಿಧ ಸವಲತ್ತು ವಿತರಿಸಲಾಯಿತು.

ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಎಚ್. ಶ್ರೀನಿವಾಸ್, ಒಕ್ಕಲಿಗರ ಸಂಘದ ಗೌರವ ಅಧ್ಯಕ್ಷ ಡಿ. ಹನುಮಂತಯ್ಯ, ಉಪ ತಹಶೀಲ್ದಾರ್ ಕೆಂಪೇಗೌಡ, ತಾಲ್ಲೂಕು ಪಂಚಾಯಿತಿ ಇ.ಒ. ಬಿಂದು, ಮುಖಂಡ ಕುಬೇರಸ್ವಾಮಿ ಹಾಜರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Out-Station

AGRICULTURE LAND For Immediate Sale-in Yadgir karnataka 11.26 Acres in Naykal Village Yadgir Call:9448473358 9880563629

Commercial Building

Chickpet

FOR SALE Commercial property BBMP East Facing 2175 Sqft.Ground+2 Floors Cottonpete Main Road,Just 1Km Away from Majestic Metro Station, Chickpet, K.R.Market.Contact: 9844011980, 9008011237

Commerical

BTM Layout

BTM LAYOUT Corner 40x60 Prime Location Commercial Site Sale, J.P.Nagar, Jayanagar HSR 40x60, 50x80 Sites Call:9845069739 9380613718

Indiranagar

OLD AIRPORT 100 Feet Road Commercial Property 6000 sft North For-Sale Near Prestige Casablanca 7829203369

Jayanagar

SALE 30X40 Commerical Jayanagar 4th Block With old Building on 80ft Road Excellent Location Ct:9844134068 8073859758

Koramangala

SALE: KORAMANGALA 5th Block COMMERCIAL 11000 Sft. Rental Income 7 Lacs, Sale 15 Crores, Call: 98450-23695/ 98451-63280

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Flat

Anekal

INDYA ESTATES the Greens Apartment flat: 2 BHK 890 Sqft sale, 32 Lakhs, Special offer: Rs. 28 Lakhs, Bidaragere Village, Anekal Taluk. Mobile: 8105070265

Chandra Layout

FLATE FOR SALE @ CHANDRA LAYOUT VIJAYNAGAR 3 BHK NEW FLATE BDA PROPERTY GOOD LOCATION CONTACT: 98455-55666

Koramangala

KORAMANGALA-SEMI Furnished 1BHK Studio Flat, HSR Semi Furnished 3 BHK Flat & House: 9916763727

General

Multiple Locations

RENTAL/ BUYING/ selling all types residential/ commercial/ agricultural/ industrial properties & Rental income, Resale invest on small properties and earn good returns. Contact victory properties 8618576685/ 7411692219, www.victoryproperties.in Mail: info@victoryproperties.in

Residential/ Commercial

J P Nagar

NORTH EAST corner semi commercial building for sale @ J P Nagar 1st phase sarakki Road Near Hanuma Temple 9483006209

RENTAL PROPERTIES

Accommodation Available

Commercial

"COMMERCIAL SPACE 3000 Sqft for Rent suitable for Bank Gnanabharathi Opp.Amma Ashrama 60 feet Road. 9480180100/ 9740844500"

COMMERCIAL OFFICE for RENT 2400 or 4500 SFT Furnished. OC available. Near Yeshwanthpur Metro. Contact: 9916155055.

AVAILABLE ON RENT



MAGADI ROAD
1st FLOOR -6500 Sqft. LOWER GROUND - 6000 Sqft Suitable For Office/ Gym / Beauty Parlor/ Warehouse /Cloud Kitchen.
Call : 9845049000

KORAMANGALA FOR Rent 35 Rooms Suitable for Hotel Rooms/ PG/ 1RK, near Prestige RMZ Startech. Call: 9845632519

SHESHADRIPURAM 1ST Main Road Rent Corner 450-800sft Commercial/ Office Space with Carparking, Toilet, Ground Floor. Call: 9739290396/ 9986436449

TO:LET : Restaurant space 4450 sqft. 80Ft. Main Road, Koramangala 7th Block, Next to Van Huesen, Only Brands. Contact: 9964485388, 6364431666, 9742003920

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura, Hoskote Contact: 9341234288/ 9663224353/ 9845417487.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40, 40x60 Anjanapura`BDA, Banashankari 6th`Stage, JCHS, BCCHS, BCMC Balaji Layout. Gubblala NarayanaNagar Vajarahalli. Call: 9663454878

Multiple Locations

WANTED BDA COMMERCIAL SITE 20X30 30X40 40 X60 50X80 IN ANJANAPURA, BSK 5TH AND 6TH STAGE, JP.NAGAR 8TH AND 9TH PHASE, ARKAVATHY, KEMPE GOWDA LAYOUT, JAYANAGAR, BTM LAYOUT, NAGARBHAVI. NRI BUYERS CONTACT SURYA PROPERTIES:- 9880659555/ 9916759939

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

ANJANAPURA WANTED JP Nagar, 8th and 9th Phase, Banashankari 5th & 6th Stage Viveshwaraya Layout Kempegowda Layout any measurement. Ph: 9845132011/ 9663554448

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Villas/Bunglows

General

IF YOU are Thinking of selling your Exclusive HighEnd properties. Villas, Apartments, Luxury Residence to Genuine Buyers? Clear_titles. Bank to Bank transactions. Call-Arun 9845077299.

Industrial & Factory

Out-Station

WANTED FOR Outright Purchase 2 Acre industrial converted land/ KIADB Land in Harohalli or Malur Indl Area. Contact:9880941283.

BUSINESS

Business to Business

Business

FOR ALL Branding/ Digital social media marketing, hoardings, Bus back, Auto back, no parking ads, meta, Google contact venuscast Technologies pvt ltd 9538123445/ 8722123445

Business Offers

Dealers And Stockists

50 SCHOOL BUSES 2017 MODEL FOR SALE : 08639346262

Finance

URGENT LOAN AVAIL @ 3.5% per annum Personal, Business, Housing take over all types loan. Shivganga Finance. Phone: 8826494700.

EDUCATIONAL

Admission

ADMISSIONS OPEN from Balavatika to 12th-Grade in CBSE with HOSTEL accommodation. Individual attention is given to all students for Best results. SHREERAM CBSE RESIDENTIAL SCHOOL, Chikkabidarakallu, Bangalore. 9449835744/ 9535601743 (Limited Students)

MATRIMONIAL

Matrimonial Bureaus

15 Years of Match Making
Gathbandhan Matrimony by Neha
73639-34551
Jyoti Niwas College Road, Bengaluru-95
• Hyderabad • Chennai • Lucknow • Kolkata • Guwahati & Others

Brides Wanted

Brahmin

BRIDE WANTED
Hoyasala Brahmin 46 yrs, Ph.D (CS) - Associate Professor, 22 LPA, Shravana(3) Makara, Second Marriage seeks bride from brahmins.
M: 8792665530

Muslim

SUNNI MUSLIM boy 1994 MBBS/MD Doctor | Well-settled in London, UK | From a reputed Bangalore-based family | Seeking an educated, compatible match. (080-69103037)

SUNNI MUSLIM 1993 Divorcee M.Tech, Developer earning 78 LPA Settled & mature, seeking a partner with values & understanding. (080-69103037)

MUSLIM BOY 1995 5'11' Doctor / Affluent Family is looking for a suitable match Contact (080-69103037)

Telugu

TELUGU BOY 1993 Born 5'10' Businessman Only son Net worth 700 cr / resident of Bangalore is looking for match for early marriage (080-69072049)

Grooms Wanted

Muslim

MUSLIM GIRL 2002 Born very fair / Beautiful 5'3 is from a Rich Family is looking for a suitable match (080-69103037)

Telugu

TELUGU BEAUTIFUL Girl 2000 Born/ 5'3 / Rich Family of Bangalore is looking for a suitable match (080-69103117)

AUTOMOTIVE

Four Wheelers Selling

Maruti

VEHILE FOR SALE
Maruti Super Carry in very good condition Very low usage.. petrol vehicle.. Bangalore.
—:: Contact ::—
9886972374
9980283865

PERSONAL

Announcements

REQUIRED TO instal 1500 feet deep Agriculture Borewell Pump at Chickaballapur. Contact: 9845286168

JOB OPPORTUNITIES

Security & Detectives

WANTED FIELD Officer, Security Supervisor/ Guards, Receptionist for HBR layout, Yelahanka Contact 9972214845

Teachers/ Professors

GAAYATHRI VIDYANIKETAN Kottigepalya, Off Magadi Main Road, Bengaluru-91. (CBSE Curriculum) Requires Teaching Faculty BA/ MA/ BCom. BEd for English and Social Studies. Contact 9900035670. Send photo with CV E-Mail: gvidyaniketan@gmail.com

THE FLORENCE PUBLIC SCHOOL
Baragur, Sira Taluk, Tumkur Dist, Karnataka
URGENTLY REQUIRED
PRINCIPAL for CBSE School Minimum 20years Experience.
B.A, B.Sc. NTT , D.Ed TEACHERS for KG CLASSES.
B.A.B.Sc..B.Ed, HINDI B.Ed TEACHERS to teach ENGLISH AND HINDI for PRIMARY.
M.A.B.Ed SOCIAL SCIENCE TEACHER For HIGH SCHOOL. Send your resume to
Email: theflorencepublicschool@gmail.com
Contact: 9886855684/ 6361986064

TEACHERS WANTED
Teacher's wanted to Teach all Subjects For Englsh medium High School and LKG to 7 Std.
Qualification any Degree, DEd/ BEd/ CPEd/ BPEd With good fluency in English.
Contact immediately
NBN Vidyamandira,
Weavers Colony, Bannerugatta Road, Bengaluru- 560083.
9341247744

REQUIRED EXPERIENCED candidates to handle Primary & High School sections with DEd, BEd (English/SS) Qualification. Any Degree with good English fluency. Contact: Jnanavahini Vidya Samsthe(R) JVS #8, BEML layout, 8th Main Road, Basaveshwaranagar, Bengaluru-79. Email: jvsschool@gmail.com Whatsapp- 9343745526

WANTED ENGLISH MEDIUM TRAINED LADY TEACHERS to teach Maths, Science, Hindi for High School/ Computer Faculty/ NTT Trained. Salary with PF and ESI Facilities. Contact in person (10.00 am- 3.00 pm on all working days) - Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

SREE VENKATESHWARA ENGLISH SCHOOL #1 V.S Layout Krishnarajapura Bangalore-560036 Wanted Teachers B.A B.Ed (Social, English) B.Sc,B.Ed (Mathematics,Science) TCH, D.Ed, B.Lib, Clerks Attractive Salary Attend with original certificates. Contact: 080-25611873, 7411135627 Email: svs.krp.bangalore@gmail.com

HIGH SCHOOL TEACHERS. Social Science and English, Physical Education. Cambridge English School, Mathikere, Bangalore-54. M: 9379191544

WANTED MALE CANDIDATES to teach English/ Social Science and Maths/ Science for VIII and IX Std- 6 pm to 9 pm for X Std -6 am to 8 am and 6 pm to 9 pm. Contact in person (10.00 am- 3.00 pm on all working days) -Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

QUALIFIED EXPERIENCED TEACHERS for Science Maths Social Kannada English Hindi PE for PRIMARY, SECONDARY & HIGH SCHOOL (CBSE) For COLLEGE: Physics Chemistry Maths Biology Computer Science. Good Salary offered. NEED PRINCIPAL For Walk-in Interview: 9449835744/ 9535601743.

WANTED ACADEMIC HEAD, P.T.T, Clerk, English, Maths, Science, EVS, Teachers. Primary/ High School. J.P.Nagar. 9845042249/ 26590773.

General

EXECUTIVE APPAREL Processors Tumkur Road, Bangalore requires Experienced DATA ENTRY OPERATOR. Male Candidiates around Peenya, Yeshwanthpur preferred Contact: 9845034556 executiveapparels@gmail.com

WANTED LADY SCREEN PRINTER, 1-3 years Experience for Leading Label Manufacturing unit Candidates around Jalahalli/ Vidyaranapura Preferred. 9483491071

BOWRING INSTITUTE
No. 19, St.Mark's Road, Bengaluru – 560 001.
Ph: 080 22228881 ext: 204
A 137 Years Old Premier Social Club
VACANCIES - SERVICE ATTENDANTS
Applications are invited from suitable candidates for our Institute Services.
Educational Qualification – SSLC / PUC Experience – either experienced / Freshers.
Interested candidates should send their Resume along with necessary documents to the above address by post or by hand to Administrative Officer at the office of the Institute.
Salary shall commensurate as per Service Rules of the Institute.
Last Date to apply: 15.05.2025
Sd/-
Hon.Secretary, Bowring Institute

Marketing & Sales

REQUIRED

Sales Manager
for Corporate Travels
CarHub Mobility Services Pvt Ltd
9686 98 98 98

Multiple Vacancy

WE ARE HIRING
Marketing Manager for Employee Transport/Cab service firm
Marketing Manager for EdTech Company/Training Academy
Sales Manager for Advertising Agency
Sales Manager & Office Executive, Accountant for Gifting Company
Min 1 year exp. | Location: Bangalore
Salary : Based on Experience
Send resume to parabolahr@gmail.com

Hotel

WANTED HOTEL Manager We are seeking experienced and dedicated professionals for the Manager position at Hotel Pooja International, a reputed three-star property in Davangere, Responsibilities include overseeing operations related to: Lodging and Boarding, Banquet Management, Fine Dine Restaurant Services, Requirements: Prior experience in hotel management, Proven expertise in lodging operations, banquet coordination, and fine dining management, Strong leadership and organizational skills, Note:Only candidates with relevant prior experience in the above areas will be considered. For enquiries 70191 37858, 88673 53321 Send your resume to poojadvg@gmail.com

Accounts & Finance

REQUIRED ACCOUNTANT with tally Knowledge/ CIVIL ENGINEER with Experience in Water Supply Projects & STP Projects/ BILLING ENGINEER. Send your resume on Watsapp 9742501313 and maloocons@live.in.

Walk-in

WALK IN INTERVIEWS FOR JEWELLERY SALES PERSONS / MANAGER
ABHARAN GROUP OF JEWELLERS (Udipi) is hiring for a new JEWELLERY SHOWROOM Opening Shortly at 42 Cross Road 5th block Jayanagar, Bangalore
Exp: 1 year to 5 years.
Walk in Interview on 27th, 28th & 29th April from 11 am to 4 pm.
Call or Whatsapp on for details
8319407463
9390021935

Wanted

WANTED CANDIDATES With Experience For a Ltd Company, Electronic City, Tool Room Engineer- Design & Development of Moulds, CNC EDM Sparking Operator, CNC Engraving Operator, Plastic Injection Moulding Operators, Pressure Die-Casting Operators, Accounts Executive & Manager (Electronic City & Rajajinagar) Ph: 9448376584/ 9448481947

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now!
For more details contact:
+91 9845114560 | +91 9886213331
+91 9731810277 | +91 9900428036
080-45557163/164
*Conditions apply

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RERA APPROVED NO.PRM/KA/RERA/1254/464/PR/191107/002991

AASTHA Properties
A traditional name of trust

ACTUAL PRICE
₹ 999/- PER SQFT

OFFER PRICE
₹ 899/- PER SQFT

DC Conversion
DTCP & RERA ಅನುಮೋದನೆ ಆದ
E-KHATA
ನಿವೇಶನಗಳು
ದೇವನಹಳ್ಳಿ ಸಮೀಪ
ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ
30 ನಿಮಿಷಗಳ ಪ್ರಯಾಣ
6th Phase

ನಿವೇಶನಗಳು ನೋಂದಣಿಗೆ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
100% Legal Documents
World Class Amenities

Layout Highlights :
- Upcoming Satellite Town Ring Road (STRR) Tumkur Rd to Devanahalli Airport Road
- Hardware Park • Software Park • Vishveshwaraiah University • Geetham University
- Upcoming Bangalore Metro Rail Phase 2B (KR Puram to Kempegowda International Airport)
- Close to Bangalore to Hyderabad Nh7 • Satya Sai Education & Hospital
- Nagarjuna College of Engg • Akash International School • Akash Hospital
- Prestige Group resort ISJC Institute of technology • AEROSEZ & Financial City

ನಿವೇಶನ ನೋಡಲು ಕರೆ ಮಾಡಿ: 93411 18999
Site Sizes: 30X40 & ODD Sites

ಮೈಸೂರು ರಸ್ತೆಯಲ್ಲಿ ಅನುಮೋದನೆ ಆದ ನಿವೇಶನಗಳನ್ನು ಖರೀದಿಸಿ

AASHIRVAD APRAMEYA
RERA Registered
RERA No.PRM/KA/RERA/1270/302/PR/290125/007448
BMICAPA & RERA ಅನುಮೋದನೆ ಆದ
ಸೈಟುಗಳು
BMICAPA APPROVED
BEST PRICE
₹ 4599 per sft
ಗ್ರೇಟರ್ ಬೆಂಗಳೂರು ಬಿಡದಿ
ಎಕ್ಸ್‌ಪ್ರೆಸ್ ಹೈವೇಗೆ ಹೊಂದಿಕೊಂಡಿದೆ
ಚಲ್ಲಘಟ್ಟ ಮೆಟ್ರೋ ನಿಲ್ದಾಣ ಮತ್ತು ನೈಸ್ ರಸ್ತೆಯಿಂದ 10 ನಿಮಿಷಗಳ ಪ್ರಯಾಣ

AASHIRVAD SIDDHI PRIYA
BMRDA APPROVED
RERA No. PRM/KA/RERA/1251/310/PR/030125/007344
BMRDA & RERA ಅನುಮೋದನೆ ಆದ A-KHATA
ನಿವೇಶನಗಳು
ಮನೆ ಕಟ್ಟಲು ಸಿದ್ಧವಿರುವ ಸೈಟುಗಳು
ಕೈಗೆಟುಕುವ ಬೆಲೆ
₹ 2699 per sft
South Bangalore
ದೊಡ್ಡ ಆಲದ ಮರದ ಹತ್ತಿರ

ನೋಂದಣಿಗೆ ಸಿದ್ಧ*, ಬ್ಯಾಂಕ್ ಸಾಲ ಸೌಲಭ್ಯವಿದೆ, ಲೇಔಟ್ ಅಭಿವೃದ್ಧಿ ಹೊಂದಿದೆ
ಸೈಟ್ ಭೇಟಿಗಾಗಿ ಕರೆ ಮಾಡಿ: 6399889911

REAL ESTATE SELLING

Sites

Anjanapura

86X116 FEET PLOT in GREEN BANKS Gated Community 5th Block ANJANAPURA Bangalore, BDA Katha, for SALE. Call: 98440-62860

ANJANAPURA BDA Sites For Sale, 1st Block, 20x30, W/F, Price 63 Lakhs Negotioble: 9740150364 /8884707773

Banashankari

BANASHANKARI 6TH-STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

BSK 6TH Stage 11th Block BDA 20X30 North facing allottee site, excellent vastu for sale -9986075122

SITE FOR SALE Banashankari 6th Stage 3rd Block 30x40 N/F, Owner Meeting Call: 9740148870/ 9880606768.

'BANASHANKARI' 6TH Stage, 6th Block 20x30, W/F, BCC Layout, 50x80, North/East, Corner: 9632822225/9448618094

Intl Airport Road

30x40 Converted Plots @ 2,50,000/- 208/- per sq.ft, 90 minutes Journey from Yelahanka Clear Documents | Ready for Registration 9343510635 | 9010559539

Basaweshwaranagar

BASVESHWARNAGAR 40×60, Rajajinagar 1230 Sft, Malleshwaram 50×75, Residential, Race Course Road 80×100 Commercial Sale 8660075308

Devanahalli

DODDABALAPURA TO Devanhali Main Road Commercial DC- Converted Up Todate Tax Paid E Katha Property Sale 280x50 Rs. 5500/- Psft: 9342552428

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Kempegowda Layout

SITE FOR SALE Site no. 4732, J sector 6th block, site no. 2965 H sector 5th block 50*80. site no 5908/F, I sector 5th block 40*60 Kempegowda layout Mob: 6362874644.

NADAPRABHU KEMPEGOWDA LAYOUT 8th Block 40X60 East Facing, Arkavati Layout alternate site sale. Contact: 9686469799

NADAPRABHU KEMPEGOWDA layout, Sir M.Vishweshwaraiah. Sites for sale. 20x30,30x40, 40x60, 50x80. Manjunatha 9742568746, 9900701637.

50X80 KEMPEGOWDA layout, 7th J sector, 80ft Road, Near NPS School, North, 8200/- Negotiable. 9731151366.

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

40X60 WEST Facing Railway Layout Near RTO Office, 40x40 New Duplex House For Sale: 9980409820

Kanakapura Road

"KANAKA LAYOUT BDA approved E-Katha 40x60 near Doddakallasandra Metro station behind ISKCON 40 feet Road 9845286505"

Ramamurthy Nagar

EAST OF NGEF: BDA 20x30 west facing Site for Sale 16,000/ Psft Negotiable. Contact: 9945033366

Rajarajeshwari Nagar

50X60 NORTH East Corner Site FOR SALE, Ideal Homes, Genuine Buyers Contact: 7624809123. BROKERS EXCUSE

Sahakarnagar

SAHAKAR NAGAR 60ft Main Road Commercial 40x60 Site For Sale Broker's Excuse Call: 9845623970/ 9739400838

Vijayanagar

SITE FOR SALE 30x45 North`Facing @ Vijayanagar Marenahalli @ Good Location Price 19000/- Sqft Negotiable 7676900174 9945569909

Vishweshwariah Layout

"30X40 RESIDENTIAL 1ST BLOCK VISHWESHWARAIAH LAYOUT, 30x40 5TH BLOCK TOP LOCATION BDA SITES SALE- 9845143579"

***SMV LAYOUT** 4th Block* North Facing BDA Vacant SITE for SALE. 49 Lakhs. Contact: 8105889812

"VISHVESWARAIAH 6TH-BLOCK 60ft Road 50x80 South facing Commercial Property with 75 Squares Building. 9845500019/ 7019314962"

AVAILABLE COMMERCIAL BDA SITE 40x60 VISHWESHWARAIA LAYOUT, 30X40 North Facing Genuine Buyers. Contact: 9035470616

30X40 BDA Vishveshwaraiah Layout 4th Block Builder Location 9000/- & 30x40 Site Sale 3rd Block 12200/- 9945584713

"VISVESHWARAIAH 6TH-BLOCK 30x40 West facing Allotte Site for sale Near Oxford College, Genuine buyers only Contact: 9945662333"

AVAILABLE/ WANTED BDA Sites Vishweshwariah Layout 50x80, 40X60, 30X40, 20X30 Genuine Buyers And Sellers 9743381719

"VISHVESWARAIAH LAYOUT 6th Block near KLE Law College 40x60 North 100%`Vastu, 90%`White. 7022218837

DIRECT OWNER #1340 S/F BDA Site Sale Vishveswaraiah Layout 2nd Block,Ready for Construction ₹10750/- 9742681666

SIR M Vishweshwaraiah Layout 5th Block 434, East 40x60, Near 60Ft Road. Owner Meeting: 9844938566

"VISHVESHWARAIAH LAYOUT 3rd Block 40x60 West Face Near Nammura Thindi & Vidyanikethan School.Contact: 9353016009"

"VISHVESHWARAIAH LAYOUT 1st Block 30x40 Brand new 1BHK House 40ft Road.Owner- 9886294610 (Brokers Execuse)"

30X40 BDA West facing 7th Block Near Nirman School, Vishweshwariah layout, 12500/- Owner Meeting. 9731151366.

***WANTED HOUSE** SITE* FLAT Vishveshwaraiah Kempegowda Layouts Nagarbhavi, Mallathahallli 20x30, 30x40, 40x60. ABHILASHA CONSULTANT. 9480565758

Mysore

SALE MUDA approved sites ready for registration Rs. 3700/-. Well developed layout, Bandipalya Village, Mysore. Brokers excuse, buyers contact- 7619606688.

Jakkur

PRIME RESIDENTIAL Corner Plot for Sale, 4400sqft North/ West. at Jakkur, Telecom Layout. Call: 9019144869.

R T Nagar

R.T.NAGAR HMT LAYOUT 40X60 Site For-Sale with 2 carparking Excellent Location With old House Call:9341260828

BTM Layout

SITE FOR sale 30x40,40x60 & 30x40 House,45x80 JP Nagar 9th Phase Industrial & BTM 2nd Stage Commercial, Residential Contact: 9945377119/9844099557

Mysore Road

"HEJJALA RAILWAY Society BMRDA Approved 30x40 East,, Ramohalli 30x55 Society Site Corner ₹38 Lakhs. 9845178335"

Srirampura

SALE 30X100, Site, North facing, 2 mins from Srirampuram metro,17000/sqft, PH:9739732433

Multiple Locations

VIJAYANAGARA 50X80, Vishweshwaraiah Layout 40x60, Nelamangala 15 Acres, Magadi Road 40 Acres, Yeshwanthpura 2Acres, Rajarajeshwari Nagara 15000 Sqft: 9886112385

House

Rajajinagar

RAJAJINAGAR WEST of Card Road 20x35 Ground, First, Second Floor, House Sale Price 1.90Cr: 9980501366

Basavanagudi

SALE: INDEPENDENT house, West facing, 44'x60' Clear title. 4th Main Road, N R Colony, Basavanagudi, Bangalore-19. G N Properties 9845044179

Jalahalli

35"*40'- 2 Independent House G + 1 1st floor Ground 850 S/ft 2 BHK 1st floor 1250 S/ft 3 BHK, Jalahalli 'A' Katha for Sale. Genuine buyers contact: 9663776415.

Kumaraswamy Layout

***DUPLEX HOUSE for SaleKumaraswamy LayoutPrime location.Near Vasavi HospitalBDA20x30 ft with 1100 sqft. Built up area.Genuine buyersContact owner 9845012529Brokers excuse.**

Indiranagar

8000 SQ ft property for sale in defence colony Indiranagar.DUPLEX with 3 BHK/FLMOB: 9448056996

Banashankari

"BANASHANKARI 3RD-STAGE 40x60 Residential old demolition House Top Location 40x50 Commercial old demolition House. 9845286505"

Mahalakshmi Layout

AGB LAYOUT, 3BHK North West Corner house on 25x40 site with 12x24 commercial space. Cell:9379887277

PROPERTY CORNER
ಕ್ಲಾಸಿಫೈಡ್ಸ್

A ಖಾತಾ ಸೈಟುಗಳು ಮಾರಾಟಕ್ಕಿವೆ
ಸೊಂಡೆಕೊಪ್ಪ | BMRDA APPROVED
ಅಕ್ಷಯ ತೃತೀಯ ಹಬ್ಬದ ಕೊಡುಗೆ
ಸ್ಪಾಟ್ ಬುಕಿಂಗ್ ಮಾಡಿದವರಿಗೆ 5 ಗ್ರಾಂ ಚಿನ್ನ ಉಚಿತ.
ರೂ. 2999/- ಅಡಿಗೆ
ನೆಲಮಂಗಲ
ಬೈಲಾಂಜನೇಯ ದೇವಸ್ಥಾನದ ಹತ್ತಿರ
DC ಕನ್ವರ್ಷನ್
ಬ್ಯಾಂಕ್ ಲೋನ್ ದೊರೆಯುತ್ತದೆ.
ರೂ. 1500/- ಅಡಿಗೆ
ಸಂಪರ್ಕಿಸಿ: 8880660099

Sites for SALE near YALAHANKA International Airport Road
SAI PRAKRUTI NIVASAA

99000 15805, 90083 38098

LAND With BUILDINGS Available in
Bangalore, Mysore & Talakad
0.5 Acre to 33 acres for School, University, 5 Star Hotel, Resorts, Software Park, Agri Business, Warehouse, Tourism Etc. On; Rent, Lease, JV, BTS, Investment.
VILLA- FARM PLOTS- ON BULK SALE
Email: mga65dev@gmail.com
Mob: +91 78997 80255

FOR SALE
Commercial property currently fetching 3.25 lakhs monthly rental, located on the first Floor 4775 sq super built up area + 1000 sq of car parking area UDS 1150, OC CC Building situated at 80ft Road, JP Nagar 3rd Phase, Bangalore. Expecting 6.75 Cr (negotiable).
INTERESTED MAY CONTACT
98459 22769 / 98450 28065



ಘಟ್ಟದ ಮೇಲ್ಭಾಗ, ರಾಜಧಾನಿ–ಕರಾವಳಿ ಸಂಪರ್ಕ

ಚತುಷ್ಪಥದ ಕನವರಿಕೆಗೆ ಕೊನೆ ಎಂದು?

• ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ಮುಂಗಾರು ಮಳೆಯ ಅಬ್ಬರಕ್ಕೆ ಪ್ರಕ್ಷುಬ್ಧಗೊಳ್ಳುವ ಅರಬ್ಬಿ ಸಮುದ್ರ, ಮಳೆಗಾಲದಲ್ಲಿ ಮೈಕೊಡವಿಕೊಳ್ಳುವ ಪಶ್ಚಿಮ ಘಟ್ಟದ ಗುಡ್ಡಗಳು, ಎಡೆಬಿಡದೇ ಸುರಿಯುವ ಮಳೆಯ ಆಘಾತ ತಾಳದೆ ಕಿತ್ತು ಹೋಗುವ ರಸ್ತೆಗಳು... ಪ್ರತಿ ಮಳೆಗಾಲದಲ್ಲಿ ರಾಜ್ಯದ ಕರಾವಳಿಯನ್ನು ಕಾಡುವ ಕೆಟ್ಟ ಕನಸುಗಳಿವು.

ವಾಯುಮಾರ್ಗ, ಜಲಮಾರ್ಗ, ಭೂಮಾರ್ಗ (ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ)... ಈ ಮೂರೂ ಬಗೆಯ ಸಂಪರ್ಕವನ್ನು ಹೊಂದಿರುವುದರ ಹೊರತಾಗಿಯೂ ಕರಾವಳಿಯು ಮಳೆಗಾಲದಲ್ಲಿ ಯಾವುದೇ ಸಂದರ್ಭದಲ್ಲೂ ದ್ವೀಪವಾಗುವ, ಹೊರಗಿನ ಸಂಪರ್ಕವನ್ನೇ ಕಡಿದುಕೊಳ್ಳುವ ಅಪಾಯವನ್ನು ಎದುರಿಸುತ್ತಿದೆ. ಪಶ್ಚಿಮ ಘಟ್ಟದ ಘಾಟಿ ರಸ್ತೆಗಳಲ್ಲಿ ಆಗಾಗ ಸಂಭವಿಸುವ ಭೂಕುಸಿತವು ರೈಲು ಮಾರ್ಗ, ಹೆದ್ದಾರಿ ಸಂಚಾರವನ್ನು ತಡೆದರೆ, ವಿಪರೀತ ಮಳೆಯಿಂದ ಕೆಲವೊಮ್ಮೆ ವಿಮಾನ ಸಂಚಾರವೂ ಕೈಕೊಡುತ್ತದೆ. ಕಳೆದ ಕೆಲವು ವರ್ಷಗಳಿಂದ ಇದು 'ಸಂಪ್ರದಾಯ' ಎಂಬಂತೆ ನಡೆಯುತ್ತಿದೆ.

ರಾಜ್ಯದ ರಾಜಧಾನಿಗೆ ಹಾಗೂ ಇತರ ಜಿಲ್ಲೆಗಳಿಗೆ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್‌ನಂತಹ ಇಂಧನ ಪೂರೈಕೆಯಾಗುವುದು ಮಂಗಳೂರಿನಿಂದ. ಅವುಗಳಲ್ಲಿ ಬಹುಪಾಲು ಈಗಲೂ ರಸ್ತೆ ಮೂಲಕವೇ ಸಾಗುತ್ತದೆ. ಸುಬ್ರಹ್ಮಣ್ಯ, ಧರ್ಮಸ್ಥಳ, ಕೊಲ್ಲೂರು, ಉಡುಪಿ, ಕಟೀಲು ಮೊದಲಾದ ಪ್ರಸಿದ್ಧ ಧಾರ್ಮಿಕ ಕೇಂದ್ರಗಳು, ಇಲ್ಲಿನ ರಮಣೀಯ ಕಡಲ ಕಿನಾರೆಗಳು ರಾಜ್ಯದಾದ್ಯಂತ ಭಕ್ತರನ್ನು, ಪ್ರವಾಸಿಗರನ್ನು ಸೆಳೆಯುತ್ತವೆ. ಆದರೆ ಈ ಜಿಲ್ಲೆಗಳಿಗೆ ಸಂಪೂರ್ಣ ಚತುಷ್ಪಥ ಹೆದ್ದಾರಿ ಹೊಂದಲು ಇನ್ನೂ ಸಾಧ್ಯವಾಗಿಲ್ಲ.

ಮಂಗಳೂರು– ಬೆಂಗಳೂರನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 75 ಬಹುತೇಕ ಚತುಷ್ಪಥವಾಗಿ ಅಭಿವೃದ್ಧಿಗೊಂಡಿದೆ. ಹಾಸನ– ಬೆಂಗಳೂರು ನಡುವಿನ ಮಾರ್ಗ ಒಂದೂವರೆ ದಶಕದ ಹಿಂದೆಯೇ ಚತುಷ್ಪಥವಾಗುವ ಅವಕಾಶ ಪಡೆಯಿತು. ಆದರೆ ಅದರಲ್ಲಿ ನಿರಂತರತೆ ಇರಲಿಲ್ಲ. ಹಾಸನದಿಂದ ಮಾರನಹಳ್ಳಿವರೆಗಿನ 45 ಕಿ.ಮೀ ಉದ್ದದ ಹೆದ್ದಾರಿ, ಅಡ್ಡಹೊಳೆಯಿಂದ ಬಿ.ಸಿ. ರೋಡ್‌ವರೆಗಿನ 63.5 ಕಿ.ಮೀ ಹೆದ್ದಾರಿಯ ಚತುಷ್ಪಥ ಕಾಮಗಾರಿಗಳು ಈಗಷ್ಟೇ ನಡೆಯುತ್ತಿವೆ. ದೇವಿಹಳ್ಳಿ– ಹಾಸನದ ನಡುವಿರುವ ಚೆನ್ನರಾಯಪಟ್ಟಣ ಮತ್ತು ಹಾಸನದ ಬೈಪಾಸ್‌ಗಳನ್ನು ಚತುಷ್ಪಥವನ್ನಾಗಿ ಪರಿವರ್ತಿಸುವ ಕಾಮಗಾರಿಯೂ ಈಗ ಅನುಷ್ಠಾನಗೊಳ್ಳುತ್ತಿದೆ. ಈ ಕಾಮಗಾರಿಗಳು ಪೂರ್ಣವಾದರೂ ಶಿರಾಡಿಯಲ್ಲಿ ಕಡಿದಾದ ತಿರುವುಗಳಿಂದ ಕೂಡಿದ ಸುಮಾರು 30 ಕಿ.ಮೀಗಳಷ್ಟು ಉದ್ದದ ಹೆದ್ದಾರಿ ದ್ವಿಪಥವಾಗಿಯೇ ಉಳಿಯಲಿದೆ.

ಪಶ್ಚಿಮಘಟ್ಟದಲ್ಲಿ 2018–19ನೇ ಸಾಲಿನಲ್ಲಿ ಸಂಭವಿಸಿದ್ದ ಸಾಲು ಸಾಲು ಭೂಕುಸಿತಗಳು ಶಿರಾಡಿ ಘಾಟಿಯೂ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪರ್ಕಿಸುವ ಬಹುತೇಕ ಘಾಟಿ ರಸ್ತೆಗಳು ಸಂಪರ್ಕ ಕಡಿತಗೊಳ್ಳುವಂತೆ ಮಾಡಿತ್ತು. ಮಳೆಗಾಲ ಬಂತೆಂದರೆ ಸಾಕು, ಶಿರಾಡಿ ಘಾಟಿಯಲ್ಲಿ ಧುತ್ತೆಂದು ಭೂಕುಸಿತ ಕಾಣಿಸಿಕೊಳ್ಳುತ್ತದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು ರಾಜ್ಯದ ಇತರ ಜಿಲ್ಲೆಗಳಿಂದ ರಸ್ತೆ ಸಂಪರ್ಕ ಕಡಿತಗೊಳ್ಳುವಂತೆ ಮಾಡುತ್ತದೆ. 2018ರ ಭೂ ಕುಸಿತ ಸರಮಾಲೆಯ ಬಳಿಕ ಶಿರಾಡಿ ಘಾಟಿಯಲ್ಲಿ ಅಡ್ಡಹೊಳೆ ಹಾಗೂ ಮಾರನಹಳ್ಳಿ ನಡುವಿನ 26 ಕಿ.ಮೀ ಹೆದ್ದಾರಿಯಲ್ಲಿ ಒಟ್ಟು 21 ಕಡೆ ದುರಸ್ತಿ ಕಾರ್ಯ ಕೈಗೊಳ್ಳಲಾಗಿತ್ತು. ಭೂಕುಸಿತದ ತೀವ್ರ ಅಪಾಯ ಎದುರಿಸುತ್ತಿರುವ ನಾಲ್ಕು ಸ್ಥಳಗಳನ್ನು ಗುರುತಿಸಿ ಅಲ್ಲಿ ಕುಸಿತ ತಡೆಯುವ ಕಸರತ್ತುಗಳನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಡೆಸಿತ್ತು. 2024ರ ಮಳೆಗಾಲದಲ್ಲಿ ಜುಲೈ ತಿಂಗಳಿನಲ್ಲಿ ಶಿರಾಡಿ ಘಾಟಿಯಲ್ಲಿ ಮತ್ತೆ ಸಂಭವಿಸಿದ ಭೂಕುಸಿತದಿಂದ ಕರಾವಳಿಯ ಸಂಪರ್ಕ ಮತ್ತೆ ಕಡಿತಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಮಂಗಳೂರು ಬಂದರಿನಿಂದ ಸರಕು ಸಾಗಿಸುವ ಭಾರಿ ವಾಹನಗಳು, ತೈಲ ಹಾಗೂ ಅನಿಲ ಸಾಗಿಸುವ ಟ್ಯಾಂಕರ್‌ಗಳು ಶಿರಾಡಿ ಘಾಟಿಯ ಮೂಲಕವೇ ಬೆಂಗಳೂರು ಹಾಗೂ ಇತರ ಜಿಲ್ಲೆಗಳತ್ತ ಸಾಗಬೇಕು. ಪ್ರತಿ ಮಳೆಗಾಲದಲ್ಲೂ ಭೂ ಕುಸಿತದ ಭೀತಿ ಉಂಟಾದಾಗಲೆಲ್ಲ ಸರಕು ಸಾಗಿಸುವ ಭಾರಿ ವಾಹನಗಳ ಸಂಚಾರಕ್ಕೆ ಶಿರಾಡಿ ಘಾಟಿಯಲ್ಲಿ ನಿರ್ಬಂಧ ಹೇರಲಾಗುತ್ತದೆ. ಇದು ಬಂದರು ಕೇಂದ್ರಿತವಾಗಿ ನಡೆಯುವ ಆರ್ಥಿಕ ವಹಿವಾಟಿಗೆ ದೊಡ್ಡ ಹೊಡೆತ ನೀಡುತ್ತಾ ಬಂದಿದೆ.

ಶಿರಾಡಿಯಲ್ಲಿ ಈಗಿರುವ ಹೆದ್ದಾರಿಗೆ ಪರ್ಯಾಯವಾಗಿ 23 ಕಿ.ಮೀ. ಉದ್ದದ ಸುರಂಗ ಮಾರ್ಗಗಳನ್ನು ಒಳಗೊಂಡ ಪ್ರತ್ಯೇಕ ಚತುಷ್ಪಥ ಹೆದ್ದಾರಿಯನ್ನು ನಿರ್ಮಿಸುವ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ದಶಕದ ಹಿಂದೆಯೇ ರೂಪಿಸಲಾಗಿತ್ತು. ಲೋಕೋಪಯೋಗಿ ಇಲಾಖೆಯು ₹10,145.62 ಕೋಟಿ ಮೊತ್ತದಲ್ಲಿ ಶಿರಾಡಿ ಘಾಟಿಯನ್ನು ಅಭಿವೃದ್ಧಿಪಡಿಸುವ ಡಿಪಿಆರ್ ತಯಾರಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಲ್ಲಿಸಿತ್ತು. ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (ಜೈಕಾ) ಈ ಯೋಜನೆಗೆ ಹಣ ಹೂಡುವ ಆಸಕ್ತಿ ತೋರಿತ್ತು. ಆದರೆ ಈ ಕುರಿತ ಮಾತುಕತೆಗಳು ದಡ ಸೇರಲಿಲ್ಲ. ಈ ನಡುವೆ ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ಪ್ರದೇಶವಾದ ಶಿರಾಡಿ ಘಾಟಿಯಲ್ಲಿ 23 ಕಿ.ಮೀ. ಸುರಂಗ ಕೊರೆಯುವ ಪ್ರಸ್ತಾವಕ್ಕೆ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯೂ ಸಮ್ಮತಿಸಲಿಲ್ಲ. ಹಾಗಾಗಿ ಈ ಯೋಜನೆಗೆ ಇತಿಶ್ರೀ ಹಾಡಲಾಯಿತು.

ಈ ಯೋಜನೆಗೆ ಪರ್ಯಾಯವಾಗಿ ಶಿರಾಡಿಯಲ್ಲಿ ಸುರಂಗಗಳು ಹಾಗೂ ವಯಡಕ್ಟ್‌ಗಳನ್ನು ಹೊಂದಿರುವ 'ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ' ನಿರ್ಮಿಸುವ ಪ್ರಸ್ತಾವ ಈಗ ಮುನ್ನೆಲೆಗೆ ಬಂದಿದೆ. ಈಗಿರುವ ದ್ವಿಪಥ ಹೆದ್ದಾರಿಯನ್ನೇ ನಾಲ್ಕು ಪಥಗಳ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಮೂರು ಸುರಂಗಗಳು (3.8 ಕಿಮೀ ಉದ್ದ) ಹಾಗೂ 11.18 ಕಿ.ಮೀ ಉದ್ದದ ವಯಡಕ್ಟ್‌ಗಳನ್ನು ನಿರ್ಮಿಸುವ ಪ್ರಸ್ತಾವವಿದೆ. ಘಾಟಿಯಲ್ಲಿ ಒಟ್ಟು 30.42 ಕಿ.ಮೀ ಉದ್ದದ ಚತುಷ್ಪಥ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ಸುಮಾರು ₹1,779 ಕೋಟಿ ವೆಚ್ಚವಾಗಬಹುದು ಎಂದು ಎನ್‌ಎಚ್‌ಎಐ ಅಂದಾಜಿಸಿದೆ. ಈ ಯೋಜನೆಯ ಬಗ್ಗೆ ಮೂರು ವರ್ಷಗಳಿಂದ ಚರ್ಚೆಗಳು ನಡೆಯುತ್ತಿವೆಯೇ ಹೊರತು, ಇನ್ನೂ ಡಿಪಿಆರ್ ಸಿದ್ಧವಾಗಿಲ್ಲ. ಮಾರ್ಗದ ವಿನ್ಯಾಸ (ಅಲೈನ್‌ಮೆಂಟ್) ಅಂತಿಮಗೊಳಿಸುವುದಕ್ಕೆ ಮೀನಮೇಷ ಎಣಿಸಲಾಗುತ್ತಿದೆ.

'ಹಾನಿ ಕಡಿಮೆಗೊಳಿಸಲು ತಂತ್ರಜ್ಞಾನ ಲಭ್ಯ'

'ಈಗ ಎಲ್ಲದಕ್ಕೂ ತಂತ್ರಜ್ಞಾನದ ಮೂಲಕ ಪರಿಹಾರ ಕಂಡುಕೊಳ್ಳಬಹುದು. ಸುರಂಗ ಮಾರ್ಗ ನಿರ್ಮಿಸುವಾಗ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವ ಮೂಲಕ ಪರಿಸರದ ಮೇಲಾಗುವ ದುಷ್ಪರಿಣಾಮವನ್ನು ಬಹುಮಟ್ಟಿಗೆ ಕಡಿಮೆ ಮಾಡಬಹುದು. ಸುರಂಗ ನಿರ್ಮಾಣಕ್ಕೆ ಸುಧಾರಿತ ತಂತ್ರಜ್ಞಾನ ಬಳಸಿದರೆ ಭವಿಷ್ಯದಲ್ಲೂ ಯಾವುದೇ ಅಪಾಯ ಸಂಭವಿಸುವ ಸಾಧ್ಯತೆ ಕಡಿಮೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ–ಕರ್ನಾಟಕ (ಎನ್‌ಐಟಿಕೆ)ದ ಪ್ರಾಧ್ಯಾಪಕರೊಬ್ಬರು ಅಭಿಪ್ರಾಯಪಟ್ಟರು.

'ಎನ್‌ಎಚ್‌ಎಐ ಇದರ ಡಿಪಿಆರ್ ಸಿದ್ಧಪಡಿಸುತ್ತಿದೆ. ಆದರೆ ಇದರ ಮಾರ್ಗದ ವಿನ್ಯಾಸ ಇನ್ನೂ ಅಂತಿಮಗೊಂಡಿಲ್ಲ' ಎಂದು ಹಾಸನದಲ್ಲಿರುವ ಎನ್‌ಎಚ್‌ಎಐ ಯೋಜನಾ ಅನುಷ್ಠಾನ ಘಟಕದ ಡಿಜಿಎಂ (ತಾಂತ್ರಿಕ) ಮತ್ತು ಯೋಜನಾ ನಿರ್ದೇಶಕ ಪ್ರವೀಣ್ ಕುಮಾರ್ ಪಿ. 'ಪ್ರಜಾವಾಣಿ'ಗೆ ತಿಳಿಸಿದರು.

ಚಾರ್ಮಾಡಿ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಇನ್ನೊಂದು ಪ್ರಮುಖ ಸಂಪರ್ಕ ಕೊಂಡಿಯಾದ ರಾಷ್ಟ್ರೀಯ ಹೆದ್ದಾರಿ 73 ಚಾರ್ಮಾಡಿ ಘಾಟಿ ಮೂಲಕ ಹಾದು ಹೋಗುತ್ತದೆ. ಈ ಘಾಟಿಯಲ್ಲಿ ಹೆದ್ದಾರಿಯು ಕೆಲವೆಡೆ 5.5 ಮೀಟರ್‌ನಷ್ಟು ಕಿರಿದಾಗಿದೆ. ಇದನ್ನು 10 ಮೀಟರ್‌ಗೆ ವಿಸ್ತರಿಸುವ ಈ ಯೋಜನೆಗೆ ₹343 ಕೋಟಿ ಮಂಜೂರಾಗಿತ್ತು. ಈ ಘಾಟಿಯ ಆರಂಭಿಕ ಸ್ಥಳದಿಂದ 12ನೇ ತಿರುವಿನವರೆಗೆ ಹೆದ್ದಾರಿಯನ್ನು ವಿಸ್ತರಿಸುವ ಈ ಕಾಮಗಾರಿಯನ್ನು ಗುತ್ತಿಗೆ ಪಡೆದ ಎಸ್‌ಎಲ್‌ವಿ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಯು 2025ರ ಜನವರಿಯಲ್ಲಿ ಕೆಲಸ ಆರಂಭಿಸಬೇಕಿತ್ತು. ಆದರೆ ಅದಿನ್ನೂ ಆರಂಭವಾಗಿಲ್ಲ. ಮಳೆಗಾಲ ಹಾಗೂ ಚಳಿಗಾಲದಲ್ಲಿ ಇಲ್ಲಿ, ಮಂಜು ಆವರಿಸುವ ಸಂದರ್ಭಗಳಲ್ಲಿ ಇಕ್ಕಟ್ಟಾದ ರಸ್ತೆಗಳಲ್ಲಿ ವಾಹನ ಚಲಾಯಿಸಲು ಚಾಲಕರು ಹರಸಾಹಸಪಡಬೇಕು. ರಸ್ತೆ ಪಕ್ಕದಲ್ಲಿ ಕಡಿದಾದ ಕಣಿವೆಗಳನ್ನು ಹೊಂದಿರುವ ಈ ಘಾಟಿಯು ಬಗಲಲ್ಲೇ ಅಪಾಯವನ್ನೂ ಕಟ್ಟಿಟ್ಟುಕೊಂಡಿದೆ.

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಯ ಸಂಪರ್ಕ ಕೊಂಡಿ ಸಂಪಾಜೆ ಘಾಟಿ. ಮಾಣಿ– ಮೈಸೂರು ಹೆದ್ದಾರಿ (ಎನ್‌ಎಚ್ 275) ಈ ಘಾಟಿಯ ಮೂಲಕ ಹಾದುಹೋಗುತ್ತದೆ. 2018–19ರಲ್ಲಿ ಭೂಕುಸಿತದಿಂದಾಗಿ ಈ ಹೆದ್ದಾರಿಯಲ್ಲಿ ಆರು ತಿಂಗಳಿಗೂ ಹೆಚ್ಚು ಕಾಲ ವಾಹನ ಸಂಚಾರ ನಿಷೇಧಿಸಲಾಗಿತ್ತು. ದ್ವಿಪಥದ ಈ ಹೆದ್ದಾರಿಯಲ್ಲಿ ಸದಾ ವಾಹನ ದಟ್ಟಣೆ ಸಮಸ್ಯೆ ಎದುರಾಗುತ್ತಿರುತ್ತದೆ. ಈ ಹೆದ್ದಾರಿಯನ್ನು ಚತುಷ್ಪಥವನ್ನಾಗಿ ಅಭಿವೃದ್ಧಿಪಡಿಸುವ ವಿಸ್ತೃತ ಯೋಜನಾ ವರದಿ ತಯಾರಿಸಲು ಸಮಾಲೋಚಕರ ನೇಮಕಕ್ಕೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ ಟೆಂಡರ್ ಕರೆದಿದೆ.

ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಮತ್ತು ಉಡುಪಿ ಜಿಲ್ಲೆ ನಡುವೆ ಸಂಪರ್ಕ ಬೆಸೆಯುವ ಇನ್ನೊಂದು ಪ್ರಮುಖ ರಾಷ್ಟ್ರೀಯ ಹೆದ್ದಾರಿ 169 ಎ. ಪಶ್ಚಿಮ ಘಟ್ಟದ ಆಗುಂಬೆ ಘಾಟಿಯ ಮೂಲಕ ಹಾದು ಹೋಗುವ ಈ ಹೆದ್ದಾರಿಯನ್ನು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ ಮೇಗರವಳ್ಳಿವರೆಗೆ ದ್ವಿಪಥವನ್ನಾಗಿ ಮೂರು ವರ್ಷಗಳ ಹಿಂದೆಯೇ ಅಭಿವೃದ್ಧಿಪಡಿಸಲಾಗಿದೆ. ಮೇಗರವಳ್ಳಿಯಿಂದ ಆಗುಂಬೆವರೆಗೆ ದ್ವಿಪಥವಾಗಿ ಅಭಿವೃದ್ಧಿಪಡಿಸುವ ಕಾಮಗಾರಿ ನಡೆಯುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಮಲ್ಪೆಯಿಂದ ಹೆಬ್ರಿವರೆಗೆ ಚತುಷ್ಪಥವನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಆಗುಂಬೆ ಘಾಟಿಯಲ್ಲಿ ತೀರಾ ಕಿರಿದಾದ ರಸ್ತೆ ಇದೆ. 14 ಹಿಮ್ಮುರಿ ತಿರುವುಗಳನ್ನು ಹೊಂದಿರುವ ಈ ಘಾಟಿಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಇಲ್ಲ. ಪ್ರಯಾಣಿಕರು ಮಾಮೂಲಿ ಬಸ್‌ಗಳ ಬದಲು ಮಿನಿ ಬಸ್‌ಗಳ ಮೂಲಕವೇ ಸಂಚರಿಸಬೇಕು. ಮಳೆಗಾಲದಲ್ಲಿ ಭೂಕುಸಿತ ಉಂಟಾದಾಗ, ಮರಗಳು ಬಿದ್ದಾಗ, ಆಗುಂಬೆ ಘಾಟಿಯಲ್ಲಿ ವಾಹನ ಸಂಚಾರ ಸ್ತಬ್ಧವಾಗುತ್ತದೆ.

ದಟ್ಟವಾದ ನಿತ್ಯಹರಿದ್ವರ್ಣದ ಕಾಡುಗಳಿಂದ ಆವೃತವಾಗಿರುವ ಈ ಘಾಟಿಯಲ್ಲಿ ರಸ್ತೆ ವಿಸ್ತರಣೆಗೆ ಇರುವ ಅವಕಾಶಗಳು ಕಡಿಮೆ. ಇಲ್ಲಿ ತಿರುವುಗಳ ಸಂಖ್ಯೆಯನ್ನು ಕಡಿತಗೊಳಿಸಿ ಸುರಂಗ ಮಾರ್ಗ ನಿರ್ಮಿಸುವ ಬಗ್ಗೆ ಚರ್ಚೆಗಳು ನಡೆದಿದ್ದವು. ಇಲ್ಲಿಸುರಂಗ ಕೊರೆದಿದ್ದೇ ಆದರೆ, ಅದು ಭೂಕುಸಿತಕ್ಕೆ ಕಾರಣವಾಗುತ್ತದೆ ಎಂಬುದು ಪರಿಸರ ಕಾರ್ಯಕರ್ತರ ಕಳವಳ.

ಶಿರಾಡಿ ಘಾಟಿಯಲ್ಲಿ ಹೆದ್ದಾರಿಗೆ ಮಣ್ಣು ಕುಸಿಯದಂತೆ ತಡೆಗೋಡೆ ನಿರ್ಮಿಸಲಾಗುತ್ತಿದೆ.

ಪರಿಸರ ಕಾರ್ಯಕರ್ತರ ಕಳವಳ

ಪಶ್ಚಿಮ ಘಟ್ಟವು ಪ್ರಪಂಚದ ಪ್ರಮುಖ ಜೀವವೈವಿಧ್ಯ ಹಾಟ್‌ಸ್ಪಾಟ್‌ಗಳಲ್ಲಿ ಒಂದು. ಇಲ್ಲಿ ಅಭಿವೃದ್ಧಿ ಕಾಮಗಾರಿ ಹಮ್ಮಿಕೊಳ್ಳುವುದರಿಂದ ವನ್ಯಜೀವಿಗಳ ಆವಾಸ ಸ್ಥಾನಕ್ಕೆ ಕುತ್ತು ಉಂಟಾಗುತ್ತದೆ. ಹೆದ್ದಾರಿ ನಿರ್ಮಾಣ, ನೀರಾವರಿ ಯೋಜನೆಗಳು, ವಿದ್ಯುತ್ ಮಾರ್ಗ, ತೈಲ ಸಾಗಿಸುವ ಕೊಳವೆ ಮಾರ್ಗಗಳ ಅಳವಡಿಕೆಗಾಗಿ, ಜಲವಿದ್ಯುತ್ ಯೋಜನೆಗಳಿಗಾಗಿ ಪಶ್ಚಿಮ ಘಟ್ಟದ ಅನೇಕ ಕಡೆ ಕಾಡು ನಾಶವಾಗಿದೆ. ಇದರ ಪರಿಣಾಮವಾಗಿ ನಾಲ್ಕೈದು ವರ್ಷಗಳಲ್ಲಿ ಭಾರಿ ಪ್ರಮಾಣದ ಭೂ ಕುಸಿತಗಳು ಪಶ್ಚಿಮ ಘಟ್ಟದ ಉದ್ದಕ್ಕೂ ಪದೇ ಪದೇ ಸಂಭವಿಸಿವೆ. ಹಾಗಾಗಿ ಈ ಪಶ್ಚಿಮ ಘಟ್ಟದಲ್ಲಿ ಘಾಟಿಗಳಲ್ಲಿ ಹೆದ್ದಾರಿ ಅಭಿವೃದ್ಧಿಯ ನೆಪದಲ್ಲಿ ಪರಿಸರಕ್ಕೆ ಮತ್ತಷ್ಟು ಹಾನಿಯನ್ನುಂಟು ಮಾಡಬಾರದು ಎಂಬುದು ಪರಿಸರ ಕಾರ್ಯಕರ್ತರ ಕಳಕಳಿ. ಜೀವ ವಿಜ್ಞಾನಿಗಳೂ ಇದಕ್ಕೆ ದನಿಗೂಡಿಗೂಡಿಸುತ್ತಾರೆ.

'ಜೀವವೈವಿಧ್ಯ ಹಾಗೂ ಪರಿಸರ ವ್ಯವಸ್ಥೆಯ ಸಂರಕ್ಷಣೆ ದೃಷ್ಟಿಯಿಂದ ಪಶ್ಚಿಮ ಘಟ್ಟದಲ್ಲಿ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳದಿರುವುದು ಸೂಕ್ತ. ಶಿರಾಡಿಯಂತಹ ಸೂಕ್ಷ್ಮ ಪ್ರದೇಶದಲ್ಲಿ ಸುರಂಗ ನಿರ್ಮಿಸಿ ಭಾರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡರೆ ಒಂದಿಲ್ಲ ಒಂದು ದಿನ ಅದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಜೀವವಿಜ್ಞಾನಿ ಪ್ರೊ.ಟಿ.ವಿ.ರಾಮಚಂದ್ರ ಅಭಿಪ್ರಾಯಪಟ್ಟರು.

ಶಿರಾಡಿ ಘಾಟಿಯ ಈಗಿನ ಸ್ಥಿತಿ

ಪ್ರಜಾವಾಣಿ ಚಿತ್ರಗಳು: ಜಾನೆಕರೆ ಪರಮೇಶ್

'ಆಗುಂಬೆ ಘಾಟಿ ಅಭಿವೃದ್ಧಿಗೆ ಟೆಂಡರ್ ಕರೆಯಲಾಗಿದೆ. ಇದರ ತಾಂತ್ರಿಕ ಬಿಡ್ ತೆರೆಯಲಾಗಿದೆ. ಯಾವ ಏಜೆನ್ಸಿಗೆ ಇದರ ಹೊಣೆ ಒಪ್ಪಿಸಬೇಕು ಎಂಬುದು ಇನ್ನಷ್ಟೇ ತೀರ್ಮಾನವಾಗಬೇಕಿದೆ. ಆಯ್ಕೆಯಾಗುವ ಏಜೆನ್ಸಿಯು ಅಧ್ಯಯನ ನಡೆಸಿ ಆಗುಂಬೆ ಘಾಟಿಯಲ್ಲಿ ಸುರಂಗ ಮಾರ್ಗ ನಿರ್ಮಿಸಬೇಕೇ ಅಥವಾ ರಸ್ತೆಯನ್ನು ವಿಸ್ತರಿಸಬೇಕೆ ಎಂಬ ಬಗ್ಗೆ ವರದಿ ನೀಡಲಿದೆ. ಅದನ್ನು ಆಧರಿಸಿ ಘಾಟಿಯನ್ನು ಅಭಿವೃದ್ಧಿ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ' ಎಂದು ಎನ್‌ಎಚ್‌ಎಐ ಎಂಜಿನಿಯರ್ ಒಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಪಶ್ಚಿಮ ಘಟ್ಟದ ಇನ್ನೊಂದು ಪ್ರಮುಖ ಘಾಟಿ ಮಾಳ– ಕೆರೆಕಟ್ಟೆ ಘಾಟಿ. ಶೃಂಗೇರಿ–ಕಳಸ ಪ್ರದೇಶಗಳನ್ನು ಕರಾವಳಿಯ ಜೊತೆ ಜೋಡಿಸುವ ಈ ಘಾಟಿಯಲ್ಲಿ ಎನ್‌ಎಚ್ 169 ಹಾದುಹೋಗುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಹಾದು ಹೋಗುವ ಈ ಹೆದ್ದಾರಿಯ ವಿಸ್ತರಣೆಗೆ ಅರಣ್ಯ ಇಲಾಖೆಯ ಅನುಮತಿ ಪಡೆಯುವುದು ಕಷ್ಟ. ಈ ಹೆದ್ದಾರಿಯನ್ನು ಉಡುಪಿ ಜಿಲ್ಲೆಯ ಸಾಣೂರಿನಿಂದ ಮಂಗಳೂರಿನ ಬಿಕರ್ನಕಟ್ಟೆವರೆಗೆ ಚತುಷ್ಪಥವನ್ನಾಗಿ ಅಭಿವೃದ್ಧಿಪಡಿಸುವ ₹1,386 ಕೋಟಿ ಮೊತ್ತದ ಕಾಮಗಾರಿಯೂ ಕುಂಟುತ್ತಾ ಸಾಗಿದೆ.

ಬೆಂಗಳೂರು ಹೊರತುಪಡಿಸಿದರೆ ರಾಜ್ಯದ ಜಿಡಿಪಿಗೆ ಅತಿಹೆಚ್ಚು ಕೊಡುಗೆ ನೀಡುತ್ತಿರುವುದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು. ಹೀಗಾಗಿ ಕರಾವಳಿಗೆ ಉತ್ತಮ ಸಂಪರ್ಕ ವ್ಯವಸ್ಥೆಯನ್ನು ಹೊಂದುವುದು ಬಲುಮುಖ್ಯ. ದುರದೃಷ್ಟವಶಾತ್ ಈಗಲೂ ಕರಾವಳಿಯ ರಸ್ತೆ ಸಂಪರ್ಕ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆಯಾಗಿಲ್ಲ. ಮಳೆಗಾಲದಲ್ಲಂತೂ ಭೂಕುಸಿತ ಸಮಸ್ಯೆ ಎದುರಾದಾಗಲೆಲ್ಲ ಸುತ್ತು ಬಳಸು ಹಾದಿ ಮೂಲಕ ಕರಾವಳಿಯನ್ನು ಸಂಪರ್ಕಿಸಬೇಕಾದ ಸ್ಥಿತಿ ಇದೆ ಎನ್ನುತ್ತಾರೆ ಇಲ್ಲಿನ ಉದ್ಯಮಿಗಳು.

'ಸಮುದ್ರದ ಮೀನಿಗೆ ಘಟ್ಟದ ಮೇಲು ಭಾಗದಲ್ಲಿ ಬೇಡಿಕೆ ಇದೆ. ಆದರೆ ಅಲ್ಲಿನ ಮಾರುಕಟ್ಟೆ ತಲುಪುವಾಗ ತಡವಾದರೂ ಅವುಗಳಿಗೆ ಬೇಡಿಕೆ ಕಳೆದುಕೊಳ್ಳುತ್ತದೆ. ಪಶ್ಚಿಮ ಘಟ್ಟದ ಘಾಟಿ ರಸ್ತೆಗಳು ಮಳೆಗಾಲದಲ್ಲಿ ಬಂದ್ ಆದರಂತೂ ನಮಗೆ ಫಜೀತಿ' ಎಂದು ಮೀನು ವ್ಯಾಪಾರಿ ಮಧುಕರ್ ಸನಿಲ್ ತಾಜಾ ಮೀನುಗಳನ್ನುಸಕಾಲದಲ್ಲಿ ತಲುಪಿಸುವುದರ ಹಿಂದಿನ ಕಷ್ಟವನ್ನು ವಿವರಿಸುತ್ತಾರೆ. ಪ್ರಮುಖ ಮೀನುಗಾರಿಕಾ ಬಂದರುಗಳು ಹಾಗೂ ರಾಜ್ಯದ ಏಕೈಕ ಅಂತರರಾಷ್ಟ್ರೀಯ ಬಂದರನ್ನು ಹೊಂದಿರುವ ಕರಾವಳಿಗೆ ಉತ್ತಮ ಭೂಸಂಪರ್ಕವನ್ನು ಹೊಂದುವುದು ಎಷ್ಟು ಮುಖ್ಯ ಎಂಬುದು ಅವರ ಮಾತುಗಳನ್ನು ಆಲಿಸಿದಾಗ ಮನದಟ್ಟಾಗುತ್ತದೆ.

'ರಾಜಧಾನಿ–ಬಂದರು ಸಂಪರ್ಕ ಚತುಷ್ಪಥವಾಗಲಿ'

ರಾಷ್ಟ್ರೀಯ ಹೆದ್ದಾರಿ 75 ಪೂರ್ತಿ ಚತುಷ್ಪಥಗೊಳ್ಳಬೇಕು ಎಂದು ಸರ್ಕಾರಗಳಿಗೆ ಕೆಸಿಸಿಐ ದಶಕಗಳಿಂದ ಬೇಡಿಕೆ ಸಲ್ಲಿಸುತ್ತಲೇ ಬಂದಿದೆ. ಬೆಂಗಳೂರು ಹಾಗೂ ಹೊಸೂರಿನಿಂದ ಸರಕನ್ನು ಮಂಗಳೂರು ಬಂದರಿಗೆ ಸುಗಮವಾಗಿ ತಲುಪಿಸಲು ಇದು ತೀರಾ ಅವಶ್ಯಕ. ಅಷ್ಟೇ ಅಲ್ಲ ರಾಜ್ಯದ ರಫ್ತು– ಆಮದು ಚಟುವಟಿಕೆ, ಕರಾವಳಿ ಜಿಲ್ಲೆಗಳ ಪ್ರವಾಸೋದ್ಯಮ ಅಭಿವೃದ್ಧಿಯ ದೃಷ್ಟಿಯಿಂದಲೂ ಇದು ಮಹತ್ತರ ಯೋಜನೆ.

ಈ ಯೋಜನೆ ಯಶಸ್ವಿಯಾಗಿ ಅನುಷ್ಠಾನವಾಗಿದ್ದೇ ಆದಲ್ಲಿ, ವ್ಯಾಪಾರ ವಹಿವಾಟು, ಪ್ರವಾಸೋದ್ಯಮ, ಆತಿಥ್ಯ ಉದ್ಯಮ, ಆರೋಗ್ಯ ಉದ್ಯಮ, ಶೈಕ್ಷಣಿಕ ಚಟುವಟಿಕೆ, ಬಂದರು ಆಧರಿತ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ಇದು ಈ ಪ್ರದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಲಿದೆ. ಈ ಪ್ರದೇಶದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ.

ಈ ಯೋಜನೆಯ ಅನುಷ್ಠಾನದಲ್ಲಿ ಆಗಿರುವ ವಿಳಂಬ, ಮಳೆಗಾಲದಲ್ಲಿ ಭೂಕುಸಿತ ಸಮಸ್ಯೆಗಳಿಂದಾಗಿ ಧುತ್ತೆಂದು ಎದುರಾಗುವ ಅಡಚಣೆಗಳು ರಫ್ತು– ಆಮದು ಚಟುವಟಿಕೆ ಮೇಲಷ್ಟೇ ಅಲ್ಲ ಪ್ರಯಾಣಿಕರ ಓಡಾಟದ ಮೇಲೂ ಗಂಭೀರ ಪರಿಣಾಮ ಬೀರಿವೆ. ದಶಕಗಳಿಂದ ಕಾಡುತ್ತಿರುವ ಈ ಸಮಸ್ಯೆಗಳನ್ನು ಬಗೆಹರಿಸಲು ಕೆಸಿಸಿಐ, ಸರ್ಕಾರದ ನೀತಿ ನಿರೂಪಕರ ಮೇಲೆ ಒತ್ತಡ ಹೇರುವ ಮೂಲಕ ಪ್ರಯತ್ನಿಸುತ್ತಲೇ ಬಂದಿದೆ. ಈ ಪ್ರಯತ್ನದ ಫಲವಾಗಿ ಎರಡು ವರ್ಷಗಳಿಂದ ಈಚೆಗೆ ಎನ್.ಎಚ್ 75 ಚತುಷ್ಪಥ ಕಾಮಗಾರಿ ತುಸು ಚುರುಕು ಪಡೆದಿದೆ. ಮುಂಬರುವ ಮೇ ನಲ್ಲಿ ಇಡೀ ಮಾರ್ಗದ ಉದ್ದಕ್ಕೂ ಕನಿಷ್ಠಪಕ್ಷ ಎರಡು ಪಥಗಳಾದರೂ ಬಳಕೆಗೆ ಲಭಿಸುವ ಆಶಾಭಾವ ಮೂಡಿದೆ.

ಶಿರಾಡಿ ಘಾಟಿಯಲ್ಲಿ ಚತುಷ್ಪಥ ನಿರ್ಮಾಣ ಸದ್ಯಕ್ಕೆ ಸಾಕಾರವಾಗುವ ಲಕ್ಷಣ ಕಾಣಿಸುತ್ತಿಲ್ಲ. ಅಲ್ಲಲ್ಲಿ ಸೇತುವೆ ಹಾಗೂ ಸುರಂಗಗಳನ್ನು ನಿರ್ಮಿಸುವ ಮೂಲಕ ಇಲ್ಲೂ ನಿರಂತರ ಚತುಷ್ಪಥವನ್ನು ಕಾಯ್ದುಕೊಳ್ಳುವಂತೆ ಮಾಡಲು ಯೋಜನೆ ರೂಪಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದು ಆದಷ್ಟು ತ್ವರಿತವಾಗಿ ಕಾರ್ಯರೂಪಕ್ಕೆ ಬರಲಿ ಎಂಬುದು ಕೆಸಿಸಿಐ ಆಶಯ.

ಆನಂದ ಜಿ.ಪೈ, ಅಧ್ಯಕ್ಷರು, ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 27-4-2000

• **ಕುಡಿಯುವ ನೀರಿನ ಸಮಸ್ಯೆ ಉಸ್ತುವಾರಿ ಸಚಿವರಿಂದ ಸಭೆ**

ಬೆಂಗಳೂರು, ಏ. 26– ಜಿಲ್ಲಾ ಉಸ್ತುವಾರಿ ಸಚಿವರು ಇದೇ 29ರಿಂದ ಮೇ1ರ ವರೆಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಭೆಗಳನ್ನು ನಡೆಸಿ ವಸ್ತು ಸ್ಥಿತಿ ಅರಿತು ಪರಿಹಾರ ಕಾರ್ಯ ಕೈಗೊಳ್ಳುವರು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಎಂ.ವೈ. ಘೋರ್ಪಡೆ ಅವರು ವಿಧಾನಸಭೆಯಲ್ಲಿ ಇಂದು ತಿಳಿಸಿದರು. ಪ್ರತಿಪಕ್ಷದ ನಾಯಕ ಜಗದೀಶ್ ಶೆಟ್ಟರ್ ಹಾಗೂ ಮತ್ತಿತರ ಸದಸ್ಯರು ನಿಯಮ 69ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ್ದಕ್ಕೆ ಉತ್ತರ ನೀಡುತ್ತಿದ್ದ ಸಚಿವರು, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸುವಂತೆ ವಿಧಾನಸಭಾಧ್ಯಕ್ಷ ಎಂ.ವಿ ವೆಂಕಟಪ್ಪ ಅವರು ನೀಡಿದ ಸಲಹೆಯನ್ನು ಒಪ್ಪಿದರು.

50 ವರ್ಷಗಳ ಹಿಂದೆ

ಭಾನುವಾರ, 27-4-1975

• **ಪ್ರಬಲ ಕೇಂದ್ರ ಸರ್ಕಾರಕ್ಕೆ ಸಾಲಿಸಿಟರ್ ಜನರಲ್ ಕರೆ**

ನವದೆಹಲಿ, ಏ.26– ಕೇಂದ್ರ – ರಾಜ್ಯಗಳ ಬಾಂಧವ್ಯವನ್ನು ವಿಧಾಯಕಗೊಳಿಸಲು ಸಂವಿಧಾನದಲ್ಲಿ ಯಾವ ಗಣನೀಯ ಬದಲಾವಣೆಯೂ ಅಗತ್ಯವಿಲ್ಲವೆಂದು ಸಾಲಿಸಿಟರ್ ಜನರಲ್ ಶ್ರೀ ಲಾಲಾ ನಾರಾಯಣ ಸಿನ್ಹ ಅವರು ಇಂದು ಇಲ್ಲಿ ಹೇಳಿದರು.

ಅಖಿಲ ಭಾರತ ವಕೀಲರ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೇಂದ್ರ–ರಾಜ್ಯಗಳ ಬಾಂಧವ್ಯ ವಿಧಾಯಕಗೊಳಿಸಲು ಸಂವಿಧಾನದಲ್ಲಿ ತೀವ್ರತರ ಮಾರ್ಪಾಡಾಗಬೇಕೆಂಬ ರಾಜ ಮನ್ನಾರ್ ಸಮಿತಿ ಸಲಹೆ ಹಾಗೂ ಅವರ ಬಗ್ಗೆ ದಿವಂಗತ ನ್ಯಾಯವಾದಿ ಎಂ.ಸಿ ಸೆಟಲ್ವಾಡ್ ಅವರ ಪ್ರತಿಕ್ರಿಯೆ ಯನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಏಪ್ರಿಲ್ 27, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಅಮಾವಾಸ್ಯ ಗಂ. 25-01 ನಕ್ಷತ್ರ: ಅಶ್ವಿನಿ ಗಂ. 24-39 ಯೋಗ: ಪ್ರೀತಿ ಗಂ. 24-19
ಕರಣ: ಚತುಷ್ಪಾದ ಗಂ. 14-56, ಮೇಷ ಮಾಸದ 14 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-15 ಸೂರ್ಯಾಸ್ತ : 06-42
ಮುಸ್ಲಿಂ ದಿನಾಂಕ : 28 ಶವ್ವಾಲ್
ಅದೃಷ್ಟ ಸಂಖ್ಯೆ : 8, 10

ಮೇಷ: ರಾಜಕೀಯ ವೃತ್ತಿ ಸೇರುವ ಯೋಚನೆ ಮತ್ತು ಅದರ ಜೊತೆಗೆ ಅವಕಾಶ ಬರುವುದು. ಕೋರ್ಟ್ ಕಛೇರಿ ದೂರುಗಳಂತಹ ಗೊಡವೆಗಳಿಗೆ ಇಂದು ಹೆಚ್ಚು ಪ್ರಾಮುಖ್ಯತೆ ಕೊಡುವುದು ಸರಿಯಲ್ಲ. ಮಲ್ಲಿಕಾರ್ಜುನನನ್ನು ಆರಾಧಿಸಿ.

ವೃಷಭ: ಇಂದಿನ ಪರಿಸ್ಥಿತಿ ನಿಮಗೆ ಅನುಕೂಲಕರವಾಗಿದೆ. ಪ್ರಯಾಣ ಲಾಭ ತರಲಿದೆ. ಕೃಷಿ ಚಟುವಟಿಕೆಗಳು ಹೆಚ್ಚಲಿವೆ. ತಂದೆ ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ.

ಮಿಥುನ: ಕೆಲವು ಬಾರಿ ಆತಂಕ ಎದುರಾಗುವ ಸಾಧ್ಯತೆ ಇರುತ್ತದೆ. ಕಳ್ಳತನದ ಅಪವಾದ ನಿಮಗೆ ಬರಬಹುದು. ನೂತನವಾದ ಗೃಹ ನಿರ್ಮಾಣ ಮಾಡುವ ಆಲೋಚನೆಯು ಕುಟುಂಬ ಸದಸ್ಯರ ಸಂತಸಕ್ಕೆ ಕಾರಣವಾಗುತ್ತದೆ.

ಕರ್ಕಾಟಕ: ಎಷ್ಟೆ ಕಷ್ಟ ಬಂದರೂ ನೀವು ನಿಮ್ಮ ಗುರಿಯನ್ನು ಸಾಧಿಸಿಯೇ ತೀರುತ್ತೀರಿ. ಅದರ ಪರಿಣಾಮ ನಿಮ್ಮ ಜೀವನದ ಮುಂದಿನ ಹಾದಿ ಸುಗಮ ಆಗಲಿದೆ. ಹಣ್ಣು-ತರಕಾರಿಗಳ ವ್ಯಾಪಾರಿಗಳಿಗೆ ಲಾಭ ವೃದ್ಧಿಯಾಗುತ್ತದೆ.

ಸಿಂಹ: ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕಿ. ಸಂಯಮದ ನಡುವಳಿಕೆ ಅಗತ್ಯ. ಉದ್ಯೋಗದ ಬಗ್ಗೆ ಭಯ ಬೇಡ. ವರ್ತಮಾನದ ಕೆಲಸದಲ್ಲಿಯೇ ಬಡ್ತಿ ಸಿಗಲಿದೆ. ಖಾದ್ಯಗಳ ಮಾರಾಟಗಾರರಿಗೆ ಅಧಿಕ ಲಾಭ ಸಿಗುವುದು.

ಕನ್ಯಾ: ಸಮಯವರಿತು ಕಾರ್ಯಸಾಧನೆ ಮಾಡುವುದಕ್ಕೆ ನಿಶ್ಚಯಿಸಿ, ಶುಭಾಂತ್ಯವಾಗುವುದು. ಮದುವೆ ಸಿದ್ಧತೆಗಳಿಗಾಗಿ ಪ್ರಯಾಣ ಬೆಳೆಸ ಬೇಕಾಗುವುದು. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಒಳ್ಳೆಯ ಫಲಿತಾಂಶ ಬರಲಿದೆ.

ತುಲಾ: ವೈಯಕ್ತಿಕ ಪ್ರಗತಿಯನ್ನು ಸಾಧಿಸುವ ಮೂಲಕ ಗೆಳೆಯರ ಬಳಗದಲ್ಲಿ ನೀವು ಇತರರಿಗಿಂತ ಪ್ರತ್ಯೇಕವೆನಿಸುವಿರಿ. ಹಿಂದೆ ರೂಪಿಸಿದ್ದ ಯೋಜನೆಗಳಲ್ಲಿ ಯಶಸ್ಸು ಕಾಣಲು ಆರಂಭಿಸಿರುವುದನ್ನು ಗಮನಿಸುವಿರಿ.

ವೃಶ್ಚಿಕ : ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವುದು ಲೇಸು. ಉದ್ಯೋಗದ ಅಭಿವೃದ್ಧಿಯ ಬಗ್ಗೆ ಬುದ್ಧಿವಂತ ಗೆಳೆಯನಿಂದ ಮಹತ್ವದ ಸಲಹೆ ಸಿಗಲಿದೆ. ಮಕ್ಕಳ ಆಟದ ಸಮಯದಲ್ಲಿ ಕಾಳಜಿ ಇರಲಿ.

ಧನು: ನಿಮಗೆ ಹಲವು ಅಚ್ಚರಿಗಳು ಈ ದಿನ ಕಾದಿವೆ. ತಂದೆಯಾಗಲಿರುವ ಸುದ್ದಿ ಕೇಳಿ ಸಂತೋಷವಾಗುವುದು. ನಿಮ್ಮಲ್ಲಿರುವ ರಾಗ-ದ್ವೇಷಗಳನ್ನು ಸರಿಪಡಿಸಿ-ಕೊಳ್ಳಲು ತಯಾರಾದರೆ ಸರ್ವರಿಂದ ಪ್ರಶಂಸೆಗೆ ಒಳಗಾಗುವಿರಿ.

ಮಕರ: ಖಾಸಗಿ ಬದುಕನ್ನು ವೃತ್ತಿ ಬದುಕಿನಿಂದ ದೂರವಿಟ್ಟಲ್ಲಿ ಯಶಸ್ಸು ಸಾಧ್ಯ ಆಗುವುದು. ಮಹತ್ವವಾದುದನ್ನು ಸಾಧಿಸುವ ಸಾಮರ್ಥ್ಯ ಮತ್ತು ಶಕ್ತಿ ನಿಮ್ಮಲ್ಲಿದೆ ಎಂಬುದು ಅರಿವಾಗಲಿದೆ. ಮಹಾಗಣಪತಿಯನ್ನು ಆರಾಧಿಸಿ.

ಕುಂಭ: ನಿಮ್ಮ ಕನಸನ್ನು ಈ ದಿನ ಕಾರ್ಯಗತಗೊಳಿಸಿದ ತೃಪ್ತಿ ಉಂಟಾಗುತ್ತದೆ. ಸ್ನೇಹ ಸಂಬಂಧ ಉತ್ತಮವಾಗಿರುವುದರಿಂದ ಸಾಮಾಜಿಕವಾಗಿ ಲಾಭ ಪಡೆಯುವಿರಿ. ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ಲಾಭ ಪಡೆಯುವಿರಿ.

ಮೀನ: ಸಂಬಂಧಿಕರಲ್ಲಿ ಮುಕ್ತ ಮನೋಭಾವ, ಹೊಂದಾಣಿಕೆ ಅನುಕೂಲವನ್ನು ಉಂಟುಮಾಡಲಿದೆ. ಸಹನೆಯನ್ನು ರೂಢಿಸಿಕೊಳ್ಳುವುದು ಉತ್ತಮ. ಅನಿರೀಕ್ಷಿತವಾಗಿ ಉಡುಗೊರೆ ದೊರಕುವುದು. ಹಣದ ಅಭಾವ ಇರುವುದಿಲ್ಲ.

ಪದಬಂಧ 6024

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಲವ ಇದ್ದಿರುವುದ್ದಕ್ಕೇ ಇಷ್ಟು ಹುರುಪು! (5)
3.ಕುಲದ ಕೊನೆಗೆ ಸೇರಿರುವ ಗುಂಪು (3)
5.ಕರಾರು ಮಾಡಿಯೇ ನಿಖರವಾದುದ್ದನ್ನು ಹೇಳಿ! (5)
7.ಶರ ಹಿಡಿದಿರುವ ಶೈವ ಭಕ್ತ (3)
9.ಬೈಯ್ಯಲು ಸೂಕ್ತವಾದ ವಿಸ್ತಾರ ಜಾಗ (3)
11.ಗುಬ್ಬಚ್ಚಿ ಇಲ್ಲಿದೆ (3)
13.ಯುದ್ಧದ ಕೇಸರಿಯಿದು (5)
15.ದ್ರಾವಣದ ಹತ್ತಿರ ಕಾಣಿಸಿದ ಅಚ್ಚು (3)
16.ಈತ ಬಾಗಿಲನ್ನು ಕಾಯುವವನು (5)

ಮೇಲಿಂದ ಕೆಳಕ್ಕೆ
1.ಲವನು ಹಿಡಿದಿರುವುದು ಬಹುಸ್ವಲ್ಪ (4)
2.ಯುಕ್ತಾಯುಕ್ತ ವಿಚಾರ (3)
4.ಕುಕ್ಕುತ್ತಲೇ ಮಾಡಿದ ಒತ್ತಾಸೆ! (3)
6.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
8.ಸರಕುಗಳನ್ನು ಒಂದು ದೇಶದಿಂದ ಹೊರಗೆ ಕಳಿಸುವಿಕೆ (2)
9.ಬರದಲ್ಲಿ ಬಂದಿರುವ ಅಸಂಸ್ಕೃತ (3)
10.ಉಪ್ಪಿನ ಗುಣವುಳ್ಳದ್ದು (2)
12.ವಿಮರ್ಶೆಯನ್ನು ಮಾಡುವವನು (4)
16.ಸಂತತಿಯಲ್ಲಿರುವ ಋಷಿ ಕಾಣುತ್ತಿದ್ದಾನೆಯೇ? (2)
13.ಕಡಲು ಇಲ್ಲಿ ಕಾಣುತ್ತಿದೆ (3)
14.ಅರಳೆಯ ಸಮೀಪ! (3)



6023ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಸ್ತೂರಿ 3.ಬೆವರು
4.ವಾದ್ಯ 5.ಕಾವಳ
6.ಗುಂಜು 9.ಸುಮ
8.ಗಾಯಕ 11.ರಹದಾರಿ
13.ಗದಗ 16.ಸಂತ
10.ವಿಜಯಪುರ 12.ಬಿಲ
13.ಗಣಿ 14.ದಾತಾರ
15.ವಾದ 16.ಸಂಚಾರಿ 7.ಗಣಿತ

ಮೇಲಿಂದ ಕೆಳಕ್ಕೆ:
1.ಕರು 2.ರಿವಾಜು
3.ಬೆಳಗಾವಿ 5.ಕಾಮನಬಿಲ್ಲು
7.ರಾಮನಗರ

ಸುಡೊಕು 6409

		3	1			4		
6				5				8
	4		8				6	
4			5		9	2		1
	2			4			5	
3		5	2		8		4	6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6408 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂವಿಧಾನ ಸಂರಕ್ಷಕರ ಸಮಾವೇಶದಲ್ಲಿ ಗುಜರಾತ್‌ನ ಕಾಂಗ್ರೆಸ್ ಶಾಸಕ ಜಿಗ್ನೇಶ್ ಮೇವಾನಿ ಹೇಳಿಕೆ

ಆರ್‌ಎಸ್‌ಎಸ್ ವಿರುದ್ಧ 'ಸಂವಿಧಾನ ಶಾಖೆ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಡಾ.ಬಿ.ಆರ್. ಅಂಬೇಡ್ಕರ್ ಆಶಯಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ವಿರುದ್ಧ ರಾಜ್ಯದ ಪ್ರತಿ ಗ್ರಾಮ ಮತ್ತು ಗಲ್ಲಿಗಳಲ್ಲಿ ಸಂವಿಧಾನ ಸಂರಕ್ಷಣಾ ಶಾಖೆಗಳನ್ನು ತೆರೆಯಲಾಗುವುದು ಎಂದು ಗುಜರಾತ್‌ನ ಕಾಂಗ್ರೆಸ್ ಶಾಸಕ ಜಿಗ್ನೇಶ್ ಮೇವಾನಿ ಹೇಳಿದರು.

ಇಲ್ಲಿನ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಸಂವಿಧಾನ ಸಂರಕ್ಷಣಾ ಪಡೆ ಶನಿವಾರ ಏರ್ಪಡಿಸಿದ್ದ ಸಂವಿಧಾನ ಸಂರಕ್ಷಕರ ಸಮಾವೇಶದಲ್ಲಿ ಅವರು ಮಾತನಾಡಿದರು.

'ಆರ್‌ಎಸ್‌ಎಸ್, ಬಿಜೆಪಿ ಸೇರಿದಂತೆ ಸಂಘ ಪರಿವಾರವು ಸಂವಿಧಾನದ ಸರ್ವನಾಶಕ್ಕೆ ಪ್ರಯತ್ನಿಸುತ್ತಿದೆ. ದೇಶದ ಬಂಡವಾಳಶಾಹಿ ವರ್ಗವೂ ಇವರೊಂದಿಗೆ ಕೈಜೋಡಿಸಿದೆ. ಪ್ರಜಾಪ್ರಭುತ್ವವನ್ನು ಹಾಳು ಮಾಡುವ ಹುನ್ನಾರವೂ ನಡೆಯುತ್ತಿದೆ. ರೈತರು, ಕಾರ್ಮಿಕರು ತಮ್ಮ ಬದುಕು ಉಳಿಸಿಕೊಳ್ಳಲು ಸಂವಿಧಾನವನ್ನು ಉಳಿಸಿಕೊಳ್ಳುವ ಅಗತ್ಯವಿದೆ' ಎಂದರು.

'ಶತಮಾನದ ಹಿಂದೆ ಅಸ್ತಿತ್ವಕ್ಕೆ ಬಂದ ಸಂಘವೊಂದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಇದು ಒಂದು ಪಡೆಯ ರೀತಿಯಲ್ಲಿ ದೇಶದ ಎಲ್ಲೆಡೆ ಸಂವಿಧಾನದ ಬಗ್ಗೆ ತಪ್ಪು ಕಲ್ಪನೆ ಬಿತ್ತುತ್ತಿದೆ. ಸಂವಿಧಾನದ ಪರ ಪ್ರತಿಪಾದನೆಗೆ ಇಂತಹ ಪಡೆ ಇಲ್ಲ ಎಂಬ ಕೊರಗು ಈವರೆಗೆ ಕಾಡಿದ್ದು ನಿಜ. ಸಂವಿಧಾನ ಸಂರಕ್ಷಣಾ ಪಡೆ ಈ ಆತಂಕವನ್ನು ನಿವಾರಿಸಿದೆ. ರಾಜಕೀಯ ಪಕ್ಷಕ್ಕಿಂತ ಜನ ಚಳವಳಿಗೆ ಹೆಚ್ಚು ಶಕ್ತಿ ಇದೆ. ಹೀಗಾಗಿ, ಯಾವುದೇ ರಾಜಕಾರಣಿಗಳನ್ನು ನಂಬಬೇಡಿ' ಎಂದು ಆರ್ಥಿಕ ವಿಶ್ಲೇಷಕ ಪರಕಾಲ ಪ್ರಭಾಕರ್ ಹೇಳಿದರು.

'ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವ ನೈಜ ಕಾಳಜಿ ಇರುವವರು ಸೈದ್ಧಾಂತಿಕ ಸಂಕುಚಿತತೆಯಿಂದ ಹೊರಬರುವ ಅಗತ್ಯವಿದೆ. ಪ್ರತಿಯೊಬ್ಬರೂ ತಮ್ಮ ಸಿದ್ಧಾಂತಗಳಿಗೆ ಬದ್ಧವಾಗಿದ್ದುಕೊಂಡೇ ಸಮಾನ ಆಶಯಗಳಿಗೆ ಒಗ್ಗೂಡಬೇಕು. ಹಸಿರು ಬಣ್ಣದ ಪ್ರತೀಕವಾದ ರೈತರು, ನೀಲಿ ಬಣ್ಣದ ಸಂಕೇತವಾಗಿರುವ ದಲಿತರು ಹಾಗೂ ಕೆಂಪು ಬಣ್ಣದ ಅಸ್ಮಿತೆ ಹೊಂದಿದ ಸಮಾಜವಾದಿಗಳು ಒಗ್ಗೂಡಬೇಕು' ಎಂದು ಸಮಾವೇಶ ಉದ್ಘಾಟಿಸಿದ ಚಿಂತಕ ಬರಗೂರು ರಾಮಚಂದ್ರಪ್ಪ ಸಲಹೆ ನೀಡಿದರು.

ಸಂವಿಧಾನವನ್ನು ಅಪಮಾನಗೊಳಿಸುವ ಶಕ್ತಿಗಳ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಬೇಕು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ವಿರೋಧಿಸಿ ಮೇ 20ರಂದು ಸಾರ್ವತ್ರಿಕ ಮುಷ್ಕರ ನಡೆಸುವುದು ಸೇರಿ 10 ನಿರ್ಣಯಗಳನ್ನು ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಮುಖಂಡ ಡಾ.ಸುನೀಲಮ್, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಸ್ತ್ರೀವಾದಿ ಚಿಂತಕಿ ವಿಜಯ, ಎದ್ದೇಳು ಕರ್ನಾಟಕದ ಮುಖಂಡ ನೂರ್ ಶ್ರೀಧರ್, ರೈತ ಸಂಘದ ಮುಖಂಡರಾದ ಬಡಗಲಪುರ ನಾಗೇಂದ್ರ, ಎಚ್.ಆರ್. ಬಸವರಾಜಪ್ಪ ಹಾಜರಿದ್ದರು.

ದಾವಣಗೆರೆಯಲ್ಲಿ ಶನಿವಾರ ನಡೆದ ಸಂವಿಧಾನ ಸಂರಕ್ಷಕರ ಸಮಾವೇಶದಲ್ಲಿ ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, 'ಎದ್ದೇಳು ಕರ್ನಾಟಕ'ದ ಮುಖಂಡ ಕೆ.ಎಲ್.ಅಶೋಕ್, ಚಿಂತಕ ಬರಗೂರು ರಾಮಚಂದ್ರಪ್ಪ, ಗುಜರಾತ್‌ನ ಕಾಂಗ್ರೆಸ್ ಶಾಸಕ ಜಿಗ್ನೇಶ್ ಮೇವಾನಿ, ಆರ್ಥಿಕ ವಿಶ್ಲೇಷಕ ಪರಕಾಲ ಪ್ರಭಾಕರ್, ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಮುಖಂಡ ಡಾ.ಸುನೀಲಮ್, ಸ್ತ್ರೀವಾದಿ ಚಿಂತಕಿ ವಿಜಯ ಪಾಲ್ಗೊಂಡಿದ್ದರು

'ಆರ್‌ಎಸ್‌ಎಸ್ ದೇಶದ್ರೋಹಿ ಸಂಘಟನೆ'

'ಆರ್‌ಎಸ್‌ಎಸ್ ಶುದ್ಧ ದೇಶದ್ರೋಹಿ ಸಂಘಟನೆ. ಈ ಸಂಘಟನೆಯ ನಿರ್ನಾಮಕ್ಕೆ ಸಂಘರ್ಷ ಅನಿವಾರ್ಯ. ಸಂವಿಧಾನದ ಪರ ಇರುವ ಎಲ್ಲ ಮನಸುಗಳು ಈ ಹೋರಾಟದಲ್ಲಿ ಪಾಲ್ಗೊಳ್ಳಬೇಕು' ಎಂದು ತಮಿಳುನಾಡಿನ ಕಾಂಗ್ರೆಸ್ ಸಂಸದ ಸಸಿಕಾಂತ್ ಸೆಂಥಿಲ್ ಕೋರಿದರು.

'ಸಮಾನತೆಯೇ ಆರ್‌ಎಸ್‌ಎಸ್‌ನ ನಿಜವಾದ ಶತ್ರು. ಮುಸ್ಲಿಮರ ವಿರುದ್ಧ ಹೊರಹಾಕುವ ದ್ವೇಷ ತೋರಿಕೆ ಮಾತ್ರ. ಸಮಾನತೆ ಪ್ರತಿಪಾದಿಸಿದ ಏಕ ಮಾತ್ರ ಕಾರಣಕ್ಕೆ ಸಂವಿಧಾನವನ್ನು ವಿರೋಧಿಸಲಾಗುತ್ತಿದೆ' ಎಂದು ಅವರು ಹೇಳಿದರು.

ಸಸಿಕಾಂತ್ ಸೆಂಥಿಲ್

ಕಾವೇರಿ ಆರತಿಗೆ ರೈತಸಂಘ ವಿರೋಧ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಬಳಿ ನಡೆಯಲಿರುವ 'ಕಾವೇರಿ ಆರತಿ' ಮತ್ತು 'ಬೃಂದಾವನ ಉನ್ನತೀಕರಣ' (ಅಮ್ಯೂಸ್‌ಮೆಂಟ್ ಪಾರ್ಕ್) ಯೋಜನೆಗಳು ಜಿಲ್ಲೆಗೆ ಮಾರಕ ಮತ್ತು ದಿವಾಳಿ ಮಾಡುವ ಕಾರ್ಯಕ್ರಮಗಳು' ಎಂದು ರೈತ ನಾಯಕಿ ಸುನಂದಾ ಜಯರಾಂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಜಿಲ್ಲೆಯ ಜನರ ಜೀವನಾಡಿಯಾಗಿರುವ, ನಾಲ್ವಡಿ ಅವರ ಕೊಡುಗೆಯಾದ ಕೆಆರ್‌ಎಸ್ ಅಣೆಕಟ್ಟೆಯು ಶತಮಾನದ ಅಂಚಿನಲ್ಲಿದ್ದು, ಸೂಕ್ಷ್ಮ ಮತ್ತು ನಿಷೇಧಿತ ಪ್ರದೇಶ. ಅದಕ್ಕೆ ಅಪಾಯವನ್ನುಂಟು ಮಾಡುವ ಯೋಜನೆಗಳನ್ನು ರೂಪಿಸಬಾರದು. ಪ್ರವಾಸೋದ್ಯಮದ ಹೆಸರಿನಲ್ಲಿ ವಾಣಿಜ್ಯ ಚಟುವಟಿಕೆ ಮತ್ತು ಖಾಸಗಿ ವ್ಯವಹಾರಗಳಿಗೆ ಅವಕಾಶ ನೀಡಬಾರದು' ಎಂದು ಒತ್ತಾಯಿಸಿದ್ದಾರೆ.

'ಬಸವ ಜಯಂತಿಗೆ ಪಂಚಾಚಾರ್ಯರ ಯುಗಮಾನೋತ್ಸವ ಆಚರಣೆ ಬೇಡ'

ಪ್ರಜಾವಾಣಿ ವಾರ್ತೆ

ಬೀದರ್: 'ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರ ಜಯಂತಿಯೊಂದಿಗೆ ಪಂಚಾಚಾರ್ಯರ ಯುಗಮಾನೋತ್ಸವ ಆಚರಿಸಲು ನಿರ್ಧರಿಸಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತನ್ನ ನಿರ್ಧಾರ ಹಿಂಪಡೆಯಬೇಕು. ಇಲ್ಲವಾದಲ್ಲಿ ಬೆಂಗಳೂರಿನ ಮಹಾಸಭಾ ಕಚೇರಿ ಎದುರು ಪ್ರತಿಭಟನೆ ನಡೆಸಿ, ಅಲ್ಲೇ ಬಸವ ಜಯಂತಿ ಆಚರಿಸಲಾಗುವುದು' ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಶನಿವಾರ ಎಚ್ಚರಿಕೆ ನೀಡಿದರು.

ಬಸವಲಿಂಗ ಪಟ್ಟದ್ದೇವರು

'ಬಸವ ಜಯಂತಿಯಂದು, ಇತಿಹಾಸವಿಲ್ಲದ ಹಾಗೂ ಬಸವ ಜಯಂತಿಗೆ ಸಂಬಂಧವಿಲ್ಲದ ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳುವುದು ಬಸವ ಜಯಂತಿಯ ತಾತ್ವಿಕ ಮಹತ್ವವನ್ನು ಕ್ಷೀಣಗೊಳಿಸುತ್ತದೆ. ಮಹಾಸಭಾ ನಿರ್ಧಾರವು ಲಿಂಗಾಯತ ಸಮುದಾಯ, ಬಸವ ಭಕ್ತರ ಭಾವನೆಗಳಿಗೆ ಧಕ್ಕೆ ತರುತ್ತದೆ. ಸಮಾಜದಲ್ಲಿ ಸಂಘರ್ಷವಾಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಜನಿವಾರ ಪ್ರಕರಣ: ಸರ್ಕಾರಕ್ಕೆ ನೋಟಿಸ್

ಬ್ರಾಹ್ಮಣ ಮಹಾಸಭಾದಿಂದ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆ; ವಂಚಿತರಿಗಾಗಿ ಮರುಪರೀಕ್ಷೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ; ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯುವ ಮುನ್ನ ವಿದ್ಯಾರ್ಥಿಗಳು ಧರಿಸಿದ್ದ ಜನಿವಾರವನ್ನು ಬಲವಂತವಾಗಿ ಕತ್ತರಿಸಿ ತೆಗೆಯಲಾಗಿದೆ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, 'ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ'ದ ಅಧ್ಯಕ್ಷ ಎಸ್. ರಘುನಾಥ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಸ್.ಶ್ರೀರಂಗ ಅವರ ವಾದ ಆಲಿಸಿದ ನ್ಯಾಯಪೀಠ; ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ 9ಕ್ಕೆ ಮುಂದೂಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಸುಮನಾ ನಾಗಾನಂದ ಅವರು ವಕಾಲತ್ತು ವಹಿಸಿದ್ದಾರೆ.

ಅರ್ಜಿಯಲ್ಲಿ ಏನಿದೆ?: 'ಬ್ರಾಹ್ಮಣರು, ಕ್ಷತ್ರಿಯರು ಹಾಗೂ ವೈಶ್ಯರು ಧಾರ್ಮಿಕ ವಿಧಿ–ವಿಧಾನಗಳ ಮೂಲಕ ಶ್ರದ್ಧೆ ಮತ್ತು ಭಕ್ತಿಯಿಂದ ಜನಿವಾರ ಧರಿಸುತ್ತಾರೆ. ಇದನ್ನು ಬಲವಂತವಾಗಿ ತೆಗೆಸಿರುವುದು ಅವರ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಉಂಟುಮಾಡಿದೆ. ಈ ಕೃತ್ಯವು ಸಂವಿಧಾನದ 21ಎ, 25 ಮತ್ತು 29(2)ರ ಸ್ಪಷ್ಟ ಉಲ್ಲಂಘನೆಯಾಗಿದೆ. ಇಂತಹ ಸಂವಿಧಾನ ವಿರೋಧಿ ಕ್ರಮಕ್ಕೆ ಕೈಹಾಕಿದ ಅಧಿಕಾರಿಗಳ ವಿರುದ್ಧ ಸರ್ಕಾರ ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಅಂತೆಯೇ, ಇದರಿಂದ ವಿದ್ಯಾರ್ಥಿಗಳ ಶಿಕ್ಷಣದ ಹಕ್ಕಿಗೆ ವಂಚನೆಯಾಗಿದೆ' ಎಂದು ಆಕ್ಷೇಪಿಸಲಾಗಿದೆ.

ಕೋರಿಕೆ: 'ಯಾರು ಪರೀಕ್ಷೆಯಿಂದ ವಂಚಿತರಾಗಿದ್ದಾರೋ ಅಂತಹ ವಿದ್ಯಾರ್ಥಿಗಳಿಗಾಗಿ ಮತ್ತೊಮ್ಮೆ ಸಿಇಟಿ ಪರೀಕ್ಷೆ ನಡೆಸಬೇಕು. ಕೆಇಎ ನಡೆಸುವ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ತಪಾಸಣೆಗೆ ಸೂಕ್ತ ಮಾರ್ಗಸೂಚಿ ರೂಪಿಸುವಂತೆ ನಿರ್ದೇಶಿಸಬೇಕು. ಜನಿವಾರ ಧರಿಸುವ ವಿದ್ಯಾರ್ಥಿಗಳಿಗೆ ತಾರತಮ್ಯ ಮಾಡಬಾರದು ಮತ್ತು ಅವರ ಧಾರ್ಮಿಕ ಆಚರಣೆಯ ಹಕ್ಕಿನಲ್ಲಿ ಮಧ್ಯಪ್ರವೇಶ ಮಾಡದಂತೆ ಸೂಕ್ತ ಆದೇಶ ಹೊರಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಮಹೇಶ್ ಜೋಶಿಗೆ ಭದ್ರತೆ ಒದಗಿಸಿ'

'ತಮಗೆ ಜೀವ ಬೆದರಿಕೆ ಇದೆ ಎಂದು ಆತಂಕ ವ್ಯಕ್ತಪಡಿಸಿರುವ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಅವರಿಗೆ ಅಗತ್ಯವಿದ್ದರೆ ಸೂಕ್ತ ಭದ್ರತೆ ಒದಗಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮೌಖಿಕ ನಿರ್ದೇಶನ ನೀಡಿದೆ.

ಈ ಸಂಬಂಧ ಮಹೇಶ್ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠ, 'ಅಗತ್ಯವಿದ್ದರೆ ಜೋಶಿ ಅವರಿಗೆ ಸೂಕ್ತ ಭದ್ರತೆಯನ್ನು ಒದಗಿಸಿ' ಎಂದು ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಹುಲ್ ಕಾರ್ಯಪ್ಪ ಅವರಿಗೆ ನಿರ್ದೇಶಿಸಿ ಲಿಖಿತ ಆದೇಶವನ್ನು ಕಾಯ್ದಿರಿಸಿತು.

ಕೋರಿಕೆ ಏನು?: 'ಕಳೆದ ವರ್ಷ ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿದ ಗಳಿಗೆಯಿಂದ ನನಗೆ ಜೀವ ಬೆದರಿಕೆಯ ಆಡಿಯೊ-ವಿಡಿಯೊ ಕರೆಗಳು ಬರುತ್ತಿವೆ. ಹಾಗಾಗಿ, 24x7 ಭದ್ರತೆ ಒದಗಿಸುವ ಗನ್‌ಮೆನ್ ಜೊತೆಗೆ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಮಹೇಶ್ ಜೋಶಿ ಕೋರಿದ್ದಾರೆ.

ಜೋಶಿ ಪರ ಪದಾಂಕಿತ ಹಿರಿಯ ವಕೀಲ ಎಸ್. ಬಸವರಾಜು ವಾದ ಮಂಡಿಸಿದ್ದರು. ಹೈಕೋರ್ಟ್ ವಕೀಲ ಎಂ.ಉದಯ ಶಂಕರ್ ವಕಾಲತ್ತು ವಹಿಸಿದ್ದಾರೆ.

ರನ್ಯಾ ರಾವ್ ಜಾಮೀನು ತಿರಸ್ಕೃತ

ದುಬೈನಿಂದ ಭಾರತಕ್ಕೆ ಚಿನ್ನ ಕಳ್ಳಸಾಗಣೆ ಮಾಡಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ನಟಿ ರನ್ಯಾ ರಾವ್ ಅಲಿಯಾಸ್ ಹರ್ಷವರ್ಧಿನಿ ರನ್ಯಾ ಮತ್ತು ತರುಣ್ ಕುಂಡೂರು ರಾಜು ಅವರ ಜಾಮೀನು ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ರನ್ಯಾ ರಾವ್ ಮತ್ತು ತರುಣ್ ರಾಜ್ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿ ಜಾಮೀನು ಮಂಜೂರು ಮಾಡಲು ನಿರಾಕರಿಸಿದೆ.

ರನ್ಯಾ ರಾವ್ ವಿರುದ್ಧ ಸೀಮಾ ಶುಲ್ಕ ಕಾಯ್ದೆ–1962ರ ಕಲಂ 135 (1)(ಎ) ಮತ್ತು 135(1)(ಬಿ) ಅಡಿ ಪ್ರಕರಣ ದಾಖಲಿಸಲಾಗಿದೆ. ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯಗಳು ಮಾರ್ಚ್ 14 ಮತ್ತು 27ರಂದು ಕ್ರಮವಾಗಿ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದವು.

ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಪ್ರತಿಪಾದನೆ

'ವೀರಶೈವ, ಲಿಂಗಾಯತ ಒಂದೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀರಶೈವ, ಲಿಂಗಾಯತ ಎರಡೂ ಒಂದೇ. ಆದರೆ, ಕೆಲವರು ತಮ್ಮ ಸ್ವಾರ್ಥಕ್ಕೆ ಬೇರೆ ರೀತಿ ವ್ಯಾಖ್ಯಾನ ಮಾಡುತ್ತಿದ್ದು, ಇಂತಹ ವದಂತಿಗಳಿಗೆ ಕಿವಿಗೊಡಬಾರದು' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯರು ಹೇಳಿದರು.

ನಗರದಲ್ಲಿ ಶನಿವಾರ ನಡೆದ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ರೇಣುಕ ಸಿರಿ ಪ್ರಶಸ್ತಿ ಪ್ರದಾನ ಮತ್ತು ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು.

'ಜಾತಿ ಗಣತಿ ವರದಿಯಲ್ಲಿ ವೀರಶೈವ ಲಿಂಗಾಯತ ಜನಸಂಖ್ಯೆ ನೋಡಿದರೆ ಭೂಮಿ ಕುಸಿದಷ್ಟು ಆತಂಕಕ್ಕೆ ಒಳಗಾಗಿದ್ದೇವೆ. ಸಮುದಾಯದ ಒಳ ಪಂಗಡಗಳನ್ನು ಪ್ರತ್ಯೇಕಗೊಳಿಸಿ, ಮೂಲ ಶಕ್ತಿಯನ್ನೇ ಕುಂಠಿತಗೊಳಿಸುವ ಕೆಲಸ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಮುದಾಯದ ಎಲ್ಲ ಪಂಗಡಗಳು ಒಂದಾಗಬೇಕು ಎಂಬುದು ಮಠದ ಅಭಿಲಾಷೆ. ಆಗ ಗೊಂದಲಗಳು ಇರುವುದಿಲ್ಲ, ಸಮಾಜವೂ ಅಭಿವೃದ್ಧಿ ಹೊಂದುತ್ತದೆ ಎಂದು ಅಭಿಪ್ರಾಯಪಟ್ಟರು.

ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ರೋಣ ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, 'ಜಾತಿ ಗಣತಿ ವರದಿ ಮುಂದಿನ ಪೀಳಿಗೆಗೆ ಮಹತ್ವದ್ದಾಗಿದೆ. ಸಾಮಾಜಿಕ ನ್ಯಾಯಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ರಾಜ್ಯ ಸರ್ಕಾರ ಮತ್ತೊಮ್ಮೆ ಜಾತಿ ಗಣತಿ ಮಾಡಿಸಿ, ಮುಂದಿನ ನಿರ್ಧಾರ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು.

ಸಮುದಾಯದ ಒಳಪಂಗಡಗಳು ಒಂದಾಗಬೇಕು. ರಂಭಾಪುರಿ ಮಠದ ಸ್ವಾಮೀಜಿ ಹಾಗೂ ಹಿರಿಯರು ಎಲ್ಲರನ್ನೂ ಒಂದುಗೂಡಿಸುವ ಕೆಲಸ ಮಾಡಬೇಕು ಎಂದರು.

ಮಹಲಿಂಗಪುರದ ವಿನಾಯಕ ಚಿಕ್ಕೋಡಿ ಅವರು ರೇಖಾ ಚಿತ್ರದಲ್ಲಿ ಬಿಡಿಸಿದ ರೇಣುಕಾಚಾರ್ಯರ ನವಲೀಲೆಯ ಭಾವಚಿತ್ರಗಳನ್ನು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅನಾವರಣಗೊಳಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಎಚ್.ವಿ.ಪಂಚಾಕ್ಷರಯ್ಯ ಅವರು ಉಪನ್ಯಾಸ ನೀಡಿದರು. ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ, ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯ ಹಾಜರಿದ್ದರು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸಂಸ್ಥೆ ಅಧ್ಯಕ್ಷ ಯು.ಎಂ. ಬಸವರಾಜ ಅಧ್ಯಕ್ಷತೆ ವಹಿಸಿದ್ದರು.

ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಅವರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಧನಗುರುಸ್ವಾಮಿ, ವೀರಭದ್ರ ಶಿವಾಚಾರ್ಯ ಸ್ವಾಮಿ, ರೇಣುಕಾ ಶಿವಾಚಾರ್ಯ ಸ್ವಾಮಿ, ಜಿ.ಎಸ್.ಪಾಟೀಲ ಉಪಸ್ಥಿತರಿದ್ದರು

ಮುಖ್ಯಾಂಶಗಳು

- ತಮ್ಮ ಸ್ವಾರ್ಥಕ್ಕೆ ಬೇರೆ ರೀತಿ ವ್ಯಾಖ್ಯಾನ
- ಸಮುದಾಯದ ಪಂಗಡಗಳು ಒಂದಾಗಬೇಕು ಎಂಬುದು ಮಠದ ಅಭಿಲಾಷೆ

ಗೊರುಚಗೆ 'ಬಸವಶ್ರೀ', ಪಲ್ಲವಿಗೆ 'ವಚನ ಸಂಗೀತ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವ ವೇದಿಕೆ ವತಿಯಿಂದ ನೀಡುವ 'ಬಸವಶ್ರೀ ಪ್ರಶಸ್ತಿ'ಗೆ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, 'ವಚನ ಸಾಹಿತ್ಯಶ್ರೀ ಪ್ರಶಸ್ತಿ'ಗೆ ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಚನ ಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ ಹಾಗೂ 'ವಚನ ಸಂಗೀತ ಪ್ರಶಸ್ತಿ'ಗೆ ಗಾಯಕಿ ಎಂ.ಡಿ. ಪಲ್ಲವಿ ಅವರನ್ನು ಆಯ್ಕೆ ಮಾಡಲಾಗಿದೆ. ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಬಸವ ವೇದಿಕೆಯ ಅಧ್ಯಕ್ಷ ಸಿ. ಸೋಮಶೇಖರ್ ಅವರು ಈ ವಿಷಯ ತಿಳಿಸಿದರು.

'ಮೇ 3ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಗೃಹ ಸಚಿವ ಜಿ. ಪರಮೇಶ್ವರ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ವಿ. ಸೋಮಣ್ಣ ಅವರು ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಿದ್ದು, ಸಚಿವ ಎಂ.ಬಿ. ಪಾಟೀಲ ಅವರು ಬಸವ ಜ್ಯೋತಿ ಮಾಹಿತಿ ಕೈಪಿಡಿ ಬಿಡುಗಡೆ ಮಾಡಲಿದ್ದಾರೆ' ಎಂದು ಅವರು ಹೇಳಿದರು.

ಗೊ.ರು. ಚನ್ನಬಸಪ್ಪ

ಎಂ.ಡಿ. ಪಲ್ಲವಿ

ಹೆದ್ದಾರಿಯಲ್ಲಿ ಉರಿದ ಬಸ್

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕದಬಹಳ್ಳಿ ಬಳಿ ಶನಿವಾರ ನಸುಕಿನಲ್ಲಿ ಖಾಸಗಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಧಗಧಗನೆ ಹೊತ್ತಿ ಉರಿದಿದ್ದು, 32 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬೆಂಗಳೂರು- ಮಂಗಳೂರು ಹೆದ್ದಾರಿಯಲ್ಲಿ ಉಡುಪಿಯಿಂದ ಬೆಂಗಳೂರು ಕಡೆಗೆ ಬಸ್ ಚಲಿಸುತ್ತಿತ್ತು. ಕದಬಹಳ್ಳಿ ಟೋಲ್ ಗೇಟ್ ಬಳಿ ಮುಂಜಾನೆ 5 ಗಂಟೆಗೆ ಬೆಂಕಿ ಕಾಣಿಸಿತ್ತು. ಕೂಡಲೇ ಚಾಲಕ 32 ಪ್ರಯಾಣಿಕರನ್ನು ಲಗೇಜ್ ಸಹಿತ ಕೆಳಗೆ ಇಳಿಯಲು ಸೂಚಿಸಿದರು.

ನಂತರ ಬೆಂಕಿ ಹೆಚ್ಚು ಹಬ್ಬಿದ್ದು, ಬಸ್ ಧಗಧಗನೇ ಹೊತ್ತಿ ಉರಿಯಿತು. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಬಿಂಡಗನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗಮಂಗಲ ತಾಲ್ಲೂಕಿನ ಕದಬಹಳ್ಳಿ ಬಳಿ ಶನಿವಾರ ಬೆಂಕಿಗೆ ಆಹುತಿಯಾದ ಖಾಸಗಿ ಬಸ್ –ಪ್ರಜಾವಾಣಿ ಚಿತ್ರ

ಬಂಧನದಲ್ಲಿದ್ದ ಪುರಸಭೆ ಮುಖ್ಯಾಧಿಕಾರಿ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಲಂಚ ತೆಗೆದುಕೊಳ್ಳುವಾಗ ಬಂಧನಕ್ಕೊಳಗಾಗಿ ಜಿಲ್ಲಾ ಕಾರಾಗೃಹದಲ್ಲಿದ್ದ ಜಿಲ್ಲೆಯ ಹೊಸದುರ್ಗ ಪುರಸಭೆಯ ಮುಖ್ಯಾಧಿಕಾರಿ ಜಿ.ವಿ. ತಿಮ್ಮರಾಜು (40) ಶನಿವಾರ ಬೆಳಿಗ್ಗೆ ಹೃದಯಾಘಾತದಿಂದ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ನಿವೇಶನ ಮತ್ತು ಕಟ್ಟಡದ ಇ-ಸ್ವತ್ತು ಮಾಡಿಕೊಡಲು ಪುರಸಭೆ ಸದಸ್ಯ ಶಂಕರಪ್ಪ ಅವರಿಂದ ₹25,000 ಲಂಚ ಪಡೆಯುವಾಗ ಏ. 21ರಂದು ಲೋಕಾಯುಕ್ತ ಸಿಬ್ಬಂದಿ ನಡೆಸಿದ ದಾಳಿಯಲ್ಲಿ ಇವರು ಸಿಕ್ಕಿಬಿದ್ದು, ಬಂಧನಕ್ಕೆ ಒಳಗಾಗಿ, ಜಿಲ್ಲಾ ಕಾರಾಗೃಹದಲ್ಲಿದ್ದರು.

ಜಿ.ವಿ. ತಿಮ್ಮರಾಜು

'ವಿಚಾರಣಾಧೀನ ಕೈದಿಯಾಗಿದ್ದ ತಿಮ್ಮರಾಜು ಅವರಿಗೆ ಬೆಳಿಗ್ಗೆ ತೀವ್ರ ಆಯಾಸ ಕಾಣಿಸಿಕೊಂಡಿದೆ. ಕೂಡಲೇ ಕಾರಾಗೃಹದ ಸಿಬ್ಬಂದಿ ಅವರನ್ನು ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ವೇಳೆ ರಕ್ತದೊತ್ತಡದಲ್ಲಿ ಏರುಪೇರು ಕಂಡುಬಂದಿದ್ದರಿಂದ ತಕ್ಷಣ ತೀವ್ರ ನಿಗಾ ಘಟಕಕ್ಕೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, 8.30ರ ವೇಳೆಗೆ ಹೃದಯಾಘಾತವಾಗಿ ಮೃತಪಟ್ಟರು' ಎಂದು ಕಾರಾಗೃಹ ಅಧೀಕ್ಷಕ ಸಿದ್ದರಾಮ ಪಾಟೀಲ್ ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಆಸ್ಪತ್ರೆಗೆ ಬಂದ ತಿಮ್ಮರಾಜು ಅವರ ಕುಟುಂಬ ಸದಸ್ಯರು ಪುರಸಭೆ ಸದಸ್ಯರ ವಿರುದ್ಧ ಕಿರುಕುಳದ ಆರೋಪ ಮಾಡಿ ತನಿಖೆಗೆ ಆಗ್ರಹಿಸಿದರು. ಬಳಿಕ ನಗರ ಠಾಣೆ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ತೆರಳಿ ಎಫ್‌ಐಆರ್ ದಾಖಲಿಸುವಂತೆ ಪಟ್ಟು ಹಿಡಿದರು.

ಅಜ್ಜಿಗೂ ಹೃದಯಾಘಾತ: ಲೋಕಾಯುಕ್ತ ಪೊಲೀಸರಿಂದ ಮೊಮ್ಮಗ ಬಂಧನಕ್ಕೆ ಒಳಗಾದ ವಿಷಯ ತಿಳಿದ ತಿಮ್ಮರಾಜು ಅವರ ಅಜ್ಜಿ ಕೆಂಚಮ್ಮ (85) ಏ. 22ರಂದು ಹೊಸದುರ್ಗ ತಾಲ್ಲೂಕಿನ ಗರೀಂಬೀಳು ಗ್ರಾಮದಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದರು.

ಬೆಳಗಾವಿ: ಕಾಂಗ್ರೆಸ್ ರ‍್ಯಾಲಿ ನಾಳೆ

ಬೆಳಗಾವಿ: 'ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಏಪ್ರಿಲ್ 28ರಂದು ಇಲ್ಲಿನ ಸಿಪಿಇಡಿ ಮೈದಾನದಲ್ಲಿ ಎಐಸಿಸಿ ವತಿಯಿಂದ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಸಲಾಗುವುದು' ಎಂದು ಎಐಸಿಸಿ ಕಾರ್ಯದರ್ಶಿ ಗೋಪಿನಾಥ ಪಳನಿಯಪ್ಪನ್ ತಿಳಿಸಿದರು.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ, ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಹಲವು ನಾಯಕರು ಪಾಲ್ಗೊಳ್ಳುವರು' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಸಾಧಕರಿಗೆ 'ಹವ್ಯಕ ವಿಶೇಷ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಹವ್ಯಕ ಮಹಾಸಭಾವು 2024–25ನೇ ಸಾಲಿನ ವಾರ್ಷಿಕ ಹವ್ಯಕ ವಿಶೇಷ ಪ್ರಶಸ್ತಿಗಳನ್ನು ಶನಿವಾರ ಪ್ರಕಟಿಸಿದ್ದು, 'ಹವ್ಯಕ ವಿಭೂಷಣ' ಪ್ರಶಸ್ತಿಗೆ ಉದ್ಯಮಿಯೂ ಆಗಿರುವ ಸಮಾಜ ಸೇವಕ ಜಿ.ವಿ. ಭಟ್ ಗೋರೆ ಆಯ್ಕೆಯಾಗಿದ್ದಾರೆ.

'ಹವ್ಯಕ ಭೂಷಣ' ಪ್ರಶಸ್ತಿಗೆ ಭಾಷಾ ತಜ್ಞ ಪಾದೇಕಲ್ಲು ವಿಷ್ಣು ಭಟ್ಟ, ಶಿಕ್ಷಣ ತಜ್ಞ ಎಸ್.ಎನ್. ಹೆಗಡೆ ಹಾಗೂ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಪರಮೇಶ್ವರ ಹೆಗಡೆ ಆಯ್ಕೆಯಾಗಿದ್ದಾರೆ. 'ಹವ್ಯಕ ಶ್ರೀ' ಪ್ರಶಸ್ತಿಗೆ ಯಕ್ಷಗಾನ ಕಲಾವಿದ ಸಂಜಯ ಬೆಳೆಯೂರು, ನೃತ್ಯ ಕಲಾವಿದೆ ಕಾವ್ಯ ಜಿ. ರಾವ್, ಸಂಗೀತ ಕಲಾವಿದ ಕೆ.ಜೆ. ದಿಲೀಪ್ ಭಾಜನರಾಗಿದ್ದಾರೆ.

'ಹವ್ಯಕ ಸೇವಾಶ್ರೀ' ಪ್ರಶಸ್ತಿಗೆ 'ಹವ್ಯಕ ಮಾಸ ಪತ್ರಿಕೆ' ಸಂಚಾಲಕ ನಾರಾಯಣ ಭಟ್ ಹುಳೇಗಾರು ಆಯ್ಕೆಯಾಗಿದ್ದಾರೆ. ಮಲ್ಲೇಶ್ವರದ ಹವ್ಯಕ ಭವನದಲ್ಲಿ ಇದೇ ಭಾನುವಾರ ಬೆಳಿಗ್ಗೆ 10 ಗಂಟೆಯಿಂದ 82ನೇ ಹವ್ಯಕ ಸಂಸ್ಥಾಪನೋತ್ಸವ ನಡೆಯಲಿದ್ದು, ಸಂಜೆ 4 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ- ಎಂದು ಪ್ರಕಟಣೆ ತಿಳಿಸಿದೆ.

ಜಿ.ವಿ. ಭಟ್ ಗೋರೆ

ಪಾದೇಕಲ್ಲು ವಿಷ್ಣು ಭಟ್ಟ



ಎಸ್.ಎನ್. ಹೆಗಡೆ



ಪರಮೇಶ್ವರ ಹೆಗಡೆ

ಮಂಗನ ಕಾಯಿಲೆ: ಒಂದು ಸಾವು

ಹೊನ್ನಾವರ (ಉತ್ತರ ಕನ್ನಡ): ಮಂಗನಕಾಯಿಲೆಯಿಂದ (ಕೆಎಫ್‌ಡಿ) ಬಳಲುತ್ತಿದ್ದ ತಾಲ್ಲೂಕಿನ ಗ್ರಾಮವೊಂದರ ನಿವಾಸಿ ತಿಮ್ಮಣ್ಣ ಶಂಕರ ಹೆಗಡೆ (63) ಗುರುವಾರ ಮೃತಪಟ್ಟರು.

ತಿಮ್ಮಣ್ಣ ಹೆಗಡೆ ಅವರಿಗೆ ಮಂಗನಕಾಯಿಲೆ ಇರುವುದು ಏಪ್ರಿಲ್ 5ರಂದು ರಕ್ತ ಪರೀಕ್ಷೆ ಬಳಿಕ ದೃಢಪಟ್ಟಿತ್ತು. ಅವರನ್ನು ಮಣಿಪಾಲದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ತಾಲ್ಲೂಕಿನಲ್ಲಿ ಈ ವರ್ಷ ನಾಲ್ವರಲ್ಲಿ ಮಂಗನಕಾಯಿಲೆ ದೃಢಪಟ್ಟಿದ್ದು, ಉಳಿದ ಮೂವರು ಗುಣಮುಖರಾಗಿದ್ದಾರೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ • ಏಪ್ರಿಲ್ 27, 2025 ಪ್ರಜಾವಾಣಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹445
12 ಕ್ಕೆ	₹60
ಮೈಸೂರು	
100ಕ್ಕೆ	₹445

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹29400
ಎಸಿ	₹16800
ಆರ್‌ಪಿ	₹22750
ಆರ್‌ಸಿ	₹12690

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹300-611
ದ್ವಿತಳಿ (ಬಿ.ವಿ)
₹352-723

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಇಎಸ್‌ಐಸಿ: 15.43 ಲಕ್ಷ ಹೊಸ ಸದಸ್ಯರ ಸೇರ್ಪಡೆ

ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಿನಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮದಡಿ (ಇಎಸ್‌ಐಸಿ) ಹೊಸದಾಗಿ 15.43 ಲಕ್ಷ ಸದಸ್ಯರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಇದೇ ತಿಂಗಳಿನಲ್ಲಿ ಇಎಸ್‌ಐ ಯೋಜನೆಯಡಿ 23,526 ಕಂಪನಿಗಳು ಹೊಸದಾಗಿ ನೋಂದಣಿಯಾಗಿವೆ. ಹಾಗಾಗಿ, ಸಾಮಾಜಿಕ ಭದ್ರತಾ ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಸೇರ್ಪಡೆಗೊಳ್ಳಲು ಸಹಕಾರಿಯಾಗಿದೆ ಎಂದು ತಿಳಿಸಿದೆ.

ಸದ್ಯ ಒಟ್ಟು ಸದಸ್ಯರ ಸಂಖ್ಯೆ 2.97 ಕೋಟಿ ಆಗಿದೆ.

ಪ್ರೀತಿ ಮತ್ತು ಕೃತಜ್ಞತೆಗಳೊಂದಿಗೆ



ಹೊಸಹಟ್ಟಿ ಶ್ರೀ ನಾರಾಯಣಸ್ವಾಮಿ ಅವರಿಗೆ
ನಿಮ್ಮ ದಯೆಯನ್ನು ಯಾವಾಗಲೂ ಸ್ಮರಿಸುವವರು
ಪರಿಕ್ರಮ ಮಾನವೀಯ ಪ್ರತಿಷ್ಠಾನದ ಮಕ್ಕಳು

19ನೇ ವರ್ಷದ ಪುಣ್ಯ ತಿಥಿ | 3ನೇ ವರ್ಷದ ಪುಣ್ಯ ತಿಥಿ

ದಿ|| ಬಿ.ಜಯರಾಂ
DOD: 11.03.2006
ಮಾಜಿ ನಗರಸಭಾ ಸದಸ್ಯರು, ಮಲ್ಲೇಶ್ವರಂ

ರಾಮಕ್ಕ
ಲೇಟ್ ಬಿ. ಜಯರಾಂ ರವರ ಧರ್ಮಪತ್ನಿ
DOD: 27.04.2022

ಜೀವಾತ್ಮವು ಪರಮಾತ್ಮನಲ್ಲಿ ವಿಲೀನವಾಗುವುದೇ ಜೀವನದ ಸಾಕ್ಷಾತ್ಕಾರ
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ
ಕುಟುಂಬ ವರ್ಗದವರು
ದೂರವಾಣಿ: 9845091138, 9845344442

ವಹಿವಾಟು ಕುಸಿತ: ಸಣ್ಣ ಆಭರಣ ಅಂಗಡಿಗಳಿಗೆ ಬಾಗಿಲು ಮುಚ್ಚುವ ಆತಂಕ

ಮಧ್ಯಮ ವರ್ಗಕ್ಕೆ ಚಿನ್ನ ಭಾರ

ನವದೆಹಲಿ (ಪಿಟಿಐ): ಚಿನ್ನದ ಧಾರಣೆಯು ಚಾರಿತ್ರಿಕ ದಾಖಲೆ ಮುಟ್ಟಿರುವುದು ಮಾರುಕಟ್ಟೆಯ ಮೇಲಷ್ಟೇ ಪರಿಣಾಮ ಬೀರಿಲ್ಲ. ದೇಶದ ಮಧ್ಯಮ ವರ್ಗದ ಜನರಿಗೂ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಅದರಲ್ಲೂ ಮಹಿಳೆಯರು ಸಂಕಷ್ಟ ಅನುಭವಿಸುವಂತಾಗಿದೆ ಎಂದು ಚಿನಿವಾರ ಪೇಟೆ ತಜ್ಞರು ಹೇಳಿದ್ದಾರೆ.

ಏಪ್ರಿಲ್ 30ಕ್ಕೆ ಅಕ್ಷಯ ತೃತೀಯ ಹಬ್ಬವಿದೆ. ಅಲ್ಲದೆ, ಮದುವೆ ಋತು ಆರಂಭಗೊಂಡಿದ್ದು, ಮುಂದಿನ ತಿಂಗಳ ಅಂತ್ಯದವರೆಗೆ ನಡೆಯಲಿದೆ. ಈ ವೇಳೆ ಜನರು ಬಂಗಾರು ಖರೀದಿಸುವುದು ವಾಡಿಕೆ. ಆದರೆ, ನಿರೀಕ್ಷೆಗೂ ಮೀರಿ ಬೆಲೆ ಏರಿಕೆಯಾಗಿರುವುದು ಗ್ರಾಹಕರನ್ನು ಸಂಕಷ್ಟದ ಸುಳಿಗೆ ದೂಡಿದೆ ಎಂದು ಹೇಳಿದ್ದಾರೆ.

ಈ ವಾರದ ಆರಂಭದಲ್ಲಿ 10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1 ಲಕ್ಷ ದಾಟಿತ್ತು. ಆದರೆ, ಚೀನಾ ಮತ್ತು ಅಮೆರಿಕದ ನಡುವೆ ತಲೆದೋರಿದ್ದ ಸುಂಕ ಸಮರ ಸ್ವಲ್ಪಮಟ್ಟಿಗೆ ತಣ್ಣಗಾಗುವ ಲಕ್ಷಣ ಗೋಚರಿಸಿದೆ.

ಮಹಿಳೆಯರ ಬಳಿ 24 ಸಾವಿರ ಟನ್ ಚಿನ್ನ

ದೇಶದಲ್ಲಿ ಚಿನ್ನವನ್ನು ಆಭರಣದ ದೃಷ್ಟಿಯಲ್ಲಷ್ಟೇ ನೋಡುವುದಿಲ್ಲ. ಅತ್ಯುತ್ತಮ ಹೂಡಿಕೆಯಾಗಿಯೂ ಗ್ರಾಹಕರು ನೋಡುತ್ತಾರೆ. ಅಲ್ಲದೆ, ಆಪತ್ಕಾಲದಲ್ಲಿ ಚಿನ್ನವು ನೆರವಿಗೆ ಬರುವುದರಿಂದ ಭಾರತೀಯ ಕುಟುಂಬಗಳಲ್ಲಿ ಚಿನ್ನ ಖರೀದಿ ಪ್ರಮಾಣ ಹೆಚ್ಚಿದೆ.

ಭಾರತ ಸೇರಿ ವಿಶ್ವದ ಬಹುತೇಕ ದೇಶಗಳ ಜನರು ಚಿನ್ನದ ಮೇಲೆ ಹೂಡಿಕೆ ಮಾಡುತ್ತಿರುವ ಪ್ರಮಾಣ ಹೆಚ್ಚುತ್ತಿದೆ. ವಿಶ್ವ ಚಿನ್ನ ಸಮಿತಿಯ ಮಾಹಿತಿ ಪ್ರಕಾರ, ಭಾರತದ ಮಹಿಳೆಯರ ಬಳಿ 24 ಸಾವಿರ ಟನ್‌ಗೂ ಹೆಚ್ಚು ಬಂಗಾರವಿದೆ. ಇದು ವಿಶ್ವದ ಒಟ್ಟು ಚಿನ್ನದ ಶೇ 11ರಷ್ಟು ಆಗಿದೆ.

ಮತ್ತೊಂದೆಡೆ ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತದ ಸುಳಿವು ನೀಡಿದ್ದರಿಂದ ಹಳದಿ ಲೋಹದ ಬೆಲೆ ಇಳಿಕೆ ಕಂಡಿದೆ.

ಗುರುವಾರ 10 ಗ್ರಾಂ ಚಿನ್ನದ ದರ ₹99,400ಕ್ಕೆ ಇಳಿದಿದೆ. ಆದರೆ, ಈ ಬೆಳವಣಿಗೆಯು ಮಧ್ಯಮ ವರ್ಗದ ಜನರಿಗೆ ಹೆಚ್ಚಿನ ಖುಷಿಯನ್ನು ನೀಡಿಲ್ಲ.

‘ನವೆಂಬರ್‌ಗೆ ನನ್ನ ಪುತ್ರಿಯ ಮದುವೆ ನಿಗದಿಯಾಗಿದೆ. ನಿರೀಕ್ಷೆಗೂ ಮೀರಿ ಚಿನ್ನದ ಬೆಲೆ ಏರುಗತಿಯಾಗುತ್ತದೆ. ಹೀಗಿದ್ದಾಗ ಚಿನ್ನ ಖರೀದಿಸುವುದು ಹೇಗೆ?’ ಎಂದು ಪ್ರಶ್ನಿಸುತ್ತಾರೆ ನೋಯ್ಡಾದ ಗೃಹಿಣಿ ರೂಪಾ.

ಹಬ್ಬದ ಸಂದರ್ಭದಲ್ಲಿ ಮತ್ತು ಕುಟುಂಬದ ಶುಭ ಕಾರ್ಯಕ್ರಮಗಳ ವೇಳೆ ಮಹಿಳೆಯರು ಚಿನ್ನ ಖರೀದಿಸುವುದು ವಾಡಿಕೆ. ಬೆಲೆ ಏರಿಕೆ ಹೊರತಾಗಿಯೂ ಚಿನ್ನಾಭರಣ ಖರೀದಿಸದ ಹೊರತು ಮಂಗಳಕರ ಕಾರ್ಯಗಳನ್ನು ಖುಷಿಯಿಂದ ಆಚರಿಸುವುದು ಕಷ್ಟಕರ ಎಂಬುದು ಬಹುತೇಕ ಮಹಿಳೆಯರ ಅನಿಸಿಕೆ.

ಕಳೆದ ವರ್ಷದ ಡಿಸೆಂಬರ್‌ನಿಂದ ಇಲ್ಲಿಯವರೆಗೆ 10 ಗ್ರಾಂ ಚಿನ್ನದ ಬೆಲೆಯು ₹22,650 ಹೆಚ್ಚಳವಾಗಿದೆ (ಶೇ 29ರಷ್ಟು). ಷೇರುಪೇಟೆಯ ಪರಿಣತರ ಪ್ರಕಾರ, ಷೇರು ಮತ್ತು ಬಾಂಡ್‌ಗಳಲ್ಲಿ ಹೂಡಿಕೆಗಿಂತಲೂ ಚಿನ್ನದ ಮೇಲಿನ ಹೂಡಿಕೆಯು ಹೆಚ್ಚು ಲಾಭ ತಂದುಕೊಟ್ಟಿದೆ.

ಬೆಲೆ ಏರಿಕೆಯು ಖರೀದಿ ಮೇಲೆ ಪರಿಣಾಮ ಬೀರಿದೆ. ಚಿನ್ನಾಭರಣ ಉದ್ಯಮಕ್ಕೂ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಆಭರಣ ಮಳಿಗೆಗೆ ಗ್ರಾಹಕರು ಭೇಟಿ ನೀಡುತ್ತಾರೆ. ಆದರೆ, ದರ ಹೆಚ್ಚಳದಿಂದ ಅವರಲ್ಲಿ ಖರೀದಿ ಉತ್ಸಾಹ ಕಂಡುಬರುವುದಿಲ್ಲ ಎಂದು ಆಭರಣ ಮಳಿಗೆಯ ಮಾಲೀಕರು ಹೇಳುತ್ತಾರೆ.

‘ಈ ಮೊದಲು ಅಂಗಡಿ ಭೇಟಿ ನೀಡುತ್ತಿದ್ದ ಗ್ರಾಹಕರು ಆಭರಣಗಳ ವಿನ್ಯಾಸದ ಬಗ್ಗೆ ಕೇಳುತ್ತಿದ್ದರು. ಈಗ ಬೆಲೆ ಕೇಳಿ ವಾಪಸ್ ಹೋಗುತ್ತಿದ್ದಾರೆ. ಬೆಲೆ ಹೀಗೆಯೇ ಮುಂದುವರಿದರೆ ಸಣ್ಣ ಆಭರಣಗಳ ಅಂಗಡಿಗಳು ಬಾಗಿಲು ಮುಚ್ಚುವ ಸ್ಥಿತಿ ಸೃಷ್ಟಿಯಾಗಲಿದೆ. ಅಲ್ಲದೆ, ವ್ಯವಹಾರ ಕೂಡ ಇಳಿಕೆಯಾಗಲಿದೆ. ಈ ಉದ್ಯಮವನ್ನು ಅವಲಂಬಿಸಿರುವ ಲಕ್ಷಾಂತರ ಕುಟುಂಬಗಳ ಬದುಕು ಬೀದಿಗೆ ಬೀಳಲಿದೆ’ ಎಂದು ದೆಹಲಿಯ ಮಯೂರ್ ವಿಹಾರ್‌ನ ಊರ್ಮಿಳಾ ಆಭರಣ ಅಂಗಡಿಯ ಮಾಲೀಕ ಸೋನು ಹೇಳುತ್ತಾರೆ.

17.1 ಕೋಟಿ ಜನ ನಿರಾಳ: ವಿಶ್ವ ಬ್ಯಾಂಕ್ ವರದಿ

ಕಡು ಬಡತನ ತಗ್ಗಿಸಿದ ಭಾರತ

ನ್ಯೂಯಾರ್ಕ್ (ಪಿಟಿಐ): 2011-12ರಿಂದ 2022-23ರ ನಡುವಿನ ಅವಧಿಯಲ್ಲಿ ಭಾರತವು 17.1 ಕೋಟಿ ಜನರನ್ನು ಕಡು ಬಡತನ ರೇಖೆಯಿಂದ ಹೊರತರುವಲ್ಲಿ ಯಶಸ್ವಿಯಾಗಿದೆ ಎಂದು ವಿಶ್ವ ಬ್ಯಾಂಕ್ ತಿಳಿಸಿದೆ.

ಜೀವನ ಸಾಗಿಸಲು ದಿನವೊಂದಕ್ಕೆ 2.15 ಡಾಲರ್‌ಗಿಂತ (₹183) ಕಡಿಮೆ ಹಣದ ಹೊಂದಿದವರನ್ನು ಕಡು ಬಡವರು ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಈ ಒಂದು ದಶಕದ ಅವಧಿಯಲ್ಲಿ ಕಡು ಬಡತನದ ಪ್ರಮಾಣ ಕಡಿಮೆಯಾಗಿದೆ.

2011-12ರಲ್ಲಿ ಶೇ 16.2ರಷ್ಟಿದ್ದ ಕಡು ಬಡತನವು, 2022-23ರಲ್ಲಿ ಶೇ 2.3ಕ್ಕೆ ತಗ್ಗಿದೆ ಎಂದು ಭಾರತದ ಬಡತನ ಮತ್ತು ಸಮಾನತೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಅಧ್ಯಯನ ವರದಿಯು ವಿವರಿಸಿದೆ.

ಇದೇ ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ 18.4ರಷ್ಟಿದ್ದ ಕಡು ಬಡತನವು ಶೇ 2.8ಕ್ಕೆ ಇಳಿದಿದೆ. ನಗರ ಪ್ರದೇಶದಲ್ಲಿ ಶೇ 10.7ರಿಂದ ಶೇ 1.1ಕ್ಕೆ ತಗ್ಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶದ ನಡುವಿನ ಅಂತರವು ಶೇ 7.7ರಿಂದ ಶೇ 1.7ಕ್ಕೆ ಇಳಿದಿದೆ ಎಂದು ಹೇಳಿದೆ.

ಅಲ್ಲದೆ, ಭಾರತವು ಕಡಿಮೆ ಮತ್ತು ಮಧ್ಯಮ ಆದಾಯ ಹೊಂದಿದ ರಾಷ್ಟ್ರಗಳ (ಎಲ್‌ಎಂಐಸಿ) ಪಟ್ಟಿಗೆ ಸೇರ್ಪಡೆಯಾಗಿದೆ. ಜೀವನ ಸಾಗಿಸಲು ದಿನವೊಂದಕ್ಕೆ 3.65 ಡಾಲರ್‌ಗಿಂತ (₹311) ಕಡಿಮೆ ಹಣ ಹೊಂದಿದ ಬಡವರ ಸಂಖ್ಯೆಯೂ ಕಡಿಮೆಯಾಗಿದೆ. ಈ ಬಡತನ ರೇಖೆಯಡಿ ಇದ್ದ 37.8 ಕೋಟಿ ಜನರು ಹೊರ ಬಂದಿದ್ದಾರೆ ಎಂದು ತಿಳಿಸಿದೆ.

ಒಂದು ದಶಕದ ಅವಧಿಯಲ್ಲಿ ಗ್ರಾಮೀಣ ಬಡತನ ಪ್ರಮಾಣವು ಶೇ 69ರಿಂದ ಶೇ 3.25ಕ್ಕೆ ಇಳಿಕೆಯಾಗಿ ದ್ದರೆ, ನಗರ ಬಡತನ ಪ್ರಮಾಣವು ಶೇ 43.5ರಿಂದ ಶೇ 17.2ಕ್ಕೆ ತಗ್ಗಿದೆ ಎಂದು ತಿಳಿಸಿದೆ.

2011-12ರಲ್ಲಿ ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದಲ್ಲಿ ಅತಿಹೆಚ್ಚು ಕಡು ಬಡವರಿದ್ದರು. ದೇಶದ ಒಟ್ಟು ಕಡು ಬಡವರ ಪೈಕಿ ಈ ಐದು ರಾಜ್ಯಗಳ ಪಾಲು ಶೇ 65ರಷ್ಟಿತ್ತು. 2022-23ರ ವೇಳೆಗೆ ಇಳಿಕೆಯಾಗಿದೆ ಎಂದು ಹೇಳಿದೆ. ಒಂದು ದಶಕದ ಅವಧಿಯಲ್ಲಿ ಯುವಜನರ ನಿರುದ್ಯೋಗ ಪ್ರಮಾಣವು ಶೇ 13.3ರಿಂದ ಶೇ 29ಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಅನಂತ್ ಅಂಬಾನಿ

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಅವರ ಪುತ್ರ ಅನಂತ್ ಅಂಬಾನಿ ಅವರನ್ನು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯ ನಿರ್ವಾಹಕ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಮೇ 1ರಿಂದ ಈ ನೇಮಕ ಜಾರಿಗೆ ಬರಲಿದ್ದು, ಮುಂದಿನ ಐದು ವರ್ಷದವರೆಗೆ ಅವರು ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಇತ್ತೀಚೆಗೆ ನಡೆದ ಕಂಪನಿಯು ಆಡಳಿತ ಮಂಡಳಿ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಂಡಿದ್ದು, ಕಂಪನಿಯ ಮಾನವ ಸಂಪನ್ಮೂಲ ವಿಭಾಗ, ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಗೆ ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದೆ.

ಸದ್ಯ ಅನಂತ್ ಅವರು ಕಂಪನಿಯ ಕಾರ್ಯ ನಿರ್ವಾಹಕೇತರ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದೆ.

ಸುದ್ದಿ 2 ನಿಮಿಷ

ಪ್ರಯಾಣಿಕರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಿ: ಡಿಜಿಸಿಎ ಸೂಚನೆ

ನವದೆಹಲಿ (ಪಿಟಿಐ): ಪಾಕಿಸ್ತಾನವು ತನ್ನ ವಾಯು ಪ್ರದೇಶದಲ್ಲಿ ಭಾರತದ ವಿಮಾನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿದೆ. ಇದರಿಂದ ಅಂತರ ರಾಷ್ಟ್ರೀಯ ವಿಮಾನ ಪ್ರಯಾಣದಲ್ಲಿ ತೊಂದರೆಯಾಗುವ ಸಾಧ್ಯತೆಯಿದೆ. ಈ ಬಗ್ಗೆ ಪ್ರಯಾಣಿಕರಿಗೆ ವಿಮಾನಯಾನ ಕಂಪನಿಗಳು ಮಾಹಿತಿ ನೀಡಬೇಕಿದೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಸೂಚಿಸಿದೆ.

ಜೊತೆಗೆ, ನಿಗದಿತ ಸ್ಥಳಗಳಿಗೆ ವಿಮಾನಗಳ ಹಾರಾಟವು ದೀರ್ಘ ಸಮಯ ಹಿಡಿಯಲಿದೆ. ಇದರಿಂದ ವಿಮಾನಗಳಲ್ಲಿ ಪ್ರಯಾಣಿಕರಿಗೆ ಆಹಾರ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಮುಂಜಾಗ್ರತೆ ವಹಿಸಬೇಕಿದೆ ಎಂದು ಹೇಳಿದೆ.

ಪ್ರಯಾಣಿಕರಿಗೆ ವೈದ್ಯಕೀಯ ಸೇವೆಯಲ್ಲೂ ತೊಂದರೆಯಾಗಬಾರದು. ಗ್ರಾಹಕರ ಸೇವೆಯಲ್ಲಿ ಲೋಪವಾಗಬಾರದು. ಸಂಬಂಧಪಟ್ಟ ಇಲಾಖೆಗಳ ನಡುವೆ ಸಮನ್ವಯದಿಂದ ಕೆಲಸ ನಿರ್ವಹಿಸಬೇಕಿದೆ ಎಂದು ಹೇಳಿದೆ.

ಪ್ರಯಾಣಿಕರಿಗೆ ಪ್ರಯಾಣ ಮಾರ್ಗ ಕುರಿತು ಸ್ಪಷ್ಟ ಮಾಹಿತಿ ನೀಡಬೇಕು. ನಿಗದಿತ ಸ್ಥಳ ತಲುಪಲು ಎಷ್ಟು ಸಮಯ ಹಿಡಿಯಲಿದೆ ಎಂಬ ಬಗ್ಗೆಯೂ ತಿಳಿಸಬೇಕಿದೆ. ತಾಂತ್ರಿಕ ನಿಲುಗಡೆ ಮಾಡುವ ನಿಲ್ದಾಣಗಳ ಬಗ್ಗೆ ಮಾಹಿತಿ ನೀಡಬೇಕಿದೆ. ಚೆಕ್‌ಇನ್, ಬೋರ್ಡಿಂಗ್ ದ್ವಾರದ ಬಳಿ ಅಥವಾ ಎಸ್‌ಎಂಎಸ್, ಇ-ಮೇಲ್ ಮೂಲಕ ಮಾಹಿತಿಯನ್ನು ರವಾನಿಸಬೇಕಿದೆ ಎಂದು ಸೂಚಿಸಿದೆ.

ರಿಲಯನ್ಸ್ ಕಂಪನಿಗೆ ಶೇ 2.4ರಷ್ಟು ಲಾಭ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು, ₹19,407 ಕೋಟಿ ನಿವ್ವಳ ಲಾಭ ಗಳಿಸಿದೆ.

2023-24ನೇ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ನಿವ್ವಳ ಲಾಭದಲ್ಲಿ ಶೇ 2.4ರಷ್ಟು ಹೆಚ್ಚಳವಾಗಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯು ₹2.88 ಲಕ್ಷ ಕೋಟಿ ವರಮಾನ ಗಳಿಸಿದೆ. ಒಟ್ಟಾರೆ ವರಮಾನದಲ್ಲಿ ಶೇ 8.8ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

ಅಲ್ಲದೆ, ನಿವ್ವಳ ಮೌಲ್ಯ ₹10 ಲಕ್ಷ ಕೋಟಿ ದಾಟಿದ ದೇಶದ ಮೊದಲ ಕಂಪನಿ ಎಂಬ ಹೆಗ್ಗಳಿಕೆಗೆ ರಿಲಯನ್ಸ್ ಇಂಡಸ್ಟ್ರೀಸ್ ಭಾಜನವಾಗಿದೆ. ಪ್ರತಿ ಷೇರಿಗೆ ₹5.50 ಲಾಭಾಂಶ ನೀಡಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ. ಅಲ್ಲದೆ, ಪರಿವರ್ತಿಸಲಾಗದ ಸಾಲಪತ್ರಗಳ (ಎನ್‌ಸಿಡಿ) ವಿತರಣೆ ಮೂಲಕ ₹25 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ.

‘ಇಂಧನ ಮಾರುಕಟ್ಟೆಯಲ್ಲಿನ ಏರಿಳಿತದ ಹೊರತಾಗಿಯೂ ತೈಲದಿಂದ ರಾಸಾಯನಿಕ ವ್ಯವಹಾರದಲ್ಲಿ ಸ್ಥಿರವಾದ ಫಲಿತಾಂಶ ದಾಖಲಿಸಲಾಗಿದೆ. ಸಂಯೋಜಿತ ವ್ಯವಹಾರಗಳ ಕಾರ್ಯಾಚರಣೆಯು ಸದೃಢವಾಗಿದೆ. ಇದೇ ಲಾಭದ ಪ್ರಮಾಣ ಏರಿಕೆಗೆ ಕಾರಣ’ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

ಬೆಂಗಳೂರು ವೈಟ್ ಫೀಲ್ಡ್ ಪ್ರದೇಶದಲ್ಲಿ 3-4ವರ್ಷ ಅನುಭವ ಇರುವ ಡಿಪ್ಲೋಮ ಸಿವಿಲ್ ಸೈಟ್ ಇಂಜಿನಿಯರ್ ಬೇಕಾಗಿದ್ದಾರೆ. ಸಂಪರ್ಕಿಸಿ: 9845079762, ಇಮೇಲ್: anandk122@outlook.com

General

ಜಿಲ್ಲಾ ತರಬೇತಿ ಸಂಸ್ಥೆ ಬೆಂಗಳೂರು ಬನಶಂಕರಿ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಡೇಟಾ ಎಂಟ್ರಿ ಆಪರೇಟರ್ (B.Com Tally Nudi) ಹಾಗು ಡಿ ಗ್ರೂಪ್ (SSLC) ಬೇಕಾಗಿದ್ದಾರೆ. ಸಂಪರ್ಕಿಸಿ- 9481232316, 9148983520.

Drivers

ಉಡುಪಿಯ ಗ್ರಾನೈಟ್ ಕಾರ್ಖಾನೆಯಲ್ಲಿ ಕೆಲಸ ಮಾಡಲು ಘನ ಮತ್ತು ಲಘು ವಾಹನ ಡ್ರೈವರ್ ಗಳು ಬೇಕಾಗಿದ್ದಾರೆ.ಉತ್ತಮ ವೇತನ, ಊಟ ಹಾಗೂ ವಸತಿ ಸೌಲಭ್ಯವಿದೆ. ಸಂಪರ್ಕಿಸಿ: 7338687922, 7338687921

ಸಣ್ಣ ಕುಟುಂಬಕ್ಕೆ ಚಾಲಕ ಮತ್ತು ಅಡುಗೆ ಕೆಲಸ ಮಾಡಲು ಗಂಡ ಮತ್ತು ಹೆಂಡತಿ ತಂಡ ಬೇಕಾಗಿದ್ದಾರೆ. ಉತ್ತಮ ಸಂಬಳದ ಊಟ ಮತ್ತು ವಸತಿ 9741900909 ಸಂಪರ್ಕಿಸಿ.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mysore

SALE MUDA approved sites ready for registration Rs. 3700/-. Well developed layout, Bandipalya Village, Mysore. Brokers excuse, buyers Contact- 7619606688.

ವ್ಯಾಪಾರ

Business to Business

Shares

NEELKANT OFFERS Fixed Returns. Minimum Investment Rs.25,000/- with 8% Fixed Returns Month on Month Irrespective of the Market Status. Call 9433383338

ವೈವಾಹಿಕ

Grooms Wanted

Brahmin

ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಧುವಿನ ವಯಸ್ಸು 24, PUC ಕಲಿತಿರುವ/ ವಯಸ್ಸು 28, SSLC / ವಯಸ್ಸು 30, ಡಿಗ್ರಿ / ವಯಸ್ಸು 32, ಟೀಚರ್/ ವಯಸ್ಸು 35, SSLC /ವಯಸ್ಸು 39, PUC /ವಯಸ್ಸು 43, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. (ವಿವಾಹ ವೇದಿಕೆ)
Ph: 8792731562

ಪ್ರವಾಸ

Travel

ಪ್ರತಿ ಶುಕ್ರವಾರದಿಂದ 3 ದಿನಗಳ ಪ್ರವಾಸ 6.6.2025 ಕೋನಾರ್ಕ ಭುವನೇಶ್ವರ್ ಗಾಯಿತ್ರಿ ಶಕ್ತಿಪೀಠ ಪುರಿಜಗನ್ನಾಥ್ ವಿಮಾನದಲ್ಲಿ ಪ್ರಯಾಣ. 9.6.2025 10ದಿನಗಳು ನೈಮಿಶಾರಣ್ಯ ಅಯೋಧ್ಯ ಪ್ರಯಾಗ್‌ರಾಜ್ ಗಯಾ,ಕಾಶಿ ವಾರಣಾಸಿ 30.5.2025ಚಾರ್‌ಧಾಮ್ ಪ್ರವಾಸ 28.6.2025 13ದಿನಗಳ ವೈಷ್ಣೋದೇವಿ ಕಾಶ್ಮೀರ್ ಗುಲ್ಮಾರ್ಗ ಸೋನಾಮಾರ್ಗ ಅಮರ್ನಾಥ್ ಅಮೃತ್‌ಸರ್ ಕುರುಕ್ಷೇತ್ರ ಸಂಪರ್ಕಿಸಿ ವಿಷ್ಣು ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು70 9342287551 9482239855

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಶಾಹಿದ್ ರಜಯೀ ಬಂದರಿನಲ್ಲಿ ಶನಿವಾರ ಸ್ಫೋಟದಿಂದ ಕಾಣಿಸಿಕೊಂಡ ದಟ್ಟ ಹೊಗೆ —ಎಎಫ್‌ಪಿ ಚಿತ್ರ

ಇರಾನ್ ಬಂದರಿನಲ್ಲಿ ಭಾರಿ ಸ್ಫೋಟ: 5 ಸಾವು

ಟೆಹರಾನ್ (ಎಎಫ್‌ಪಿ/ರಾಯಿಟರ್ಸ್): ಇರಾನ್‌ನ ದಕ್ಷಿಣ ಭಾಗದಲ್ಲಿರುವ ಬಂದರ್ ಅಬ್ಬಾಸ್ ನಗರದ ಶಾಹಿದ್ ರಜಯೀ ಬಂದರಿನಲ್ಲಿ ಶನಿವಾರ ಭಾರಿ ಸ್ಫೋಟ ಸಂಭವಿಸಿದ್ದು, ಐವರು ಮೃತಪಟ್ಟಿದ್ದಾರೆ. 700ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಶಾಹಿದ್ ರಜಯೀ, ಇರಾನ್‌ನ ಅತ್ಯಂತ ದೊಡ್ಡ ಬಂದರು. ರಾಸಾಯನಿಕಗಳಿದ್ದ ಕಂಟೇನರ್‌ಗಳನ್ನು ಸಂಗ್ರಹಿಸಿದ್ದ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದೆ. ‘ಈ ಪ್ರದೇಶದಲ್ಲಿ ಸಣ್ಣ ಬೆಂಕಿ ಕಾಣಿಸಿಕೊಂಡಿತ್ತು, ಬಳಿಕ ಕಂಟೇನರ್‌ಗಳಿಗೆ ಬೆಂಕಿ ವ್ಯಾಪಿಸಿ, ಸ್ಫೋಟ ಸಂಭವಿಸಿದೆ’ ಎಂದು ಬಂದರಿನ ಅಧಿಕಾರಿಗಳು ಹೇಳಿದ್ದಾರೆ.

ಸ್ಫೋಟದ ತೀವ್ರತೆ ಎಷ್ಟಿತ್ತೆಂದರೆ, ಸುಮಾರು 50 ಕಿ.ಮೀ ದೂರದವರೆಗೆ ಪರಿಣಾಮ ಕಾಣಿಸಿಕೊಂಡಿದೆ. ಭೂಮಿ ನಡುಗಿದ ಅನುಭವವಾಗಿದೆ. ಬಂದರು ಪ್ರದೇಶದಲ್ಲಿದ್ದ ಕಟ್ಟಡಗಳ ಕಿಟಕಿ ಗಾಜುಗಳು ಒಡೆದಿವೆ. ಬಂದರಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಮತ್ತು ಸಮೀಪದ ರಸ್ತೆಗಳಲ್ಲಿದ್ದವರು ಗಾಯಗೊಂಡಿದ್ದಾರೆ.

‘ಬಂದರ್ ಅಬ್ಬಾಸ್ ತೈಲ ಘಟಕಗಳಿಗೆ ಯಾವುದೇ ತೊಂದರೆಯಾಗಿಲ್ಲ. ಈ ಘಟಕಗಳು ತಡೆಯಿಲ್ಲದೆ ಕಾರ್ಯನಿರ್ವಹಿಸುತ್ತಿವೆ’ ಎಂದು ಇರಾನ್‌ನ ಸರ್ಕಾರಿ ತೈಲ ಉತ್ಪನ್ನ ವಿತರಣಾ ಕಂಪನಿ ಹೇಳಿದೆ. ಇರಾನ್‌ನ ಆಂತರಿಕ ಸಚಿವಾಲಯವು ಘಟನೆ ಬಗ್ಗೆ ತನಿಖೆಗೆ ಆದೇಶಿಸಿದೆ.

19 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಣೆ: ಆಲಿಕಲ್ಲು ಮಳೆ ಸಾಧ್ಯತೆ

ಗುಡುಗು ಸಹಿತ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಒಂದು ವಾರ ಗುಡುಗು ಸಹಿತ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಭಾನುವಾರ 19 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಗುಡುಗು ಸಹಿತ ಮಳೆ ಮುಂದುವರಿಯುವ ಸಂಭವವಿದೆ. ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ ಹಾಗೂ ಗದಗ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ (ಗಂಟೆಗೆ 50ರಿಂದ 60 ಕಿ.ಮೀ. ವೇಗ) ಮಳೆಯಾಗುವ ಸಾಧ್ಯತೆಯಿದೆ. ಇಲ್ಲಿ ಆಲಿಕಲ್ಲು ಬೀಳುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ವಿಜಯನಗರ, ದಾವಣಗೆರೆ, ಚಾಮರಾಜನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ (ಗಂಟೆಗೆ 40ರಿಂದ 50 ಕಿ.ಮೀ. ವೇಗ) ಸಾಧಾರಣ ಮಳೆಯಾಗುವ ಸಂಭವವಿದೆ.

ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ, ಉತ್ತರ ಹಾಗೂ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳ ಕೆಲವೆಡೆ ಮುಂದಿನ ಒಂದು ವಾರ ಮಳೆಯಾಗುವ ಸಾಧ್ಯತೆಯಿದ್ದು, ಇದೇ 30ರಂದು 26 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

ಮೇ ಮೊದಲ ವಾರದಲ್ಲಿ ಮಳೆ ಹೆಚ್ಚಳವಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಸಿಡಿಲು ಬಡಿದು ಮಹಿಳೆ, ಜಾನುವಾರು ಸಾವು

ಹುಬ್ಬಳ್ಳಿ/ಮಂಗಳೂರು/ಮಡಿಕೇರಿ: ಬಾಗಲಕೋಟೆ ತಾಲ್ಲೂಕಿನ ಬೊಡನಾಯಕನದಿನ್ನಿಯಲ್ಲಿ ಶುಕ್ರವಾರ ಸಂಜೆ ಸಿಡಿಲು ಬಡಿದು ಭಾರತಿ (41) ಎಂಬುವರು ಮೃತಪಟ್ಟಿದ್ದಾರೆ. ಹೊಲದ ಕೆಲಸ ಮುಗಿಸಿ, ಮರಳುತ್ತಿದ್ದ ವೇಳೆ ಸಿಡಿಲು ಬಡಿದಿದೆ. ಬಾಗಲಕೋಟೆ ನಗರ ಸೇರಿ ತಾಲ್ಲೂಕಿನ ವಿವಿಧೆಡೆ ಗುಡುಗು, ಸಿಡಿಲು ಸಹಿತ ಮಳೆಯಾಯಿತು.

ಗದಗ ಜಿಲ್ಲೆಯ ಗಜೇಂದ್ರಗಡ ಸಮೀಪದ ಇಟಗಿ ಗ್ರಾಮದ ಹೊಲದಲ್ಲಿ ಶುಕ್ರವಾರ ರಾತ್ರಿ ಸಿಡಿಲು ಬಡಿದು 8 ಆಡು ಮತ್ತು 4 ಕುರಿಗಳು ಮೃತಪಟ್ಟಿವೆ. 6 ಕುರಿಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮಳೆಯಾಗಿದೆ. ಕಂಪ್ಲಿ ತಾಲ್ಲೂಕಿನ ಸೋಮಲಾಪುರ ಗ್ರಾಮದಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದ್ದು, ಕೊಯ್ಲಿಗೆ ಸಿದ್ಧವಾಗಿದ್ದ ಹಿಂಗಾರು ಭತ್ತದ ಕಾಳು ಮಣ್ಣು ಪಾಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಶನಿವಾರ ಸಂಜೆ ಗುಡುಗು, ಸಿಡಿಲಿನೊಂದಿಗೆ ಭಾರಿ ಮಳೆಯಾಗಿದೆ. ಪುತ್ತೂರು, ಕಡಬ ತಾಲ್ಲೂಕಿನ ಉಪ್ಪಿನಂಗಡಿ, ಕೊಯಿಲ, ಆಲಂಕಾರು, ನೆಲ್ಯಾಡಿ, ಸುಳ್ಯ ತಾಲ್ಲೂಕಿನ ಬಳ್ಪ, ಬೆಳ್ತಂಗಡಿ ತಾಲ್ಲೂಕಿನ ಕಡಿರುದ್ಯಾವರ, ಮಡಂತ್ಯಾರ್, ನೆರಿಯ, ಕಕ್ಕಿಂಜೆ, ಬಂದಾರು ಪರಿಸರದಲ್ಲಿ ಬಿರುಸಿನ ಮಳೆ ಸುರಿಯಿತು.

ಕೊಡಗು ಜಿಲ್ಲೆಯ ನಾಪೋಕ್ಲು ಹೋಬಳಿ ವ್ಯಾಪ್ತಿಯಲ್ಲಿ ಶನಿವಾರ ಬಿರುಸಿನ ಮಳೆ ಸುರಿಯಿತು. ಸುಮಾರು 45 ನಿಮಿಷಗಳ ಕಾಲ ಮಳೆಯಾಯಿತು. ಸಿದ್ದಾಪುರದಲ್ಲಿ ಹಗುರ ಮಳೆ ಸುರಿದಿದ್ದು, ಬಿಸಿಲ ಬೇಗೆಯಿಂದ ಬಸವಳಿದಿದ್ದ ಜನರು ಹರ್ಷಗೊಂಡಿದ್ದಾರೆ.

ಹೆಚ್ಚಿದ ಬಿಸಿಲ ಧಗೆ

ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಬಿಸಿಲು-ಮಳೆಯಿಂದಾಗಿ ಧಗೆ ಹೆಚ್ಚಾಗಿದೆ. ಆಗಾಗ, ಬಿಸಿ ಗಾಳಿ ಕೂಡ ಕಾಣಿಸಿಕೊಳ್ಳುತ್ತಿದೆ. ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (41.5 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮುಂದಿನ ಐದು ದಿನಗಳು ಗರಿಷ್ಠ ತಾಪಮಾನದಲ್ಲಿ ಬದಲಾವಣೆಯಿಲ್ಲ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಉತ್ತರ ಒಳನಾಡಿನಲ್ಲಿ ಎರಡು ದಿನಗಳ ಬಳಿಕ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಂಭವವಿದೆ ಎಂದು ತಿಳಿಸಿದೆ.

‘ಜನರ ಪೋಪ್’ಗೆ ವಿದಾಯ

ವ್ಯಾಟಿಕನ್ ಸಿಟಿ (ಎಎಫ್‌ಪಿ/ರಾಯಿಟರ್ಸ್/ಎಪಿ): ಕಡು ಸಂಪ್ರದಾಯಸ್ಥರ ತೀವ್ರ ವಿರೋಧ, ಟೀಕೆಗಳ ಮಧ್ಯೆಯೂ ಹಲವು ಸುಧಾರಣಾವಾದಿ ಕ್ರಾಂತಿಕಾರಕ ಕ್ರಮಗಳನ್ನು ತೆಗೆದುಕೊಂಡಿದ್ದ, ‘ಜನರ ಪೋಪ್’ ಎಂದೇ ಕರೆಸಿಕೊಳ್ಳುತ್ತಿದ್ದ ಪೋಪ್ ಫ್ರಾನ್ಸಿಸ್ ಅವರಿಗೆ ಇಲ್ಲಿನ ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಶನಿವಾರ ಅಂತಿಮ ವಿದಾಯ ಹೇಳಲಾಯಿತು.

ಪೋಪ್‌ಅವರಅಂತ್ಯಸಂಸ್ಕಾರದಕ್ಷಣಗಳನ್ನುಕಣ್ತುಂಬಿಕೊಳ್ಳಲು ಜಗತ್ತಿನ ವಿವಿಧ ಭಾಗಗಳ ಸುಮಾರು 4 ಲಕ್ಷ ಜನರು ಸೇರಿದ್ದರು. ಇವರಲ್ಲಿ ಯುವಕರೇ ಹೆಚ್ಚಿದ್ದರು.

ಅಂತಿಮ ವಿಧಿ ವಿಧಾನಗಳನ್ನು ಹತ್ತಿರದಿಂದ ನೋಡಬೇಕು ಎಂದು ಬಯಸಿ ವಿವಿಧ ದೇಶಗಳಿಂದ ಪುಟ್ಟ ಮಕ್ಕಳೊಂದಿಗೆ ಬಂದಿದ್ದ ಕುಟುಂಬಗಳು ಶುಕ್ರವಾರ ರಾತ್ರಿಯಿಂದಲೇ ಸ್ಕ್ವೇರ್‌ನಲ್ಲಿ ಸೇರಿದ್ದವು. ಸಾರ್ವಜನಿಕರಿಗಾಗಿ ಸಿದ್ಧಪಡಿಸಿದ್ದ ಆಸನಗಳಲ್ಲಿ ಕೆಲವರು ಕುಳಿತುಕೊಂಡಿದ್ದರೆ, ಕೆಲವರು ಅಲ್ಲೇ ಮಲಗಿದ್ದರು. ಮತ್ತೆ ಕೆಲವರು ಕಾರುಗಳಲ್ಲೇ ರಾತ್ರಿ ಕಳೆದು ಬೆಳಗಿನ ಜಾವ ಸೇಂಟ್ ಪೀಟರ್ಸ್ ಸ್ಕ್ವೇರ್‌ಗೆ ಬಂದರು.

‘ಅಂತಿಮ ವಿದಾಯ ಬಳಿಕ ಪೋಪ್ ಅವರ ಇಚ್ಛೆಯಂತೆಯೇ ಅವರ ಮೃತದೇಹವನ್ನು ರೋಮ್‌ನ ಸೇಂಟ್ ಮೇರಿ ಚರ್ಚ್‌ಗೆ ಕೊಂಡೊಯ್ಯಲಾಯಿತು. ಅಲ್ಲಿಯೇ ಅವರನ್ನು ಮಣ್ಣು ಮಾಡಲಾಯಿತು’ ಎಂದು ‘ಕ್ಯಾಥೊಲಿಕ್ ನ್ಯೂಸ್ ಸರ್ವೀಸ್ ರೋಮ್’ ಎಂಬ ಚರ್ಚ್‌ನ ‘ಎಕ್ಸ್’ ಖಾತೆಯು ಪೋಸ್ಟ್ ಹಂಚಿಕೊಂಡಿದೆ.

ವ್ಯಾಟಿಕನ್ ಸಿಟಿಯ ಸುತ್ತ ಭಾರಿ ಭದ್ರತೆ ನಿಯೋಜಿಸಲಾಗಿತ್ತು. ಸುಮಾರು 2,500 ಪೊಲೀಸರು, 1,500 ಸೈನಿಕರು ಭದ್ರತೆಗೆ ನಿಯೋಜನೆಗೊಂಡಿದ್ದರು.



ಪೋಪ್ ಫ್ರಾನ್ಸಿಸ್ ಅವರ ಅಂತ್ಯ ಸಂಸ್ಕಾರದಲ್ಲಿ ಸೇರಿದ್ದ ಜನ ಸಾಗರ —ಎಎಫ್‌ಪಿ ಚಿತ್ರ

ವಿವಿಧ ದೇಶಗಳ ನಾಯಕರು ಭಾಗಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಬ್ರಿಟನ್‌ನ ರಾಜಕುಮಾರ ವಿಲಿಯಮ್ಸ್, ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಸುಮಾರು 50 ದೇಶಗಳ ನಾಯಕರು ಪೋಪ್ ಫ್ರಾನ್ಸಿಸ್ ಅವರ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿದರು.

ವ್ಯಾಟಿಕನ್ ಸಿಟಿಯೊಂದಿಗೆ ಯಾವುದೇ ಸಂಬಂಧ ಇಟ್ಟುಕೊಳ್ಳದ ಕಾರಣ ಚೀನಾ, ತನ್ನ ಪ್ರತಿನಿಧಿಯನ್ನು ಕಳುಹಿಸಿರಲಿಲ್ಲ. ಗಾಜಾ ವಿರುದ್ಧ ಯುದ್ಧ ನಡೆಸುತ್ತಿರುವ ಇಸ್ರೇಲ್ ಕುರಿತು ಪೋಪ್ ಫ್ರಾನ್ಸಿಸ್ ಅವರು ತೀವ್ರ ಟೀಕೆ ಮಾಡಿದ್ದರಿಂದ, ಇಸ್ರೇಲ್ ತನ್ನ ಅತ್ಯುನ್ನತ ಚರ್ಚ್‌ನ ಪ್ರತಿನಿಧಿಯೊಬ್ಬರನ್ನು ಮಾತ್ರ ಕಳುಹಿಸಿಕೊಟ್ಟಿದೆ.

ಟ್ರಂಪ್– ಝೆಲೆನ್‌ಸ್ಕಿ ಮಾತುಕತೆ

ಒಂದೆಡೆ ಪೋಪ್ ಫ್ರಾನ್ಸಿಸ್ ಅವರ ಅಂತಿಮ ವಿದಾಯದ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಮತ್ತೊಂದೆಡೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಸೇಂಟ್ ಬೆಸಿಲಿಕಾದಲ್ಲಿ ಮಾತುಕತೆ ನಡೆಸಿದರು.

‘ಮಾತುಕತೆಯು ಫಲಪ್ರದ’ವಾಗಿತ್ತು ಎಂದು ಶ್ವೇತಭವನ ಹೇಳಿದೆ. ‘ಮಾತುಕತೆಯು ಅಲ್ಪ ಕಾಲದ್ದಾಗಿತ್ತು’ ಎಂದು ಝೆಲೆನ್‌ಸ್ಕಿ ಅವರ ವಕ್ತಾರರು ಹೇಳಿದರು. ‘ಅಂತ್ಯಸಂಸ್ಕಾರದ ಬಳಿಕ ಮತ್ತೊಮ್ಮೆ ಮಾತುಕತೆ ನಡೆಯಬಹುದು’ ಎಂದು ಟ್ರಂಪ್ ಅವರು ಹೇಳಿದರು.

‘ಸೇತುವೆ ನಿರ್ಮಿಸಿ, ಗೋಡೆಯಲ್ಲ’

‘ಜನರ ಮಧ್ಯೆ ಸೇತುವೆ ನಿರ್ಮಿಸದೆ, ಗೋಡೆಗಳನ್ನು ಕಟ್ಟುವವನು ಎಲ್ಲೇ ಇದ್ದರೂ, ಯಾರೇ ಆಗಿದ್ದರೂ ಆತ ‘ಕ್ರಿಶ್ಚಿಯನ್’ ಆಗಲಾರ...’

– ಪೋಪ್ ಫ್ರಾನ್ಸಿಸ್ ಅವರು 2016ರಲ್ಲಿ ಆಡಿದ ಮಾತಿದು. ಮೊದಲ ಬಾರಿಗೆ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದಾಗ ಅಮೆರಿಕ-ಮೆಕ್ಸಿಕೊ ಗಡಿಗೆ ಅತ್ಯಂತ ಉದ್ದದ ಗೋಡೆಯನ್ನು ನಿರ್ಮಿಸಿದ್ದರು. ಈ ಬಗ್ಗೆ ಪೋಪ್ ಫ್ರಾನ್ಸಿಸ್ ಅವರು ಟ್ರಂಪ್ ಅವರ ವಿರುದ್ಧ ಕಟು ಟೀಕೆ ವ್ಯಕ್ತಪಡಿಸಿದ್ದರು.

ಪೋಪ್ ಅವರ ಅಂತಿಮ ವಿದಾಯದ ಸಮಯದಲ್ಲಿ ಇಟಲಿಯ ಕಾರ್ಡಿನಲ್ ಜೊವಾನ್ನಿ ಬತ್ತೀಸ್ತ ರೆ ಅವರು ಟ್ರಂಪ್ ಅವರ ಸಮ್ಮುಖದಲ್ಲಿಯೇ ಪೋಪ್ ಫ್ರಾನ್ಸಿಸ್ ಅವರ ಈ ಹೇಳಿಕೆಯನ್ನು ನೆನಪಿಸಿಕೊಂಡರು.

ವಿರಾಟ್ ಕೊಹ್ಲಿ

ಆರ್‌ಸಿಬಿ– ಕ್ಯಾಪಿಟಲ್ಸ್ ಹಣಾಹಣಿ ಇಂದು

ರಾಹುಲ್–ವಿರಾಟ್ ಪೈಪೋಟಿಗೆ 'ಡೆಲ್ಲಿ' ಸಿದ್ಧ

ವಿರಾಟ್ ಕೊಹ್ಲಿ	
9 ಪಂದ್ಯ	392 ರನ್
5 ಅರ್ಧಶತಕ	73* ಶ್ರೇಷ್ಠ

ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ಮತ್ತು ಕೆ.ಎಲ್. ರಾಹುಲ್ ಅವರ ಮೇಲೆ ಈಗ ಕ್ರಿಕೆಟ್‌ಪ್ರಿಯರ ಕಣ್ಣುಗಳು ನೆಟ್ಟಿವೆ.

ಭಾನುವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಕೊಹ್ಲಿ ಪ್ರತಿನಿಧಿಸುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕನ್ನಡಿಗ ರಾಹುಲ್ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿ ಯಾಗಲಿವೆ. ಕೆಲವು ದಿನಗಳ ಹಿಂದಷ್ಟೇ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಆರ್‌ಸಿಬಿಯನ್ನು ಸೋಲಿಸಿತ್ತು. ಆಗ ಗೆಲುವಿನ ರೂವಾರಿಯಾಗಿದ್ದ ಕೆ.ಎಲ್. ರಾಹುಲ್ ಅವರು, 'ಇದು ನನ್ನ ನೆಲ' ಎಂದು 'ಕಾಂತಾರ' ಚಲನಚಿತ್ರದ ದೃಶ್ಯದ ಮಾದರಿಯನ್ನು ಅನುಕರಿಸಿದ್ದರು.

ಈಗ ಎರಡನೇ ಹಂತದಲ್ಲಿ ಪಂದ್ಯ ನಡೆಯಲಿರುವ ದೆಹಲಿಯು ವಿರಾಟ್ ಅವರ ಜನಿಸಿ, ಕ್ರಿಕೆಟಿಗನಾಗಿ ಬೆಳೆದ ಊರು.

ಆದ್ದರಿಂದ ಅವರು, ರಾಹುಲ್ ಮತ್ತು ಡೆಲ್ಲಿ ತಂಡಕ್ಕೆ 'ತಿರುಗೇಟು' ನೀಡುವರೇ ಎಂಬ ಕುತೂಹಲ ಗರಿಗೆದರಿದೆ.

ಈಚೆಗೆ ಬೆಂಗಳೂರಿನಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ವಿರಾಟ್ ಅರ್ಧಶತಕ ಹೊಡೆದಿದ್ದರು. ಪಂದ್ಯದಲ್ಲಿ ಆರ್‌ಸಿಬಿ ಜಯಕ್ಕೆ ಮಹತ್ವದ ಕಾಣಿಕೆ ನೀಡಿದ್ದರು. ಅದಕ್ಕೂ ಮುನ್ನ ಮುಲ್ಲನಪುರದಲ್ಲಿ ಪಂಜಾಬ್ ಕಿಂಗ್ಸ್ ಎದುರು ಆರ್‌ಸಿಬಿ ಜಯದಲ್ಲಿಯೂ ವಿರಾಟ್ ಮಿಂಚಿದ್ದರು. ಅಲ್ಲಿ ಪಂಜಾಬ್ ನಾಯಕ ಶ್ರೇಯಸ್ ಅಯ್ಯರ್ ಅವರ ಮುಂದೆ ವಿರಾಟ್ ಮಾಡಿದ್ದ 'ಸಂಭ್ರಮದ ನೃತ್ಯ' ಸಾಮಾಜಿಕ ಜಾಲತಾಣದಲ್ಲಿ ಗಮನ ಸೆಳೆದಿತ್ತು.

ಆದ್ದರಿಂದ ಈಗ ತಮ್ಮ ಊರು ಡೆಲ್ಲಿಯಲ್ಲಿಯೂ ವಿರಾಟ್ ಮಿಂಚುವರೇ ಅಥವಾ ಅಕ್ಷರ್ ಪಟೇಲ್ ನಾಯಕತ್ವದ ಆತಿಥೇಯ ತಂಡವೇ ಮೇಲುಗೈ ಸಾಧಿಸುವುದೇ ಎಂಬ ಚರ್ಚೆಗಳು ಗರಿಗೆದರಿವೆ.

ಪಟೇಲ್ ಬಳಗವು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಎಂಟು ಪಂದ್ಯಗಳನ್ನು ಆಡಿ 6ರಲ್ಲಿ ಜಯಿಸಿ, 2ರಲ್ಲಿ ಸೋತಿದೆ. ಆರ್‌ಸಿಬಿ 9 ಪಂದ್ಯ ಆಡಿ 6 ಗೆದ್ದು, 3ರಲ್ಲಿ ಸೋತಿದೆ. ಉಭಯ ತಂಡಗಳೂ ತಲಾ 12 ಅಂಕಗಳನ್ನು ಗಳಿಸಿವೆ.

ಕೆ.ಎಲ್. ರಾಹುಲ್	
7 ಪಂದ್ಯ	3 ಅರ್ಧಶತಕ
323 ರನ್	93* ಶ್ರೇಷ್ಠ

ಕೆ.ಎಲ್. ರಾಹುಲ್

ವಿರಾಟ್ ಅಲ್ಲದೇ; ಫಿಲ್ ಸಾಲ್ಟ್, ದೇವದತ್ತ ಪಡಿಕ್ಕಲ್, ಜಿತೇಶ್ ಶರ್ಮಾ, ನಾಯಕ ರಜತ್ ಪಾಟೀದಾರ್ ಹಾಗೂ ಟಿಮ್ ಡೇವಿಡ್ ಅವರು ಉತ್ತಮ ಲಯದಲ್ಲಿದ್ದಾರೆ. ಅವರಿಗೆ ಈಗ ಡೆಲ್ಲಿ ತಂಡದ ಎಡಗೈ ವೇಗಿ ಮಿಚೆಲ್ ಸ್ಟಾರ್ಕ್, ಮುಕೇಶ್ ಕುಮಾರ್, ಸ್ಪಿನ್ನರ್ ಕುಲದೀಪ್ ಯಾದವ್ ದಾಳಿಯನ್ನು ಮೆಟ್ಟಿ ನಿಲ್ಲುವ ಸವಾಲು ಇದೆ.

ಆರ್‌ಸಿಬಿಯ ಬೌಲಿಂಗ್ ಪಡೆಯೂ ಈಗ ಉತ್ತಮ ಲಯದಲ್ಲಿದೆ. ಕಳೆದ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿ ಆರ್‌ಸಿಬಿಗೆ ಜಯದ ಹಾರ ಹಾಕಿದ್ದ ವೇಗಿ ಜೋಶ್ ಹೇಜಲ್‌ವುಡ್ ಅವರನ್ನು ಎದುರಿಸುವುದು ಡೆಲ್ಲಿ ಬ್ಯಾಟರ್‌ಗಳಿಗೆ ಸವಾಲಾಗುವ ಸಾಧ್ಯತೆ ಇದೆ. ಸ್ಪಿನ್ನರ್ ಕೃಣಾಲ್ ಪಾಂಡ್ಯ, ಯಶ್ ದಯಾಳ್ ಅವರು ಜೊತೆಯಾಟಗಳನ್ನು ಮುರಿಯುವ ಸಮರ್ಥರು. ಡೆಲ್ಲಿ ತಂಡದಲ್ಲಿರುವ ಕರ್ನಾಟಕದ ಜೋಡಿ ರಾಹುಲ್ ಮತ್ತು ಕರುಣ್ ನಾಯರ್ ಅವರು ಉತ್ತಮ ಲಯದಲ್ಲಿದ್ದಾರೆ. ಆದರೆ. ಜೇಕ್ ಫ್ರೇಸರ್ ಮೆಕ್‌ಗುರ್ಕ್, ಫಾಫ್ ಡುಪ್ಲೆಸಿ ಅವರ ಪ್ರದರ್ಶನ ಸ್ಥಿರವಾಗಿಲ್ಲ. ಅಭಿಷೇಕ್ ಪೊರೆಲ್ ಉತ್ತಮ ಆರಂಭ ನೀಡಬಲ್ಲರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಪ್ರಿಯಾಂಶ್–ಪ್ರಭಸಿಮ್ರನ್ ಜೊತೆಯಾಟ

ಮಳೆಯಿಂದಾಗಿ ಪಂದ್ಯ ರದ್ದು: ಅಂಕ ಹಂಚಿಕೊಂಡ ಕೆಕೆಆರ್, ಪಂಜಾಬ್ ಕಿಂಗ್ಸ್

ಕೋಲ್ಕತ್ತ (ಪಿಟಿಐ): ಆತಿಥೇಯ ಕೋಲ್ಕತ್ತ ನೈಟ್‌ರೈಡರ್ಸ್ ತಂಡದ ಬ್ಯಾಟಿಂಗ್ ಕಣ್ತುಂಬಿಕೊಳ್ಳಲು ಶನಿವಾರ ಈಡನ್ ಗಾರ್ಡನ್‌ಗೆ ಬಂದಿದ್ದ ಅಭಿಮಾನಿಗಳ ಆಸೆಗೆ ಮಳೆ ಅಡ್ಡಿಯಾಯಿತು.

ಪಂಜಾಬ್ ಕಿಂಗ್ಸ್ ತಂಡವು ಒಡ್ಡಿದ್ದ 202 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಕೆಕೆಆರ್ ತಂಡವು 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 7 ರನ್ ಗಳಿಸಿದ್ದ ಸಂದರ್ಭದಲ್ಲಿ ಮಳೆ ಆರಂಭವಾಯಿತು. ರಾತ್ರಿ 11 ಗಂಟೆಯವರೆಗೂ ಹವಾಮಾನ ಪರಿಸ್ಥಿತಿ ಸುಧಾರಿಸದ ಕಾರಣ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು.. ಉಭಯ ತಂಡಗಳಿಗೆ ಒಂದೊಂದು ಅಂಕ ನೀಡಲಾಯಿತು.

ಇದಕ್ಕೂ ಮುನ್ನ ಪ್ರಿಯಾಂಶ್ ಆರ್ಯ (69; 35ಎ, 4X8, 6X4) ಮತ್ತು ಪ್ರಭಸಿಮ್ರನ್ ಸಿಂಗ್ (83; 49ಎ, 4X6, 6X6) ಅವರ ಶತಕದ ಜೊತೆಯಾಟದ ಬಲದಿಂದ ಪಂಜಾಬ್ ಕಿಂಗ್ಸ್ ತಂಡವು 'ದ್ವಿಶತಕ'ದ ಮೊತ್ತ ದಾಖಲಿಸಿತು. ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 120 (72 ಎಸೆತ) ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 201 ರನ್ ಗಳಿಸಿತು.

ಪ್ರಭಸಿಮ್ರನ್ ಸಿಂಗ್

ಟಾಸ್ ಗೆದ್ದ ಪಂಜಾಬ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್‌ಗಳಿಬ್ಬರ ಭರಾಟೆಯಿಂದಾಗಿ ಪವರ್‌ಪ್ಲೇನಲ್ಲಿ 56 ರನ್‌ಗಳು ಸೇರಿದವು. ಪ್ರಿಯಾಂಶ್ ಅವರು ವೇಗವಾಗಿ ರನ್ ಗಳಿಸಿದರು. 27 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಪ್ರಭಸಿಮ್ರನ್ ಅವರು 38 ಎಸೆತಗಳಲ್ಲಿ 50ರ ಗಡಿ ದಾಟಿದರು. 12ನೇ ಓವರ್‌ನಲ್ಲಿ ಈ ಜೊತೆಯಾಟವನ್ನು ಮುರಿಯುವಲ್ಲಿ ಆ್ಯಂಡ್ರೆ ರಸೆಲ್ ಯಶಸ್ವಿ ಯಾದರು. ಪ್ರಿಯಾಂಶ್‌ಅವರ ವಿಕೆಟ್ ಗಳಿಸುವಲ್ಲಿ ರಸೆಲ್ ಯಶಸ್ವಿಯಾದರು.

ಇದರ ನಂತರ ಪ್ರಭಸಿಮ್ರನ್ ತಮ್ಮ ಆಟದ ವೇಗ ತುಸು ಹೆಚ್ಚಿಸಿದರು. ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ಶ್ರೇಯಸ್ ಅಯ್ಯರ್ ಅವರೊಂದಿಗೆ 40 ರನ್ ಸೇರಿಸಿದರು. ಈ ಹಂತದಲ್ಲಿ ವೈಭವ್ ಅರೋರಾ ಹಾಕಿದ ಎಸೆತದಲ್ಲಿ ಪ್ರಭಸಿಮ್ರನ್ ಸಿಂಗ್ ಅವರು ರೋವ್ಮನ್ ಪೊವೆಲ್ ಅವರಿಗೆ ಕ್ಯಾಚ್ ಆದರು.

ಗ್ಲೆನ್ ಮ್ಯಾಕ್ಸ್‌ವೆಲ್ (7; 8ಎ) ಅವರನ್ನು ಸ್ಪಿನ್ನರ್ ವರುಣ್ ಚಕ್ರವರ್ತಿ ಕ್ಲೀನ್‌ಬೌಲ್ಡ್ ಮಾಡಿದರು. ಮಾರ್ಕೊ ಯಾನ್ಸೆನ್ ಅವರಿಗೆ ಅರೋರಾ ಪೆವಿಲಿಯನ್ ದಾರಿ ತೋರಿಸಿದರು. ಇದೆಲ್ಲದರ ನಡುವೆ ಬ್ಯಾಟ್ ಬೀಸುತ್ತಿದ್ದ ನಾಯಕ ಶ್ರೇಯಸ್ (ಔಟಾಗದೇ 25; 16ಎ, 4X1, 6X1) ಅವರ ಜೊತೆಗೂಡಿದ ಜೋಷ್ ಇಂಗ್ಲಿಸ್ (ಔಟಾಗದೇ 11; 6ಎ, 4X2) ತಂಡದ ಮೊತ್ತವನ್ನು ಹೆಚ್ಚಿಸಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 4ಕ್ಕೆ201 (ಪ್ರಿಯಾಂಶ್ ಆರ್ಯ 69, ಪ್ರಭಸಿಮ್ರನ್ ಸಿಂಗ್ 83, ಶ್ರೇಯಸ್ ಅಯ್ಯರ್ ಔಟಾಗದೇ 25, ವೈಭವ್ ಅರೋರಾ 34ಕ್ಕೆ2) **ಕೋಲ್ಕತ್ತ ನೈಟ್ ರೈಡರ್ಸ್:** 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 7 (ರೆಹಮಾನುಲ್ಲಾ ಗುರ್ಬಾಜ್ ಔಟಾಗದೇ 1, ಸುನಿಲ್ ನಾರಾಯಣ್ ಔಟಾಗದೇ 4) **ಫಲಿತಾಂಶ:** ಮಳೆಯಿಂದಾಗಿ ಪಂದ್ಯ ರದ್ದು.

ಮುಂಬೈ ಇಂಡಿಯನ್ಸ್‌ಗೆ ಇಂದು ಲಖನೌ ಸವಾಲು

ಮುಂಬೈ (ಪಿಟಿಐ): ಆರಂಭದ ಹಿನ್ನಡೆಯ ಬಳಿಕ ಈಗ ವಿಜಯಯಾತ್ರೆಯಲ್ಲಿರುವ ಮುಂಬೈ ಇಂಡಿಯನ್ಸ್ ತಂಡ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಅಪಾಯಕಾರಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಮುಂಬೈ ಮತ್ತು ಎಲ್‌ಎಸ್‌ಜಿ ತಂಡಗಳು 9 ಪಂದ್ಯಗಳಿಂದ ತಲಾ 10 ಪಾಯಿಂಟ್ಸ್ ಗಳಿಸಿವೆ. ಐದು ಗೆದ್ದು, ನಾಲ್ಕು ಸೋತಿವೆ. ಮಧ್ಯಾಹ್ನದ ಪಂದ್ಯದಲ್ಲಿ ಮುಂಬೈನ ಬಿಸಿಲು ಮತ್ತು ಸೆಕೆ ತಂಡಗಳಿಗೆ ಸವಾಲಾಗಲಿದೆ.

ಲಖನೌ ತಂಡದ ಮುಂದೆ ನಕಾರಾತ್ಮಕ ನೆಟ್ ರನ್‌ರೇಟ್ (-0.054) ಸುಧಾರಿಸುವ ಸವಾಲು ಇದೆ. ಇದರ ಜೊತೆಗೆ ತಂಡವು, ನಾಯಕ ರಿಷಭ್ ಪಂತ್ ಅವರಿಂದ ದೊಡ್ಡದೊಂದು ಇನಿಂಗ್ಸ್‌ನ ವಿಶ್ವಾಸದಲ್ಲಿದೆ. ಈ ಐಪಿಎಲ್‌ನಲ್ಲಿ ಪಂತ್ 9 ಪಂದ್ಯಗಳಿಂದ ಗಳಿಸಿರುವುದು ಬರೇ 106 ರನ್‌ಗಳನ್ನು. ಭಾರತದ ಈ ವಿಕೆಟ್ ಕೀಪರ್–ಬ್ಯಾಟರ್ ಕ್ರಮಾಂಕ ಬದಲಿಸಿದರೂ ವ್ಯತ್ಯಾಸ ಏನೂ ಆಗಿಲ್ಲ.

ರಿಷಭ್ ಪಂತ್

ಮೆಗಾ ಹರಾಜಿನಲ್ಲಿ ದಾಖಲೆ ಮೌಲ್ಯ ಪಡೆದ ಪಂತ್‌ಗೆ ಮಹತ್ವದ ಇನಿಂಗ್ಸ್ ಆಡಬೇಕಾದ ಒತ್ತಡವಿದೆ. ತವರಿನಲ್ಲಿ ಆಡುತ್ತಿರುವುದರ ಜೊತೆಗೆ, ಸತತ ನಾಲ್ಕು ಪಂದ್ಯ ಗೆದ್ದಿರುವ ಮುಂಬೈ ತಂಡ ವಿಶ್ವಾಸದಲ್ಲಿದೆ. ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಟ್ರೆಂಟ್ ಬೌಲ್ಟ್ ಮತ್ತು ನಾಯಕ ಹಾರ್ದಿಕ್ ಪಾಂಡ್ಯ ಲಯಕ್ಕೆ ಮರಳಿದ್ದಾರೆ.

ನಿಕೋಲಸ್ ಪೂರನ್ (377 ರನ್), ಮಿಚೆಲ್ ಮಾರ್ಷ್ (344) ಮತ್ತು ಏಡನ್ ಮರ್ಕರಂ (326) ಅವರು ಲಖನೌ ತಂಡದ ಬ್ಯಾಟಿಂಗ್ ಆಧಾರಸ್ತಂಭ ಎನಿಸಿದ್ದಾರೆ. ಕೊನೆಗಳಿಗೆಯಲ್ಲಿ ತಂಡಕ್ಕೆ ಸೇರ್ಪಡೆಗೊಂಡ ಶಾರ್ದೂಲ್ ಠಾಕೂರ್ (12 ವಿಕೆಟ್) ಬೌಲಿಂಗ್ ವಿಭಾಗದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ದಿಗ್ವೇಶ್ ರಾಠಿ ಈ ಆವೃತ್ತಿಯಲ್ಲಿ ಛಾಪು ಮೂಡಿಸಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ಬಡ ಮಕ್ಕಳಿಗೆ ಅವಕಾಶ

ರಿಲಯನ್ಸ್ ಪ್ರತಿಷ್ಠಾನದ ಉಪಕ್ರಮವಾದ 'ಸರ್ವರಿಗೂ ಶಿಕ್ಷಣ ಮತ್ತು ಕ್ರೀಡೆ' (ಇಎಸ್‌ಎ) ಅಭಿಯಾನದ ಅಂಗವಾಗಿ ಭಾನುವಾರ ನಡೆಯಲಿರುವ ಮುಂಬೈ ಇಂಡಿಯನ್ಸ್– ಲಖನೌ ಸೂಪರ್ ಜೈಂಟ್ಸ್ ಪಂದ್ಯವನ್ನು ವೀಕ್ಷಿಸಲು ನಗರದ ವಿವಿಧ ಎನ್‌ಜಿಒಗಳ 19 ಸಾವಿರ ಬಡ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ.

ಪಂಚಾಯಿತಿ ಚುನಾವಣೆಗೆ ಅಭ್ಯರ್ಥಿಗಳ ಸ್ಪರ್ಧೆ ಬಗ್ಗೆ 'ಸುಪ್ರೀಂ' ಸ್ಪಷ್ಟನೆ

ಕ್ರಿಮಿನಲ್ ಪ್ರಕರಣದ ವಿವರ ಕಡ್ಡಾಯ

ನವದೆಹಲಿ (ಪಿಟಿಐ): ಪಂಚಾಯಿತಿ ಚುನಾವಣೆಗಳಲ್ಲಿ ಸ್ಪರ್ಧಿಸುವವರು ತಮ್ಮ ವಿರುದ್ಧ ಬಾಕಿ ಇರುವ ಪ್ರಕರಣಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಹಿಮಾಚಲ ಪ್ರದೇಶ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ಈ ತೀರ್ಮಾನ ಪ್ರಕಟಿಸಿದೆ. ಮಂಡಿ ಜಿಲ್ಲೆಯ ಗ್ರಾಮ ಪಂಚಾಯಿತಿಯೊಂದರ 'ಪ್ರಧಾನ'ರನ್ನು ವಜಾಗೊಳಿಸಿದ ಕ್ರಮವನ್ನು ಹಿಮಾಚಲ ಪ್ರದೇಶ ಹೈಕೋರ್ಟ್ ಎತ್ತಿಹಿಡಿದಿತ್ತು.

ವಾಸ್ತವವನ್ನು ಮುಚ್ಚಿಟ್ಟಿದ್ದು ಹಿಮಾಚಲ ಪ್ರದೇಶ ಪಂಚಾಯತಿ ರಾಜ್ ಕಾಯ್ದೆಯ ಪ್ರಕಾರ 'ಭ್ರಷ್ಟ ನಡವಳಿಕೆ' ಎಂದು ಹೈಕೋರ್ಟ್ 2024ರ ಅಕ್ಟೋಬರ್‌ನಲ್ಲಿ ನೀಡಿದ ಆದೇಶದಲ್ಲಿ ಹೇಳಿತ್ತು.

'ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿದ ಅರ್ಜಿಯಲ್ಲಿ ಹುರುಳಿಲ್ಲ' ಎಂದು ವಿಭಾಗೀಯ ಪೀಠವು ಸ್ಪಷ್ಟಪಡಿಸಿದೆ. 'ಅರ್ಜಿದಾರ ಬಸಂತ್ ಲಾಲ್ ಅವರು ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣವೊಂದು ಬಾಕಿ ಇರುವುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಿ ಪ್ರಮಾಣಪತ್ರ ಸಲ್ಲಿಸಿದ್ದರು. ಆ ವಾಸ್ತವವನ್ನು ಮರೆಮಾಚಿದ್ದು ಅವರ ಆಯ್ಕೆಯನ್ನು ರದ್ದುಪಡಿಸಲು ಸರಿಯಾದ ಕಾರಣವಾಗಿತ್ತು' ಎಂದು ಪೀಠವು ಹೇಳಿದೆ.

ಕ್ರಿಮಿನಲ್ ಪ್ರಕರಣ ಬಾಕಿ ಇರುವುದನ್ನು ತಿಳಿಸದೆ ಇದ್ದ ಕಾರಣಕ್ಕಾಗಿ ತಾವು ಆರು ವರ್ಷಗಳ ಅವಧಿಗೆ ಚುನಾವಣೆಗೆ ಸ್ಪರ್ಧಿಸಬಾರದು ಎಂದು 2025ರ ಫೆಬ್ರುವರಿ 2ರಂದು ಆದೇಶಿಸಲಾಗಿದೆ ಎಂದು ಲಾಲ್ ಅವರು ಸುಪ್ರೀಂ ಕೋರ್ಟ್‌ಗೆ ಹೇಳಿದ್ದರು. ಆದರೆ, ನಂತರದಲ್ಲಿ ಲಾಲ್ ಅವರು ಆ ಪ್ರಕರಣದಲ್ಲಿ ದೋಷಮುಕ್ತಗೊಂಡಿದ್ದಾರೆ.

ಆರು ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸಬಾರದು ಎಂಬ ನಿರ್ಬಂಧ ವಿಧಿಸಿರುವುದು ಕಠಿಣವಾದ ಹಾಗೂ ಅವರು ಎದುರಿಸುತ್ತಿದ್ದ ಆರೋಪಗಳಿಗೆ ಹೋಲಿಸಿದರೆ ಹೆಚ್ಚಿನ ಪ್ರಮಾಣದ ಶಿಕ್ಷೆಯಾಗುತ್ತದೆ. ಏಕೆಂದರೆ ಕ್ರಿಮಿನಲ್ ಪ್ರಕರಣದಲ್ಲಿ ಅವರು ದೋಷಮುಕ್ತ ಆಗಿದ್ದಾರೆ ಎಂದು ಪೀಠ ಹೇಳಿದೆ.

ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧ ಹೇರಿರುವ ಆದೇಶವನ್ನು ಅರ್ಜಿದಾರರು ಹೈಕೋರ್ಟ್ ಎದುರು ಪ್ರಶ್ನಿಸಬಹುದು ಎಂದು ವಿಭಾಗೀಯ ಪೀಠವು ಸ್ಪಷ್ಟಪಡಿಸಿದೆ. ಅಲ್ಲದೆ, 2025ರ ಫೆಬ್ರುವರಿ 2ರ ಆದೇಶಕ್ಕೆ ತಡೆ ನೀಡಿರುವ ಪೀಠವು, 'ಪ್ರಧಾನ' ಸ್ಥಾನಕ್ಕೆ ಶೀಘ್ರವೇ ಚುನಾವಣೆ ನಡೆದಲ್ಲಿ, ಅದರಲ್ಲಿ ಸ್ಪರ್ಧಿಸಲು ಲಾಲ್ ಅವರಿಗೆ ಅನುವು ಮಾಡಿಕೊಟ್ಟಿದೆ. ತಡೆಯಾಜ್ಞೆಯು ಎಂಟು ವಾರ ಜಾರಿಯಲ್ಲಿರುತ್ತದೆ.

ಮುಖ್ಯಾಂಶಗಳು

- ಹಿಮಾಚಲ ಪ್ರದೇಶ ಹೈಕೋರ್ಟ್ ಆದೇಶ ಎತ್ತಿಹಿಡಿದ 'ಸುಪ್ರೀಂ'
- ಕ್ರಿಮಿನಲ್ ಪ್ರಕರಣದ ಮಾಹಿತಿ ನೀಡದಿದ್ದ ಅಭ್ಯರ್ಥಿ
- ಚುನಾವಣೆಗೆ ಸ್ಪರ್ಧಿಸಲು ನಿರ್ಬಂಧ ಆದೇಶಕ್ಕೆ ತಡೆ

ಸ್ಟಾಲಿನ್ ಸಂಪುಟ ಪುನಾರಚನೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಗೆ ಒಂದು ವರ್ಷ ಬಾಕಿ ಉಳಿದಿರು ವಂತೆಯೇ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸಚಿವ ಸಂಪುಟ ವಿಸ್ತರಿಸಲು ನಿರ್ಧರಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣ ಎದುರಿಸುತ್ತಿರುವ ವಿ.ಸೆಂಥಿಲ್ ಬಾಲಾಜಿ ರಾಜೀನಾಮೆ ನೀಡುವ ಸಾಧ್ಯತೆಯಿದ್ದು, ಮಹಿಳೆಯರು, ಶೈವ, ವೈಷ್ಣವರ ಕುರಿತು ಅವಹೇಳನಕಾರಿಯಾಗಿ ಹೇಳಿಕೆ ನೀಡಿದ ಸಚಿವ ಕೆ.ಪೊನ್ಮುಡಿ ಅವರನ್ನೂ ಸಂಪುಟದಿಂದ ಕೈಬಿಡುವ ನಿರೀಕ್ಷೆಯಿದೆ.

ಪ್ರಜಾತಾಂತ್ರಿಕ ರಾಜಕಾರಣವೇ ಬದಲು

'ಭಾರತ್ ಶೃಂಗ – 2025'ರಲ್ಲಿ ರಾಹುಲ್ ಗಾಂಧಿ ಬೇಸರ

ಪ್ರಜಾವಾಣಿ ವಾರ್ತೆ/ಪಿಟಿಐ

ರಾಹುಲ್ ಗಾಂಧಿ

ಹೈದರಾಬಾದ್: ಪ್ರಜಾತಾಂತ್ರಿಕ ರಾಜಕಾರಣವು ಜಗತ್ತಿನ ಎಲ್ಲೆಡೆ ಬದಲಾವಣೆ ಕಂಡಿದೆ, ದಶಕದ ಹಿಂದೆ ಅನ್ವಯವಾಗುತ್ತಿದ್ದ ನಿಯಮಗಳು ಈಗ ಅಪ್ರಸ್ತುತವಾಗಿವೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

'ಭಾರತ್ ಶೃಂಗ – 2025'ರಲ್ಲಿ ಮಾತನಾಡಿದ ಅವರು, ಇಂದಿನ ಆಕ್ರಮಣಕಾರಿ ರಾಜಕೀಯ ಸನ್ನಿವೇಶದಲ್ಲಿ ವಿರೋಧ ಪಕ್ಷಗಳನ್ನು ಹೊಸಕಿಹಾಕುವ ಹಾಗೂ ಮಾಧ್ಯಮಗಳನ್ನು ದುರ್ಬಲಗೊಳಿಸುವ ಗುರಿಯನ್ನು ಕೆಲವರು ಇರಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

'ಭಾರತ್ ಜೋಡೊ ಯಾತ್ರೆ' ಅನುಭವಗಳನ್ನು ನೆನಪಿಸಿಕೊಂಡ ರಾಹುಲ್ ಅವರು, ಜನರ ಧ್ವನಿಗೆ ಕಿವಿಗೊಡಲು ರಾಜಕಾರಣಿಗಳು ವಿಫಲ-ರಾಗಿದ್ದಾರೆ ಎಂಬುದನ್ನು ತಾವು ಅರ್ಥ ಮಾಡಿಕೊಂಡಿದ್ದಾಗಿ ಹೇಳಿದರು.

'ಹಳೆಯ ಮಾದರಿಯ ರಾಜಕಾರಣಿ ಇನ್ನಿಲ್ಲವಾಗಿದ್ದಾನೆ. ಹೊಸ ಬಗೆಯ ರಾಜಕಾರಣಿಯನ್ನು ನಾವು ಸೃಷ್ಟಿಸಬೇಕಿದೆ' ಎಂದರು.

'ಭಾರತ್ ಜೋಡೊ ಯಾತ್ರೆ'ಯು ತಾವು ಜನರ ಜೊತೆ ಹೊಂದಿದ ಸಂಪರ್ಕದಲ್ಲಿ ಬದಲಾವಣೆ ತಂದಿತು ಎಂದರು. ಯಾತ್ರೆಯ ನಂತರದಲ್ಲಿ ತಮಗೆ ಜನರ ಜೊತೆ ಸಂವಾದ ನಡೆಸುವುದು ಸುಲಭವಾಯಿತು ಎಂದರು.

ತಮ್ಮ ವಿರೋಧಿಗಳು ಜಗತ್ತನ್ನು ಭೀತಿ, ಸಿಟ್ಟು ಮತ್ತು ದ್ವೇಷದ ಕನ್ನಡಕದ ಮೂಲಕ ಕಾಣುತ್ತಿದ್ದರೆ ತಾವು ಜಗತ್ತನ್ನು ಪ್ರೀತಿ ಮತ್ತು ಮಮತೆಯ ಮೂಲಕ ಕಾಣುತ್ತಿರುವುದಾಗಿ ಹೇಳಿದರು. 'ಭಾರತ್ ಶೃಂಗ'ವನ್ನು ತೆಲಂಗಾಣ ಸರ್ಕಾರ ಆಯೋಜಿಸಿದೆ.

ಅಂತರರಾಷ್ಟ್ರೀಯ ಮಟ್ಟದ ಈ ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ದೇಶಗಳ 450ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗಿಯಾಗಿದ್ದಾರೆ.

ಬಾಂಗ್ಲಾದೇಶದ ಅಕ್ರಮ ವಲಸಿಗರು ವಶಕ್ಕೆ

ಅಹಮದಾಬಾದ್ (ಪಿಟಿಐ): ಬಾಂಗ್ಲಾದೇಶದಿಂದ ಅಕ್ರಮವಾಗಿ ಭಾರತಕ್ಕೆ ವಲಸೆ ಬಂದಿರುವ 1,000ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದಿರುವ ಗುಜರಾತ್ ಪೊಲೀಸರು, ಅವರನ್ನು ಗಡೀಪಾರು ಮಾಡುವ ನಿಟ್ಟಿನಲ್ಲಿ ಯತ್ನ ನಡೆಸಿದ್ದಾರೆ.

'ಅಹಮದಾಬಾದ್‌ನಲ್ಲಿ 890 ಮತ್ತು ಸೂರತ್‌ನಲ್ಲಿ 134 ಜನರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇದು ಗುಜರಾತ್ ಪೊಲೀಸರು ಇಲ್ಲಿಯವರೆಗೆ ನಡೆಸಿರುವ ಅತಿ ದೊಡ್ಡ ಕಾರ್ಯಾಚರಣೆಯಾಗಿದೆ' ಎಂದು ಗುಜರಾತಿನ ಗೃಹ ಸಚಿವ ಹರ್ಷ ಸಾಂಘವಿ ಶನಿವಾರ ಮಾಹಿತಿ ನೀಡಿದರು.

ಗುಜರಾತಿನಲ್ಲಿ ಅಕ್ರಮವಾಗಿ ನಲೆಸಿರುವ ಬಾಂಗ್ಲಾದೇಶದ ಇತರೆ ವಲಸಿಗರು ಪೊಲೀಸರ ಬಳಿ ಶರಣಾಗುವಂತೆ ಸಚಿವರು ಕರೆ ನೀಡಿದರು. ಇಲ್ಲದಿದ್ದರೆ ಅವರನ್ನು ಬಂಧಿಸಿ, ಗಡೀಪಾರು ಮಾಡಲಾಗುವುದು ಎಂದು ಎಚ್ಚರಿಸಿದರು.

'ಅಲ್ಲದೆ ಅಕ್ರಮ ವಲಸಿಗರಿಗೆ ನೆಲೆ ಒದಗಿಸಿ ನೆರವಾಗುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಸಚಿವರು ಎಚ್ಚರಿಕೆ ನೀಡಿದರು.

'ವಶಕ್ಕೆ ಪಡೆಯಲಾಗಿರುವ ಅಕ್ರಮ ವಲಸಿಗರನ್ನು ಆದಷ್ಟು ಬೇಗ ಗಡೀಪಾರು ಮಾಡಲಾಗುವುದು. ಅಕ್ರಮ ವಲಸಿಗರು ಗುಜರಾತ್ ಸೇರಿದಂತೆ ದೇಶದ ವಿವಿಧೆಡೆ ಹೋಗುವುದಕ್ಕೂ ಮುನ್ನ ಪಶ್ಚಿಮ ಬಂಗಾಳದಲ್ಲಿ ನಕಲಿ ದಾಖಲಾತಿಗಳನ್ನು ಮಾಡಿಸಿಕೊಂಡಿದ್ದಾರೆ ಎಂದು ಗೊತ್ತಾಗಿದೆ. ಅವರ ನಕಲಿ ದಾಖಲಾತಿಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತದೆ' ಎಂದು ಸಚಿವರು ವಿವರಿಸಿದರು.

ಅಹಮದಾಬಾದ್‌ನಲ್ಲಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದೇಶದ ವಲಸಿಗರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದರು– ಪಿಟಿಐ ಚಿತ್ರ

7ನೇ ಸುತ್ತಿನ ಅಭಿಯಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

98 ಲಕ್ಷ ರಾಸುಗಳಿಗೆ ಕಾಲುಬಾಯಿ ಲಸಿಕೆ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ರಾಜ್ಯದಾದ್ಯಂತ ರಾಸುಗಳಿಗೆ ಕಾಲುಬಾಯಿ ಜ್ವರದ ವಿರುದ್ಧ ಲಸಿಕೆ ನೀಡುವ 7ನೇ ಸುತ್ತಿನ ಅಭಿಯಾನಕ್ಕೆ ಇಲ್ಲಿ ಶನಿವಾರ ಅಧಿಕೃತ ಚಾಲನೆ ನೀಡಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರು ಗೋಪೂಜೆ ಮಾಡುವ ಮೂಲಕ ಉದ್ಘಾಟಿಸಿದರು. ಚರ್ಮಗಂಟು ರೋಗದ ಲಸಿಕೆಗೂ ಚಾಲನೆ ನೀಡಲಾಯಿತು.

'ಜೂನ್ 9ರವರೆಗೆ ಎಲ್ಲ ಜಿಲ್ಲೆಗಳಲ್ಲೂ ಅಭಿಯಾನ ನಡೆಯಲಿದ್ದು, 98 ಲಕ್ಷ ರಾಸುಗಳಿಗೆ ಲಸಿಕೆ ನೀಡಲಾಗುವುದು. ಕರುಗಳಿಗೂ ಲಸಿಕೆಯನ್ನು ಉಚಿತವಾಗಿ ಹಾಕಲಾಗುವುದು. ಶೇ 100ರಷ್ಟು ಗುರಿ ತಲುಪಲು ಕ್ರಮ ವಹಿಸಲಾಗಿದೆ. ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಕರ್ನಾಟಕವು ಇತರ ರಾಜ್ಯಗಳಿಗಿಂತ ಮುಂದಿದೆ. ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದ (ಎನ್‌ಎಡಿಸಿಪಿ) ಭಾಗವಿದು' ಎಂದು ವೆಂಕಟೇಶ್ ತಿಳಿಸಿದರು.

ರಾಜ್ಯದಾದ್ಯಂತ ಹಮ್ಮಿಕೊಂಡಿರುವ '7ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಅಭಿಯಾನ'ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪಿರಿಯಾಪಟ್ಟಣದಲ್ಲಿ ಶನಿವಾರ ಗೋಪೂಜೆ ಮಾಡಿ ಚಾಲನೆ ನೀಡಿದರು. ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಡಿಸಿಎಂ ಡಿ.ಕೆ. ಶಿವಕುಮಾರ್ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

'ರಾಜ್ಯವನ್ನು ಕಾಲುಬಾಯಿ ರೋಗ ಮುಕ್ತ ವಲಯವನ್ನಾಗಿಸುವ ಸಂಕಲ್ಪ ಮಾಡಲಾಗಿದೆ' ಎಂದರು.

ಅಲೆಮಾರಿ ಕುರಿಗಾಹಿಗಳಿಗೆ ಸುರಕ್ಷತೆ ಒದಗಿಸುವ ನಿಟ್ಟಿನಲ್ಲಿ 'ಗುರುತಿನ ಚೀಟಿ' ವಿತರಿಸುವ ಕಾರ್ಯಕ್ರಮಕ್ಕೂ ಸಿದ್ದರಾಮಯ್ಯ ಚಾಲನೆ ನೀಡಿದರು. ವಿವಿಧ ಜಿಲ್ಲೆಗಳ ಕುರಿಗಾಹಿಗಳಿಗೆ ಸಾಂಕೇತಿಕವಾಗಿ ಗುರುತಿನ ಚೀಟಿ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಅವರು, 'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪಾಪರ್ ಆಗಿದೆ, ದಿವಾಳಿಯಾಗಿದೆ, ಖಜಾನೆ ಖಾಲಿಯಾಗಿದೆ ಎಂದೆಲ್ಲಾ ಬಿಜೆಪಿ–ಜೆಡಿಎಸ್‌ನವರು ಅಪಪ್ರಚಾರ ಮಾಡುತ್ತಿದ್ದಾರೆ. ಖಜಾನೆ ಖಾಲಿ ಆಗಿದ್ದರೆ, ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಸಾಧ್ಯವಾಗುತ್ತಿತ್ತಾ? ಬಿಜೆಪಿ-ಜೆಡಿಎಸ್‌ನವರಿಗೆ ನಿಜವಾಗಿಯೂ ಮಾನ–ಮರ್ಯಾದೆ ಇದ್ದರೆ ಸುಳ್ಳು ಹೇಳುವುದು ಬಿಡಬೇಕು' ಎಂದು ಹೇಳಿದರು.

'ಬಿಜೆಪಿಯವರೆಂದರೆ ಲೂಟಿ, ಸುಳ್ಳು' ಎಂದು ಟೀಕಿಸಿದರು.

'ಬಿಜೆಪಿ–ಜೆಡಿಎಸ್‌ನವರ ಟೀಕೆಗಳು ಸತ್ತು ಹೋಗಿವೆ. ನಮ್ಮ ಗ್ಯಾರಂಟಿ ಕಾರ್ಯಕ್ರಮಗಳು ಜನಮಾನಸದಲ್ಲಿ ಉಳಿದಿವೆ' ಎಂದು ಡಿಸಿಎಂ ಶಿವಕುಮಾರ್ ಹೇಳಿದರು.

ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಬಿ.ಎಸ್. ಸುರೇಶ್ ಹಾಗೂ ಎಂ.ಸಿ. ಸುಧಾಕರ್ ಪಾಲ್ಗೊಂಡಿದ್ದರು.

'ಸಂವಿಧಾನ ವಿರೋಧಿಗಳ ಬಗ್ಗೆ ಸ್ಪಷ್ಟತೆ ಇರಲಿ'

ಮೈಸೂರು: 'ಸಂಘ ಪರಿವಾರ ಯಾವತ್ತೂ ಸ್ವಾತಂತ್ರ್ಯ ಹೋರಾಟಕ್ಕೆ ಬರಲೇ ಇಲ್ಲ. ಆರ್‌ಎಸ್‌ಎಸ್‌ನ ಸಾವರ್ಕರ್ ಮತ್ತು ಗೋಲ್ವಾಲ್ಕರ್ ಅವರು ಸಂವಿಧಾನದ ವಿರುದ್ಧ ಇದ್ದವರು ಎನ್ನುವ ಸ್ಪಷ್ಟ ತಿಳಿವಳಿಕೆ ಕಾರ್ಯ-ಕರ್ತರಿಗೆ ಇರಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯು ಇಲ್ಲಿ ಆಯೋಜಿಸಿರುವ 'ಯುವ ಕ್ರಾಂತಿ ಬುನಾದಿ' ರಾಜ್ಯ ಮಟ್ಟದ ಕಾರ್ಯಕರ್ತರ ತರಬೇತಿ ಕಾರ್ಯಾಗಾರದಲ್ಲಿ ಶನಿವಾರ ಅವರು ಮಾತನಾಡಿದರು.

ಎಫ್‌ಐಐಟಿ ಜೆಇಇ ಹಣ ದುರ್ಬಳಕೆ– ಇ.ಡಿ

ನವದೆಹಲಿ (ಪಿಟಿಐ): ಜಂಟಿ ಪ್ರವೇಶ ಪರೀಕ್ಷೆಗೆ (ಜೆಇಇ) ತರಬೇತಿ ನೀಡುವ ಪ್ರತಿಷ್ಠಿತ 'ಎಫ್‌ಐಐಟಿ ಜೆಇಇ' ಸಂಸ್ಥೆಯು ಸಹಸ್ರಾರು ವಿದ್ಯಾರ್ಥಿಗಳು ಮತ್ತು ಪೋಷಕರಿಂದ ₹200 ಕೋಟಿಗೂ ಹೆಚ್ಚು ಶುಲ್ಕ ಸಂಗ್ರಹಿಸಿ, ಅವರಿಗೆ ಸಮರ್ಪಕ ಶೈಕ್ಷಣಿಕ ಸೇವೆ ಒದಗಿಸದೆ ವಂಚಿಸಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ಆರೋಪಿಸಿದೆ.

ಸಂಸ್ಥೆಯು ಈ ಮೂಲಕ ಗಂಭೀರ ಆರ್ಥಿಕ ಅಕ್ರಮಗಳಲ್ಲಿ ತೊಡಗಿದ್ದು, ವಿದ್ಯಾರ್ಥಿಗಳ ಹಣವನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ದೂರಿದೆ.

ಶೋಧ ನಡೆಸಿದ್ದ ಇ.ಡಿ: ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ ಇ.ಡಿ ಏಪ್ರಿಲ್ 24ರಂದು 'ಎಫ್‌ಐಐಟಿ ಜೆಇಇ' ನಿರ್ದೇಶಕ ಡಿ.ಕೆ.ಗೋಯಲ್, ಇತರ ಕಾರ್ಯ ನಿರ್ವಾಹಕರ ಕಂಪನಿಗಳ ಕಚೇರಿಗಳ ಮೇಲೆ ಶೋಧ ನಡೆಸಿತ್ತು.

ನೋಯ್ಡಾ, ದೆಹಲಿ, ಗುರುಗ್ರಾಮದಲ್ಲಿನ ಏಳು ಸ್ಥಳಗಳಲ್ಲಿ ನಡೆದ ಶೋಧ ಕಾರ್ಯಾಚರಣೆ ವೇಳೆ, ₹10 ಲಕ್ಷ ನಗದು, ₹4.89 ಕೋಟಿ ಮೌಲ್ಯದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ. ಇ.ಡಿ ಆರೋಪಗಳ ಬಗ್ಗೆ 'ಎಫ್‌ಐಐಟಿ ಜೆಇಇ' ಅಥವಾ ಅದರ ಪ್ರತಿನಿಧಿಗಳು ಈವರೆಗೆ ಯಾವುದೇ ಪ್ರಕ್ರಿಯೆ ನೀಡಿಲ್ಲ.

'ಗುಣಮಟ್ಟದ ಶೈಕ್ಷಣಿಕ ಸೇವೆ ನೀಡುವ ನೆಪದಲ್ಲಿ ಈ ಸಂಸ್ಥೆಯು ವಿದ್ಯಾರ್ಥಿಗಳು ಮತ್ತು ಪೋಷಕರಿಂದ ದೊಡ್ಡ ಪ್ರಮಾಣದ ಶುಲ್ಕ ಸಂಗ್ರಹಿಸಿದೆ. ಆದರೆ ಅದಕ್ಕೆ ತಕ್ಕಂತೆ ಶೈಕ್ಷಣಿಕ ಸೇವೆ ಒದಗಿಸದೆ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ವಂಚನೆ, ಕ್ರಿಮಿನಲ್ ನಂಬಿಕೆ ದ್ರೋಹ ಮತ್ತು ಶೈಕ್ಷಣಿಕ ದುರಾಚಾರಗಳಲ್ಲಿ ತೊಡಗಿದೆ' ಎಂದು ಇ.ಡಿ ಆರೋಪ ಮಾಡಿದೆ.

2025–26ರಿಂದ 2028–29ರ ನಡುವಿನ ನಾಲ್ಕು ಶೈಕ್ಷಣಿಕ ಅವಧಿಗಳಿಗಾಗಿ ಎಫ್‌ಐಐಟಿ ಜೆಇಇ ಒಟ್ಟು 14,411 ವಿದ್ಯಾರ್ಥಿಗಳಿಂದ ಸುಮಾರು ₹250.2 ಕೋಟಿ ಸಂಗ್ರಹಿಸಿದೆ ಎಂದು ಇ.ಡಿ ತಿಳಿಸಿದೆ.

₹1000 ಕೋಟಿ ಭೂ ಹಗರಣ ಭೇದಿಸಿದ ಇ.ಡಿ

ಪಣಜಿ (ಪಿಟಿಐ): ಪ್ರವಾಸಿಗರ ಅಚ್ಚುಮೆಚ್ಚಿನ ತಾಣಗಳಾದ ಗೋವಾದ ಅಂಜುನಾ ಗ್ರಾಮ ಸೇರಿದಂತೆ ಇನ್ನಿತರ ಕಡೆಗಳಲ್ಲಿ ನಡೆದ ₹1,000 ಕೋಟಿ ಮೌಲ್ಯದ ಭೂ ಹಗರಣವನ್ನು ಭೇದಿಸಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

ಈ ಪ್ರಕರಣ ಸಂಬಂಧ ವಿವಿಧೆಡೆ ಶೋಧ ಕಾರ್ಯಾಚರಣೆ ನಡೆಸಿ, ಹಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದರೋಡೆ: ಇಬ್ಬರ ಕಾಲಿಗೆ ಗುಂಡು, ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದಲ್ಲಿ ಈಚೆಗೆ ಎಸ್‌ಬಿಐ ಎಟಿಎಂ ಯಂತ್ರದಿಂದ ₹ 18 ಲಕ್ಷ ದೋಚಿ ಪರಾರಿಯಾಗಿದ್ದ ಅಂತರ ರಾಜ್ಯ ದರೋಡೆಕೋರರು ಶನಿವಾರ ನಸುಕಿನಲ್ಲಿ ಮತ್ತೆ ದರೋಡೆಗೆ ಬಂದಿದ್ದಾಗ ಪೊಲೀಸರು ಇಬ್ಬರ ಕಾಲಿಗೆ ಗುಂಡು ಹಾರಿಸಿ, ಒಟ್ಟು ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಎಟಿಎಂ ದರೋಡೆ ಮಾಡಲು ಬಂದಿದ್ದ ಹರಿಯಾಣ ಮೂಲದ ತಸ್ಲೀಮ್ ಖಾನ್ (28) ಮತ್ತು ಷರೀಫ್ ನೂರ್ ಮಹಮದ್ (20) ಪೊಲೀಸರ ಗುಂಡೇಟಿನಿಂದ ಗಾಯಗೊಂಡಿದ್ದಾರೆ. ಶಾಹೀದ್ ಹರೀದ್ (27) ಮತ್ತು ತೆಲಂಗಾಣದ ಅಮೀರ್ ಫರೀದ್ (25) ಪೊಲೀಸರಿಗೆ ಶರಣಾಗಿದ್ದಾರೆ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಬೇಲೂರ್ ಕ್ರಾಸ್‌ನ ಎಸ್‌ಬಿಐ ಎಟಿಎಂ ಸಮೀಪ ಕಾರೊಂದು ಅನುಮಾನಾಸ್ಪದವಾಗಿ ಓಡಾಡುತ್ತಿತ್ತು. ಗಸ್ತು ತಿರುಗುತ್ತಿದ್ದ ಪೊಲೀಸರು ಕಾರಿನಲ್ಲಿದ್ದವರನ್ನು ಹಿಡಿಯಲು ಹೋದಾಗ ಪರಾರಿಯಾಗಲು ಯತ್ನಿಸಿದರು. ಕಾರು ಬೆನ್ನು ಹತ್ತಿ ತಡೆದು ನಿಲ್ಲಿಸಿದಾಗ ಇಬ್ಬರು ಶರಣಾದರು. ತಸ್ಲೀಮ್ ಮತ್ತು ಷರೀಫ್ ಅವರು ಕಾನ್‌ಸ್ಟೆಬಲ್‌ಗಳ ಮೇಲೆ ಹಲ್ಲೆ ಮಾಡಿದರು' ಎಂದರು.

'ಶರಣಾಗುವಂತೆ ಸೂಚಿಸಿದರೂ ಕಿವಿಗೊಡದ ಆರೋಪಿಗಳು ಕಾನ್‌ಸ್ಟೆಬಲ್‌ಗಳಾದ ರಾಜು, ಮಂಜುನಾಥ ಮತ್ತು ಫಿರೋಜ್ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿದರು. ಆತ್ಮರಕ್ಷಣೆಗಾಗಿ ಸಬರ್ಬನ್ ಠಾಣೆಯ ಪಿಐ ಸಂತೋಷ ಎಲ್.ತಟ್ಟೆಪಲ್ಲಿ ಅವರು ತಸ್ಲೀಮ್ ಹಾಗೂ ಪಿಎಸ್‌ಐ ಬಸವರಾಜ ಅವರು ಷರೀಫ್ ಕಾಲಿಗೆ ಗುಂಡು ಹಾರಿಸಿ ಬಂಧಿಸಿದರು. ಗಾಯಾಳುಗಳನ್ನು ಜಿಮ್ಸ್‌ನ ಟ್ರಾಮಾ ಸೆಂಟರ್‌ನಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಏ. 9ರಂದು ಕಲಬುರಗಿ ನಗರದ ಎಟಿಎಂ ದರೋಡೆ ಸೇರಿದಂತೆ ಉತ್ತರ ಪ್ರದೇಶ, ರಾಜಸ್ಥಾನ, ಉತ್ತರಾಖಂಡ, ಮಹಾರಾಷ್ಟ್ರ, ತೆಲಂಗಾಣದ ಹಲವೆಡೆ ಎಟಿಎಂ ದರೋಡೆ, ಇತರೆ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ವಿಚಾರಣೆಯಲ್ಲಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. ತಸ್ಲೀಮ್ ವಿರುದ್ಧ 8, ಷರೀಫ್ ವಿರುದ್ಧ 3, ಅಮೀರ್ ವಿರುದ್ಧ 7 ಹಾಗೂ ಶಾಹೀದ್ ವಿರುದ್ಧ 1 ಪ್ರಕರಣ ದಾಖಲಾಗಿದೆ' ಎಂದರು.

ಐದು ವರ್ಷಗಳ ಬಳಿಕ ಮತ್ತೆ ಯಾತ್ರೆ ಆರಂಭವಾಗುವ ನಿರೀಕ್ಷೆ

ಕೈಲಾಸ ಮಾನಸ ಸರೋವರ ಯಾತ್ರೆ ಜೂನ್‌ನಿಂದ

ನವದೆಹಲಿ (ಪಿಟಿಐ): ಕೈಲಾಸ ಮಾನಸ ಸರೋವರ ಯಾತ್ರೆಯು ಜೂನ್ ತಿಂಗಳಿನಿಂದ ಪುನರಾರಂಭವಾಗಲಿದೆ ಎಂದು ಭಾರತ ಮತ್ತು ಚೀನಾ ತಿಳಿಸಿವೆ.

ಈ ಮೂಲಕ ಸುಮಾರು ಐದು ವರ್ಷಗಳ ಬಳಿಕ ಮತ್ತೆ ಯಾತ್ರೆ ಆರಂಭವಾಗುವ ನಿರೀಕ್ಷೆ ಇದೆ. ಪೂರ್ವ ಲಡಾಖ್ ಗಡಿ ಬಿಕ್ಕಟ್ಟಿನಿಂದಾಗಿ ಹಳಸಿದ್ದ ಉಭಯ ದೇಶಗಳ ಸಂಬಂಧವನ್ನು ಮತ್ತೆ ಯಥಾಸ್ಥಿತಿಯತ್ತ ಕೊಂಡೊಯ್ಯುವ ಯತ್ನ ಇದಾಗಿದೆ.

ಕೈಲಾಸ ಮಾನಸ ಸರೋವರ ಯಾತ್ರೆಯನ್ನು ವಿದೇಶಾಂಗ ಇಲಾಖೆಯು ಆಯೋಜಿಸಲಿದೆ. ಜೂನ್‌ನಲ್ಲಿ ಆರಂಭವಾಗಿ ಆಗಸ್ಟ್‌ನಲ್ಲಿ ಅಂತ್ಯವಾಗಲಿರುವ ಯಾತ್ರೆಯು ಉತ್ತರಾಖಂಡದ ಲಿಪುಲೇಖ ಸಂಧಿ ಮತ್ತು ಸಿಕ್ಕಿಂನ ನಾಥೂ ಲಾ ಮಾರ್ಗಗಳ ಮೂಲಕ ಆರಂಭವಾಗಲಿದೆ ಎಂದು ಭಾರತದ ವಿದೇಶಾಂಗ ಇಲಾಖೆ ತಿಳಿಸಿದೆ.

ಚೀನಾದ ಟಿಬೆಟ್ ಸ್ವಾಯತ್ತ ಪ್ರಾಂತ್ಯದಲ್ಲಿರುವ ಮಾನಸ ಸರೋವರ ಕೆರೆ ಮತ್ತು ಕೈಲಾಸ ಬೆಟ್ಟವು ಹಿಂದೂಗಳು, ಜೈನರು ಮತ್ತು ಬೌದ್ಧರ ಧಾರ್ಮಿಕ ಕ್ಷೇತ್ರವಾಗಿದೆ.

kmy.gov.in ವೆಬ್‌ಸೈಟ್ ಮೂಲಕ ಯಾತ್ರಾರ್ಥಿಗಳು ಅರ್ಜಿ ಸಲ್ಲಿಸಬಹುದು. ಸಲ್ಲಿಕೆಯಾದ ಅರ್ಜಿಗಳನ್ನು ಪರಿಶೀಲಿಸಿ, ಲಿಂಗ ಸಮಾನತೆ ಆಧಾರದ ಮೇರೆಗೆ ಯಾತ್ರಾರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದು ಇಲಾಖೆ ತಿಳಿಸಿದೆ.

2020ರಲ್ಲಿ ಮೊದಲಿಗೆ ಕೋವಿಡ್ ಕಾರಣಕ್ಕೆ ಯಾತ್ರೆ ರದ್ದುಗೊಳಿಸಲಾಗಿತ್ತು. ಆ ಬಳಿಕ ಪೂರ್ವ ಲಡಾಖ್‌ನಲ್ಲಿ ವಾಸ್ತವ ನಿಯಂತ್ರಣ ರೇಖೆಗೆ ಸಂಬಂಧಿಸಿದಂತೆ ಉಭಯ ದೇಶಗಳ ಮಧ್ಯೆ ಸೇನಾ ಬಿಕ್ಕಟ್ಟು ಉದ್ಭವಿಸಿತ್ತು. ಇದರಿಂದಾಗಿ ಮಾನಸ ಸರೋವರ ಯಾತ್ರೆ ಮೇಲಿನ ರದ್ದು ಮುಂದುವರಿದಿತ್ತು.

ಡೆಮ್‌ಚೋಕ್ ಮತ್ತು ಡೆಪ್ಸಾಂಗ್‌ನಲ್ಲಿ ನಿಯೋಜಿಸಲಾಗಿದ್ದ ಸೇನೆಯನ್ನು ಕಳೆದ ವರ್ಷದ ಅಕ್ಟೋಬರ್ 21ರಂದು ಉಭಯ ದೇಶಗಳು ಹಿಂಪಡೆದಿವೆ.

ಇದಾಗಿ ಎರಡು ದಿನಗಳ ಬಳಿಕ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು, ರಷ್ಯಾದಲ್ಲಿ ಭೇಟಿಯಾಗಿ ಹಲವು ದ್ವಿಪಕ್ಷೀಯ ಸಂಬಂಧ ಸುಧಾರಣೆ ಬಗ್ಗೆ ಚರ್ಚಿಸಿದ್ದರು. ಇದರ ಭಾಗವಾಗಿ ಕಳೆದ ಕೆಲವು ತಿಂಗಳುಗಳಿಂದ ದ್ವಿಪಕ್ಷೀಯ ಸಂಬಂಧವನ್ನು ಯಥಾಸ್ಥಿತಿಗೆ ತರಲು ಉಭಯ ದೇಶಗಳು ಮಾತುಕತೆ ನಡೆಸಿದ್ದವು.

ಇದೇ ವರ್ಷದ ಜನವರಿಯಲ್ಲಿ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಚೀನಾದ ವಿದೇಶಾಂಗ ಕಾರ್ಯದರ್ಶಿಯೊಂದಿಗೆ ಚೀನಾದಲ್ಲಿ ಸಭೆ ನಡೆಸಿದ್ದರು. ಈ ಸಭೆಯಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆ ಮತ್ತೆ ಆರಂಭಿಸಲು ಉಭಯ ದೇಶಗಳು ಒಪ್ಪಿ-ಕೊಂಡಿದ್ದವು. ಅಲ್ಲದೆ, ಸಂಬಂಧವನ್ನು ಮರು ಸ್ಥಾಪಿಸಲು ಮತ್ತು ಸ್ಥಿರಗೊಳಿಸಲು ಜನರ ಕೇಂದ್ರಿತವಾದ ಕ್ರಮಗಳನ್ನು ಕೈಗೊಳ್ಳಲು ಸಮ್ಮತಿಸಿದ್ದವು.

ಸಿಲಿಕಾನ್ ಸಿಟಿಯಲ್ಲಿ ಓಟದ ಮಜಾ ಇಂದು: 35ಸಾವಿರ ಮಂದಿ ಭಾಗಿ ನಿರೀಕ್ಷೆ

ವಿಶ್ವ 10ಕೆ ಓಟ: ಚೆಪ್ಟೆಗಿ ಮೇಲೆ ಕಣ್ಣು

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: ಸೂರ್ಯ ಉದಯಿಸುವ ಮುನ್ನವೇ ಸಿಲಿಕಾನ್ ಸಿಟಿಯಲ್ಲಿ ಭಾನುವಾರ ಓಟದ ಗಮ್ಮತ್ತು ರಂಗೇರಲಿದೆ. ಹದಿನೇಳನೇ ಆವೃತ್ತಿಯ ಟಿಸಿಎಸ್ ವಿಶ್ವ 10ಕೆ ಓಟಕ್ಕೆ ವಿಶ್ವಖ್ಯಾತ ಅಥ್ಲೀಟುಗಳು ಸೇರಿದಂತೆ 35 ಸಾವಿರಕ್ಕೂ ಅಧಿಕ ಮಂದಿ ಸಜ್ಜಾಗಿದ್ದಾರೆ.

ಒಲಿಂಪಿಕ್ಸ್ ಡಬಲ್ ಚಿನ್ನ ವಿಜೇತ ಯುಗಾಂಡಾದ ಜೋಷುವಾ ಚೆಪ್ಟೆಗಿ, ಕೆನ್ಯಾದ ಸಿಂಥಿಯಾ ಚೆಪ್ಗನೊ ಸೇರಿದಂತೆ ಖ್ಯಾತನಾಮ ಅಥ್ಲೀಟ್‌ಗಳು ಪಾರಮ್ಯ ಮೆರೆಯಲು ತುದಿಗಾಲಿನಲ್ಲಿ ನಿಂತಿದ್ದಾರೆ. ದೀರ್ಘ ಅಂತರದ ಓಟಕ್ಕೆ ಹೆಸರಾಗಿರುವ ಆಫ್ರಿಕಾದ ಅಥ್ಲೀಟ್‌ಗಳು ಈ ಬಾರಿಯೂ ಸ್ಪರ್ಧಾಕಣದಲ್ಲಿ ಮುಂಚೂಣಿಯಲ್ಲಿದ್ರೆ.ಯುಗಾಂಡಾ, ಕೆನ್ಯಾ ಮತ್ತು ಇಥಿಯೋಪಿಯಾ ಸ್ಪರ್ಧಿಗಳ ನಡುವೆಯೇ ಪೈಪೋಟಿ ಏರ್ಪಡುವ ಸಾಧ್ಯತೆ ನಿಚ್ಚಳವಾಗಿದೆ.

ಭಾರತೀಯರ ಎಲೀಟ್ ವಿಭಾಗದಲ್ಲಿ ಹಾಲಿ ಚಾಂಪಿಯನ್‌ಗಳಾದ ಕಿರಣ್ ಮಾತ್ರೆ ಮತ್ತು ಸಂಜೀವನಿ ಜಾಧವ್ ಸ್ಪರ್ಧಾಕಣದಲ್ಲಿದ್ದಾರೆ. ಕೊಚ್ಚಿಯಲ್ಲಿ ಈಚೆಗೆ ನಡೆದ ಫೆಡರೇಷನ್ ಕಪ್‌ನಲ್ಲಿ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದ ಸಾವನ್ ಬರ್ವಾಲ್ (28ನಿ.57ಸೆ), ಅಭಿಷೇಕ್ ಪಾಲ್ (29ನಿ.14ಸೆ) ಮತ್ತು ಕಿರಣ್ (29 ನಿ.47ಸೆ) ಅವರೂ ಪೈಪೋಟಿ ನಡೆಸಲಿದ್ದಾರೆ.

23 ವರ್ಷ ವಯಸ್ಸಿನ ಕಿರಣ್ ಅವರುಕಳೆದ ಆವೃತ್ತಿಯಲ್ಲಿ (29ನಿ.32ಸೆ) ತಾವೇ ನಿರ್ಮಿಸಿದ್ದ ಕೂಟ ದಾಖಲೆಯನ್ನು ಸುಧಾರಿಸುವತ್ತ ಕಣ್ಣಿಟ್ಟಿದ್ದಾರೆ. ಅವರಿಗೆ ಸಾವನ್ ಮತ್ತು ಅಭಿಷೇಕ್ ಅವರಿಂದ ಕಠಿಣ ಸ್ಪರ್ಧೆ ಎದುರಾಗುವ ಸಾಧ್ಯತೆಯಿದೆ. ಫೆಡರೇಷನ್ ಕಪ್‌ನಲ್ಲಿ 33 ನಿ. 38 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದು ಉತ್ತಮ ಲಯದಲ್ಲಿರುವ 28 ವರ್ಷ ವಯಸ್ಸಿನ ಸಂಜೀವನಿ ಇಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿದ್ದಾರೆ.

ಯುಗಾಂಡಾದ ಅಥ್ಲೀಟ್ ಜೋಷುವಾ ಚೆಪ್ಟೆಗಿ (ಎಡದಿಂದ ಮೂರನೆಯವರು) ಅವರೊಂದಿಗೆ ಭಾರತದ ಅಥ್ಲೀಟ್‌ಗಳಾದ (ಎಡದಿಂದ) ಫೂಲನ್ ಪಾಲ್, ಅಭಿಷೇಕ್ ಪಾಲ್, ಕಿರಣ್ ಮಾತ್ರೆ, ಸಾವನ್ ಬರ್ವಾಲ್ ಮತ್ತು ಸಂಜೀವನಿ ಜಾಧವ್ —ಪ್ರಜಾವಾಣಿ ಚಿತ್ರ

₹1.79 ಕೋಟಿ ಬಹುಮಾನ ಮೊತ್ತ

ಟಿಸಿಎಸ್ ವಿಶ್ವ 10ಕೆ ಓಟದಲ್ಲಿ ಈ ಬಾರಿ ಒಟ್ಟು ₹ 1.79 ಕೋಟಿ ಬಹುಮಾನ ಮೊತ್ತವಿದೆ. ಎಲೀಟ್ ಪುರುಷರ ಮತ್ತು ಮಹಿಳೆಯರ ವಿಭಾಗಳಲ್ಲಿ ಪ್ರಶಸ್ತಿ ಗೆದ್ದವರು ತಲಾ ₹23 ಲಕ್ಷ ಬಹುಮಾನ ತಮ್ಮದಾಗಿಸಿಕೊಳ್ಳಲಿದ್ದಾರೆ. ಅಲ್ಲದೆ, ಕೂಟ ದಾಖಲೆಗೆ ಬೋನಸ್ ರೂಪದಲ್ಲಿ ₹7 ಲಕ್ಷ ದೊರೆಯಲಿದೆ. ಭಾರತದ ಎಲೀಟ್ ಪುರುಷರ ಮತ್ತು ಮಹಿಳಾ ವಿಭಾಗಗಳ ವಿಜೇತರಿಗೆ ತಲಾ ₹ 2.75 ಲಕ್ಷ ಬಹುಮಾನವಿದೆ. ಕೂಟ ದಾಖಲೆಗೆ ಹೆಚ್ಚುವರಿ ₹ 1 ಲಕ್ಷ ಲಭಿಸಲಿದೆ.

ದಾಖಲೆ ಸಂಖ್ಯೆಯ ನೋಂದಣಿ: ವಿಶ್ವ 10ಕೆ ಮಹಿಳೆಯರು, ವಿಶ್ವ 10ಕೆ ಪುರುಷರು, ಓಪನ್ 10ಕೆ, ಅಂಗವಿಕಲರು ಹಾಗೂ ಚಾಂಪಿಯನ್ಸ್ (3 ಕಿ.ಮೀ), ಹಿರಿಯ ನಾಗರಿಕರು (3 ಕಿ.ಮೀ) ಮತ್ತು ಮಜಾ ರನ್ (4.2 ಕಿ.ಮೀ) ಸೇರಿದಂತೆ ಒಟ್ಟು ಆರು ವಿಭಾಗಗಳಲ್ಲಿ ಒಟ್ಟು ದಾಖಲೆಯ 35 ಸಾವಿರ ಮಂದಿ ನೋಂದಾಯಿಸಿಕೊಂಡಿದ್ದಾರೆ.

> ಓಪನ್ 10ಕೆ ಓಟದಲ್ಲಿ ನಾನೂ ಪಾಲ್ಗೊಳ್ಳುತ್ತಿದ್ದು, ಉತ್ತಮ ಸಮಯದೊಂದಿಗೆ ಗುರಿ ತಲುಪಲು ಪ್ರಯತ್ನಿಸುತ್ತೇನೆ. ಒತ್ತಡವಿಲ್ಲದೆ ಆನಂದಿಸುತ್ತಾ ಸಾಗುತ್ತೇನೆ
> **ತೇಜಸ್ವಿ ಸೂರ್ಯ**
> ಸಂಸದ

ಕಬ್ಬನ್ ರಸ್ತೆಯಲ್ಲಿ ಮುಂಜಾನೆ 5.30ಕ್ಕೆ ಎಲೀಟ್ ಮಹಿಳೆಯರ 10 ಕಿ.ಮೀ ಓಟದೊಂದಿಗೆ ಆರು ವಿಭಾಗದ ಸ್ಪರ್ಧೆಗಳಿಗೆ ಚಾಲನೆ ಸಿಗಲಿದೆ. 10ಕೆ ಓಟವು ಹಲಸೂರು ಕೆರೆಯವರೆಗೆ ಸಾಗಿ ಅಲ್ಲಿಂದ ‘ಯು ಟರ್ನ್’ ಪಡೆದು ವಾಪಸಾಗಿ ವಿಧಾನಸೌಧದ ಮುಂಭಾಗದಲ್ಲಿ ಹೋಗಿ ಕೆ.ಆರ್. ವೃತ್ತದಲ್ಲಿ ಮತ್ತೆ ‘ಯು ಟರ್ನ್’ ಪಡೆದು ಮಾಣೆಕ್‌ಶಾ ಪರೇಡ್ ಮೈದಾನದ ಮುಂಭಾಗದಲ್ಲಿ ಸಂಪನ್ನಗೊಳ್ಳಲಿದೆ.

ಬೆಂಗಳೂರು ಓಟದ ಪ್ರಚಾರ ರಾಯಭಾರಿ, ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಚಿನ್ನ ಗೆದ್ದಿರುವ ಅಮೆರಿಕದ ಅಥ್ಲೀಟ್ ದಲೀಲಾ ಮುಹಮ್ಮದ್, ಸಂಸದ ತೇಜಸ್ವಿ ಸೂರ್ಯ, ಮೂರು ಚೆಂಡುಗಳನ್ನು ಜಗ್ಲಿಂಗ್ ಮಾಡುವುದರೊಂದಿಗೆ ಓಡಲಿರುವ ಪುಣೆಯ ಕೇತನ್ ಅಭೋಂಕರ್ ಅವರು ಓಟಕ್ಕೆ ವಿಶೇಷ ರಂಗು ತುಂಬಲಿದ್ದಾರೆ.

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ 1 (ಬೆಳಿಗ್ಗೆ 5.15ರಿಂದ)ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ 1 (ಬೆಳಿಗ್ಗೆ 5.15ರಿಂದ)

ಡೈಮಂಡ್ ಲೀಗ್ ಅಥ್ಲೆಟಿಕ್ಸ್: ಸ್ಟೀಪಲ್ ಚೇಸ್‌ನಲ್ಲಿ ಅವಿನಾಶ್‌ಗೆ 13ನೇ ಸ್ಥಾನ

ಶಿಯಾಮೆನ್, ಚೀನಾ (ಪಿಟಿಐ): ಭಾರತದ ಅಥ್ಲೀಟ್ ಅವಿನಾಶ್ ಸಬಳೆ ಅವರು ಇಲ್ಲಿ ನಡೆದ ಡೈಮಂಡ್ ಲೀಗ್ ಅಥ್ಲೆಟಿಕ್ಸ್‌ನ 3000 ಮೀಟರ್ಸ್ ಸ್ಟೀಪಲ್ ಚೇಸ್‌ನಲ್ಲಿ 13ನೇ ಸ್ಥಾನ ಪಡೆದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ 30 ವರ್ಷ ವಯಸ್ಸಿನ ಅವಿನಾಶ್ ಅವರು 8 ನಿಮಿಷ, 22.59 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಅವರು 16 ಓಟಗಾರರೊಂದಿಗೆ ಪೈಪೋಟಿಯಲ್ಲಿದ್ದರು.

ಹೋದ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಅವರು 8 ನಿಮಿಷ, 17.09 ಸೆಕೆಂಡುಗಳ ಕಾಲವನ್ನು ದಾಖಲಿಸಿದ್ದರು. ಅವರ 8 ನಿಮಿಷ, 9.91 ಸೆಕೆಂಡುಗಳ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ. ಅವಿನಾಶ್ ಅವರು ಹೋದ ವರ್ಷ ನಡೆದಿದ್ದ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ 11ನೇ ಸ್ಥಾನ ಪಡೆದಿದ್ದರು.

ಗಾಲ್ಫ್: ಅಂಗದ್ ಚೀಮಾಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂಡೀಗಢದ ಅಂಗದ್ ಚೀಮಾ ಅವರು ಇಲ್ಲಿ ನಡೆದ ₹2 ಕೋಟಿ ಬಹುಮಾನದ ಕಪಿಲ್ ದೇವ್‌–ಗ್ರಾಂಟ್ ಥಾರ್ನ್‌ಟನ್ ಆಹ್ವಾನಿತ ಗಾಲ್ಫ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ನಗರದ ಹೊರವಲಯದಲ್ಲಿರುವ ಪ್ರೆಸ್ಟೀಜ್ ಗಾಲ್ಫ್‌ಶೈರ್ ಕ್ಲಬ್‌ನಲ್ಲಿ ನಡೆದ ಈ ಕೂಟದ ಕೊನೆಯ ದಿನವಾದ ಶನಿವಾರ ಮೂರನೇ ಸುತ್ತಿನಲ್ಲಿ 66 ಸ್ಕೋರ್ (6 ಅಂಡರ್) ಸಂಪಾದಿಸಿ ತಮ್ಮ ನಾಲ್ಕನೇ ಪ್ರೊ ಪ್ರಶಸ್ತಿಗೆ ಮುತ್ತಿಕ್ಕಿದರು. ಜೊತೆಗೆ ₹30 ಲಕ್ಷ ಬಹುಮಾನ ಮತ್ತು ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಆರ್ಡರ್ ಆಫ್ ಮೆರಿಟ್‌ನಲ್ಲಿ 28ನೇ ಸ್ಥಾನದಿಂದ 10ನೇ ಸ್ಥಾನಕ್ಕೆ ಬಡ್ತಿ ಪಡೆದರು.

35 ವರ್ಷ ವಯಸ್ಸಿನ ಚೀಮಾ ಅವರು 54 ಹೋಲ್‌ಗಳ ಸ್ಪರ್ಧೆಯಲ್ಲಿ ಒಟ್ಟು 20 ಅಂಡರ್‌ಗಳಲ್ಲಿ 196 (66–64–66) ಸ್ಕೋರ್ ಸಂಪಾದಿಸಿದರು. ಆರಂಭಿಕ ಸುತ್ತಿನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಅವರು, ನಂತರದ ಎರಡು ಸುತ್ತುಗಳಲ್ಲಿ ಅಮೋಘವಾಗಿ ಆಡಿ ಪಿಜಿಟಿಐ ಮುಖ್ಯ ಟೂರ್‌ನಲ್ಲಿ ಎರಡು ಸ್ಟ್ರೋಕ್ ಅಂತರದಲ್ಲಿ ಮೂರನೇ ಜಯ ಸಾಧಿಸಿದರು.

ಟ್ರೋಫಿಯೊಂದಿಗೆ ಅಂಗದ್ ಚೀಮಾ –ಎಕ್ಸ್ ಚಿತ್ರ

ಎರಡನೇ ಸುತ್ತುಗಳ (65, 67) ಬಳಿಕ ಮೂರನೇ ಸ್ಥಾನದಲ್ಲಿದ್ದ ಬೆಂಗಳೂರಿನ ಕಾಲಿನ್ ಜೋಶಿ ಅವರು ಕೊನೆಯ ಸುತ್ತಿನಲ್ಲಿ 66 ಸ್ಕೋರ್ ಸಂಪಾದಿಸಿದರು. ಒಟ್ಟು 18 ಅಂಡರ್‌ಗಳಲ್ಲಿ 198 ಸ್ಕೋರ್‌ಗಳೊಂದಿಗೆ ರನ್ನರ್ ಅಪ್ ಆದರು. ಫರೀದಾಬಾದ್‌ನ ಅಭಿನವ್ ಲೋಹನ್ (66-65-70) ಮೂರನೇ ಸ್ಥಾನ ಪಡೆದರು. ಒಟ್ಟು 15 ಅಂಡರ್‌ಗಳಲ್ಲಿ 201 ಸ್ಕೋರ್ ಗಳಿಸಿದರು.

ಯುವರಾಜ್ ಸಂಧು 204 ಸ್ಕೋರ್‌ನೊಂದಿಗೆ (12 ಅಂಡರ್) ನಾಲ್ಕನೇ ಸ್ಥಾನ ಪಡೆದರು. ಇದರ ಫಲವಾಗಿ ಪಿಜಿಟಿಎ ಆರ್ಡರ್ ಆಫ್ ಮೆರಿಟ್‌ನಲ್ಲಿ ಮೂರನೇ ಸ್ಥಾನದಿಂದ ಮೊದಲ ಸ್ಥಾನಕ್ಕೆ ಏರಿದರು.

ಬಿಹಾರದ ಅಮನ್ ರಾಜ್ 11 ಅಂಡರ್‌ಗಳಲ್ಲಿ 205 ಸ್ಕೋರ್ ಪಡೆದು ಆರನೇ ಸ್ಥಾನ ಪಡೆದರು. ಅವರು ಕೊನೆಯ ಸುತ್ತಿನಲ್ಲಿ 63 ಸ್ಕೋರ್ ಸಂಪಾದಿಸಿ, ನೋಯ್ಡಾದ ಗೌರವ್ ಪ್ರತಾಪ್ ಸಿಂಗ್ ಮತ್ತು ಸಪ್ತಕ್ ತಲ್ವಾರ್ ಅವರು ನಿರ್ಮಿಸಿದ್ದ ಕೋರ್ಸ್ ದಾಖಲೆ ಸರಿಗಟ್ಟಿದರು.

ಕರ್ನಾಟಕದ ಪ್ರಣವಿ ಅರಸ್ 208 ಸ್ಕೋರ್‌ಗಳೊಂದಿಗೆ (8 ಅಂಡರ್) ಜಂಟಿ 18ನೇ ಸ್ಥಾನ ಪಡೆದರು. ಈ ಮೂಲಕ ಮಹಿಳಾ ವೃತ್ತಿಪರರ ಪೈಕಿ ಉತ್ತಮ ಸಾಧನೆ ಪ್ರದರ್ಶಿಸಿದರು.

ಭಾರತ– ಲಂಕಾ ಪಂದ್ಯ ಇಂದು

ಕೊಲಂಬೊ (ಪಿಟಿಐ): ಭಾರತ ಮಹಿಳಾ ತಂಡ, ಭಾನುವಾರ ಇಲ್ಲಿ ಆರಂಭವಾಗುವ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ ತಂಡವನ್ನು ಎದುರಿಸಲಿದೆ. ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ತಂಡದ ವೇಗದ ಬೌಲಿಂಗ್ ಸಂಪನ್ಮೂಲ ಪರೀಕ್ಷೆ ಗೊಳಪಡಿಸುವ ಸವಾಲು ಎದುರಿಸುತ್ತಿದ್ದಾರೆ.

ಹರ್ಮನ್

ನೀಳಕಾಯದ ವೇಗಿ ಕಶ್ವಿ ಗೌತಮ್ ತಂಡದ ಯುವ ವೇಗಿಗಳಲ್ಲಿ ಒಬ್ಬರಾಗಿದ್ದು ಅವರ ನಿರ್ವಹಣೆಯ ಮೇಲೆ ಕುತೂಹಲದ ಕಣ್ಣು ಇದೆ. ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್‌ಗೆ ಮೊದಲು ತಂಡದ ಸಿದ್ಧತೆಗೆ ಈ ಸರಣಿ ನೆರವಾಗಲಿದೆ.

ದಕ್ಷಿಣ ಆಫ್ರಿಕಾ ಈ ಸರಣಿಯಲ್ಲಿ ಆಡುತ್ತಿರುವ ಇನ್ನೊಂದು ತಂಡವಾಗಿದೆ.

19 ವರ್ಷದೊಳಗಿನವರ ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿದ್ದ ಕಶ್ವಿ ಇತ್ತೀಚಿನ ದಿನಗಳಲ್ಲಿ ಗಮನ ಸೆಳೆದಿದ್ದಾರೆ. ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಗುಜರಾತ್ ಜೈಂಟ್ಸ್ ಪರ ಆಡಿದ್ದು 9 ಪಂದ್ಯಗಳಿಂದ 6.45ರ ಇಕಾನಮಿಯಲ್ಲಿ 11 ವಿಕೆಟ್‌ಗಳನ್ನು ಪಡೆದಿದ್ದಾರೆ.

ತಿತಾಸ್ ಸಾಧು, ರೇಣುಕಾ ಸಿಂಗ್ ಮತ್ತು ಪೂಜಾ ವಸ್ತ್ರಾಕರ್ ಗಾಯಾಳುಗಳಾಗಿದ್ದು ವೇಗದ ಬೌಲಿಂಗ್ ವಿಭಾಗವು ಅರುಂಧತಿ ರೆಡ್ಡಿ ಅವರನ್ನು ನೆಚ್ಚಿಕೊಂಡಿದೆ. ಅವರನ್ನು ಬಿಟ್ಟರೆ ಅಮನ್ಜೋತ್ ಕೌರ್ ಇನ್ನೊಂದು ವೇಗದ ಬೌಲಿಂಗ್ ಆಯ್ಕೆಯಾಗಿದ್ದಾರೆ.

ಆರಂಭ ಆಟಗಾರ್ತಿ ಶಫಾಲಿ ವರ್ಮಾ ತಂಡಕ್ಕೆ ಮರಳುವಲ್ಲಿ ಯಶಸ್ವಿಯಾಗಿಲ್ಲ. ಹೀಗಾಗಿ ಬ್ಯಾಟಿಂಗ್ ವಿಭಾಗದಲ್ಲಿ ನಾಯಕಿ ಕೌರ್, ಉಪನಾಯಕಿ ಸ್ಮೃತಿ ಮಂದಾನ, ರಿಚಾ ಘೋಷ್, ಜೆಮಿಮಾ, ಹರ್ಲಿನ್ ಡಿಯೋಲ್ ಮೇಲೆ ಹೆಚ್ಚಿನ ಹೊಣೆಯಿದೆ.

ಮುದ್ದಂಡ ಕಪ್‌ನಲ್ಲಿ ಶನಿವಾರ ಮಂಡೇಪಂಡ ಮತ್ತು ನೆಲ್ಲಮಕ್ಕಡ ತಂಡದ ಆಟಗಾರರು ಚೆಂಡಿಗಾಗಿ ಸೆಣಸಾಟ ನಡೆಸಿದರು

ಕೊಡವ ಹಾಕಿ: ಫೈನಲ್‌ಗೆ ಮಂಡೇಪಂಡ, ಚೇಂದಂಡ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮಂಡೇಪಂಡ ಮತ್ತು ಚೇಂದಂಡ ತಂಡಗಳು ‘ಮುದ್ದಂಡ ಕಪ್’ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿವೆ.

ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ 14 ವರ್ಷ ವಯಸ್ಸಿನ ಗೋಲ್‌ಕೀಪರ್ ಡ್ಯಾನ್ ಬೆಳ್ಯಪ್ಪ ಅವರ ಅಮೋಘ ಆಟದ ನೆರವಿನಿಂದ ಮಂಡೇಪಂಡ ತಂಡವು ನೆಲ್ಲಮಕ್ಕಡ ತಂಡವನ್ನು ಮಣಿಸಿತು.

ಉಭಯ ತಂಡಗಳು ನಿಗದಿತ ಅವಧಿಯಲ್ಲಿ ತಲಾ ಒಂದು ಗೋಲು ಗಳಿಸಿ ಸಮಬಲ ಸಾಧಿಸಿದವು. ಟೈಬ್ರೇಕರ್‌ನಲ್ಲಿ 4–1 ಅಂತರದಿಂದ ಮಂಡೇಪಂಡ ಗೆಲುವು ಸಾಧಿಸಿತು. ಗೋಲ್‌ಕೀಪರ್ ಡ್ಯಾನ್ ಬೆಳ್ಯಪ್ಪ ಎದುರಾಳಿ ತಂಡದ 2 ಗೋಲುಗಳನ್ನು ತಡೆದು ಗಮನ ಸೆಳೆದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಚೇಂದಂಡ 3-1ರಿಂದ ಕುಪ್ಪಂಡ (ಕೈಕೇರಿ) ತಂಡವನ್ನು ಮಣಿಸಿತು. ವಿಜೇತ ತಂಡದ ಪರ ನಿಕಿನ್ ತಿಮ್ಮಯ್ಯ 1 ಹಾಗೂ ತಮ್ಮಯ್ಯ 2 ಗೋಲುಗಳನ್ನು ಗಳಿಸಿದರು. ಕುಪ್ಪಂಡ (ಕೈಕೇರಿ) ಪರವಾಗಿ ನಾಚಪ್ಪ 1 ಗೋಲು ಗಳಿಸಿದರು.

ಭಾನುವಾರ (ಏ. 27) ಮಂಡೇಪಂಡ ಮತ್ತು ಚೇಂದಂಡ ನಡುವೆ ಮುದ್ದಂಡ ಕಪ್‌ಗಾಗಿ ಸೆಣಸಾಟ ನಡೆಯಲಿದೆ.

ಭಾರತಕ್ಕೆ ಖಚಿತವಾದ 43 ಪದಕ

ಅಮ್ಮಾನ್ (ಜೋರ್ಡಾನ್), (ಪಿಟಿಐ): ಭಾರತದ ಇನ್ನೂ ನಾಲ್ವರು ಬಾಕ್ಸರ್‌ಗಳು, ಏಷ್ಯನ್ 15 ಮತ್ತು 17 ವರ್ಷದೊಳಗಿವನರ ಬಾಕ್ಸಿಂಗ್ ಚಾಂಪಿಯನ್‌ಷಿಪ್ಸ್‌ನ ಸೆಮಿಫೈನಲ್‌ಗೆ ಅರ್ಹತೆ ಪಡೆದರು. ಇದರೊಂದಿಗೆ, ಇದೇ ಮೊದಲ ಬಾರಿ ನಡೆಯುತ್ತಿರುವ ಈ ಕೂಟದಲ್ಲಿ ಭಾರತಕ್ಕೆ 43 ಪದಕಗಳು ಖಾತರಿಯಾಗಿವೆ.

ಸೆಮಿಫೈನಲ್ ತಲುಪುವ ಎಲ್ಲ ಸ್ಪರ್ಧಿಗಳಿಗೆ ಪದಕಗಳು ಖಾತರಿಯಾಗಿದೆ. ಹೀಗಾಗಿ 15 ವರ್ಷದೊಳಗಿನವರ ವಿಭಾಗದಲ್ಲಿ ಕನಿಷ್ಠ 25 ಪದಕಗಳು ಮತ್ತು 17 ವರ್ಷದೊಳಗಿನವರ ವಿಭಾಗದಲ್ಲಿ 18 ಪದಕಗಳನ್ನು ಭಾರತ ಗೆಲುವುದು ಖಚಿತವಾಗಲಿವೆ.

ಅಮನ್ ಸಿವಾಚ್ (63 ಕೆ.ಜಿ) ಮತ್ತು ದೇವಾಂಶ್ (80 ಕೆ.ಜಿ) ಅವರು 17 ವರ್ಷದೊಳಗಿನವರ ಬಾಲಕರ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಕ್ರಮವಾಗಿ ಫಿಲಿಪೀನ್ಸ್ ಮತ್ತು ಜೋರ್ಡಾನ್ ಎದುರಾಳಿಗಳನ್ನು ಸೋಲಿಸಿ ಅಂತಿಮ ನಾಲ್ಕರ ಘಟ್ಟ ತಲುಪಿದರು. ಆರ್‌ಎಸ್‌ಸಿ (ರೆಫ್ರಿ ಸ್ಟಾಪ್ಸ್ ಕಂಟೆಸ್ಟ್) ಆಧಾರದಲ್ಲಿ ಭಾರತದ ಬಾಕ್ಸರ್‌ಗಳು ಜಯಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಸಿಮ್ರಣ್‌ಜಿತ್ ಕೌರ್ (60 ಕೆ.ಜಿ) ಅವರು 5–0 ಯಿಂದ ಜೋರ್ಡನ್‌ನ ಅಯಾ ಅಲ್ಹಾಸನತ್ ವಿರುದ್ಧ, ಹಿಮಾಂಶಿ (70 ಕೆ.ಜಿ ವಿಭಾಗ) ಅವರು ಆರ್‌ಎಸ್‌ಸಿ ಆಧಾರದ ಮೇಲೆ ಪ್ಯಾಲಸ್ತೀನಿನ ಫರಾ ಅಬು ಲಾಯ್ಲ ವಿರುದ್ಧ ಜಯಗಳಿಸಿ ಸೆಮಿಫೈನಲ್ ತಲುಪಿದರು.17 ವರ್ಷದಗೊಳಗಿನ ಬಾಲಕರ ವಿಭಾಗದಲ್ಲಿ ಅನಂತ ಗೌರಿಶಂಕರ ದೇಶಮುಖ್ ಮತ್ತು ಪ್ರಿಯಾಂಶ್ ಸೆಹರಾವತ್ ಅವರು ಕ್ರಮವಾಗಿ ಡೇನಿಯಲ್ ಶಾಲ್ಕರ್‌ಬಾಯ್ (ಕಜಕಸ್ತಾನ) ಮತ್ತು ಖುರ್ಷಿದ್‌ಬೆಕ್ ಜುರಯೇವ್ (ಉಜ್ಬೇಕಿಸ್ತಾನ) ಅವರನ್ನು ಪಾಯಿಂಟ್ಸ್ ಆಧಾರದಲ್ಲಿ ಸೋಲಿಸಿದರು.

ಮಹಿಳಾ ಹಾಕಿ: ಭಾರತಕ್ಕೆ ಸೋಲು

ಪರ್ತ್ (ಪಿಟಿಐ): ಕಠಿಣ ಹೋರಾಟ ನೀಡಿದ ಹೊರತಾಗಿಯೂ ಭಾರತ ಮಹಿಳಾ ತಂಡ ಆಸ್ಟ್ರೇಲಿಯಾ ಪ್ರವಾಸದ ಮೊದಲ ಹಾಕಿ ಪಂದ್ಯದಲ್ಲಿ ಶನಿವಾರ ಆಸ್ಟ್ರೇಲಿಯಾ ಎ ತಂಡದ ಎದುರು 3–5 ಗೋಲುಗಳಿಂದ ಸೋಲನುವಭವಿಸಿತು.

ಭಾರತ ತಂಡ ಈ ಪ್ರವಾಸದಲ್ಲಿ ಐದು ಪಂದ್ಯಗಳನ್ನು ಆಡುತ್ತಿದೆ. ಭಾನುವಾರ ಎರಡನೇ ಪಂದ್ಯ ನಡೆಯಲಿದೆ.

ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡದ ಮಹಿಮಾ ಟೆಟೆ (27ನೇ ನಿಮಿಷ), ನವನೀತ್ ಕೌರ್ (45ನೇ ನಿ.), ಲಾಲ್ರೆಮ್‌ಸಿಯಾಮಿ (50ನೇ ನಿ.) ಗೋಲು ಹೊಡೆದರು. ಆಸ್ಟ್ರೇಲಿಯಾ ಎ ತಂಡದ ಪರ ನಿಯಾಸಾ ಫ್ಲಿನ್ (3ನೇ ನಿ.), ಒಲಿಲಿವಿಯಾ ಡೌನ್ಸ್ (9ನೇ ನಿ.), ರುಬಿ ಹ್ಯಾರಿಸ್ (11ನೇ ನಿ.), ಟಾಟಮ್ ಸ್ಟೀವರ್ಟ್ (21ನೇ ನಿ.) ಮತ್ತು ಕೆಂಡ್ರಾ ಫಿಟ್ಜ್‌ಪ್ಯಾಟ್ರಿಕ್ (44ನೇ ನಿ.) ಗೋಲು ಗಳಿಸಿದರು.

ಫ್ಲಿನ್ ಅವರು ಫೀಲ್ಡ್ ಗೋಲು ಹೊಡೆದಿದ್ದರಿಂದ ಆಸ್ಟ್ರೇಲಿಯಾ ಎ ತಂಡ ಪಂದ್ಯದ ಆರಂಭದಲ್ಲೇ ಮುನ್ನಡೆ ಸಾಧಿಸಿತು. ಡೌನ್ಸ್ ಮತ್ತು ಹ್ಯಾರಿಸ್ ಭಾರತದ ರಕ್ಷಣಾಕೋಟೆಯನ್ನು ಭೇದಿಸುವಲ್ಲಿ ಯಶಸ್ವಿಯಾಗಿ ಮತ್ತೆ ಎರಡು ಫೀಲ್ಡ್ ಗೋಲುಗಳನ್ನು ಬಾರಿಸಿದರು. ಇದರಿಂದ ಮೊದಲ ಕ್ವಾರ್ಟರ್‌ನಲ್ಲಿ ಆತಿಥೇಯ ತಂಡ 3–0 ಗೋಲಿನಿಂದ ಮುನ್ನಡೆ ಪಡೆಯಿತು.

ಆಸ್ಟ್ರೇಲಿಯಾ ತಂಡ ಎರಡನೇ ಕ್ವಾರ್ಟರ್‌ನಲ್ಲೂ ಭಾರತ ತಂಡದ ಮೇಲೆ ಒತ್ತಡ ಹೇರಿತು.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಯಲ್ಲಿ ಮೃತರಾದವರಿಗೆ ಸಂತಾಪ ಸೂಚಿಸಿ ಭಾರತದ ಆಟಗಾರ್ತಿಯರು ತೋಳಿಗೆ ಕಪ್ಪುಪಟ್ಟಿ ಕಟ್ಟಿ ಆಟವಾಡಿದರು.

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. **ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ಕಾಗದಪತ್ರ ಅಗತ್ಯವಿರಬಹುದು. **ಬಡ್ಡಿ ದರಗಳು, ಡೌನ್ ಪೇಮೆಂಟ್ ಮತ್ತು ಅವಧಿ ಆಯ್ಕೆಗಳು ಅರ್ಜಿದಾರರ ಸಾಲ ಪ್ರೊಫೈಲ್ ಅನ್ನು ಸಾಲದಾತರು ವಿಶ್ಲೇಷಣೆ ಮಾಡುವುದನ್ನು ಆಧರಿಸಿದೆ. **ಕೊಡುಗೆಗಳು/ವೈಶಿಷ್ಟ್ಯಗಳನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. #ಪೈನ್ ಲ್ಯಾಬ್ಸ್ ಮಶೀನ್‌ಗಳ ಮೂಲಕ IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿಕೊಂಡು ಮಾಡಿದ EMI ವಹಿವಾಟುಗಳಿಗೆ ಆಯ್ದ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಆಫರ್ ಲಭ್ಯವಿದೆ. #ಗ್ರಾಹಕರು 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಗರಿಷ್ಠ ₹5000 ವರೆಗೆ ಪಡೆಯಬಹುದು. #ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್ ಗೆ ಒಂದು ವಹಿವಾಟಿಗೆ ಮಾನ್ಯವಾಗಿದೆ. #ಸ್ಕೀಮ್ ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಲಭ್ಯವಿದೆ. *3 ವರ್ಷಗಳ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್ ಕೇವಲ Activa 110 ಮತ್ತು Activa 125 ಡಿಲಕ್ಸ್ ವೇರಿಯಂಟ್‌ನಲ್ಲಿ ಮಾತ್ರ ಲಭ್ಯವಿದೆ. *₹5500 ಮೌಲ್ಯದ 3 ವರ್ಷದ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್‌ನ ವಿವರವಾದ ನಿಯಮ ಮತ್ತು ಷರತ್ತುಗಳ ಬಗ್ಗೆ ದಯವಿಟ್ಟು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರುಗಳನ್ನು ಸಂಪರ್ಕಿಸಿ. *ಈ ಮೇಲಿನ ಸ್ಕೀಮ್ ಅನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಎಲ್ಲ ಕೊಡುಗೆಗಳು 2025 ಏಪ್ರಿಲ್ 30 ರ ವರೆಗೆ ಮಾನ್ಯವಾಗಿದೆ. ^ಸೀಮಿತ ಅವಧಿಯ ವಿಶೇಷ ದರವು ಕರ್ನಾಟಕ ರಾಜ್ಯದಲ್ಲಿ Activa 110cc ಸ್ಟಾಂಡರ್ಡ್ OBD2B ವೇರಿಯಂಟ್‌ಗಾಗಿದೆ. ಸೀಮಿತ ಅವಧಿಯ ವಿಶೇಷ ಬೆಲೆಯ ಬಗ್ಗೆ ವಿವರಗಳಿಗಾಗಿ, ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳನ್ನು ಸಂಪರ್ಕಿಸಿ. ಕ್ರಿಯೇಟಿವ್‌ನಲ್ಲಿ ತೋರಿಸಿದ ವೈಶಿಷ್ಟ್ಯಗಳು ಎಲ್ಲ ವೇರಿಯಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. ಚಿತ್ರದಲ್ಲಿ ತೋರಿಸಿದ ಉತ್ಪನ್ನಗಳು ಮಾರ್ಕೆಟ್‌ನಲ್ಲಿನ ಅಸಲಿ ಉತ್ಪನ್ನಕ್ಕಿಂತ ಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

1 UNIVERSITY
3 CAMPUSES
90,000+
TRANSFORMATIONS.

GITAM
BENGALURU

TRANSFORMATION. IT BEGINS HERE.

Scan or visit
www.gitam.edu

Turn the page to discover how GITAM BENGALURU fuels stories of transformation. Your story could be next.

4 DISCIPLINES. 400+ COMBINATIONS. UNLIMITED POSSIBILITIES.

Engineering | Humanities | Management | Sciences

CREATE WHAT COMES NEXT

We believe in an education that is applicable to life, for life.

TECHNOLOGY EXPLORATION & PRODUCT ENGINEERING (TEPE) CENTRE
A hands-on innovation lab where students move from concept to prototype through a guided process of ideation, design, and development.

VENTURE DEVELOPMENT CENTRE (VDC)
If you have a startup idea, here you'll receive the guidance, mentorship, and resources to take it forward.

MULTIDISCIPLINARY UNIT OF RESEARCH ON TRANSLATIONAL INITIATIVES (MURTI) LABS
A collaborative think tank driving interdisciplinary research that addresses regional, national, and global challenges.

LEARNING FROM THOSE WHO LEAD

With over 95% PhD faculty in most disciplines, 15% from IITs/NITs, and 10% with international experience, our educators bring global perspectives and research excellence.

Beyond the classroom, our faculty extend their work to drive real-world change.

FROM THE CSE DEPARTMENT

PROF. JEENA JACOB is developing a tech-driven app to help autistic children overcome speech and social barriers.



PROF. MOHAN B. KABADI is advancing early disease-detection tech for mulberry leaves to reduce crop loss.

A VIBRANT CAMPUS LIFE

At GITAM, your experience extends to every corner of the campus and beyond.

Strong Alumni Network

Comfortable Student Accommodation

Multi-Sport Facilities

21+ Student Clubs

ACADEMIC COLLABORATIONS

GW | WISCONSIN UNIVERSITY OF WISCONSIN-MADISON | UNCW | Coventry University | ELON UNIVERSITY | PennState | BINGHAMTON UNIVERSITY STATE UNIVERSITY OF NEW YORK

Admissions Open | Bengaluru | www.gitam.edu | Call: 8884984000

ಭಾನುವಾರ, ಏಪ್ರಿಲ್ 27, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಏಟು- ಎದಿರೇಟು

ಪಹಲ್ಗಾಮ್ ಘಟನೆಯಲ್ಲಿ ಭದ್ರತಾ ವೈಫಲ್ಯವಾಗಿದೆ. ಕೇಂದ್ರ ಸರ್ಕಾರದವರನ್ನು ನಂಬಿ ಪ್ರವಾಸಿಗರು ಅಲ್ಲಿಗೆ ಹೋಗಿದ್ದರು.
ಸಿದ್ದರಾಮಯ್ಯ
ಮುಖ್ಯಮಂತ್ರಿ

ಸಿದ್ದರಾಮಯ್ಯ ಅವರ ಮಾತು ಆಘಾತಕಾರಿ. ಮತ ಸಿಕ್ಕಿದರೆ ಸಾಕು ಎಂಬ ಅವರ ಮನಸ್ಥಿತಿ ನಾಚಿಕೆಗೇಡಿನ ಸಂಗತಿ.
ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

‘ರೈತರ ಆದಾಯ ಹೆಚ್ಚಿಸಲು ಸಂತೆ’ 6
ಭೂಸ್ವಾಧೀನ ಕಾಯ್ದೆ ಉಲ್ಲಂಘನೆ ಆರೋಪ 6
ಎತ್ತಿನಹೊಳೆ ಅಕ್ರಮ ವ್ಯಾಪಕ: ಕೇಂದ್ರ ತಂಡ 6
ಕೆ.ಆರ್.ಪೇಟೆಯ ‘ಬಾಂಬೆ’ ನಂಟು 2

ತರಬೇತಿ ಸ್ಥಗಿತಗೊಳಿಸಿದ ಆರೋಗ್ಯ ಇಲಾಖೆ, ಡಿಪ್ಲೊಮಾ ನರ್ಸಿಂಗ್‌ಗೆ ವಿದ್ಯಾರ್ಥಿಗಳ ಸ್ಥಳಾಂತರ

ಎಎನ್‌ಎಂ ತರಬೇತಿ ಕೇಂದ್ರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಎಲ್ಲ ಕಿರಿಯ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳನ್ನು (ಎಎನ್‌ಎಂ) ಮುಚ್ಚಲು ಸರ್ಕಾರ ನಿರ್ಧರಿಸಿದ್ದು, ಈಗಾಗಲೇ ಪ್ರವೇಶ ಪಡೆದಿರುವ ವಿದ್ಯಾರ್ಥಿನಿಯರು ಆತಂಕಕ್ಕೆ ಒಳಗಾಗಿದ್ದಾರೆ.

ಎರಡು ವರ್ಷಗಳ ಈ ಕೋರ್ಸ್‌ಗೆ ಜನವರಿಯಲ್ಲೇ ಪ್ರವೇಶ ಪಡೆದು, ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿನಿಯರು, ಇದೇ ತಿಂಗಳ 28ರಿಂದ ಆಂತರಿಕ ಪರೀಕ್ಷೆಗೆ ಸಿದ್ಧತೆ ನಡೆಸಿದ್ದರು. ತರಬೇತಿಯನ್ನು ಅರ್ಧಕ್ಕೆ ಮೊಟಕುಗೊಳಿಸಿ, ಕೇಂದ್ರಗಳನ್ನೇ ಮುಚ್ಚಲು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಮಧ್ಯಂತರದಲ್ಲೇ ತರಬೇತಿಯಿಂದ ವಂಚಿತರಾಗುತ್ತಿರುವ ವಿದ್ಯಾರ್ಥಿನಿಯರಿಗೆ ರಾಜ್ಯದಲ್ಲಿರುವ 18 ಸರ್ಕಾರಿ ಡಿಪ್ಲೊಮಾ ನರ್ಸಿಂಗ್ ಶಾಲೆಗಳಿಗೆ (ಜಿಎನ್‌ಎಂ) ಸೇರಲು ಅವಕಾಶ ನೀಡಿದೆ. ಮೂರು ವರ್ಷಗಳ ಡಿಪ್ಲೊಮಾ ನರ್ಸಿಂಗ್ ಸೇರಲು ಬಯಸದವರನ್ನು ಮನೆಗೆ ಕಳುಹಿಸಲು ಸೂಚನೆ ನೀಡಲಾಗಿದೆ. ಅಂಥವರು ತಮ್ಮ ಆಯ್ಕೆಯ ಇತರೆ ಕೋರ್ಸ್‌ಗಳನ್ನು ಸೇರಲು ಮುಕ್ತವಾಗಿರುತ್ತಾರೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ತರಬೇತಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸುತ್ತಿರುವ ಕಾರಣ ಕಾನೂನು ತೊಡಕು ಎದುರಾಗುವುದನ್ನು ತಡೆಯಲು ಮುಂಜಾಗ್ರತಾ ಕ್ರಮ ತೆಗೆದುಕೊಂಡಿರುವ ಇಲಾಖೆ, ಸ್ವ ಇಚ್ಛೆಯಿಂದ ಡಿಪ್ಲೊಮಾ ನರ್ಸಿಂಗ್‌ಗೆ ಸೇರುತ್ತಿರುವುದಾಗಿ ವಿದ್ಯಾರ್ಥಿಗಳಿಂದ ಸಮ್ಮತಿ ಪತ್ರ ಬರೆಸಿಕೊಳ್ಳಲು ಹೇಳಿದೆ.

ಇದೊಂದು ಬಾರಿ ಅವಕಾಶ: ಡಿಪ್ಲೊಮಾ ನರ್ಸಿಂಗ್ ಶಾಲೆಗಳು ವೈದ್ಯಕೀಯ ಶಿಕ್ಷಣ ಇಲಾಖೆ ಅಧೀನದಲ್ಲಿ ಬರುತ್ತವೆ. ಕಿರಿಯ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳನ್ನು ಆರೋಗ್ಯ ಇಲಾಖೆ ನಿರ್ವಹಿಸುತ್ತಿದೆ. ಈ ಕೇಂದ್ರಗಳನ್ನು ಮುಚ್ಚುತ್ತಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಅಲ್ಲಿನ ವಿದ್ಯಾರ್ಥಿನಿಯರನ್ನು ದಾಖಲು ಮಾಡಿಕೊಳ್ಳಲು ವೈದ್ಯಕೀಯ ಶಿಕ್ಷಣ ಇಲಾಖೆ ಅನುಮತಿ ನೀಡಿದೆ. ‘ಕಲಾ, ವಾಣಿಜ್ಯ ಅಥವಾ ವಿಜ್ಞಾನ ಯಾವುದೇ ವಿಷಯದಲ್ಲಿ ದ್ವಿತೀಯ ಪಿಯು ತೇರ್ಗಡೆಯಾದ ವರು ಎಎನ್‌ಎಂ ತರಬೇತಿಗೆ ಸೇರುತ್ತಿದ್ದರು. ಈ ತರಬೇತಿ ಪಡೆಯುತ್ತಿರುವವರಲ್ಲಿ ಗ್ರಾಮೀಣ ಯುವತಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಡಿಪ್ಲೊಮಾ ನರ್ಸಿಂಗ್ ಇಲ್ಲ. ಹಾಗಾಗಿ, ನಮ್ಮ ಮಗಳನ್ನು ಬೇರೆ ಜಿಲ್ಲೆಗೆ ಕಳುಹಿಸುವುದಿಲ್ಲ. ತರಬೇತಿ ನಿಂತಿರುವುದು ಬೇಸರ ತರಿಸಿದೆ’ ಎಂದು ರಾಯಚೂರು ಜಿಲ್ಲೆಯ ಪೋಷಕ ದೇನ್ಯಾ ನಾಯಕ್ ಬೇಸರ ವ್ಯಕ್ತಪಡಿಸಿದರು.

> **ಎಎನ್‌ಎಂ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಂದಲೂ ಸಮ್ಮತಿ ಪತ್ರ ಪಡೆದು ಡಿಪ್ಲೊಮಾ ನರ್ಸಿಂಗ್‌ಗೆ ಸ್ಥಳಾಂತರಗೊಳಿಸಲಾಗುತ್ತದೆ**
> **ಉಮಾ ಬುಗ್ಗಿ**, ನಿರ್ದೇಶಕಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ

ಅಂಕಿ ಅಂಶಗಳು

20 ಒಟ್ಟು ಎಎನ್‌ಎಂ ಕೇಂದ್ರಗಳು

580 ವಿದ್ಯಾರ್ಥಿಗಳು

18 ಸರ್ಕಾರಿ ಡಿಪ್ಲೊಮಾ ನರ್ಸಿಂಗ್ ಶಾಲೆಗಳು

ಡಿಪ್ಲೊಮಾ ನರ್ಸಿಂಗ್ ಸೇರಲು ಹಿಂದೇಟು

ಆರೋಗ್ಯ ಇಲಾಖೆ ಎಎನ್‌ಎಂ ತರಬೇತಿ ಕೇಂದ್ರದ ವಿದ್ಯಾರ್ಥಿನಿಯರಿಗೆ ಡಿಪ್ಲೊಮಾ ನರ್ಸಿಂಗ್ ಸೇರಲು ಅವಕಾಶ ನೀಡಿದ್ದರೂ, ಬಹುತೇಕ ವಿದ್ಯಾರ್ಥಿನಿಯರು ಹಿಂದೇಟು ಹಾಕಿದ್ದಾರೆ.

‘ಎಎನ್‌ಎಂ ತರಬೇತಿ ಎರಡು ವರ್ಷ ಇರುತ್ತದೆ. ಕನ್ನಡದಲ್ಲೂ ಪಾಠ, ಓದಿಗೆ ಅವಕಾಶ ಇದೆ. ಡಿಪ್ಲೊಮಾ ನರ್ಸಿಂಗ್ ಮೂರು ವರ್ಷ ಇರುತ್ತದೆ. ಇಂಗ್ಲಿಷ್ ಮಾಧ್ಯಮ ಮಾತ್ರವಿದೆ. ಗ್ರಾಮಿಣ ಪ್ರದೇಶದಿಂದ ಬಂದು ಕನ್ನಡ ಮಧ್ಯಮ ಕಲಿತ ನಮಗೆ ಡಿಪ್ಲೊಮಾ ಕಷ್ಟವಾಗುತ್ತದೆ. 2024ರ ನವೆಂಬರ್‌ನಲ್ಲಿ ಅರ್ಜಿ ಕರೆದಾಗ ಪದವಿ ಕಾಲೇಜು ತೊರೆದು ಇಲ್ಲಿಗೆ ಬಂದೆವು. ಅರ್ಜಿ ಕರೆಯುವ ಮೊದಲೇ ಈ ನಿರ್ಧಾರ ತೆಗೆದುಕೊಂಡಿದ್ದರೆ ಅಲ್ಲೇ ಓದು ಮುಂದುವರಿಸುತ್ತಿದ್ದೆವು. ಈಗ ಅಲ್ಲೂ ಇಲ್ಲ, ಇಲ್ಲೂ ಇಲ್ಲ ಎನ್ನುವಂತಾಗಿದೆ’ ಎಂದು ಹಲವು ವಿದ್ಯಾರ್ಥಿನಿಯರು ಅಳಲು ತೋಡಿಕೊಂಡರು.

ಗ್ರಾಮೀಣ ಆರೋಗ್ಯದ ಆಧಾರ ಸ್ತಂಭ

ಗ್ರಾಮೀಣ ಆರೋಗ್ಯ ಸೇವೆಯಲ್ಲಿ ಆರೋಗ್ಯ ಸಹಾಯಕಿಯರ ಮಾತ್ರ ಮಹತ್ವದಾಗಿದೆ. ಎಎನ್‌ಎಂ ತರಬೇತಿ ಪಡೆದವರು ದಶಕಗಳಿಂದಲೂ ಗ್ರಾಮಗಳಲ್ಲಿ ವೈದ್ಯರಂತೆಯೇ ಪ್ರಾಥಮಿಕ ಚಿಕಿತ್ಸೆ, ಆರೋಗ್ಯ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಈ ಹುದ್ದೆಗಳನ್ನು ಈಚೆಗೆ ‘ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ’ ಎಂದು ನಾಮ ಬದಲಾವಣೆ ಮಾಡಲಾಗಿತ್ತು. ಇನ್ನು ಮುಂದೆ ಆರೋಗ್ಯ ಸುರಕ್ಷಾಧಿಕಾರಿ ನೇಮಕಾತಿಗೆ ಎಎನ್‌ಎಂ ತರಬೇತಿ ಅಗತ್ಯವಿಲ್ಲದ ಕಾರಣ ಕೇಂದ್ರಗಳನ್ನು ಮುಚ್ಚಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಹೇಗಿದೆ ಹಾರಾಟ? ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿ ಪಾರಿವಾಳಗಳು ಹಾರುತ್ತಿದ್ದ ಸಡಗರವನ್ನು ಕಣ್ತುಂಬಿಕೊಳ್ಳಲು ಓಡುತ್ತಿದ್ದ ಬಾಲಕಿಯೊಬ್ಬಳು ಕ್ಯಾಮೆರಾ ಕಣ್ಣಿಗೆ ಕಂಡದ್ದು ಹೀಗೆ
ಚಿತ್ರ: ಎಂ.ಎಸ್.ಮಂಜುನಾಥ್

ಬೇಸಿಗೆಯಲ್ಲೂ ಹಾಲಿನ ಹೊಳೆ

ಕೆಎಂಎಫ್‌ನಲ್ಲಿ ಶೇ 9 ರಿಂದ ಶೇ 12ರಷ್ಟು ಸಂಗ್ರಹ ಹೆಚ್ಚಳ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಬೇಸಿಗೆಯಲ್ಲೂ ಕರ್ನಾಟಕ ಹಾಲು ಮಹಾಮಂಡಳದಲ್ಲಿ (ಕೆಎಂಎಫ್) ಹಾಲು ಸಂಗ್ರಹದ ಪ್ರಮಾಣ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇಕಡ 9ರಿಂದ ಶೇಕಡ 12ರಷ್ಟು ಹೆಚ್ಚಳವಾಗಿದೆ.

ಸಾಮಾನ್ಯವಾಗಿ ಬೇಸಿಗೆಯಲ್ಲಿ ಹಸಿರು ಮೇವಿನ ಕೊರತೆ, ತಾಪಮಾನದ ಕಾರಣಗಳಿಂದ ಹಾಲಿನ ಇಳುವರಿ ಕಡಿಮೆ ಆಗುತ್ತದೆ. ರೈತರು ಡೇರಿಗಳಿಗೆ ಹಾಕುವ ಹಾಲಿನ ಪ್ರಮಾಣವೂ ಸಹಜವಾಗಿಯೇ ಕಡಿಮೆಯಾಗುತ್ತದೆ. ಆದರೆ, ಈ ಬಾರಿ, ಹಾಲಿನ ಪ್ರಮಾಣ ಇಳಿಯುವ ಬದಲು, ತುಸು ಏರಿಕೆ ಕಂಡಿದೆ.

ಬೇಸಿಗೆಯಲ್ಲಿ ಸಂಗ್ರಹವಾಗುವ ಹಾಲಿನ ಪ್ರಮಾಣ (ಸರಾಸರಿ)

2024	2025
80.50 ಲಕ್ಷ.ಲೀ	87.63 ಲಕ್ಷ.ಲೀ

ರಾಜ್ಯದಲ್ಲಿ ಕೆಎಂಎಫ್ ವ್ಯಾಪ್ತಿಯಲ್ಲಿ 16 ಜಿಲ್ಲಾ ಹಾಲು ಒಕ್ಕೂಟಗಳಿವೆ. 15,840 ಡೇರಿಗಳಿವೆ. 26.89 ಲಕ್ಷ ರೈತರು ಹಾಲು ಪೂರೈಸುತ್ತಾರೆ. ಪ್ರತಿವರ್ಷ ಬೇಸಿಗೆಯಲ್ಲಿ ಹಾಲಿನ ಸಂಗ್ರಹ ಪ್ರಮಾಣ 80 ಲಕ್ಷ ಲೀಟರ್ ದಾಟುವುದಿಲ್ಲ. ಕಳೆದ ವರ್ಷ 80.50 ಲಕ್ಷ ಲೀಟರ್ ಸಂಗ್ರಹವಾಗಿತ್ತು. ಆದರೆ, ಈ ವರ್ಷ ಸರಾಸರಿ ಹಾಲು ಸಂಗ್ರಹದ ಪ್ರಮಾಣ 87.63 ಲಕ್ಷ ಲೀಟರ್ ದಾಟಿದೆ. ಏಪ್ರಿಲ್ 23ರ ಒಂದೇ ದಿನ ಹಾಲು 91.73 ಲಕ್ಷ ಲೀಟರ್ ಹಾಲು ಸಂಗ್ರಹವಾಗಿದೆ.

6ನೇ ಪುಟ ನೋಡಿ

ಒಕ್ಕೂಟ	ಏ.23 ರಂದು ಸಂಗ್ರಹವಾಗಿರುವ ಹಾಲಿನ ಪ್ರಮಾಣ	ಹಾಲು ಸಂಗ್ರಹ ಸರಾಸರಿ (ಲಕ್ಷ ಲೀ.)
ಬೆಂಗಳೂರು	16.08	15.31
ಹಾಸನ	13.19	12.51
ಮಂಡ್ಯ	11.33	10.67
ಮೈಸೂರು	8.63	8.18
ತುಮಕೂರು	8.57	8.14
ಶಿವಮೊಗ್ಗ	7.34	7.04
ಕೋಲಾರ	6.67	6.46
ಚಿಕ್ಕಬಳ್ಳಾಪುರ	4.42	4.24
ದಕ್ಷಿಣ ಕನ್ನಡ	3.67	3.57
ಚಾಮರಾಜನಗರ	2.64	2.44
ಬೆಳಗಾವಿ	2.12	2.12
ಬಳ್ಳಾರಿ	2.00	1.94
ಧಾರವಾಡ	1.68	1.65
ವಿಜಯಪುರ	1.47	1.46
ಹಾವೇರಿ	1.36	1.33
ಕಲಬುರಗಿ	0.56	0.58
ಒಟ್ಟು	91.73	87.63
23/04/2024	81.66	80.50
ಹೆಚ್ಚಿದ ಪ್ರಮಾಣ	12%	9%

ಚಿನ್ನಾಭರಣ ವಂಚನೆ ಪ್ರಕರಣ: ದುಬಾರಿ ಚರಾಸ್ತಿಗಳ ವಶಕ್ಕೆ ಪಡೆದುಕೊಂಡ ಜಾರಿ ನಿರ್ದೇಶನಾಲಯ

‘ಪ್ರಭಾವಿಗಳ ಜತೆ ಐಶ್ವರ್ಯ ಗೌಡ ವ್ಯವಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಹೇಳಿದಂತೆ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಕೊಡಿಸುತ್ತೇವೆ ಎಂದು ಐಶ್ವರ್ಯ ಗೌಡ ಮತ್ತು ಅವರ ಪತಿ ಹರೀಶ್ ಕೆ.ಎನ್. ಹಲವು ಉದ್ಯಮಿಗಳಿಗೆ ವಂಚಿಸಿದ್ದಾರೆ. ಕರ್ನಾಟಕದ ಪ್ರಭಾವಿ ವ್ಯಕ್ತಿಗಳ ಜತೆ ಹಣಕಾಸು ವ್ಯವಹಾರ ನಡೆಸಿದ್ದಾರೆ’ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

‘ಹೂಡಿಕೆ ಮಾಡುವಂತೆ ಉದ್ಯಮಿಗಳಿಂದ ಅಪಾರ ಪ್ರಮಾಣದ ಚಿನ್ನ, ನಗದು ಪಡೆದುಕೊಂಡಿದ್ದಾರೆ. ತಮ್ಮ ಬ್ಯಾಂಕ್ ಖಾತೆಗಳಿಗೂ ಹಣ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಅವುಗಳನ್ನು ಹಿಂತಿರುಗಿಸದೇ ಇದ್ದಾಗ, ಬೆದರಿಕೆ ಹಾಕಿದ್ದಾರೆ ಎಂಬುದು ಈವರೆಗಿನ ತನಿಖೆಯಲ್ಲಿ ಪತ್ತೆಯಾಗಿದೆ.

ಐಶ್ವರ್ಯ ಗೌಡ

6ನೇ ಪುಟ ನೋಡಿ

ನನ್ನನ್ನು ಮುಗಿಸಲು ಷಡ್ಯಂತ್ರ: ವಿನಯ್

‘ನನ್ನ ವಿರುದ್ಧ ಷಡ್ಯಂತ್ರ ನಡೆಸಲಾಗಿದೆ. ನನ್ನನ್ನು ರಾಜಕೀಯವಾಗಿ ಮುಗಿಸಲು ಹೀಗೆ ಮಾಡಲಾಗುತ್ತಿದೆ’ ಎಂದು ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಹೇಳಿದರು.

ಐಶ್ವರ್ಯಗೌಡ ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಯ್ ಕುಲಕರ್ಣಿ ಮನೆಯಲ್ಲಿ ಇ.ಡಿ ಅಧಿಕಾರಿಗಳು ಇದೇ ಗುರುವಾರ ತಪಾಸಣೆ ನಡೆಸಿದ್ದರು.

6ನೇ ಪುಟ ನೋಡಿ

ಪ್ರಜಾವಾಣಿ ಭಾನುವಾರದ
ಪುರವಣಿ
ಭಾನುವಾರ, 27 ಏಪ್ರಿಲ್ 2025

'ಗ್ಯೂ'ನ ನೆತ್ತಿಮೇಲೆ ಮಮ್ಮಿ! 5

ಎಐ ಚಿತ್ರ: ಕಣಕಾಲಮಠ

ಕೆ.ಆರ್.ಪೇಟೆ ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಇರುವ 'ಬಾಂಬೆ ಸ್ಟಾಪ್'ಗಳು ಹಸಿವಿನ ಕಥೆಯನ್ನು ಹೇಳುತ್ತವೆ. ಅನ್ನ ಅರಸಿ ಹೊರಟವರು ಮುಂಬೈನಲ್ಲಿ ಒಂದಿಷ್ಟು ಕಾಲ ದುಡಿದು ಗಳಿಸಿ ಮರಳಿ ಬಂದಿದ್ದಾರೆ. ಇನ್ನು ಹಲವರು ಅಲ್ಲಿಯೇ ವ್ಯಾಪಾರ–ವ್ಯವಹಾರ ನಡೆಸುತ್ತಾ ನೆಲೆ ಕಂಡುಕೊಂಡಿದ್ದಾರೆ.

ಕೆ.ಆರ್. ಪೇಟೆ ಟು ಬಾಂಬೆ

ಕೆ. ನರಸಿಂಹಮೂರ್ತಿ

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಗೂ ಬಾಂಬೆಗೂ(ಮುಂಬೈ) ಎಲ್ಲಿಂದೆಲ್ಲಿಯ ಸಂಬಂಧ ಎಂದು ಕೇಳಿದರೆ, ಆ ತಾಲ್ಲೂಕಿನ ಜನರ ನಡುವೆ ವಿಸ್ಮಯದ ನಗೆ ಮಿಂಚುತ್ತದೆ. ಏಕೆಂದರೆ, ಅಲ್ಲಿನ ಹತ್ತಾರು ಹಳ್ಳಿಗಳ ಸಾವಿರಾರು ಮಂದಿಗೆ ದೂರದ ಬಾಂಬೆ ಬದುಕು ಕಟ್ಟಿಕೊಟ್ಟಿದೆ. ಅವರ ಆ ಬದುಕಿನಲ್ಲಿ ನೋವೂ ಇದೆ, ನಲಿವೂ ಇದೆ.

ಹೇಮಾವತಿ ನಾಲೆಯು ನಿರ್ಮಾಣವಾಗುತ್ತಿದ್ದ ಕಾಲಘಟ್ಟವೇ ಅವರಿಗೆ ಬಾಂಬೆಯನ್ನು ಪರಿಚಯಿಸಿದೆ. ನಾಲೆಗಾಗಿ ಎಷ್ಟು ಮಣ್ಣು ಹೊತ್ತರೂ ಹೊಟ್ಟೆ ತುಂಬ ಹಿಟ್ಟು ಸಿಗದ ಕಾಲದಲ್ಲಿ, ಅವರೆಲ್ಲ ಹಸಿವು ನೀಗಿಸಿಕೊಳ್ಳಲೆಂದೇ ಬಾಂಬೆಯ ದಾರಿ ತುಳಿದರು.

ಲೋಯರ್ ಪ್ರೈಮರಿ ಸ್ಕೂಲಿನಲ್ಲಿರುವಾಗಲೇ ಅಪ್ಪನ ಜೇಬಿನಿಂದ ದುಡ್ಡು ಕದ್ದು, ಮನೆಯಲ್ಲಿ ಯಾರಿಗೂ ಹೇಳದೇ ಕೇಳದೆ, ಶಾಲೆಯನ್ನು ಅರ್ಧಕ್ಕೇ ಬಿಟ್ಟು ಅನಾಥರಂತೆ ಹೋಗಿ, ಹೋಟೆಲ್‌ಗಳಲ್ಲಿ ತಟ್ಟೆ, ಲೋಟ ತೊಳೆಯುತ್ತಲೇ ಅಲ್ಲಿನ ಜನರ ವಿಶ್ವಾಸ ಗಳಿಸಿಕೊಂಡು, ಹೋಟೆಲ್ ಉದ್ಯಮಿಗಳಾದವರೂ ಇದ್ದಾರೆ. ಅಲ್ಲಿಂದ ಕಳುಹಿಸುತ್ತಿದ್ದ ಪುಡಿಗಾಸೇ ಇಲ್ಲಿ ಅವರ ಮನೆಯವರ ಬದುಕನ್ನೂ ಕಟ್ಟಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ, ಮಗಳ ಮದುವೆಗೆ, ಅಪ್ಪ, ಅಮ್ಮನ ಚಿಕಿತ್ಸೆಗೆ, ಮನೆ ಕಟ್ಟಲಿಕ್ಕೆ ಬಾಂಬೆಯಲ್ಲಿ ದುಡಿದ ಹಣವೇ ನೆರವಾಗಿದೆ ಎಂಬುದು ಅವರಿಗೆ ಒಂದು ವರ್ಣರಂಜಿತ ಇತಿಹಾಸ. ಹೋಟೆಲ್, ಬಾರ್‌ಗಳಲ್ಲಿ ನಂಬಿಗಸ್ಥ ಕ್ಯಾಶಿಯರ್‌ಗಳಾಗಿ ದಿನವೂ ಲಕ್ಷ ಲಕ್ಷ ಹಣ ಎಣಿಸಿದರೂ ಅವರ ಪ್ರಾಮಾಣಿಕತೆಗೆ ಮುಕ್ಕು ಬರಲಿಲ್ಲ ಎಂಬುದು ಇನ್ನೊಂದು ಹೆಮ್ಮೆ.

ಅಲ್ಲಿ ಬೆವರಿಳಿಸಿ, ಇಲ್ಲಿನ ಮನೆಯನ್ನು ಬೆಳಗಿದ ವಲಸೆ ಬದುಕಿನ ಕಥೆ ಇದು. ಈಗ ಅಲ್ಲಿಯೂ ಹಲವರಿಗೆ ಸ್ವಂತ ಮನೆಗಳಿವೆ, ವ್ಯವಹಾರಗಳಿವೆ, ವೈವಾಹಿಕ ಸಂಬಂಧಗಳೂ ಏರ್ಪಟ್ಟಿವೆ. ಹಲವರ ಮಕ್ಕಳೂ ಅಲ್ಲಿಯೇ ನೆಲೆಸಿದ್ದಾರೆ. ಅವರ ಮಕ್ಕಳೂ ಅಲ್ಲೇ ಬೆಳೆಯುತ್ತಿದ್ದಾರೆ.

ಈಗಲೂ ಕೆ.ಆರ್. ಪೇಟೆ ತಾಲ್ಲೂಕಿನ ಹಳ್ಳಿಗಳಲ್ಲಿ 'ಬಾಂಬೆ ಬಸ್ ಸ್ಟಾಪ್'ಗಳಿವೆ, ಬೋರ್ಡುಗಳಿಲ್ಲ ಅಷ್ಟೆ. ಬಸ್‌ಗಳು ಮೈಸೂರಿನಿಂದ ಹೊರಟರೂ ಜನ ತುಂಬಿಕೊಳ್ಳುವುದು ಈ ಹಳ್ಳಿಗಳಿಂದಲೇ. ತಾಲ್ಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಪ್ರತಿ ಹಳ್ಳಿಯ ಬಹುತೇಕ ಮನೆಗಳಲ್ಲಿ ಈಗ ಇರುವ ಹಿರಿಯರು ಬಾಂಬೆಯಲ್ಲೇ ಅರಳಿದವರು. ಕರ್ನಾಟಕ ಎಂಬುದು ಈ ಜನರಿಗೆ ಮೊದಲ ತಾಯಿಯಾದರೆ, ಬಾಂಬೆ ಎರಡನೇ ತಾಯಿ!

ಅವರ ಕುಟುಂಬಗಳನ್ನು ಇನ್‌ಲ್ಯಾಂಡ್ ಲೆಟರ್, ಟ್ರಂಕಾಲ್, ಎಸ್‌ಟಿಡಿ ಬೂತ್ ಹಾಗೂ ಮೊಬೈಲ್‌ಫೋನ್‌ಗಳು ಕಾಲಾನುಕ್ರಮದಲ್ಲಿ ನಿರಂತರವಾಗಿ ಬೆಸೆದಿವೆ. ಕಷ್ಟಸುಖದ ಮಾತುಗಳಿಗೆ ದನಿಯಾಗಿವೆ. ಕಣ್ಣೀರಿಗೂ, ಆನಂದಬಾಷ್ಪಕ್ಕೂ ಸಾಕ್ಷಿಯಾಗಿವೆ. ದುಃಖದ ಸುದ್ದಿಗಳನ್ನು ಕೊಟ್ಟಂತೆಯೇ ಸಾಂತ್ವನದ ನುಡಿಗಳಿಗೂ ಸೇತುವೆಯಾಗಿವೆ.

ಶ್ಯಾರಳ್ಳಿ, ಸಾರಂಗಿ, ಕೈಗೊನಹಳ್ಳಿ, ಕೊರಟಗೆರೆ, ಅಪ್ಪನಹಳ್ಳಿ, ಬಿಕ್ಕನಹಳ್ಳಿ, ದುಕ್ಕನಹಳ್ಳಿ, ಉಬ್ಬನಹಳ್ಳಿ, ನಾರಾಯಣಪುರ, ನಾಯಸಿಂಗನಹಳ್ಳಿ, ಸಿಂಗಾಪುರ, ದೊಡ್ಡಹಾರನಹಳ್ಳಿ, ನಾಗರಘಟ್ಟ, ದೊಡ್ಡಸೋಮನಹಳ್ಳಿ, ನಾಯಕನಹಳ್ಳಿ, ಕೊತ್ತಮಾರನಹಳ್ಳಿ, ಕೊಪ್ಪನಹಳ್ಳಿ, ಮಾಳಗುರು... ಎಲ್ಲಿ ನಿಂತು ಕೇಳಿದರೂ ಆ ಮನೆಯಲ್ಲಿ ಬಾಂಬೆಗೆ ಹೋಗಿ ದುಡಿದು ಬಂದವರಿದ್ದಾರೆ. ಬಹುತೇಕರು ಹಿಂದಿ ಭಾಷೆಯನ್ನು ಸಲೀಸಾಗಿ ಮಾತಾಡುತ್ತಾರೆ.

'ಮಳೆ ಇಲ್ಲ, ಬರಗಾಲದ ನಡುವೆ ಅನ್ನವೂ ಇಲ್ಲ. ತಂದೆ ತಾಯಿಗೂ ಕಷ್ಟ. ಅಷ್ಟಿಷ್ಟು ಜಮೀನು ಇದ್ದರೂ ಏನು ಮಾಡಲು ಸಾಧ್ಯವಿತ್ತು? ಬೋರ್‌ವೆಲ್ ಇರಲಿಲ್ಲ. ಮಳೆ ನೋಡಿಕೊಂಡು ಕೂರಬೇಕಿತ್ತು. ಜಮೀನಿನಲ್ಲಿ ಕೂಲಿ ಮಾಡಿದರೆ ಕೆಲವು ಮಾಲೀಕರು ಜೋಳ ಕೊಡ್ತಿದ್ದರು. ಬಾಂಬೆಯಲ್ಲಿ ಹೋಟೆಲ್‌ಗಳಿರೋದ್ರಿಂದ ಅಲ್ಲಿಗೆ ಹೋದರೆ ಊಟವಾದ್ರೂ ಸಿಕ್ಕತ್ತೆ ಅಂತ ಮನೇಲೂ ಹೇಳದೆ ಹೋದೆ. ಆಗ ನನಗೆ ಎಂಟೋ ಒಂಬತ್ತೋ ವಯಸ್ಸಿರಬೇಕು' ಎಂದರು 56ರ ರಾಜೇಗೌಡ.

ಅವರು ಓದಿರೋದು ಎರಡನೇ ಕ್ಲಾಸು. ನಾಲ್ಕೂವರೆ ದಶಕಕ್ಕೂ ಹೆಚ್ಚು ಕಾಲ ಬಾಂಬೆಯೇ ಅವರಂಥವರನ್ನು ಸಲಹಿದೆ. ಕೋವಿಡ್ ಬಳಿಕ, ಕಳೆದ ಮೂರು ವರ್ಷದಿಂದ ಅವರು ತಮ್ಮ ಊರಾದ ಶ್ಯಾರಳ್ಳಿಯಲ್ಲೇ ನೆಲೆಸಿದ್ದಾರೆ. ಅವರ ಇಬ್ಬರು ಮಕ್ಕಳು ಮಾತ್ರ ಬಾಂಬೆಯ ಚೆಂಬೂರಿನಲ್ಲೇ ಬೇಕರಿ ನಡೆಸುತ್ತಿದ್ದಾರೆ.

ರಾಜೇಗೌಡ ಆ ದಿನಗಳ ನೆನಪುಗಳನ್ನು ಹೀಗೆ ಪೇರಿಸಿಡುತ್ತಾ ಹೋದರು.

'ಬೆಳಿಗ್ಗೆಯಿಂದ ರಾತ್ರಿವರೆಗೂ ತಟ್ಟೆ, ಲೋಟ ತೊಳೆದೂ ತೊಳೆದೂ ಬೆರಳುಗಳು ಸೆಟೆದುಕೊಂಡು ದುರ್ವಾಸನೆ ಬರೋವು. ಊಟ ಮಾಡೋಕೂ ಆಗ್ತಿರಲಿಲ್ಲ. ಈರುಳ್ಳಿ ಚೀಲದಲ್ಲಿ ತೂರಿಕೊಂಡು ಮಲಗುತ್ತಿದ್ದೆವು. ತಿಂಗಳ ಸಂಬಳ ಮೂವತ್ತು ರುಪಾಯಿ'.

'ಆಗಿನ ಕಾಲಕ್ಕೆ, ಬಾಂಬೆಗೆ ಹೋಗಿ ಹಬ್ಬಕ್ಕೆ ಬಂದವರನ್ನು ನೋಡಿ, ಅಕ್ಕಪಕ್ಕದ ಮನೆಯವರು ತಮ್ಮ ಮಕ್ಕಳನ್ನೂ ಅವರೊಂದಿಗೇ ಕಳುಹಿಸುತ್ತಿದ್ದರು. ಗಂಡು ಮಕ್ಕಳು ಬಾಂಬೆಯಲ್ಲಿದ್ದರೆ, ಹೆಣ್ಣು ಮಕ್ಕಳಷ್ಟೇ ಹಳ್ಳಿಗಳಲ್ಲಿರುತ್ತಿದ್ದರು'.

'ಬಾಂಬೆಗೆ ಹೋದವರು ಮೊದಲು ಪ್ಲೇಟು, ಗ್ಲಾಸು ತೊಳೀಬೇಕು, ಆಮೇಲೆ ವೇಟರ್ ಕೆಲಸ. ನಾಕು ತಿಂಗಳಿಗೇ ಹಿಂದಿ ಕಲಿತೆ. ನಾಲ್ಕು ವರ್ಷ ಹೋಟೆಲ್‌ನಲ್ಲಿ ಕೆಲಸ. ಆಮೇಲೆ ಬಾರ್‌ನಲ್ಲಿ ಕ್ಯಾಶಿಯರ್ ಕೆಲಸ. ದಾದರ್ ನಂತರ ಬರುವ ರೈಲು ನಿಲ್ದಾಣ ಮಾಟುಂಗ್‌ನ ರೈಲ್ವೆ ಕ್ಯಾಂಟೀನ್‌ನಲ್ಲೂ ಅದೇ ಕೆಲಸ ಮಾಡಿದೆ. ಬಾಂಬೆಯಲ್ಲಿ ಎಚ್‌ಐವಿ– ಏಡ್ಸ್ ವಿಪರೀತವಾಗಿದ್ದರಿಂದ, ಆಗಿನ ಕಾಲಕ್ಕೆ ಹಾಸನ, ಚನ್ನರಾಯಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಊರುಗಳಲ್ಲಿ ಬಾಂಬೆಯಲ್ಲಿರೋರಿಗೆ ಹೆಣ್ಣು ಕೊಡಲ್ಲ ಅಂತ ಬೋರ್ಡ್ ಹಾಕ್ತಿದ್ದರು'.

ಅವರ ಮುಖದ ನೆರಿಗೆಗಳಲ್ಲಿ ಈ ಎಲ್ಲವೂ ಅಲಿಖಿತವಾಗಿಯೂ ಗೋಚರಿಸುತ್ತಿದ್ದವು. ಹೆಣ್ಣು ಹುಡುಕಿ ಮದುವೆ ಮಾಡಲು 'ಬಾಂಬೆ ಮನೆ'ಯವರು ಪಟ್ಟ ಕಷ್ಟಗಳನ್ನು ಹೇಳತೀರದು.

80ರ ದಶಕದಲ್ಲಿ ಬಾಂಬೆಗೆ ಹೋಗಿ ಹತ್ತು ವರ್ಷ ಅಂಧೇರಿ ರೈಲ್ವೆ ಕ್ಯಾಂಟೀನ್‌ನಲ್ಲಿ ಕೆಲಸ ಮಾಡಿದ ಶಿವಲಿಂಗೇಗೌಡರೂ ಶ್ಯಾರಳ್ಳಿಯವರೇ. 'ಬಾಂಬೆಯಲ್ಲಿ ಸಂಪಾದನೆ ಎಂಬುದು ಅವರವರ ಸ್ಟಾರ್‌ಗೆ ತಕ್ಕಂತೆ ಇರುತ್ತದೆ. ಅಲ್ಲಿಗೆ ಹೋಗಿ ಹಣ ಸಂಪಾದಿಸಿಕೊಂಡು ಬಂದವರೂ ಇದ್ದಾರೆ. ಸಂಪಾದಿಸಲಾಗದೇ ಬಂದವರೂ ಇದ್ದಾರೆ. ಸಂತೃಪ್ತಿ ಕಂಡವರು ಅಲ್ಲೇ ನೆಲೆಯೂರಿದ್ದಾರೆ'– ಹೀಗೆ ಕಡಿಮೆ ಮಾತಿನಲ್ಲೇ ಬಾಂಬೆ ಬದುಕನ್ನು ಬಿಚ್ಚಿಟ್ಟರು. ಅವರ ಅಳಿಯ ಬಾಂಬೆ ನಿವಾಸಿ. ಅಲ್ಲಿಂದ ವಾಪಸಾಗಿರುವ ಅವರು ಗ್ರಾಮದಲ್ಲಿ ಈಗ ವಾಟರ್‌ಮನ್.

'ಮಂಗಳೂರಿನ ಶೆಟ್ಟಿ ಸಮುದಾಯದವರು ಬಾಂಬೆಯಲ್ಲಿ ಹೋಟೆಲ್ ಉದ್ಯಮಿಗಳು. ಯಾವ ಊರಿನವರೇ ಆಗಿರಲಿ, ಹೊಟ್ಟೆ ಹಸಿವೆಂದು ಬಂದವರಿಗೆ ಊಟ ಕೊಡದೆ ಕಳಿಸಿದ್ದಿಲ್ಲ. ನಮ್ಮ ಹೆಸರಿನ ಜೊತೆಗಿರುತ್ತಿದ್ದ ಗೌಡ ಎಂಬುದನ್ನು ಹಿಂದಿ ಭಾಷಿಕರು ಗೋಡಾ ಎಂದು ಉಚ್ಚರಿಸಿ, ಕತ್ತೆಗಳ ಎಂದು ಬೈಯುತ್ತಿದ್ದರು. ಆದರೆ ನಮ್ಮ ಎಚ್.ಡಿ.ದೇವೇಗೌಡರು ಯಾವಾಗ ಪ್ರಧಾನಮಂತ್ರಿಯಾದರೋ ಆಗಿನಿಂದ ಗೌಡ ಎಂಬುದರ ಮಹತ್ವ ಅವರಿಗೆ ಗೊತ್ತಾಯಿತು' ಎಂಬುದು ಬಾಂಬೆಗೆ ಹೋಗಿ ಬಂದವರ ಒಕ್ಕೊರಲ ಅನಿಸಿಕೆ. 'ಈಗ ಮಂಗಳೂರಿನವರಿಗಿಂತಲೂ ನಮ್ಮ ಜನರೇ ಹೋಟೆಲ್‌ಗಳನ್ನು ನಡೆಸುತ್ತಿದ್ದಾರೆ. ಸ್ಥಳೀಯರಿಗೂ ಪೈಪೋಟಿ ಕೊಡುತ್ತಿದ್ದಾರೆ' ಎಂಬುದು ಅವರ ಹೆಮ್ಮೆ.

'ನಾವು ಅಲ್ಲಿ ಆಳುಗಳು, ಇಲ್ಲಿ ಅರಸರು. ನಾವು ಅಲ್ಲಿ ಎಷ್ಟೇ ಕಷ್ಟಪಟ್ಟರೂ ಊರಿಗೆ ಬರುವಾಗ ಹೊಸಬಟ್ಟೆ ಹಾಕಿಕೊಂಡು, ಟಿಪ್‌ಟಾಪಾಗಿ ಬರ್ತಿದ್ದೆವು. ನಮ್ಮನ್ನು ಎಲ್ಲರೂ ಮುತ್ತಿಕೊಳ್ಳೋರು. ಎಲ್ಲರಿಗೂ ಎಲೆ ಅಡಿಕೆ, ಪಾರ್ಲೆ ಜಿ ಬಿಸ್ಕತ್ ಮತ್ತು ಕಡಲೇಪುರಿ ಕೊಡ್ತಿದ್ದೆವು. ಫಂ ಅನ್ನೋ ಬಿಸ್ಕತ್ತು ಅದು' ಎಂದು ಇಬ್ಬರೂ ಹಿರಿಯರು ನಕ್ಕರು.

ಅವರ ಅನುಭವದ ಮಾತುಗಳನ್ನು ಮನಕ್ಕೆ ಹೆಕ್ಕಿಕೊಳ್ಳುವ ಹೊತ್ತಿಗೆ ಸೂರ್ಯ ನೆತ್ತಿಗೇರಿದ್ದ. ಚುರುಗುಡುತ್ತಿದ್ದ ಹೊಟ್ಟೆಗೆ, ತಾವೇ ಮರದಿಂದ ಕಿತ್ತು ತಂದ ಎಳನೀರು ಕೊಟ್ಟು ತಂಪಾಗಿಸಿದರು. ಅದು ಹಳ್ಳಿ ಹಾಗೂ ಬಾಂಬೆ ಕಲಿಸಿದ ಆತಿಥ್ಯದ ಪಾಠ.

5ನೇ ಪುಟಕ್ಕೆ...

ಪತಿ ಅಲ್ಲಿ, ಪತ್ನಿ ಇಲ್ಲಿ...

ಬಾಂಬೆಗೆ ಹೋದ ಗಂಡಸರ ಕಷ್ಟಗಳ ಜೊತೆಗೆ, ಅವರನ್ನು ಅಲ್ಲಿಗೆ ಕಳಿಸಿಕೊಟ್ಟು ಏಕಾಂಗಿಗಳಾಗಿ ಮಕ್ಕಳು, ಸಂಸಾರವನ್ನು ಪೋಷಿಸಿದ ಮಹಿಳೆಯರ ಸಾತ್ವಿಕ ಶಕ್ತಿಯೂ ಮರೆಯಲ್ಲಿದ್ದುಕೊಂಡೇ ಈ ಹಳ್ಳಿಗಳನ್ನು ಪೊರೆದಿದೆ.

ಸಂತೇಬಾಚಹಳ್ಳಿ ಹೋಬಳಿಯ ಆದಿಹಳ್ಳಿಯ ಬಿ.ಎಸ್.ಮೀನಾಕ್ಷಿ ಅಂಥ ಮಹಿಳೆಯರಲ್ಲೊಬ್ಬರು. ಬಾಂಬೆಗೆ ಹೋಗಿ ತಟ್ಟೆ, ಲೋಟ ತೊಳೆಯುವ ಕೆಲಸಕ್ಕೆ ಸೇರಿದ ಪತಿ ರಮೇಶ್ ಈಗ ಅಲ್ಲಿ ಹೋಟೆಲ್ ಉದ್ಯಮಿ. ಕೂಡು ಕುಟುಂಬದ ಸೊಸೆಯಾಗಿ ಅವರು ಪತಿಯ ಅಕ್ಕ, ತಮ್ಮಂದಿರ ಬಗ್ಗೆಯೂ ಕಾಳಜಿ ತೋರಿದವರು. ತಮ್ಮ ಮಕ್ಕಳಿಗೆ ಯಾವ ವಿಶೇಷ ಅನುಕೂಲವೂ ದೊರಕದಂತೆ, ಕನ್ನಡ ಮಾಧ್ಯಮ ಶಾಲೆಯಲ್ಲೇ ಓದಿಸಿ, ಬೆಳೆಸಿದವರು.

'ಅವರನ್ನು ಮದುವೆಯಾದಾಗ ಒಂದು ಎಕರೆ ಭೂಮಿಯೂ ಇರಲಿಲ್ಲ. ಈಗ 20 ಎಕರೆ ಜಮೀನಿದೆ. ವಿಮಾನದಲ್ಲೇ ಪ್ರಯಾಣ. ಇದು ಬಾಂಬೆ ಕೊಟ್ಟ ಬಳುವಳಿ' ಎಂದು ಅವರು ನಕ್ಕರು.

'ನಾನು ಮದುವೆಯಾಗಿ ಬಂದಾಗ ಆದಿಹಳ್ಳಿ ಕುಗ್ರಾಮವಾಗಿತ್ತು. ಕಾಡಿನ ನಡುವೆ ಇದ್ದಂತೆ ಭಯವಾಗುತ್ತಿತ್ತು. ಪತಿ ಬಾಂಬೆಯಿಂದಲೇ ಇನ್‌ಲ್ಯಾಂಡ್ ಲೆಟರ್ ಬರೀತಿದ್ದರು. ನಾಲ್ಕೈದು ಲೆಟರ್ ಬರುವ ಹೊತ್ತಿಗೆ ವರ್ಷ ಮುಗಿದು ಹೋಗಿರುತ್ತಿತ್ತು. ಅವರು ವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ಬರ್ತಿದ್ದರು. ನಾನಿಲ್ಲಿ ಮನೆಮಂದಿಯ ಕಾಳಜಿ ವಹಿಸ್ತಿದ್ದೆ' ಎಂದಾಗ ಅವರ ಮುಖದಲ್ಲಿ ನೋವು, ನಲಿವಿನ ಗೆರೆಗಳೆರಡೂ ಹೊಳೆದವು. ಅವರು ಮನೆಗೋಸ್ಕರ, ತಮಗೆ ಸಿಕ್ಕಿದ್ದ ಪೊಲೀಸ್ ಮತ್ತು ಸ್ಟಾಫ್ ನರ್ಸ್ ಕೆಲಸವನ್ನೂ ಬಿಟ್ಟವರು.

ಬಾಂಬೆಗೆ ಹೋದ ಗಂಡಸರೆಲ್ಲ ವಾಪಸು ಬರುವ ದಿನ ಮಹಿಳೆಯರು 'ಬಾಂಬೆ ಬಸ್‌ಸ್ಟಾಪ್' ಹತ್ತಿರ ಬಂದು ನಿಲ್ಲುತ್ತಿದ್ದ ದಿನಗಳು ಅವರ ನೆನಪಲ್ಲಿ ಇನ್ನೂ ಹಸಿರಾಗಿಯೇ ಇವೆ.

'ಆದಿಹಳ್ಳಿ ಗೇಟ್‌ಗೆ 'ಪ್ರತಾಪ' ಬಸ್ ಬರ್ತಿತ್ತು. ಶ್ರವಣಬೆಳಗೊಳಕ್ಕೆ ಹೋಗಿ ಅಲ್ಲಿಂದ ಅರಸೀಕೆರೆಗೆ ಮತ್ತೊಂದು ಬಸ್ ಹಿಡಿಯಬೇಕಿತ್ತು. ಅಲ್ಲಿಂದ ಬಾಂಬೆಗೆ ನಮ್ಮನೆಯವರು ರೈಲು ಹತ್ತುತ್ತಿದ್ದರು. ನಾನೂ ಈಗ ಬಾಂಬೆಗೆ ಹೋಗಿ ಬರ್ತೀನಿ' ಎಂದರು. ಜೊತೆಗೊಂದು ಮಾತು ಸೇರಿಸಿದರು: 'ಬಾಂಬೆ ಏನೂ ಸುಲಭವಲ್ಲ.'

'ಬಾಂಬೆಯಲ್ಲಿರುವ ಕೆ.ಆರ್.ಪೇಟೆ ತಾಲ್ಲೂಕಿನ ಯಾರಾದರೂ ಮೃತಪಟ್ಟರೆ ಅವರ ಶವವನ್ನು ಊರಿಗೆ ತರಲು, ಶವಸಂಸ್ಕಾರ ಮಾಡಲು ಅಲ್ಲಿನ ಎಲ್ಲರೂ ಒಂದಾಗುತ್ತಾರೆ. ಹಣ ಜೋಡಿಸಿಕೊಂಡು ವ್ಯವಸ್ಥೆ ಮಾಡುತ್ತಾರೆ' ಎಂದು ಅವರು ಹೇಳುವಾಗ, ಸೇವಾಭಾವದ ಮಿಂಚು ಮಿಂಚಿತು.

ಡ್ರೋನ್ ಹಾರಿಸಿದ ಗಂಗಾವತಿ ತಾಲ್ಲೂಕಿನ ಹೇರೂರು ಗ್ರಾಮದ ತುಳಸಿ ನೆಕ್ಕಂಟಿ

ಸಖಿಯರ ಕನಸಿಗೆ ರೆಕ್ಕೆ ಕಟ್ಟಿದ ಡ್ರೋನ್

ಪ್ರಮೋದ ಕುಲಕರ್ಣಿ

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಹೊಲದ ಬದುವಿನಲ್ಲಿ ನಿಂತು ಮಹಾದೇವಿ ಚಂದ್ರಶೇಖರ್ ಕಣ್ಣೆದುರು ಎತ್ತರದಲ್ಲಿ ಹಾರಾಡುತ್ತಿದ್ದ ಡ್ರೋನ್ ಅನ್ನು ನಿಯಂತ್ರಿಸುತ್ತಿದ್ದರೆ, ಸುತ್ತಲಿನ ಜನರಲ್ಲಿ ಅದೇನೋ ಕುತೂಹಲ. ಹೊಲದ ದಾರಿಗುಂಟ ಹೋಗುವವರು, ಚಕ್ಕಡಿಬಂಡಿಯಲ್ಲಿ ಸಾಗುವವರು ಕೆಲ ಹೊತ್ತು ನಿಂತು ಡ್ರೋನ್ ಹಾರಾಟದ ಕ್ಷಣಗಳನ್ನು ಕಣ್ಣರಳಿಸಿಕೊಂಡು ನೋಡುತ್ತಿದ್ದರು. ಮಹಾದೇವಿಗೆ ಕೃಷಿ ಕಾಯಕ ಹೊಸದೇನಲ್ಲ. ಆದರೆ ಮೊದಲ ಬಾರಿಗೆ ಅವರಿಂದ ನಿಯಂತ್ರಿಸಲ್ಪಡುತ್ತಿದ್ದ ಡ್ರೋನ್ ಸದ್ದು ಅವರಲ್ಲಿ ಕೌತುಕ ಮೂಡಿಸುತ್ತಿದೆ.

ಕಣ್ಣು ಹಾಯಿಸಿದಷ್ಟೂ ದೂರ ಭತ್ತದ ಸಸಿಗಳೇ ಕಾಣುವ ಗಂಗಾವತಿ ಹಾಗೂ ಸುತ್ತಮುತ್ತಲಿನ ಹಸಿರು ಪರಿಸರದಲ್ಲಿ ಈಗ ಡ್ರೋನ್‌ಗಳು ಸದ್ದು ಮಾಡುತ್ತಿವೆ. ಗಂಗಾವತಿಯ ಚಿಕ್ಕಜಂತಕಲ್‌ನ ಮಹಾದೇವಿ ಅವರು ಪುಟ್ಟ ರೈಸ್‌ಮಿಲ್ ಹೊಂದಿದ್ದಾರೆ. ಸಾವಯವ ಕೃಷಿ ಬಿತ್ತನೆ ಬೀಜಗಳ ಬ್ಯಾಂಕ್ ಮಾಡಿದ್ದಾರೆ. ಭತ್ತ ಕೃಷಿಯಲ್ಲಿ ಪರಿಣತಿ ಹೊಂದಿದ್ದು ಭತ್ತದ 80 ತಳಿಗಳನ್ನು ಸಂಗ್ರಹಿಸಿದ್ದಾರೆ. ಅದರಲ್ಲಿ ಹತ್ತು ತಳಿಗಳನ್ನು ತಾವೇ ಬೆಳೆದಿದ್ದಾರೆ.

ಕೃಷಿಯಲ್ಲಿನ ತಂತ್ರಜ್ಞಾನ ಬಳಕೆಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಿರುವ ಮಹಾದೇವಿ, ಕೇಂದ್ರ ಸರ್ಕಾರದ 'ನಮೋ ಡ್ರೋನ್ ದೀದಿ' ಯೋಜನೆಯ ಸೌಲಭ್ಯ ಪಡೆದು ಚೆನ್ನೈ ಹಾಗೂ ಹೈದರಾಬಾದ್‌ನಲ್ಲಿ ಡ್ರೋನ್ ಮೂಲಕ ಬೆಳೆಗಳಿಗೆ ದ್ರವರೂಪದ ರಾಸಾಯನಿಕ ಸಿಂಪಡಣೆ ಮಾಡುವ ಕೌಶಲ ಕಲಿತಿದ್ದಾರೆ. ಎಸ್ಸೆಸ್ಸೆಲ್ಸಿ ಓದಿರುವ ಮಹಾದೇವಿ ಮೊದಲು ಭತ್ತದ ಬೀಜ ಬ್ಯಾಂಕ್, ಮನೆ ಹಾಗೂ ಹೊಲದ ಕೆಲಸಕ್ಕೆ ಮಾತ್ರ ತಮ್ಮ ಬದುಕು ಸೀಮಿತಗೊಳಿಸಿಕೊಂಡಿದ್ದರು. ಈಗ ಸ್ವಾವಲಂಬಿ ಬದುಕಿಗೆ ಹೊಸ ಹಾದಿ ಸಿಕ್ಕಿದೆ.

ಹಬ್ಬ, ಜಾತ್ರೆ, ಸಮಾರಂಭಗಳಲ್ಲಿ ಡ್ರೋನ್ ಹಾರಾಟವನ್ನು ಬೆರಗಿನಿಂದ ನೋಡುತ್ತಿದ್ದ ಮಹಿಳೆಯರೇ ಈಗ ಅವುಗಳನ್ನು ಹಾರಿಸುತ್ತಾ, ಹೊಲಗದ್ದೆಗಳಲ್ಲಿ ರಾಸಾಯನಿಕ ಸಿಂಪಡಣೆ ಮಾಡುತ್ತಾ ಬದುಕಿಗೆ ಆದಾಯ ಮೂಲವನ್ನು ಕಂಡುಕೊಂಡಿದ್ದಾರೆ.

ವರ್ಷಗಳು ಉರುಳಿದಂತೆ ಕೃಷಿ ಕಾಯಕ ಮಾಡುವ ಕಾರ್ಮಿಕರ ಕೊರತೆ ವ್ಯಾಪಕವಾಗತೊಡಗಿತು. ಅದರಲ್ಲಿಯೂ ಅಪಾಯ ಹೆಚ್ಚು ಎನ್ನುವ ಕಾರಣಕ್ಕೆ ಭತ್ತಕ್ಕೆ ರಾಸಾಯನಿಕ ಸಿಂಪಡಣೆ ಮಾಡುವ ಕೆಲಸಕ್ಕೆ ಕಾರ್ಮಿಕರಿಗಾಗಿ ಸಾಕಷ್ಟು ಅಲೆದಾಡಬೇಕಾದ ಸ್ಥಿತಿ ನಿರ್ಮಾಣವಾಯಿತು. ಈ ಎಲ್ಲ ಸಮಸ್ಯೆ ಅರಿತ ಮಹಾದೇವಿ ಡ್ರೋನ್ ಹಾರಿಸುವ ತರಬೇತಿ ಪಡೆದರು.

'ಡ್ರೋನ್ ದೀದಿ' ಯೋಜನೆಯ ಸಂಪೂರ್ಣ ಲಾಭ ಪಡೆದುಕೊಂಡ ಮಹಾದೇವಿ ಈಗ ಸ್ವಾಭಿಮಾನದ ಬದುಕು ಹಾಗೂ ಆರ್ಥಿಕ ಸ್ವಾವಲಂಬನೆ ಗಳಿಸಿಕೊಂಡಿದ್ದಾರೆ. ಕೃಷಿ ಚಟುವಟಿಕೆಗಳಲ್ಲಿ ಸುಲಭವಾಗಿ ಡ್ರೋನ್ ಬಳಕೆ ಕುರಿತು ಬೇರೆಯವರಿಗೂ ಅರಿವು ಮೂಡಿಸುತ್ತಿದ್ದಾರೆ. ರಾಸಾಯನಿಕ ಸಿಂಪಡಣೆ ಮಾಡಿದರೆ ಪ್ರತಿ ಎಕರೆಗೆ ₹350ರಿಂದ ₹400 ಸಿಗುತ್ತಿದೆ.

ಹನ್ನೆರಡು ಸಖಿಯರ ಹಂಬಲ

ಗಂಗಾವತಿ ತಾಲ್ಲೂಕಿನ ಮುಷ್ಟೂರು ಗ್ರಾಮದ ಶಾಂತಾ ಅವರದೂ ಇದೇ ರೀತಿಯ ಸ್ವಾವಲಂಬಿ ಬದುಕಿನ ಕಥನವಿದೆ. ಓದಿದ್ದು ಪಿಯುಸಿ. ಕೃಷಿಯಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಎರಡು ಎಕರೆ ಹೊಲ ನಿರ್ವಹಣೆ ಮಾಡುತ್ತಾರೆ. ಕಾಲೇಜು ಶಿಕ್ಷಣ ಬಿಟ್ಟು ಎರಡು ದಶಕಗಳೇ ಕಳೆದಿರುವ ಶಾಂತಾ ಅವರಿಗೆ ಕೃಷಿಯಲ್ಲಿ ಹೊಸ ತಂತ್ರಜ್ಞಾನಗಳ ಬಳಕೆ ಕಲಿತುಕೊಳ್ಳುವ ತುಡಿತವಿದೆ.

3ನೇ ಪುಟಕ್ಕೆ...

ಡ್ರೋನ್ ಹಾರಿಸಲು ಸಿದ್ಧತೆ ಮಾಡಿಕೊಂಡ ಮಹಾದೇವಿ

ಈ ಕಲಾ ಸಂಗ್ರಹಾಲಯದಲ್ಲಿ ಒಂದು ಸುತ್ತು ಹಾಕಿದರೆ ಸಾಕು, ಬಸವಣ್ಣ, ನೂರಾರು ಶರಣರು ಜೀವತಳೆದು ಕಣ್ಮುಂದೆ ಬಂದು ನಿಲ್ಲುತ್ತಾರೆ...

ಕೂಡಲಸಂಗಮ ಬಸವ, ಶರಣರ ಸಂಗಮ

ಅನುಭವ ಮಂಟಪ

ಲಕ್ಷ್ಮಣ ಬಾದಾಮಿ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲಸಂಗಮದ ಮುಖ್ಯರಸ್ತೆಯಲ್ಲಿ 'ಬಸವ ಶರಣ ಕಲಾ ಸಂಗ್ರಹಾಲಯ' ಎಂಬ ನಾಮಫಲಕವನ್ನು ನೋಡಿ ಒಳಗೆ ಕಾಲಿರಿಸಿದೆ. ಅಲ್ಲಿ ಎಡಗಡೆ ಗೋಡೆಗೆ ಹಬ್ಬಿದ ಬಸವಣ್ಣ, ಅವನ ಅನುಯಾಯಿಗಳ ಶಿಲ್ಪಗಳಿದ್ದವು. ಸೌರಮಂಡಲಕ್ಕೆ ಸೂರ್ಯನು ಕೇಂದ್ರವಾಗಿರುವಂತೆ, ಇಲ್ಲಿ ಬಸವಣ್ಣ ಸೂರ್ಯನೋಪಾದಿಯಲ್ಲಿ ಭೂಮಿಯ ಮೇಲೆ ಕುಳಿತು ತನ್ನ ಅರಿವಿನ ಕಿರಣಗಳನ್ನು ಸೂಸುತ್ತಾ, ವಚನಗಳನ್ನು ಬರೆಯುವುದರಲ್ಲಿ ನಿರತರಾಗಿದ್ದಾರೆ. ಗೋಡೆಗಂಟಿದ ಚಿತ್ರ-ಶಿಲ್ಪಗಳ ಮೇಲೆಲ್ಲ ಅಗತ್ಯವಾದ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಉಳಿದಂತೆ ಮಂದವಾದ ಬೆಳಕು. ನಾನು ಮತ್ತು ಅಲ್ಲಿದ್ದ ಕೆಲವು ಸಂದರ್ಶಕರು ಮಬ್ಬುಗತ್ತಲೆಯಲ್ಲಿದ್ದೆವು. ಚಿತ್ರ-ಶಿಲ್ಪಗಳು ಮಾತ್ರ ಸ್ಪಷ್ಟವಾಗಿ ಕಾಣುತ್ತಿದ್ದವು. ಅಂದರೆ ನಾವಿಲ್ಲಿ ಸುಳ್ಳು, ಚಿತ್ರ-ಶಿಲ್ಪಗಳಷ್ಟೇ ನಿಜ ಅನಿಸಿತು. ಇದು ನಮ್ಮನ್ನು 12ನೇ ಶತಮಾನಕ್ಕೆ ಕರೆದೊಯ್ಯುವ ಬಗೆಯೂ ಅನಿಸಿತು. ಹೌದು, ಆ ಹೊತ್ತು ಬಾಲಕ ಬಸವಣ್ಣ ಜನಿವಾರ ಧಾರಣೆಗೆ ನಿರಾಕರಿಸಿದ್ದು, ವಿದ್ಯಾಭ್ಯಾಸಕ್ಕೆಂದು ಸಂಗಮಕ್ಕೆ ಬಂದಿದ್ದು, ಮುಂದೆ ಬಿಜ್ಜಳನ ಆಸ್ಥಾನ ಸೇರಿದ್ದು...ಹೀಗೆ ಒಂದೊಂದೇ ಸನ್ನಿವೇಶಗಳು ಬಿಚ್ಚಿಕೊಳ್ಳುತ್ತಲೇ ಹೋದವು.

ನಾನು ಓದಿ ತಿಳಿದುದಕ್ಕೂ, ಈ ಚಿತ್ರ-ಶಿಲ್ಪಗಳಿಗೂ ತಾಳೆ ಹಾಕತೊಡಗಿದೆ. ಮುಂದಿದ್ದ ಇನ್ನೊಂದು ಸಂದರ್ಶಕರ ಗುಂಪಿನಲ್ಲಿದ್ದ ಮಹಿಳೆಯೊಬ್ಬರು ಉಬ್ಬುಶಿಲ್ಪದಲ್ಲಿಯ ಗಿಳಿ, ಬೆಕ್ಕು, ಪಂಜರ ನೋಡಿ 'ಇದೇನು' ಅನ್ನುತ್ತಿದ್ದರು. ಅದೇ ಗುಂಪಿನಲ್ಲಿದ್ದ ಬಾಲಕ 'ಗಿಳಿಯೋದಿ ಫಲವೇನು? ಬೆಕ್ಕು ಬಹುದ ಹೇಳಲರಿಯದು..?' ಚಿತ್ರ ಚೌಕಟ್ಟಿನ ಕೆಳಗೆ ಪುಟ್ಟ ಫಲಕದಲ್ಲಿ ಬರೆದಿದ್ದ ವಚನವನ್ನು, ಅದರ ಭಾವಾರ್ಥವನ್ನೂ ಓದಿ ಹೇಳುತ್ತಿದ್ದ.

'ಬಸವ ಶರಣ ಕಲಾ ಸಂಗ್ರಹಾಲಯ' ಬೆಳಗ್ಗೆ 6 ರಿಂದ ರಾತ್ರಿ 8 ಗಂಟೆವರೆಗೆ ತೆರೆದಿರುತ್ತದೆ. ಯಾವ ದಿನವೂ ರಜೆ ಇರುವುದಿಲ್ಲ. ಒಬ್ಬರಿಗೆ ₹ 30 ಪ್ರವೇಶ ಶುಲ್ಕ. ಶಾಲಾ ಮಕ್ಕಳಿಗೆ ₹ 5 ರಿಯಾಯಿತಿ ಇದೆ.

ಅನುಭವ ಮಂಟಪ ದರ್ಶನ

ವಚನ ಶಿಲ್ಪಗಳ ವಿಭಾಗ ನೋಡಿ ಮುಂದೆ ನಡೆದರೆ ಅನುಭವ ಮಂಟಪದ ದರ್ಶನವಾಯಿತು. ಅಲ್ಲಿ ಸಾಕ್ಷಾತ್ ಅನುಭವ ಮಂಟಪದ ಸನ್ನಿವೇಶವೇ ಮರುಜೀವ ಪಡೆದಿದೆ! ಅಕ್ಕಮಹಾದೇವಿ ಅನುಭವ ಮಂಟಪವನ್ನು ಪ್ರವೇಶಿಸಿದ್ದಾರೆ. ಅಲ್ಲಮನು ಷಟಸ್ಥಲ ಪೀಠದಲ್ಲಿ ಆಸೀನರಾಗಿದ್ದಾರೆ. ಅವರಿಗೆದುರಾಗಿ ನಿಂತಿರುವ ಮಹಾದೇವಿಯಕ್ಕ, ಬಸವಣ್ಣ, ಅಲ್ಲಮ ಇವರೆಲ್ಲರೂ ಸಂವಾದ ನಡೆಸುತ್ತಿದ್ದಾರೆ. 'ನಿನ್ನ ಗಂಡನ ಹೆಸರು ಹೇಳಿದರೆ ಮಾತ್ರ ನಿನಗಿಲ್ಲಿ ಸ್ಥಾನವಿದೆ' ಅಲ್ಲಮನೆಂದ ಮಾತಿಗೆ 'ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ ಮಿಕ್ಕಿನ ಲೋಕದವರನೆಗೆ ಸಂಬಂಧವಿಲ್ಲವಯ್ಯಾ ಪ್ರಭುವೇ' ಎಂದುತ್ತರ ನೀಡುತ್ತಿರುವಂತೆ ನನಗೆ ಭಾಸವಾಯಿತು. ನಾವೂ ಈ ಸಭೆಯಲ್ಲಿ ಭಾಗವಹಿಸಿದ್ದೇವೆ ಅನ್ನಿಸಲು ಮುಖ್ಯ ಕಾರಣ, ಈ ಶಿಲ್ಪಗಳೆಲ್ಲವೂ ಆಳೆತ್ತರದಾಗಿವೆ. ಅಲ್ಲಮ, ಬಸವಣ್ಣ, ಮಹಾದೇವಿಯರಲ್ಲದೇ ಮುಂದಿನ ಸಾಲಿನಲ್ಲಿರುವ ಶರಣರ ಶಿಲ್ಪಗಳು ಪೂರ್ಣಶಿಲ್ಪಗಳಾಗಿವೆ. ಉಳಿದವು ಉಬ್ಬುಶಿಲ್ಪಗಳಾಗಿವೆ. 50 x 12 ಅಡಿಗಳ ವಿಸ್ತಾರದಲ್ಲಿ ಅನುಭವ ಮಂಟಪವನ್ನು ಸೃಜಿಸಲಾಗಿದೆ. ಇಲ್ಲಿ ಒಟ್ಟು 270 ಶರಣರ ಪ್ರತಿಕೃತಿಗಳನ್ನು ಕಾಣಬಹುದು.

4ನೇ ಪುಟಕ್ಕೆ...

ಕಾವಿ ಕಲೆಯಲ್ಲಿ ಹಾವಂಜೆ ಹೆಜ್ಜೆ ಗುರುತು...

ರೂಪಾ ಕೆ.ಎಂ.

ಬೇರು-ಭಾವ ಎರಡನ್ನೂ ಮೂರ್ತ-ಅಮೂರ್ತ ನೆಲೆಯಲ್ಲಿ ಹಿಡಿದಿಟ್ಟುಕೊಳ್ಳಬಲ್ಲ ಮಣ್ಣು ಕಲಾಶೋಧನೆಗೂ ತನ್ನದೇ ಆದ ಕೊಡುಗೆಯನ್ನು ನೀಡುತ್ತಲೇ ಬಂದಿದೆ ಎನ್ನುವುದಕ್ಕೆ ಕರಾವಳಿಯ ಕಾವಿ ಕಲೆಯೇ ಜೀವಂತ ಸಾಕ್ಷಿ. ಈ ಭಾಗದಲ್ಲಿ ಹೇರಳವಾಗಿ ಲಭ್ಯವಿರುವ ಕೆಮ್ಮಣ್ಣು ಕಲಾರೂಪಕ್ಕೆ ಇಳಿಯುವ ಸೊಬಗೇ ಕಾವಿ ಕಲೆ. ಕಾವಿಯೆಂದರೆ ಮಣ್ಣು ಎಂಬ ಅರ್ಥವನ್ನೇ ಧ್ವನಿಸುತ್ತದೆ. ಇಂಥ ಚುಂಬಕ ಶಕ್ತಿ ಇರುವ ಕೆಮ್ಮಣ್ಣಿನ ಬಣ್ಣವು ಗೋಡೆಯ ಮೇಲೆ ಹೂವಾಗಿ, ಪೌರಾಣಿಕ ಪಾತ್ರಗಳಾಗಿ, ದೇವ ದೇವತೆಗಳಾಗಿ, ಮಂಡಲಗಳಾಗಿ ಪಡಿಮೂಡುವ ಸೊಗಸೇ ಬೇರೆ.

ಹದಿಮೂರನೇ ಶತಮಾನದಲ್ಲಿ ಚಾಲ್ತಿಗೆ ಬಂದ ಈ ಕಲೆಯು ಜನಪದ ಹಾಗೂ ಸಾಂಪ್ರದಾಯಿಕ ಕಲಾ ತಂತ್ರಗಾರಿಕೆಯನ್ನು ಉಳಿಸಿಕೊಂಡ, ಇವೆರಡರ ಮಿಳಿತ ರೂಪವೇ ಆಗಿದೆ. ಆಧುನೀಕರಣಕ್ಕೆ ಒಗ್ಗಿಕೊಂಡಂತೆ ಗೋಡೆಗಳನ್ನೆಲ್ಲ ಸಿಮೆಂಟು ಆಕ್ರಮಿಸಿಕೊಂಡಿತು. ಸುಣ್ಣದ ಗೋಡೆಗಳ ಮೇಲೆ ರಾರಾಜಿಸುತ್ತಿದ್ದ ಕಾವಿ ಕಲೆಯೂ ನಿಧಾನಕ್ಕೆ ತೆರೆಮರೆಗೆ ಸರಿಯಿತು.

ಇಂಥ ದೊಡ್ಡ ಪರಂಪರೆಯನ್ನು ಹೊಂದಿರುವ ಕಾವಿ ಕಲೆಯನ್ನು ಕಳೆದ 23 ವರ್ಷಗಳಿಂದಲೂ ಧೇನಿಸಿ, ಅದರ ಉಳಿವಿಗಾಗಿ ಅಹರ್ನಿಶಿ ದುಡಿಯುತ್ತಿರುವ ಜನಾರ್ದನ ರಾವ್ ಹಾವಂಜೆ, ಈ ಕಲೆಯನ್ನೇ ಬದುಕಾಗಿಸಿಕೊಂಡಿದ್ದಾರೆ.

ಪ್ರೌಢಶಾಲೆಯಲ್ಲಿದ್ದಾಗೊಮ್ಮೆ ಜನಾರ್ದನ ರಾವ್ ಅವರು ಕುಟುಂಬದ ಜತೆಗೆ ಕೊಲ್ಲೂರು ಮೂಕಾಂಬಿಕಾ ದೇಗುಲಕ್ಕೆ ಹೋಗಿದ್ದೆ ನೆಪವಾಯಿತು. ಅಲ್ಲಿದ್ದ ನೂರೈವತ್ತರಿಂದ ಇನ್ನೂರು ವರ್ಷ ಹಳೆಯದಾದ ಕಾವಿ ಕಲೆಯು ಇನ್ನಿಲ್ಲದಂತೆ ಆಕರ್ಷಿಸಿತು. ಅದರ ತೀವ್ರತೆ ಎಷ್ಟಿತೆಂದರೆ ಸಿಕ್ಕ ಸಿಕ್ಕ ಗೋಡೆ, ಪುಸ್ತಕಗಳೆಲ್ಲದರ ಮೇಲೆಯೂ ಕೆಂಬಣ್ಣ ಒಂದೇ ಬಳಸಿ ಮಾಡುವ ಕಾವಿ ಕಲೆಯ ಪ್ರಯೋಗ ನಡೆಯಿತು. ಜ್ಯಾಮಿತಿ, ಹೂವು, ಬಳ್ಳಿಯ ವಿನ್ಯಾಸಗಳಲ್ಲಿ ಕೈ ಪಳಗಲು ಶುರುವಾಯಿತು. ಪಿಯುಸಿ ಮುಗಿದ ಮೇಲೆ ಮುಂದೇನು? ಎಂಬ ಪ್ರಶ್ನೆಗೆ ಉಡುಪಿಯ ಚಿತ್ರಕಲಾ ಮಂದಿರ ಕಲಾಶಾಲೆಯು ಕೈಬೀಸಿ ಕರೆಯಿತು. ಅದೇ ಸಂದರ್ಭದಲ್ಲಿ ಉಡುಪಿಯ ಹಸ್ತಶಿಲ್ಪ ಹೆರಿಟೇಜ್ ವಿಲೇಜ್‌ನ ಸಂಸ್ಥಾಪಕ ವಿಜಯನಾಥ ಶೆಣೈ ಅವರ ಸಂಪರ್ಕ ಸಿಕ್ಕಿತು. ಹೆರಿಟೇಜ್ ವಿಲೇಜ್‌ನಲ್ಲಿ ನಡೆಯುತ್ತಿದ್ದ ಕಾವಿ ಕೆಲಸಕ್ಕೆ ಸಹಾಯಕರಾಗಿಯೂ ಸೇರುವ ಅವಕಾಶ ಸಿಕ್ಕಿತು. ಅಲ್ಲಿಯೇ ಕಾವಿ ಕಲೆಯ ಮೂಲಪಟ್ಟುಗಳನ್ನು ಅರಿಯಲು ಸಾಧ್ಯವಾಯಿತು.

ಕಾವಿ ಕಲೆಯಲ್ಲಿ ನಿರತರಾದ ಕಲಾವಿದ ಜನಾರ್ದನ ರಾವ್ ಹಾವಂಜೆ

ಸಂಶೋಧನಾ ಪ್ರಬಂಧ ಮಂಡನೆ

ವಿಜಯನಾಥ ಶೆಣೈ ಅವರ ಸಂಪರ್ಕದಿಂದ ಕಾವಿ ಕಲೆಯ ಪುರಾತನ ಇತಿಹಾಸವನ್ನು ರೋಚಕವಾಗಿ ತಿಳಿಯಲು ಸಾಧ್ಯವಾಯಿತು. ಜತೆಗೆ ಮಣ್ಣಿನ ಕಲಾಕೃತಿಗಳನ್ನು ರಚಿಸುವ ಕಲಾವಿದರ ಜತೆಗೂ ಒಡನಾಡುವ ಅವಕಾಶ ಸಿಕ್ಕಿತು. ಯಕ್ಷಗಾನ ಮುಖವರ್ಣಿಕೆ ಮೇಲೆ ಪಿಎಚ್.ಡಿ. ಮಾಡಿದ್ದವಿಶ್ವನಾಥ ಎ.ಎಸ್. ಗುರುಗಳಾಗಿದ್ದರು. ಈ ಎಲ್ಲರ ಒಡನಾಟದ ಫಲದಿಂದ ಕಾವಿ ಕಲೆಯ ಸಂಶೋಧನೆಯತ್ತ ಜನಾರ್ದನ ಅವರು ಮುಖ ಮಾಡಿದರು. ಗದಗದಲ್ಲಿರುವ ವಿಜಯ ಕಲಾ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ನಂತರ ದೇಶವನ್ನು ಸುತ್ತಲು ಆರಂಭಿಸಿದರು. ಸ್ಥಳೀಯ ಕಲಾ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಶುರು ಮಾಡಿದರು. ಕಾವಿ ಕಲೆಯ ಬಗ್ಗೆ ಸಂಶೋಧನೆ ಆರಂಭಿಸಿದರು. ಯಾರಿಂದಲೂ ಹಣಕಾಸಿನ ನೆರವು ಪಡೆಯದೆ ಎಂಟು ವರ್ಷಗಳ ಸತತ ಪರಿಶ್ರಮದಿಂದ ಮಣಿಪಾಲ ಯುನಿವರ್ಸಿಟಿಯಲ್ಲಿ ಕಾವಿ ಕಲೆಯ ಮೇಲೆ ಪಿಎಚ್.ಡಿ. ಪದವಿ ಪಡೆದರು.

ಸಂಶೋಧನೆ ಮಾಡುವಾಗ ಮಹಾರಾಷ್ಟ್ರದಿಂದ ಹಿಡಿದು ಕಾಸರಗೋಡಿನವರೆಗೆ ಸುಮಾರು 800 ಕಾವಿ ಕಲೆ ಇರುವ ತಾಣಗಳಿಗೆ ಭೇಟಿ ನೀಡಿದರು. ಆದರೆ, ಈಗ ಅವುಗಳಲ್ಲಿ ಸುಮಾರು 500 ತಾಣಗಳು ಅಳಿದು ಹೋಗಿವೆ. ಇನ್ನೂರು ತಾಣಗಳು ಮಾತ್ರ ಉಳಿದುಕೊಂಡಿವೆ. 1972ರಲ್ಲಿ ಕಾವಿ ಕಲೆಯ ಬಗ್ಗೆ ನಡೆದದ್ದೆ ಕೊನೆಯ ದಾಖಲೀಕರಣ. ಒಂದೊಮ್ಮೆ ಈ ಬಗ್ಗೆ ಪಿಎಚ್.ಡಿ ಮಂಡಿಸಲು ಅವಕಾಶ ಸಿಕ್ಕಿಲ್ಲವೆಂದರೂ ಸಂಶೋಧನೆಯಂತೂ ಬಿಡುತ್ತಿರಲಿಲ್ಲ ಎಂದು ಹೇಳಿಕೊಳ್ಳುತ್ತಾರೆ ಅವರು.

ಏನಿದು ಕಾವಿ ಕಲೆ?



ಜನಾರ್ದನ ರಾವ್

ಸುಣ್ಣದ ಗಾರೆ ಮೇಲೆ ಕೆಮ್ಮಣ್ಣನ್ನು ಹಚ್ಚಿ, ಅದು ತೇವ ಇರುವಾಗಲೇ ಗೀರಿ ಅನವಶ್ಯಕವಾದದ್ದನ್ನು ತೆಗೆಯುತ್ತ, ತಮ್ಮಿಷ್ಟದ ರಚನೆಗೆ ರೂಪ ಕೊಡುವುದೇ ಕಾವಿ ಕಲೆ. ಇದನ್ನು ಮ್ಯೂರಲ್ ಆರ್ಟ್‌ನಲ್ಲಿ 'ಫ್ರೆಸ್ಕೊಬ್ಯುನೊ ತಂತ್ರಗಾರಿಕೆ' ಎಂದು ಕರೆಯಲಾಗುತ್ತದೆ. ಅಜಂತಾ ಎಲ್ಲೋರಾ ಗುಹೆಗಳಲ್ಲಿರುವ ಕಲೆ ಇದೇ ತಂತ್ರಗಾರಿಕೆಯಲ್ಲಿ ರೂಪುಗೊಂಡಿದೆ. ಪೇಂಟಿಂಗ್ ಮಾಡಿದರೆ ಅದು ಕಾವಿ ಭಿತ್ತಿ ಕಲೆ ಆಗುವುದಿಲ್ಲ. ಕಾವಿ ಕಲೆಯ ಮೂಲ ಲಕ್ಷಣವೇ ಗೀರಿ ಮಾಡುವುದು. ಕೇವಲ ಮಣ್ಣು ಬಳಸಿದರೆ ಅದು ವರ್ಲಿಯೂ ಆಗಬಹುದು, ಹಸೆ ಚಿತ್ತಾರವೂ ಆಗಬಹುದು.

ಸುಣ್ಣವೆಂದರೆ ಅದು ಸಿಂಪಿ ಸುಣ್ಣ, ಕಪ್ಪೆಚಿಪ್ಪನ್ನು ಕಾಯಿಸಿ, ಅದರ ಆಕ್ಸೈಡ್ ತೆಗೆದಾಗ ಉಂಟಾಗುವ ಸುಣ್ಣವದು. ಋತುಗನುಸಾರ ಸುಣ್ಣದ ಜತೆಗೆ ಜೇನುಮೇಣ, ಮರಳು, ಹುಳಿ ಬೆಲ್ಲ, ನೆರೋಳೆ ಬೀಳು, ಬೇಲದಹಣ್ಣು, ದೂಪಕಾಯಿ, ಬಿಲ್ವಕಾಯಿ ಹೀಗೆ ಸ್ಥಳೀಯವಾಗಿ ಸಿಗುವ ಹದಿನೆಂಟು ಬಗೆಯ ವಸ್ತುಗಳನ್ನು ಬಳಸಲಾಗುತ್ತದೆ. ಹೀಗೆ ತಯಾರಾದ ಸುಣ್ಣದ ಗಾರೆಯ ಮೇಲೆ ಪುಡಿ ಮಾಡಿದ ಲ್ಯಾಟ್ರೈಟ್ ಮಣ್ಣನ್ನು ನುಣ್ಣಗೆ ಅರೆದು ಪೇಂಟ್‌ನಂತಾಗಲು ಇನ್ನಷ್ಟು ಗಿಡಮೂಲಿಕೆಗಳನ್ನು ಬಳಸಿ, ಚಿತ್ರ ಕೆತ್ತಲಾಗುತ್ತದೆ.

ಕಾವಿ ಕಲೆ ಕೇವಲ ದೇವಾಲಯಗಳು, ಮಠಗಳಿಗಷ್ಟೆ ಸೀಮಿತವಾಗಿಲ್ಲ. ಬಸದಿಗಳು, ಚರ್ಚುಗಳು, ಮಸೀದಿಗಳು ಜನಪದ ನಂಬಿಕೆಯನ್ನು ಬಿಂಬಿಸುವ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಮನೆಗಳು, ಅಶ್ವತ್ಥ ಮರದ ಕಟ್ಟೆಗಳು, ತುಳಸಿಕಟ್ಟೆಗಳು ಕೊನೆಗೆ ಸಮಾಧಿಗಳ ಮೇಲೆಯೂ ಈ ಕಲೆ ಅರಳಿ, ನಳನಳಿಸುತ್ತಿದೆ. ಈ ಬಗ್ಗೆಯೂ ಸಂಶೋಧನೆ ನಡೆಸಿ ದಾಖಲೀಕರಣ ನಡೆಸಿದ್ದಾರೆ ಜನಾರ್ದನ.

ಕಲಾವಿದ ಪುರುಷೋತ್ತಮ ಅಡ್ವೆ ಅವರ ನೇತೃತ್ವದಲ್ಲಿ ಕೊಲ್ಲೂರು ದೇವಸ್ಥಾನದಲ್ಲಿ ಕಾವಿ ಕಲೆಯಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು. 'ಒಮ್ಮೆ ಆ ಕಲೆಯನ್ನ ನೋಡಿ ಆಕರ್ಷಣೆಗೆ ಒಳಗಾದವನಿಗೆ ಅಲ್ಲಿಯೇ ಕೆಲಸ ಮಾಡುವ ಅವಕಾಶ ಸಿಗುವುದು ದೊಡ್ಡ ವಿಷಯ. ದೇಗುಲದ ಪ್ರಾಂಗಣದ ಸುತ್ತ ಸಪ್ತಮಾತೃಕೆಯರು, ನವದುರ್ಗೆಯರು, ಶೈವಲಕ್ಷಣದಲ್ಲಿ ಶಂಕರತತ್ವದಂತೆ ಮಹಾಸರಸ್ವತಿ, ಮಹಾಲಕ್ಷ್ಮಿ ಮತ್ತು ಮಹಾಕಾಳಿಯನ್ನು ಚಿತ್ರಿಸಲಾಗಿದೆ. ಇಲ್ಲಿ ಮೂಲ ಕಾವಿ ಕಲೆಯನ್ನು ನೋಡಬಹುದು' ಎನ್ನುತ್ತಾರೆ ಜನಾರ್ದನ ರಾವ್ ಹಾವಂಜೆ.

ಹೊಸತನವೇನು?



ಪಾರಂಪರಿಕ ಕಟ್ಟಡಗಳಲ್ಲಿರುವ ಮೂಲ ಕಾವಿ ಕಲೆಯನ್ನು ಪುನಃಶ್ಚೇತನಗೊಳಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಈಚೆಗೆ ಆವರ್ಸಾದ ಕಾತ್ಯಾಯನಿ ಬಾಣೇಶ್ವರ ದೇವಸ್ಥಾನದಲ್ಲಿರುವ ಮೂಲ ಕಾವಿ ಕಲೆಯನ್ನು ಪುನಃಶ್ಚೇತನಗೊಳಿಸಲಾಗಿದೆ. ಗೋವಾದಲ್ಲಿ ದೇವಕಿಕೃಷ್ಣ ರವಳನಾಥ ದೇವಸ್ಥಾನದಲ್ಲಿಯೂ ಕಾವಿ ಕಲೆಯ ಪುನಃಶ್ಚೇತನ ಕೆಲಸ ನಡೆಯುತ್ತಿದೆ.

ಸಿಮೆಂಟ್‌ನಲ್ಲಿ ಕಾವಿ ಕಲೆ ಮಾಡುವುದು ಕಷ್ಟ. ಹಾಗಾಗಿ ಈ ದೇಸಿ ಕಲೆಯನ್ನು ಉಳಿಸಬೇಕು ಎನ್ನುವವರಿಗಾಗಿ ಸುಣ್ಣದ ಗಾರೆ ಬ್ಲಾಕ್ ಮೇಲೆ ಕಾವಿ ಕಲೆ ಇರುವ ಫ್ರೇಮ್‌ಗಳನ್ನು ಪರಿಚಯಿಸಲಾಗಿದೆ. ಜತೆಗೆ ಕಾವಿ ಕಲೆ ಇರುವ ಟೀ-ಕೋಸ್ಟರ್, ಫ್ರಿಜ್ ಮ್ಯಾಗ್ನೆಟ್‌ಗಳನ್ನು ನೋಡಬಹುದು. ತಮ್ಮ ಬಳಿ ತರಬೇತಿ ಪಡೆದ ಕಲಾವಿದರನ್ನು ಒಗ್ಗೂಡಿಸಿ ಕಾವಿ ಆರ್ಟ್ ಫೌಂಡೇಷನ್ ಹುಟ್ಟುಹಾಕಿದ್ದಾರೆ. ಇದರ ಮೂಲಕ ಕಾವಿ ಕಲೆಯ ಮೇಲೆ ಜಿಐ ಟ್ಯಾಗ್ ಹೊಂದುವ ಪ್ರಯತ್ನ ನಡೆಸುತ್ತಿದ್ದಾರೆ.

ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಿಂದ ಸಿಗುತ್ತಿರುವ ಪ್ರೋತ್ಸಾಹ ಅತ್ಯಲ್ಪ. ವೈಯಕ್ತಿಕ ಸಮಯ ಹಾಗೂ ಖರ್ಚಿನಲ್ಲಿಯೇ ಸಂಶೋಧನಾ ಕೇಂದ್ರ ಸ್ಥಾಪನೆ ಮಾಡಲಾಗಿದೆ. ಕರಾವಳಿ ಭಾಗದಲ್ಲಿರುವ ಕನ್ನಡ ಶಾಲೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಕಾವಿ ಕಲೆ ಕಲಿಸುವ ಕಾರ್ಯಾಗಾರ ಮಾಡುತ್ತಿದ್ದಾರೆ. ಈ ಕಲೆ ಕಲಿಯಬೇಕು ಎನ್ನುವವರಿಗಾಗಿ ಒಂದು ದಿನದ ಶಿಬಿರದಿಂದ ಒಂದೂವರೆ ವರ್ಷದ ಕೋರ್ಸ್ ಒಂದನ್ನು ರೂಪಿಸುವ ಕಾರ್ಯದಲ್ಲಿಯೂ ಜನಾರ್ದನ ರಾವ್ ನಿರತರಾಗಿದ್ದಾರೆ. ಇಷ್ಟೆ ಅಲ್ಲದೇ ಕಾವಿ ಕಲೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಸಿಗಬೇಕು ಎಂದು ಪಣತೊಟ್ಟು ನಿಂತಿದ್ದಾರೆ.

ಶರ್ಮಿಷ್ಠೆಗೆ ಜೀವ ತುಂಬಿದ ಉಮಾಶ್ರೀ

ನಾ ದಿವಾಕರ

ಪುರಾಣ ಕಥನಗಳಿಗೆ ಮೂಲ ಎನ್ನುವುದು ಅಮೂರ್ತ. ನಮ್ಮ ನಡುವಿನ ಸೃಜನಶೀಲ ನಾಟಕಕಾರ ಬೇಲೂರು ರಘುನಂದನ್ ಶರ್ಮಿಷ್ಠೆಯ ಪಾತ್ರದ ಮೂಲಕ ಇಡೀ ಕಥಾವಸ್ತುವನ್ನು ಹೇಳುವ ಪ್ರಯತ್ನ ಮಾಡಿದ್ದಾರೆ. ಅನುಭವಿ ರಂಗ ನಿರ್ದೇಶಕ ಚಿದಂಬರರಾವ್ ಜಂಬೆ ಇದನ್ನು ನಿರ್ದೇಶಿಸಿ, ರಂಗ ವಿನ್ಯಾಸ ಮಾಡಿದ್ದಾರೆ. ಎಲ್ಲಕ್ಕಿಂತಲೂ ಮಿಗಿಲಾಗಿ ಉಮಾಶ್ರೀ ಇಡೀ ನಾಟಕಕ್ಕೆ ಜೀವ ತುಂಬಿದ್ದಾರೆ. 'ಯಯಾತಿ' ಕತೆಯಲ್ಲಿ ಶರ್ಮಿಷ್ಠೆಯ ಪಾತ್ರವೇ ಅತ್ಯಂತ ಸಂಕೀರ್ಣವಾದದ್ದು. ಅಮರತ್ವದ ಮಹತ್ವಾಕಾಂಕ್ಷೆ ಒಬ್ಬ ವ್ಯಕ್ತಿಯನ್ನು ಎಂತಹ ಪಾಪಕೂಪಕ್ಕೆ ದೂಡುತ್ತದೆ ಎನ್ನುವುದಕ್ಕೆ ಯಯಾತಿ ಸಾಕ್ಷಿಯಾದರೆ, ತಾರುಣ್ಯವನ್ನು ಬಲಿಕೊಟ್ಟು ವೃದ್ಧಾಪ್ಯಕ್ಕೆ ಒಡ್ಡಿಕೊಳ್ಳುವ ಪುರು ತ್ಯಾಗ-ಕರ್ತವ್ಯ ಸಂಕೇತವಾಗಿ ನಿಲ್ಲುತ್ತಾನೆ. ಇವರಿಬ್ಬರ ನಡುವೆ ಅಪರಾಧಿ ಪ್ರಜ್ಞೆಗೆ ಶರಣಾಗಿ, ತನ್ನ ಬಾಲ್ಯದ ಒಡನಾಡಿಗೇ ದಾಸಿಯಾಗಲು ಮುಂದಾಗುವ ದೈತ್ಯ ರಾಜನ ಮಗಳು ಶರ್ಮಿಷ್ಠೆ. ಮಹಿಳೆಯ ತಲ್ಲಣ ತುಮುಲಗಳಿಗೆ ಸಾಕ್ಷಿಯಾಗಿ, ತಾಯ್ಮತೆ ಮತ್ತು ಸಹಜ ಪುತ್ರ ವ್ಯಾಮೋಹವನ್ನೂ ದಾಟಿ ತನ್ನ ವ್ಯಕ್ತಿನಿಷ್ಠೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಮಗನ ಅಕಾಲಿಕ ವೃದ್ಧಾಪ್ಯಕ್ಕೂ ಸಾಕ್ಷಿಯಾಗುವ ತಾಯಿಯಾಗಿ ಶರ್ಮಿಷ್ಠೆ ಈ ನಾಟಕದ ಕೇಂದ್ರ ಬಿಂದುವಾಗುತ್ತಾಳೆ.

ಚಿತ್ರಗಳು: ತಾಯಿ ಲೋಕೇಶ್

ಇಲ್ಲಿ ಶರ್ಮಿಷ್ಠೆ ಯಯಾತಿಯ ತಾರುಣ್ಯದ ಭ್ರಮೆಯ ಹಿಂದಿನ ಲೋಭ, ದುರಾಸೆಯನ್ನು ಪ್ರಶ್ನಿಸುವ ದಿಟ್ಟ ಮಹಿಳೆಯಾಗಿ ಒಂದೆಡೆ ಕಂಡರೆ, ಮತ್ತೊಂದೆಡೆ ಪುತ್ರನ ವಾರ್ಧಕ್ಯದಿಂದ ಸಂಕಟಕ್ಕೀಡಾಗುವ ಹೆತ್ತೊಡಲ ಅಭಿವ್ಯಕ್ತಿಯಾಗಿಯೂ ಕಾಣುತ್ತಾಳೆ. ಈ ನಡುವೆ ಪ್ರಭುತ್ವ ರಾಜಕಾರಣದ ಅತಿರೇಕಗಳು, ರಾಜಪ್ರಭುತ್ವದ ಯಜಮಾನಿಕೆ ಮತ್ತು ಮಹಿಳೆಯ ಮೇಲೆ ಹೇರಲ್ಪಡುವ ವಸ್ತ್ರಸಂಹಿತೆ ಮೊದಲಾದ ಪುರುಷಾಧಿಪತ್ಯದ ಕಟ್ಟಳೆಗಳು ಇವೆಲ್ಲವನ್ನೂ ಏಕಾಂಗಿಯಾಗಿ ಪ್ರತಿರೋಧಿಸಿ, ಪ್ರಶ್ನಿಸುತ್ತಲೇ, ಮನುಷ್ಯನ ಬದುಕಿನ ಸಾರ್ಥಕತೆಯನ್ನು ವಾಸ್ತವಿಕ ನೆಲೆಯಲ್ಲಿ ಬಿಂಬಿಸುವ ಮೂಲಕ ಭ್ರಮಾಧೀನ ಯಯಾತಿ ಮತ್ತು ಪುರು ಇಬ್ಬರ ನಡುವಿನ ಹುಸಿ ಜಗತ್ತನ್ನು ಬೆತ್ತಲೆಗೊಳಿಸಿ, ಪುರುವನ್ನು ಬಂಧಮುಕ್ತನನ್ನಾಗಿ ಮಾಡಿ ಕೊನೆಗೆ ರಾಜಮಾತೆಯ ಪಟ್ಟವನ್ನೂ ಸ್ವೀಕರಿಸದೆ ವಾನಪ್ರಸ್ಥಕ್ಕೆ ತೆರಳುವ ಸ್ವಾಭಿಮಾನಿ ಮಹಿಳೆಯಾಗಿ ಶರ್ಮಿಷ್ಠೆ ಸಮಕಾಲೀನ ಪ್ರೇಕ್ಷಕರ ನಡುವೆ ನಿಲ್ಲುತ್ತಾಳೆ.

ಶರ್ಮಿಷ್ಠೆಯ ಕಥಾಹಂದರದಲ್ಲಿ ಕೆಲವು ದೃಶ್ಯಗಳು, ಸಂಭಾಷಣೆಗಳು ಸಮಕಾಲೀನತೆಯನ್ನೂ ಪಡೆದುಕೊಂಡಿರುವುದು ಪ್ರಶಂಸನಾರ್ಹ. ಪುರು ವಾರ್ಧಕ್ಯವನ್ನು ಆಯ್ಕೆ ಮಾಡಿದಾಗ ಶರ್ಮಿಷ್ಠೆ, ತನ್ನ ಪುತ್ರ ಅವನ ಪತ್ನಿ ಚಿತ್ರಲೇಖೆಯ ಬಗ್ಗೆ ಯೋಚಿಸಲೂ ಇಲ್ಲವಲ್ಲಾ ಎಂದು ಪರಿತಪಿಸುವುದು, ವಸ್ತ್ರಸಂಹಿತೆಯನ್ನು ಪ್ರಭುತ್ವದ, ಪಿತೃಪ್ರಧಾನ ಯಜಮಾನಿಕೆಯ ಹೇರಿಕೆಯಾಗಿ ಕಾಣುವ ಸಂಭಾಷಣೆಗಳು, ದಾಸಿಯಾಗಿರುವ ಶರ್ಮಿಷ್ಠೆಯನ್ನು ತನ್ನ ಕಾಮತೃಷೆಗಾಗಿ ಬಳಸಿಕೊಳ್ಳುವ ಯತಿ ಪ್ರಸಂಗವೂ ಸಹ ವರ್ತಮಾನವನ್ನು ಬಿಂಬಿಸುತ್ತದೆ. ನಾಟಕದ ಕಥಾವಸ್ತು ಪೌರಾಣಿಕವೇ ಆದರೂ ಅದನ್ನು ಸಮಕಾಲೀನಗೊಳಿಸುವ ಪ್ರಯತ್ನಗಳು ಇಲ್ಲಿವೆ.

ಪಾತ್ರಗಳ ನಡುವಿನ ವಿರೋಧಾಭಾಸ ಮತ್ತು ಅಂತರಂಗದ ವೈರುಧ್ಯಗಳ ಸಂಘರ್ಷ ಇಡೀ ನಾಟಕವನ್ನು ಆವರಿಸುತ್ತದೆ. ಏಕವ್ಯಕ್ತಿ ನಾಟಕದಲ್ಲಿ ಎಲ್ಲ ಪಾತ್ರಗಳಲ್ಲೂ ನುಸುಳುವ ಈ ಲಕ್ಷಣಗಳನ್ನು ಮತ್ತು ಅಭಿವ್ಯಕ್ತಿಯ ತಂತುಗಳನ್ನು ತಮ್ಮ ಅಮೋಘ ಭಾವಾಭಿನಯ ಮತ್ತು ಆಂಗಿಕ ಅಭಿವ್ಯಕ್ತಿಯ ಮೂಲಕ, ಯಯಾತಿ, ರಾಜಮಾತೆ, ಕಚದೇವ, ದೇವಯಾನಿ ಮತ್ತು ಸ್ವತಃ ಶರ್ಮಿಷ್ಠೆ ಈ ಎಲ್ಲ ಪಾತ್ರಗಳಲ್ಲೂ ಪರಕಾಯ ಪ್ರವೇಶ ಮಾಡುವ ಉಮಾಶ್ರೀ ಅವರ ಅಭಿನಯಕ್ಕೆ ಹ್ಯಾಟ್ಸ್ ಆಫ್ ಹೇಳಲೇಬೇಕು. ದೇಹಭಾಷೆ ಮತ್ತು ಸಂಭಾಷಣೆಯ ನಡುವೆ ಕಾಣುವ ಏರಿಳಿತಗಳು ಮತ್ತು ಕಣ್ಣುಮಿಟುಕಿಸುವಷ್ಟರಲ್ಲಿ ಬದಲಾಗುವ ಪಾತ್ರಗಳಲ್ಲಿ ತಮ್ಮನ್ನು ತಾವು ಇಳಿಸಿಕೊಂಡು ತಲ್ಲೀನತೆಗೆ ಸಾಕ್ಷಿಯಾಗಿ ನಿಲ್ಲುವುದು ಉಮಾಶ್ರೀ ಅವರ ಅಭಿನಯ ಸಾಮರ್ಥ್ಯ ಮತ್ತು ಬತ್ತದ ಕಲಾಚೈತನ್ಯಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಏಕವ್ಯಕ್ತಿ ನಾಟಕಗಳಲ್ಲಿ ಸವಾಲಾಗಿ ಪರಿಣಮಿಸುವುದು ಧ್ವನಿ ಹಾವಭಾವ ದೇಹಭಾಷೆ ಮತ್ತು ಸಂವಹನದ ಶೈಲಿಯ ಕ್ಷಣಮಾತ್ರದ ಪರಿವರ್ತನೆಗಳು. ಉಮಾಶ್ರೀ ನಿರ್ವಹಿಸುವ ಐದಾರು ಪಾತ್ರಗಳಲ್ಲಿ ವ್ಯಕ್ತಿ ವೈಶಿಷ್ಟ್ಯಗಳಿಗನುಗುಣವಾಗಿ, ಕ್ಷಣಮಾತ್ರದಲ್ಲಿ ತಮ್ಮ ಭಾವಾಭಿನಯವನ್ನು ಮತ್ತೊಂದು ಉತ್ತುಂಗಕ್ಕೆ ಕೊಂಡೊಯ್ಯುವ ಅವರ ಮೇರು ಪ್ರತಿಭೆ ಮತ್ತು ರಂಗಾಭಿವ್ಯಕ್ತಿಯೇ ನಾಟಕದ ಜೀವಾಳ. ಪ್ರಮೋದ್ ಶಿಗ್ಗಾಂವ್ ಅವರ ರಂಗಸಜ್ಜಿಕೆ/ವಸ್ತ್ರವಿನ್ಯಾಸ ಸರಳ-ಸಹಜತೆಯಿಂದ ಕೂಡಿದ್ದು, ಇವೆಲ್ಲವನ್ನೂ ಗಮನಿಸಲು ಪ್ರೇಕ್ಷಕರಿಗೆ ಅವಕಾಶವನ್ನೇ ನೀಡದಂತೆ ಶರ್ಮಿಷ್ಠೆ ಪ್ರೇಕ್ಷಕರನ್ನು ಮಂತ್ರಮುಗ್ಧಳಾಗಿಸುತ್ತಾಳೆ. ಬಾಲ್ಯದ ಶರ್ಮಿಷ್ಠೆಯ ಲವಲವಿಕೆಯಿಂದ ದಾಸಿಯಾಗಿ ಅವಳು ಅನುಭವಿಸುವ ತಲ್ಲಣಗಳನ್ನು ಮನಮುಟ್ಟುವಂತೆ ಅಭಿವ್ಯಕ್ತಿಸುವ ಉಮಾಶ್ರೀ, ಯಯಾತಿ ಪಾಪಪ್ರಜ್ಞೆಯಿಂದ ಪರಿತಪಿಸುವ ದೃಶ್ಯದಲ್ಲಿ, ಶರ್ಮಿಷ್ಠೆ ತಂದೆಯ ಓಲೆಯನ್ನು ಕಂಡು ಭಾವೋದ್ವೇಗಕ್ಕೊಳಗಾಗುವ ದೃಶ್ಯದಲ್ಲಿ ಅವರ ಅಭಿನಯಕ್ಕೆ ಸಾಟಿಯೇ ಇಲ್ಲ ಎಂದರೆ ಅತಿಶಯೋಕ್ತಿಯಲ್ಲ.

ಈ ಏಕವ್ಯಕ್ತಿ ನಾಟಕದ ಮೂಲಕ ಯಯಾತಿಯನ್ನು ಮತ್ತೊಮ್ಮೆ ರಂಗಾಸಕ್ತರ ನಡುವೆ ತಂದು ನಿಲ್ಲಿಸುವ ಬೇಲೂರು ರಘುನಂದನ್, ನಾಟಕವನ್ನು ಆಯೋಜಿಸಿ ಮೈಸೂರಿನ ರಂಗಾಸಕ್ತರ ಹೃದಯ ಗೆದ್ದ ರಂಗಸಂಪದ ಬೆಂಗಳೂರು ಮತ್ತು ನೇಪಥ್ಯದಲ್ಲಿರುವ ಎಲ್ಲರೂ ಅಭಿನಂದನಾರ್ಹರು.

ಡ್ರೋನ್ ಹಾರಿಸಿದ ನಾಗರತ್ನ

ಸಖಿಯರ ಕನಸಿಗೆ...

2ನೇ ಪುಟದಿಂದ...

ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿಯಲ್ಲಿ ಕೃಷಿ ಸಖಿಯಾಗಿ ಕೆಲಸ ಮಾಡುವ ಜೊತೆಗೆ ಡ್ರೋನ್ ನಿರ್ವಹಣೆಯ ತಂತ್ರಜ್ಞಾನದ ತರಬೇತಿ ಪಡೆದಿದ್ದಾರೆ. ಗಂಗಾವತಿ ಸಮೀಪದ ಮರಳಿ ಗ್ರಾಮದ ನಾಗರತ್ನ ಎ., ತುಳಸಿ ನೆಕ್ಕಂಟಿ, ಕುಕನೂರು ತಾಲ್ಲೂಕಿನ ಮಹಿಳೆಯರು ಹೀಗೆ ಕೊಪ್ಪಳ ಜಿಲ್ಲೆಯ ಹನ್ನೆರಡು ಸಖಿಯರು ಡ್ರೋನ್ ಹಾರಿಸುವ ಕೌಶಲಗಳ ತರಬೇತಿ ಪಡೆದಿದ್ದಾರೆ. ಅವರಿಗೆ ಪರವಾನಗಿಯೂ ಲಭಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಮನೆಗಷ್ಟೇ ಸೀಮಿತ ಎನ್ನುವ ಸ್ಥಿತಿಯಲ್ಲಿದ್ದ ಈ ಮಹಿಳೆಯರು ಈಗ ಬೇರೆಯವರಿಗೂ ಡ್ರೋನ್ ನಿರ್ವಹಣೆ ಪಾಠ ಹೇಳಿಕೊಡುತ್ತಿದ್ದಾರೆ.

ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಬರುವ ಗಂಗಾವತಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳು ನೀರಾವರಿ ಪ್ರದೇಶವಾದ ಕಾರಣ ಹೆಚ್ಚು ಭತ್ತ ಬೆಳೆಯಲಾಗುತ್ತದೆ. ಹೆಚ್ಚು ಕೀಟನಾಶಕ ಮತ್ತು ರಸಗೊಬ್ಬರ ಬಳಕೆಯಿಂದ ವಾತಾವರಣದಲ್ಲಿನ ಗಾಳಿ ಮತ್ತು ನೀರು ಕಲುಷಿತಗೊಂಡು ಮಣ್ಣಿನ ಫಲವತ್ತತೆಯೂ ಕಡಿಮೆಯಾಗಿ ಭೂಮಿ ಸವಕಳಾಗುತ್ತಿದೆ. ಈ ಸಮಸ್ಯೆಗೂ ಡ್ರೋನ್ ಮೂಲಕ ರಾಸಾಯನಿಕ ಸಿಂಪಡಣೆ ಪರಿಹಾರ ಒದಗಿಸುತ್ತಿದೆ ಎನ್ನುತ್ತಾರೆ ಡ್ರೋನ್ ಸಖಿಯರು.

ಡ್ರೋನ್ ಮೂಲಕ ರಾಸಾಯನಿಕ ಸಿಂಪಡಣೆಯಿಂದ ಔಷಧೀಯ ಚಿಕ್ಕ ಕಣಗಳು ನೇರವಾಗಿ ಎಲೆಗಳ ಮೇಲಷ್ಟೇ ಬೀಳುತ್ತವೆ. ಸಸಿಗಳ ಸಂಪೂರ್ಣ ಭಾಗಗಳಿಗೆ ಮೇಲಿನಿಂದ ರಾಸಾಯನಿಕ ಬೀಳುವುದರಿಂದ ಫಸಲೂ ಚೆನ್ನಾಗಿ ಬರುತ್ತದೆ. ಔಷಧ ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚಿರುವುದರಿಂದ ಕೀಟಗಳ ನಿರ್ವಹಣೆಗೆ ಅನುಕೂಲವಾಗುತ್ತದೆ. ಡ್ರೋನ್ ಬಳಕೆ ಮಾಡದೇ ಕೈ ಪಂಪ್‌ನಿಂದ ಸಿಂಪಡಣೆ ಮಾಡಲಾಗುತ್ತಿದ್ದ ರಾಸಾಯನಿಕ ಬೆಳೆಗಳ ಜೊತೆಗೆ ಭೂಮಿಗೂ ಬೀಳುತ್ತಿದ್ದರಿಂದ ಭೂಮಿಯ ಫಲವತ್ತತೆ ಸಾಕಷ್ಟು ಹಾಳಾಗುತ್ತಿತ್ತು. ಈ ಸಮಸ್ಯೆಗೆ ಡ್ರೋನ್ ಮೂಲಕ ರಾಸಾಯನಿಕ ಸಿಂಪಡಣೆ ಪರಿಹಾರವಾಗುತ್ತಿದೆ.

ಸಮಯ ಉಳಿತಾಯ

ಬೆಳೆಗಳಿಗೆ ರಾಸಾಯನಿಕ ಸಿಂಪಡಣೆಗೆ ಕಾರ್ಮಿಕರ ಕೊರತೆ ಒಂದೆಡೆಯಾದರೆ, ಒಂದು ಎಕರೆ ಹೊಲಕ್ಕೆ ಔಷಧ ಸಿಂಪಡಣೆ ಮಾಡಲು ಕನಿಷ್ಠ ನಾಲ್ಕೈದು ತಾಸು ಬೇಕಾಗುತ್ತಿತ್ತು. ಆದರೆ ಡ್ರೋನ್ ನೆರವಿನಿಂದ ಗರಿಷ್ಠ ಹತ್ತು ನಿಮಿಷಗಳಲ್ಲಿ ಈ ಕೆಲಸ ಮುಗಿಯುತ್ತದೆ. ವರ್ಷದಲ್ಲಿ ಎರಡು ಭತ್ತದ ಬೆಳೆ ಬೆಳೆಯುವ ಋತುವಿನಲ್ಲಿ ಈ ಡ್ರೋನ್ ಸಖಿಯರಿಗೆ ಕೈ ತುಂಬಾ ಕೆಲಸ.

ಕೊಪ್ಪಳ ಜಿಲ್ಲೆಯ ಡ್ರೋನ್ ಸಖಿಯರು ಚೆನ್ನೈ ಮತ್ತು ಹೈದರಾಬಾದ್ ಏರೋನಾಟಿಕ್ಸ್ ಕೇಂದ್ರದಲ್ಲಿ ವರ್ಷದ ಹಿಂದೆ ತರಬೇತಿ ಪಡೆದಿದ್ದು ಈಗ ಪ್ರಾಯೋಗಿಕ ಪರೀಕ್ಷೆ ಆರಂಭಿಸಿ ಯಶಸ್ಸು ಕಂಡಿದ್ದಾರೆ. ಇನ್ನೂ ಕೆಲವರು ಮೈಸೂರಿನಲ್ಲಿ ತರಬೇತಿ ಪಡೆದಿದ್ದಾರೆ. ಕೀಟನಾಶಕ ಮತ್ತು ದ್ರವರೂಪದ ರಾಸಾಯನಿಕ ಗೊಬ್ಬರ ಭತ್ತ, ಮೆಕ್ಕೆಜೋಳ, ತೊಗರಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಿಂಪಡಣೆ ಮಾಡಿ ಪ್ರಯೋಗ ಮಾಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮನೆ ಹಾಗೂ ಹೊಲದ ಕೆಲಸವೇ ತಮ್ಮ ಬದುಕು ಎಂದುಕೊಂಡಿದ್ದ ಮಹಿಳೆಯರಲ್ಲಿ ಈಗ ಡ್ರೋನ್ ಹಾರಿಸುವಾಗ ಬರುವ ಗಾಳಿ ಬದುಕಿಗೂ ತಂಗಾಳಿಯಂತೆ ಭಾಸವಾಗಿದೆ.

'ಮನೆ ಜವಾಬ್ದಾರಿ ನಿರ್ವಹಣೆಗೆ ಸಹಕಾರಿ'

'ಜಾತ್ರೆ ಹಾಗೂ ಇನ್ನಿತರ ಸಮಾರಂಭಗಳಲ್ಲಿ ಡ್ರೋನ್ ಮೂಲಕ ಚಿತ್ರೀಕರಣ ಮಾಡುವುದನ್ನು ನೋಡಿ ಡ್ರೋನ್ ಹಾರಿಸುವುದನ್ನು ಕಲಿಯಬೇಕು ಎನ್ನುವ ಆಸೆ ಮೂಡುತ್ತಿತ್ತು. ಹಿಂದೆ ದೂರದಲ್ಲಿ ಡ್ರೋನ್ ಹಾರುತ್ತಿದ್ದರೆ ನನ್ನ ಮನಸ್ಸಿನಲ್ಲಿಯೂ ಇದೇ ಆಸೆ ಚಿಗುರೊಡೆಯುತ್ತಿತ್ತು. ಈ ಕಾರಣದಿಂದಾಗಿ ದೂರದ ಊರುಗಳಿಗೆ ಹೋಗಿ ತರಬೇತಿ ಪಡೆದಿದ್ದೇನೆ. ನನ್ನ ಆಸೆ ಈಗ ಆದಾಯ ಗಳಿಕೆಗೂ ಅನುಕೂಲವಾಗಿದೆ. ಹೆಣ್ಣುಮಕ್ಕಳು ಆರ್ಥಿಕ ಸ್ವಾವಲಂಬಿಗಳಾಗಿ ತಮ್ಮ ಮನೆಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸಲು ಡ್ರೋನ್ ನಿರ್ವಹಣೆಯಿಂದ ಬರುವ ಆದಾಯ ಸಹಕಾರಿಯಾಗಿದೆ. ಋತುವಿನಲ್ಲಿ ನಿತ್ಯವೂ ಕೆಲಸವಿರುತ್ತದೆ' ಎನ್ನುತ್ತಾರೆ ಮಹಾದೇವಿ.

ಮುನ್ನೋಟ 27-04-2025 ರಿಂದ 03-05-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಮುನ್ನಡೆಯುವಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ವ್ಯಾಪಾರ, ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರಿಕೆ ವಹಿಸಿ. ಭೂಮಿಯನ್ನು ಖರೀದಿಸಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಲಭಿಸುತ್ತದೆ. ಧಾರ್ಮಿಕ ಕಾರ್ಯ ಮಾಡಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಕೃಷಿಯಿಂದ ಲಾಭವಿರುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ನಿಮ್ಮಲ್ಲಿ ಬಹಳ ಗಂಭೀರ ನಡವಳಿಕೆ ಕಾಣಬಹುದು. ಸಂಪಾದನೆ ಹೆಚ್ಚಾಗುತ್ತದೆ. ಆಸ್ತಿ ಖರೀದಿ ವಿಚಾರದಲ್ಲಿ ಅತಿಯಾದ ಆತುರ ಬೇಡ. ಮೂತ್ರ ಸಂಬಂಧಿ ದೋಷಗಳಿರುವವರು ಹೆಚ್ಚು ಎಚ್ಚರವಹಿಸಿ. ನಿಮ್ಮೆಲ್ಲ ಕೆಲಸ ಕಾರ್ಯಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ. ಹಣಕಾಸಿನ ವ್ಯವಹಾರ ಮಾಡುವವರಿಗೆ ಅನಿರೀಕ್ಷಿತ ಲಾಭ ಇರುತ್ತದೆ. ವ್ಯವಹಾರದಲ್ಲಿ ಹಿರಿಯರಿಂದ ನಿಮಗೆ ಲಾಭವಾಗುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಉದ್ಯೋಗದಲ್ಲಿ ನಿಮ್ಮದೇ ಆದ ಪ್ರಭಾವ ಬೀರಿ ಯಶಸ್ಸನ್ನು ಪಡೆಯುವಿರಿ. ಕೃಷಿಯಿಂದ ಸ್ವಲ್ಪ ಆದಾಯವಿರುತ್ತದೆ. ಹಿರಿಯರಿಂದ ನಿಮ್ಮ ಸರ್ಕಾರಿ ಕೆಲಸ ಕಾರ್ಯಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ. ವೃತ್ತಿಯಲ್ಲಿ ಹಿರಿಯ ಮಹಿಳಾಧಿಕಾರಿಗಳಿಂದ ನಿಮಗೆ ಸಹಕಾರ ದೊರೆಯುತ್ತದೆ. ಅಧ್ಯಾಪಕರಿಗೆ ಮುಜುಗರದ ಸನ್ನಿವೇಶಗಳು ಎದುರಾಗಬಹುದು.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಹಿರಿಯರ ಸಹಾಯದಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿದಲ್ಲಿ ಉತ್ತಮ ಫಲಿತಾಂಶವನ್ನು ಪಡೆಯಬಹುದು. ವಾಯು ಪ್ರಕೋಪ ಕೆಲವರಿಗೆ ಜಾಸ್ತಿಯಾಗುವ ಸಂದರ್ಭವಿದೆ. ಅವಿವಾಹಿತರಿಗೆ ಸೂಕ್ತ ಸಂಬಂಧಗಳು ಒದಗುವ ಸಂದರ್ಭವಿದೆ. ವಿದೇಶಿ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಹಿರಿಯರಿಂದ ನಿಮ್ಮೆಲ್ಲ ಕೆಲಸಗಳಿಗೆ ಸಹಕಾರ ದೊರೆಯುತ್ತದೆ. ಆದಾಯವು ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮೂಳೆ ನೋವು ಕೆಲವರನ್ನು ಕಾಡಬಹುದು. ಸಂಗಾತಿಯ ಸಂಪಾದನೆ ಹೆಚ್ಚುತ್ತದೆ. ವಿದೇಶಿ ವ್ಯವಹಾರಗಳಲ್ಲಿ ನಿರೀಕ್ಷಿತ ಆದಾಯ ಇರುವುದಿಲ್ಲ. ವಾಹನ ಮಾರಾಟಗಾರರಿಗೆ ಉತ್ತಮ ಆದಾಯವಿರುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ವಾರದ ಆರಂಭ ಬಹಳ ಆಲಸ್ಯದಿಂದ ಕೂಡಿರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಹಿರಿಯರಿಂದ ಆರ್ಥಿಕ ಸಹಕಾರವನ್ನು ನಿರೀಕ್ಷೆ ಮಾಡಬಹುದು. ಆಟೋಮೊಬೈಲ್ ವಿಷಯ ಓದುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ಸಂಗಾತಿಯ ಖರ್ಚು ಹೆಚ್ಚಾಗಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿಧಾನಗತಿ ಇರುತ್ತದೆ. ಹಳ್ಳಿ ಔಷಧಿ ಕೊಡುವವರಿಗೆ ಬೇಡಿಕೆ ಹೆಚ್ಚುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಸ್ವಲ್ಪ ಆರ್ಥಿಕ ಅಸಮತೋಲನವನ್ನು ಕಾಣಬಹುದು. ವೃತ್ತಿಯಲ್ಲಿ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಭೂಮಿ ಖರೀದಿ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ, ಮೋಸ ಹೋಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಸಂಗಾತಿ ಕಡೆಯವರಿಂದ ನಿಮಗೆ ಸಾಕಷ್ಟು ಅನುಕೂಲವಾಗುತ್ತದೆ. ಶಾಲಾ ಕಾಲೇಜುಗಳನ್ನು ನಡೆಸುವವರು ಕೆಲ ಸವಾಲುಗಳನ್ನು ಎದುರಿಸಬೇಕಾಗಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಅತಿ ಹೆಚ್ಚು ಒತ್ತಡದಲ್ಲಿ ಕೆಲಸ ಮಾಡಬೇಕಾಗಬಹುದು. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿ ಸಂಬಂಧಿತ ಅಧ್ಯಯನ ಮಾಡುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಅಡೆತಡೆಗಳನ್ನು ಕಾಣಬಹುದು. ವಿವಾಹ ಆಕಾಂಕ್ಷಿತರಿಗೆ ಸಂಬಂಧಗಳು ದೊರಕುವ ಸಾಧ್ಯತೆಗಳಿವೆ. ಕೃಷಿಯಿಂದ ಆದಾಯವಿರುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ಸ್ವಲ್ಪ ಸವಲತ್ತುಗಳು ಕಡಿಮೆಯಾಗಬಹುದು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಎಲ್ಲರಿಗೂ ಉಪಕಾರಿಯಾಗಿರುವಿರಿ. ಆದಾಯವು ಕಡಿಮೆ ಇರುತ್ತದೆ. ಹೆಚ್ಚಿನ ಪರಿಶ್ರಮದಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ವೃತ್ತಿಪರ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಪಿತ್ತ ವಿಕಾರಗಳು ಕೆಲವರನ್ನು ಕಾಡಬಹುದು. ಸಂಗಾತಿಗೆ ಹಿರಿಯರಿಂದ ಆಸ್ತಿ ದೊರಕುವ ಸಾಧ್ಯತೆಗಳಿವೆ. ಕೃಷಿಯಿಂದ ಆದಾಯವಿರುವುದಿಲ್ಲ. ಹಿರಿಯರ ಸಹಾಯದಿಂದ ನಿಮ್ಮ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಹೆಚ್ಚು ಪರಿಶ್ರಮದಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇದ್ದರೂ, ಅದರಲ್ಲೇ ನಿರ್ವಹಣೆ ಮಾಡುವಿರಿ. ಸಹೋದ್ಯೋಗಿಗಳ ಸಹಕಾರ ನಿಮಗೆ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಫಲಿತಾಂಶ ಪಡೆಯುವ ಯೋಗವಿದೆ. ವ್ಯಾಪಾರ, ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರವಾಗಿರಿ. ಕ್ರೀಡಾಪಟುಗಳಿಗೆ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ವೃತ್ತಿಯಲ್ಲಿ ಅನುಕೂಲಕರ ವಾತಾವರಣವಿರುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಹೆಚ್ಚು ವ್ಯಾಪಾರಿ ಮನೋಭಾವದಲ್ಲಿರುವಿರಿ. ಆದಾಯದಲ್ಲಿ ಏರಿಕೆ ಇರುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ. ಮಕ್ಕಳಿಂದ ಆರ್ಥಿಕ ಸಹಾಯ ದೊರೆಯುತ್ತದೆ. ಕಾನೂನು ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಲಭಿಸುತ್ತದೆ. ಹರಿತವಾದ ಆಯುಧಗಳೊಂದಿಗೆ ಕೆಲಸ ಮಾಡುವವರು ಬಹಳ ಎಚ್ಚರದಿಂದ ಮಾಡಿ. ಸಂಗಾತಿಯ ಸಹಕಾರದಿಂದ ಸರ್ಕಾರಿ ಹುದ್ದೆಗಳಲ್ಲಿ ಉನ್ನತ ಸ್ಥಾನ ಪಡೆಯಬಹುದು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಅದಿರು ವ್ಯಾಪಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಕ್ರೀಡಾಪಟುಗಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ಹಿರಿಯರಿಗಾಗಿ ಹೆಚ್ಚು ಹಣ ಖರ್ಚಾಗಬಹುದು. ಸ್ತ್ರೀಯರ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಲಾಭ ಹೆಚ್ಚುತ್ತದೆ. ಕೃಷಿಯಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಿರುತ್ತದೆ.

ಪದಬಂಧ 2889



ಮೇಲಿನಿಂದ ಕೆಳಕ್ಕೆ

1. ಕುಳಿತುಕೊಳ್ಳುವ ಪೀಠದ ಮೇಲೆ ಯೋಗ ಭಂಗಿ 3
2. ಪೆಟ್ಟು ಮಾಡಿಕೊಂಡಿರುವ ಹಾಡುಗಾರ 3
3. ಹೊಳೆಯುವ ನಕ್ಷತ್ರದ ಗುಂಪು 4
4. ಕರ್ಣನಂತೆ ಕುಲಕ್ಕೆ ಹೊರತಾದವ 3
7. ವಸತಿಯಲ್ಲಿ ಶೂನ್ಯ ತುಂಬುವ ಹೆಣ್ಣು 3
9. ವನದಲ್ಲಿ ಬೆಳೆಯುವ ಕೀರ್ತಿ 3
10. ಶಿವಾಜಿ ಮಹಾರಾಜನ ಪ್ರಾಣದೇವತೆ 5
12. ಮಹಾಶಿವನೆಂಬೋ ಒಡೆಯ 3
13. ಸೌಂದರ್ಯ ಪ್ರಧಾನ ರಂಗ ಪ್ರದರ್ಶನ (ಕೆಳಗಿನಿಂದ ಮೇಲೆ) 3
15. ನಾರಾಯಣನ ನಾಮಸ್ಮರಣೆಯಲ್ಲಿ ತ್ರಿಲೋಕ ಸಂಚರಿಸಿದ ಮುನಿ 3
17. ಮಾವನ ಮನೆಗೆ ಬಂದ ರಾಯರ ಮುದ್ದಿನ ಮಡದಿ 3
18. ತಿಂಗಳಿಗೊಮ್ಮೆ ನಡೆಯುವ ವಿಶೇಷ ಆರಾಧನೆ 4
19. ಹಾಲು ಬೆಲ್ಲ ಕಡಲೆ ಬೆರೆತ ಸಿಹಿದ್ರವ ಎಲೆ ಕೊನೆಯಲ್ಲಿ ಸಿಗುತ್ತದೆ 3
20. ಹೆಚ್ಚು ಕಡಿಮೆ ಎನ್ನದೆ ನಡೆಯುವ ಯುದ್ಧ 3
21. ಧೀಂ ಧೀಂ ಎಂಬ ಕುಣಿತಕ್ಕೆ ಹೆಜ್ಜೆಯ ಸ್ವರನಾದ 3

ಎಡದಿಂದ ಬಲಕ್ಕೆ

1. ಸಗರನ ತಪಸ್ಸಿಗೆ ಗಗನದಿಂದ ಧರೆಗಿಳಿಯಿತೆ ಈ ಪವಿತ್ರ ನದಿ? 5
3. ಹರಿದ ಬಟ್ಟೆಗೆ ಮತ್ತೊಂದು ಬಟ್ಟೆ ಸೇರಿಸಿ ಹೊಲಿ 4
5. ಅರಸು ಪಟ್ಟ ಪಡೆದ ಮುನಿಶ್ರೇಷ್ಠ 4
6. ಒಂಬತ್ತನೆಯ ಹೊಸ ದೃಶ್ಯ ಸಾಹಿತ್ಯ ರಂಗ 5
8. ಗರ್ಭದಲ್ಲಿ ಪುರುಷ ಸಂತಾನ ಬಯಸಿ ಮಾಡುವ ಸಂಸ್ಕಾರ ವಿಧಿ 4
10. ನೀರಿನಲ್ಲಿ ಹುಟ್ಟಿದ ತಾವರೆ 3
11. ವಿಜಯನಗರ ಅರಸನ ಪಟ್ಟದರಸಿ 5
13. ಕನ್ನಡ ಪಠ್ಯದಲ್ಲಿ ಕಮಲಳೊಂದಿಗೆ ಆಡುವ ಚಿನ್ನದಂಥ ಬಾಲಕ 3
14. ವಿಪರೀತ ಬುದ್ಧಿಗೆ ಎಡೆ ಮಾಡಿಕೊಡುವ ಕಾಲ 3
16. ವಿಕಾಸವಾದದನ್ವಯ ಮಾನವನ ಮೂಲರೂಪ 5
18. ತಿಂಗಳು ತುಂಬಿದ ಹೆಣ್ಣನ್ನು ಹೀಗೆನ್ನಬಹುದೆ ? 3
19. ಕಾಲಡಿ ಹರಿಯಬಹುದಾದ ಚುರುಕು ದ್ರವ 4
20. ನೆರವಿಗಾಗಿ ಹಾಕಿದ ಓಟು 5
22. ಸಂನ್ಯಾಸಿಗೆ ತನ್ನ ಗೃಹಸ್ಥ ಬದುಕು ಹೀಗೆ 4
23. ಮಧುರವಾದ ಸಾಯಂ ಸಮಯ 4
24. ಸೂರ್ಯನ ನೋಟದ ಭಾಗ್ಯ 5

ಪದಬಂಧ ಉತ್ತರ -2888

ಮೇಲಿಂದ ಕೆಳಕ್ಕೆ

1 ವಿಶ್ವರೂಪ 2.ರಹದಾರಿ 3.ಸಮಭಾಗ 4.ತಿರುಬೋಕಿ 7.ರಿಪುಸಂಹಾರ 8.ಕೆಲಸಗಾರ 9. ನಾಶಪಡಿಸು 10.ಸುಗಂಧಕರ 15.ನಚಿಕೇತ 16.ನವಜಾತ 18.ರಸಕವಿ 19.ಧಿಕ್ಕರಿಸು

ಎಡದಿಂದ ಬಲಕ್ಕೆ

1.ವಿಶ್ವೇಶ್ವರ 3.ಸರಸ್ವತಿ 5. ಹವನಹೋಮ 6.ಪರಿಚಾರಿಕೆ 9.ನಾಗವಾಸುಕಿ 11.ಲಕ್ಷ್ಮೀಶ 12.ಸಂತೆವಾಸ 13.ಪದಬಂಧ 14.ಗಾರುಡಿ 15.ನರವಾನರ 17.ಸುರಶರಧಿ 20.ಜಾತಿಸೂಚಕ 21. ತರಂಗಿತ 22.ವಿಶ್ವಾವಸು

ಸಂಗೀತ ಸಾಧನೆ ನಡೆಗೆ ಮನ್ಸೂರ್ ಪ್ರಶಸ್ತಿ ಮುಡಿಗೆ

ಹಿಂದೂಸ್ತಾನಿ ಗಾಯನದಲ್ಲಿ ಅತ್ಯುತ್ತಮ ಸಾಧನೆ ಮಾಡಿದವರಿಗೆ ಧಾರವಾಡದ ಪಂ. ಮಲ್ಲಿಕಾರ್ಜುನ ಮನ್ಸೂರ್ ಪ್ರತಿಷ್ಠಾನ ಕೊಡುವ ಪ್ರತಿಷ್ಠಿತ ಪಂ. ಮಲ್ಲಿಕಾರ್ಜುನ ಮನ್ಸೂರ್ ರಾಷ್ಟ್ರೀಯ ಪ್ರಶಸ್ತಿ ಈ ಬಾರಿ ಹಿಂದೂಸ್ತಾನಿ ಗಾಯಕ ಪಂ. ಡಿ. ಕುಮಾರದಾಸ್ ಅವರಿಗೆ ಒಲಿದಿದೆ.


ಪಂ.ಡಿ. ಕುಮಾರದಾಸ್

ಉಮಾ ಅನಂತ್

ಹನುಮ ಎಂದರೆ ಶಕ್ತಿ, ಭಕ್ತಿ, ಪ್ರೀತಿ. ಹನುಮನ ಸಾಹಸಗಾಥೆಗಳು ಮಕ್ಕಳಿಗೆ ಬಹುಪ್ರಿಯ. ಈ ಹನುಮನ ಮೇಲೆ ಅನೇಕ ಭಕ್ತಿಗೀತೆಗಳು, ಕೀರ್ತನೆಗಳು ಬಂದಿವೆ. ಹಲವಾರು ಗಾಯಕರು ಹನುಮನನ್ನು ಸಂಗೀತದ ಮೂಲಕ ಗುಣಗಾನ ಮಾಡಿದ್ದಾರೆ. ಹನುಮನ ಕುರಿತ ಈ ಎಲ್ಲ ಹಾಡುಗಳಿಗೆ ಮೇಲ್ಪಂಕ್ತಿ ಹಾಕಿದವರು ಹಿಂದೂಸ್ತಾನಿ ಸಂಗೀತ ವಿದ್ವಾಂಸ ಪಂ.ಡಿ. ಕುಮಾರದಾಸ್. 'ಭಾಗೇಶ್ರೀ' ರಾಗದಲ್ಲಿ ಇವರು ಹಾಡಿದ 'ಕಡಲ ದಾಂಟಿದ ವೀರ ಹನುಮಾ' ದೇವರನಾಮ ಅತ್ಯಂತ ಜನಪ್ರಿಯವಾಗಿದೆ.

ಬಳ್ಳಾರಿ ಜಿಲ್ಲೆಯ ಪಂ. ಕುಮಾರದಾಸ್ ಹಿಂದೂಸ್ತಾನಿ ಸಂಗೀತದ ಕಂಪನ್ನು ಜಗತ್ತಿನಾದ್ಯಂತ ಪಸರಿಸಿದವರು. ಇವರ ವಿದ್ವತ್ಪೂರ್ಣ ಗಾಯನ ಕೇಳಲು ಬಹಳ ಆಪ್ಯಾಯಮಾನ. ಸಂಗೀತದ ಮತ್ತೊಬ್ಬ ವಿದ್ವಾಂಸ ಪಂ. ವೆಂಕಟೇಶ ಕುಮಾರ್ ಅವರ ಸಮಕಾಲೀನರಾದ ಪಂ. ಕುಮಾರದಾಸ್, ಗದಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂ. ಪುಟ್ಟರಾಜ ಗವಾಯಿಗಳ ಗರಡಿಯಲ್ಲಿ ಪಳಗಿದವರು. ಕುಮಾರದಾಸ್–ವೆಂಕಟೇಶ ಕುಮಾರ್ ಹಲವಾರು ಜುಗಲಬಂದಿ ಕಛೇರಿ ನೀಡಿದ್ದು, ಇಬ್ಬರೂ ಹಿಂದೂಸ್ತಾನಿ ಸಂಗೀತ ಕ್ಷೇತ್ರವನ್ನು ಆಳಿದವರು.

'ನಾನು ಸಂಗೀತ ಕ್ಷೇತ್ರಕ್ಕೆ ಬರಲು ಮನೆಯಲ್ಲಿನ ಕಡು ಬಡತನವೇ ಕಾರಣ' ಎಂದು ವಿನಮ್ರವಾಗಿ ಹೇಳುವ ಕುಮಾರದಾಸ್, ತಮ್ಮ ಮನೆಯ ಬಡತನ ಹಾಗೂ ತಾವು ಸಂಗೀತ ಕ್ಷೇತ್ರವನ್ನು ಆಯ್ದುಕೊಂಡ ಹಿನ್ನೆಲೆಯನ್ನು ಹೀಗೆ ವಿವರಿಸುತ್ತಾರೆ: 'ಬಳ್ಳಾರಿ ಜಿಲ್ಲೆಯ ಯಲಮಂಚಿ ನಮ್ಮೂರು. ತಂದೆ ತಾಯಿಗೆ ಹತ್ತು ಮಂದಿ ಮಕ್ಕಳು. ತುಂಬಿದ ಮನೆಯಲ್ಲಿ ಆಗ ಊಟಕ್ಕೂ ತತ್ವಾರವಿತ್ತು. ಹೀಗಾಗಿ ಐದನೇ ತರಗತಿವರೆಗೆ ಮಾತ್ರ ಓದಿದೆ. ಸಂಗೀತದಲ್ಲಿ ಚಿಕ್ಕಂದಿನಲ್ಲೇ ಆಸಕ್ತಿಯಿತ್ತು. ಅಪ್ಪ ಜನಪದ ಕಲಾವಿದರು. ಡೊಳ್ಳಿನ ಪದವನ್ನೂ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಊರಿನಲ್ಲಿ ನಡೆಯುತ್ತಿದ್ದ ಭಜನಾ ಕಾರ್ಯಕ್ರಮಗಳಲ್ಲಿ ನನಗೂ ಹಾಡಲು ಅವಕಾಶ ಸಿಗುತ್ತಿತ್ತು. ನನ್ನ ಹಾಡನ್ನು ಕೇಳಿದ ಊರಿನ ಮಂದಿ ಅಲ್ಪಸ್ವಲ್ಪ ಹಣವನ್ನೂ ಕೊಡುತ್ತಿದ್ದರು. ಜೊತೆಗೆ ಗದಗದ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತ ಕಲಿಕೆಗೆ ಅವಕಾಶ ಇರುವುದನ್ನೂ ತಿಳಿಸಿದರು. ಹೀಗಾಗಿ ಪುಟ್ಟರಾಜ ಗವಾಯಿ ಅವರ ಸಂಗೀತಾಶ್ರಮಕ್ಕೆ ಸೇರಿದೆ. ಅಲ್ಲಿ ವೆಂಕಟೇಶ ಕುಮಾರ್ ಅವರೂ ಇದ್ದರು. ನಾವಿಬ್ಬರೂ ಸುಮಾರು 15 ವರ್ಷ ಆಶ್ರಮದಲ್ಲಿ ಗುರು–ಶಿಷ್ಯ ಪರಂಪರೆಯಲ್ಲಿ ಸಂಗೀತ ಕಲಿತೆವು. ಅಲ್ಲಿಂದ ಮುಂದೆ ನೂರಾರು ಸಂಗೀತ ಕಛೇರಿಗಳಲ್ಲಿ ಹಾಡಿದೆವು. ಇದೇ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಯನ್ನೂ ಊರಿದೆವು'.

ಎಂದೂ ಮರೆಯಲಾಗದು...

ಪಂ. ಕುಮಾರದಾಸ್ ಅವರ ಜೀವನದಲ್ಲಿ ಎಂದೂ ಮರೆಯಲಾಗದ ಘಟನೆಗಳು ನಡೆದಿವೆ. ಇದು ಸುಮಾರು ಐವತ್ತು ವರ್ಷಕ್ಕೂ ಹಿಂದಿನ ಘಟನೆ. ಗದಗದ ವೀರೇಶ್ವರ ಪುಣ್ಯಾಶ್ರಮದಲ್ಲಿ ಕುಮಾರದಾಸ್ ಸಂಗೀತ ಕಲಿಯುತ್ತಿದ್ದ ದಿನಗಳು. ತೋಂಟದ ಸಿದ್ಧಲಿಂಗೇಶ್ವರ ಸ್ವಾಮೀಜಿ ಐದನೇ ಪುಣ್ಯತಿಥಿ ಕಾರ್ಯಕ್ರಮವಿತ್ತು. ಈ ಹಿನ್ನೆಲೆಯಲ್ಲಿ ಸಂಗೀತ ವಿದ್ಯಾರ್ಥಿಗಳಿಗಾಗಿಯೇ ಹಾಡುಗಾರಿಕೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಸುಮಾರು ಐವತ್ತು ಮಂದಿ ಸ್ಪರ್ಧಿಗಳಿದ್ದರು. ವೇದಿಕೆಯ ಮುಂಭಾಗದಲ್ಲಿ ಘಟಾನುಘಟಿ ಕಲಾವಿದರಾಗಿದ್ದ ಪಂ. ಮಾಧವ ಗುಡಿ, ಪಂ. ಸಿದ್ಧರಾಮ ಜಂಬಲದಿನ್ನಿ ಅವರು ತೀರ್ಪುಗಾರರಾಗಿ ಆಸೀನರಾಗಿದ್ದರು. ಪಂ. ಪುಟ್ಟರಾಜ ಗವಾಯಿಗಳೂ ಕುಳಿತಿದ್ದರು. ಈ ಸ್ಪರ್ಧೆಯಲ್ಲಿ ಕುಮಾರದಾಸ್ ವಚನವೊಂದನ್ನು ಸುಶ್ರಾವ್ಯವಾಗಿ ಹಾಡಿದರು. ಫಲಿತಾಂಶ ಪ್ರಕಟಿಸಿದಾಗ ಕುಮಾರದಾಸ್ ಅವರಿಗೆ ಮೊದಲ ಬಹುಮಾನ ಒಲಿದಿತ್ತು. ಅಷ್ಟೇ ಅಲ್ಲದೆ ಇವರ ಗಾಯನವನ್ನು ಆಲಿಸಿದ ಪುಟ್ಟರಾಜ ಗವಾಯಿಗಳು ತಮ್ಮ ಕೊರಳಿನಲ್ಲಿದ್ದ ಎರಡು ತೊಲೆ ಬಂಗಾರದ ಸರವನ್ನು ಕುಮಾರದಾಸ್ ಅವರ ಕತ್ತಿಗೆ ಹಾಕಿ ಪ್ರಶಂಸೆ ವ್ಯಕ್ತಪಡಿಸಿದರು.

'ಈ ಘಟನೆಯನ್ನು ನಾನು ಜೀವಮಾನದಲ್ಲಿ ಮರೆಯಲಾರೆ. ಈಗಲೂ ನೆನೆಸಿಕೊಂಡರೆ ಪುಳಕವಾಗುತ್ತದೆ, ಸಂತೃಪ್ತಿ, ಸಮಾಧಾನದ ಭಾವ ಮೂಡಿಬರುತ್ತದೆ. ಸಂಗೀತ ಕಲಿತದ್ದು ಸಾರ್ಥಕವಾಯ್ತು' ಎಂದು ಹೆಮ್ಮೆಯಿಂದ ಸ್ಮರಿಸುತ್ತಾರೆ ಪಂ. ಕುಮಾರದಾಸ್.

'ಪುಣ್ಯಾಶ್ರಮದಲ್ಲಿ ದಿನವಿಡೀ ಸಂಗೀತಾಭ್ಯಾಸವೇ. ಹಾಡುವುದನ್ನು ಬಿಟ್ಟರೆ ಬೇರೆ ಏನೂ ಕೆಲಸವಿರುತ್ತಿರಲಿಲ್ಲ. ವೆಂಕಟೇಶ್ ಕುಮಾರ್ ಜತೆಗೆ ಭಾಳ ವರ್ಷ ಹಾಡಿದ್ದೀನಿ. ಅಂಥ ದಿನಗಳು ಮತ್ತೆ ಬಾರದು' ಎಂದು ಮೆಲುಕು ಹಾಕುತ್ತಾರೆ ಈ ವಿದ್ವಾಂಸ.

ಆಕಾಶವಾಣಿಯ ಎ ಗ್ರೇಡ್ ಕಲಾವಿದರಾದ ಕುಮಾರದಾಸ್, ಸುಮಾರು ಮೂವತ್ತು ವರ್ಷ ಧಾರವಾಡ ಆಕಾಶವಾಣಿಯಲ್ಲಿ ನಿಲಯ ಕಲಾವಿದರಾಗಿ ಸೇವೆ ಸಲ್ಲಿಸಿದವರು. ಹಿಂದೂಸ್ತಾನಿ ಸಂಗೀತದ ಕಿರಾಣ–ಗ್ವಾಲಿಯರ್ ಘರಾಣೆಯಲ್ಲಿ ಹಾಡುವ ಇವರು, ಶಾಸ್ತ್ರೀಯ ಸಂಗೀತವಲ್ಲದೆ ವಚನ, ದೇವರನಾಮ, ಅಭಂಗಗಳನ್ನೂ ಸೊಗಸಾಗಿ ಹಾಡುತ್ತಾರೆ. ರಾಗ ಭಾಗೇಶ್ರೀ, ತೋಡಿ, ಬೈರಾಗಿಭೈರವ್, ಶುದ್ಧ ಸಾರಂಗ, ಯಮನ್ ಕಲ್ಯಾಣ್ ಮುಂತಾದ ರಾಗಗಳನ್ನು ಬಹಳ ಇಷ್ಟಪಡುವ ಇವರು, ಅನೇಕ ಕಛೇರಿಗಳಲ್ಲಿ ಈ ರಾಗಗಳನ್ನು ಹಾಡಿ ರಂಜಿಸಿದ್ದಾರೆ.

ಸಂಗೀತ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆಗಾಗಿ ನೀಡಲಾಗುವ ಕರ್ನಾಟಕ ಕಲಾಶ್ರೀ, ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಪಂ. ಕುಮಾರದಾಸ್ ಅವರಿಗೀಗ ಪ್ರತಿಷ್ಠಿತ ಪಂ. ಮಲ್ಲಿಕಾರ್ಜುನ ಮನ್ಸೂರ್ ರಾಷ್ಟ್ರೀಯ ಪ್ರಶಸ್ತಿಯ ಗರಿ.

ಕಾಣೆಯಾದ ಕೂಗ್ಲು ಬಳ್ಳಿ ಪೆಟ್ಟಿಗೆಗಳು

ಬೀರಣ್ಣ ನಾಯಕ ಮೊಗಟಾ

ಕೂಗ್ಲು ಬಳ್ಳಿಯಿಂದ ತಯಾರಿಸಿದ ಬುಟ್ಟಿಗಳು

ಕಾಡಿನ ಭಾಗದಲ್ಲಿ ಸಿಗುವ ಗಿಡ, ಬಳ್ಳಿಗಳು ಈ ಹಿಂದೆ ಸುತ್ತಲಿನ ಭಾಗದ ಜನರ ಬದುಕಿನ ಭಾಗವೇ ಆಗಿರುತ್ತಿದ್ದವು. ಒಂದಲ್ಲ ಒಂದು ಕಾರಣಕ್ಕೆ ಅವುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಅವುಗಳಿಂದ ಗೃಹಪಯೋಗಿ ವಸ್ತುಗಳನ್ನು ತಯಾರಿಸುತ್ತಿದ್ದರು. ಈಗ ಇಂಥ ಅನೇಕ ವಸ್ತುಗಳು ಕಣ್ಮರೆಯಾಗಿವೆ. ಅದೇ ಸಾಲಿಗೆ ಸೇರುವ ಉತ್ಪನ್ನ ಕೂಗ್ಲು ಬಳ್ಳಿ ಪೆಟ್ಟಿಗೆಗಳು. ಪ್ಲಾಸ್ಟಿಕ್, ರಬ್ಬರ್ ಬುಟ್ಟಿಗಳು ಬಂದ ಮೇಲೆ ಕಬ್ಬಿಣದ ಕಪಾಟಿನ ಬಳಕೆಯ ಬಳಿಕ ಈ ಬುಟ್ಟಿಗಳು ಕಾಣಸಿಗುವುದು ಅಪರೂಪ.

ಇಂದಿನ ಪೀಳಿಗೆಗೆ ಈ ಪೆಟ್ಟಿಗೆಗಳನ್ನು ತೋರಿಸಲೆಂದು ನೂರು ವರ್ಷ ಹಳೆಯದಾದ ಪೆಟ್ಟಿಗೆಗಳನ್ನು ಕುಮಟಾ ತಾಲ್ಲೂಕಿನ ಕಲ್ಲಬ್ಬೆಯ ಗಜಾನನ ಹೆಗಡೆ ಗಾಳಿಮನೆಯವರು ಸಂಗ್ರಹಿಸಿಟ್ಟಿದ್ದಾರೆ. 'ನಮ್ಮ ತಾತ ದಿವಂಗತ ಗಣೇಶ ಹೆಗಡೆಯವರು ತಯಾರಿಸಿದ್ದು. ಇಂದು ಕೂಗ್ಲು ಬಳ್ಳಿಯಿಂದ ಪೆಟ್ಟಿಗೆ ಮಾಡುವವರು ಇಲ್ಲ ಹಾಗೂ ಈ ಪೆಟ್ಟಿಗೆಗಳು ಕಾಣಸಿಗುವುದು ಕೂಡ ಕಷ್ಟ' ಎನ್ನುತ್ತಾರೆ ಗಜಾನನ ಹೆಗಡೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದಾದರು ಕಾಡು ಬಳ್ಳಿ ಗುಂಟೆಗಟ್ಟಲೆ ಜಾಗದಲ್ಲಿ ಹಬ್ಬಿಕೊಂಡರೆ 'ಕೂಗ್ಲು ಬಳ್ಳಿ ಹಬ್ಬ್ಕಂಡಂಗೆ ಹಬ್ಬ್ಕಂಡಿದೆ' ಎಂದು ಹೇಳುವ ರೂಢಿ ಇದೆ. ಇಲ್ಲಿನ ಕಾಡಿನಲ್ಲಿ ಸಾಮಾನ್ಯವಾಗಿ ಕಾಣಸಿಗುವ ಕೂಗ್ಲು ಬಳ್ಳಿ ಬದುಕಿನಲ್ಲಿಯೂ ಹಾಸುಹೊಕ್ಕಾಗಿತ್ತು. ಒಂದು ಕಾಲದಲ್ಲಿ ಸೋಗೆಮನೆ, ಹುಲ್ಲಿನ ಮನೆ, ತಾಳೆ ಎಲೆ ಮನೆಗಳ ನಿರ್ಮಾಣಕ್ಕೆ ಈ ಬಳ್ಳಿ ಅಗತ್ಯವಾಗಿತ್ತು. ಈ ಬಳ್ಳಿಯಿಂದ ತಯಾರಿಸಿದ ಬುಟ್ಟಿ ಎಲ್ಲರ ಮನೆಯ ಅಡಿಕೆ ತೋಟದಲ್ಲಿಯೂ ಕಾಣಸಿಗುತ್ತಿತ್ತು.

ಹಿಂದಿನ ಕಾಲದಲ್ಲಿ ನೈಪುಣ್ಯತೆ ಪಡೆದ ಕುಶಲ ಕರ್ಮಿಗಳು ಈ ಕೂಗ್ಲು ಬಳ್ಳಿಯಿಂದ ಆಕರ್ಷಕ ಪೆಟ್ಟಿಗೆ ಮಾಡುತ್ತಿದ್ದರು. ತಮ್ಮ ಅನುಕೂಲತೆಗೆ ಹಾಗೂ ಉಪಯೋಗಕ್ಕೆ ತಕ್ಕ ಹಾಗೆ ಪೆಟ್ಟಿಗೆಗಳನ್ನು ತಯಾರಿಸಿ, ಮೌಲ್ಯಯುತವಾದ ಸಾಮಾನುಗಳನ್ನು ಇಡುವ ಪೆಟ್ಟಿಗೆಗೆ ಬೀಗ ಹಾಕುವ ವ್ಯವಸ್ಥೆ ಕೂಡ ಮಾಡಿಡುತ್ತಿದ್ದರು. ದೊಡ್ಡ ಆಕಾರದ ಬೀಗ ಇರುವ ಕೂಗ್ಲು ಬಳ್ಳಿಯ ಪೆಟ್ಟಿಗೆಯನ್ನು ತವರು ಮನೆಯಲ್ಲಿ ಪ್ರಥಮ ಹೆರಿಗೆಯಾಗಿ ಮಗುವನ್ನು ಗಂಡನ ಮನೆಗೆ ಒಯ್ಯುವಾಗ ಉಡುಗೊರೆಯಾಗಿ ನೀಡುವ ಸಂಪ್ರದಾಯ ಕೆಲವು ಸಮಾಜದಲ್ಲಿ ರೂಢಿಯಲ್ಲಿ ಇತ್ತು.

ಕಥೆ

ಬಂಡು ಕೋಳಿ ಅವರ **ಹೊಳೆಸಾಲ್ ಹೆಣ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಮುನವ್ವರ್, ಜೋಗಿಬೆಟ್ಟು ಅವರ **ಜೋಳಿಗೆ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ bhanuvara@prajavani.co.in

ಕೂಡಲಸಂಗಮ ಬಸವ, ಶರಣರ ಸಂಗಮ

ವಿಶ್ವಗುರು ಬಸವಣ್ಣ

ಗ್ಯಾಲರಿಯ ಒಂದು ನೋಟ

2ನೇ ಪುಟದಿಂದ...

ಮುಂದಿನ ವಿಭಾಗದಲ್ಲಿ ಬಸವಣ್ಣನನ್ನು ಕುರಿತು ವಿವಿಧ ಕಲಾವಿದರು ಚಿತ್ರಿಸಿದ ಪೇಂಟಿಂಗ್‌ಗಳ, ಸರಣಿ ಚಿತ್ರಗಳ, ಅಮರ ಚಿತ್ರಕಥಾ ಮಾಲಿಕೆಯ ಛಾಯಾಚಿತ್ರಗಳಿವೆ. ಇದೊಂದು ಅಪರೂಪದ ಸಂಗ್ರಹವೇ ಸರಿ. ಯಾಕೆಂದರೆ, ಈ ಸಂಗ್ರಹಾಲಯದ ರೂವಾರಿ, 'ಬಸವಣ್ಣನ ಕುರಿತು ರಚಿಸಿದ ವರ್ಣಚಿತ್ರಗಳ ಒಂದು ಅಧ್ಯಯನ' ಎಂಬ ಸಂಶೋಧನ ಪ್ರಬಂಧ ಮಂಡಿಸಿದವರು. ಹೊರಗಿನ ಆವರಣದಲ್ಲಿ ಬಸವಪೂರ್ವ ಯುಗದ ಸಮಾಜವನ್ನು ತೆರೆದಿಡುವಂತಹ ಸಿಮೆಂಟ್ ಶಿಲ್ಪಗಳಿವೆ. ಆ ದಿನಗಳಲ್ಲಿದ್ದ ಅಸಮಾನತೆಗಳು, ಅಸ್ಪೃಶ್ಯತೆ, ದಲಿತರಿಗೆ ಶಿಕ್ಷಣದ ವಂಚನೆ, ನೀರಿನ ನಿರಾಕರಣೆ, ಅವರು ಊರು ಪ್ರವೇಶಿಸುವ ಮುನ್ನ ಸಂಬಳಿಗೋಲು ಹಿಡಿದು ಪ್ರವೇಶಿಸುವ ದೃಶ್ಯ, ಪೊರಕೆ ಹಿಡಿದು ಬರುವ ದೃಶ್ಯಗಳಿವೆ.


ಬಸವರಾಜ ಅನಗವಾಡಿ

ಯಾರಿದರ ರೂವಾರಿ..?

ಬಾಗಲಕೋಟೆ ಜಿಲ್ಲೆಯ ಗುಂಡನಪಲ್ಲೆಯ ಬಸವರಾಜ ಅನಗವಾಡಿ ಈ ಸಂಗ್ರಹಾಲಯದ ರೂವಾರಿ. 2005ರ ಸುಮಾರಿಗೆ ಸ್ಥಳೀಯ ಕಲಾವಿದರನ್ನು ಬಳಸಿಕೊಂಡು ಚಿತ್ರ–ಶಿಲ್ಪಗಳ ತಯಾರಿ ಕಾರ್ಯ ಆರಂಭಿಸಿದರು. 'ಕೂಡಲ ಸಂಗಮ ಅಭಿವೃದ್ಧಿ ಮಂಡಳಿ' ನೀಡಿದ ಒಂದು ಎಕರೆ ಜಾಗದಲ್ಲಿ 2011 ರಿಂದ ಈ ಸಂಗ್ರಹಾಲಯದ ಕೆಲಸ ಶುರುವಾಯಿತು. ಆಗ ಬಸವಣ್ಣನ ಕುರಿತಾದ 49 ಉಬ್ಬುಶಿಲ್ಪಗಳಿದ್ದವು. ಈ ಕಾರ್ಯ ನಿರಂತರವಾಗಿ ನಡೆಯುತ್ತಿದ್ದು ಸದ್ಯ 100 ಉಬ್ಬುಶಿಲ್ಪಗಳು, 125 ಸಿಮೆಂಟ್ ಶಿಲ್ಪಗಳು, 100 ಕ್ಯಾನ್ವಾಸ್ ಪೇಂಟಿಂಗ್‌ಗಳಿವೆ. ಫೈಬರ್‌ನಲ್ಲಿ ನಿರ್ಮಿಸಿರುವ ಉಬ್ಬುಶಿಲ್ಪಗಳು 18 x 8, 10 x 6 ಅಡಿಗಳ ಗಾತ್ರದಲ್ಲಿವೆ. ಶಿಲ್ಪಗಳನ್ನು ಸಿಮೆಂಟ್ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ತಯಾರಿಸಲಾಗಿದೆ. ಮತ್ತೀಗ ಅಕ್ಕಮಹಾದೇವಿಯ ಸರಣಿಯ ಶಿಲ್ಪಗಳ ನಿರ್ಮಾಣ ಕಾರ್ಯ ನಡೆದಿದೆ. ಈ ಸಂಗ್ರಹಾಲಯ ನಿರ್ಮಾಣಕ್ಕಾಗಿ ಅನಗವಾಡಿಯವರು ಸುಮಾರು ಆರು ಕೋಟಿ ರೂಪಾಯಿ ವ್ಯಯಿಸಿದ್ದಾರೆ. ರಾಜ್ಯ ಸರ್ಕಾರ ಈ ತನಕ ಎರಡೂವರೆ ಕೋಟಿ ರೂಪಾಯಿ ಅನುದಾನ ನೀಡಿದೆ.

ಅನಕ್ಷರಸ್ಥರಿಗೂ ಶರಣರ ಜೀವನ, ಅವರ ವಚನಗಳನ್ನು ತಲುಪಿಸಬೇಕೆಂಬುದು ತಮ್ಮ ಧ್ಯೇಯವೆಂದು ಹೇಳುವ ಬಸವರಾಜ ಅನಗವಾಡಿಯವರು, ಅದಕ್ಕಾಗಿ ಸಾಕಷ್ಟು ಶ್ರಮಿಸಿದ್ದಾರೆ. ಪ್ರತಿ ವಚನದ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಮೂಲ ಪಠ್ಯ ಮತ್ತು ಅದರ ಭಾವಾರ್ಥಗಳ ಫಲಕಗಳು ಎಲ್ಲ ವಚನಶಿಲ್ಪಗಳ ಅಡಿಯಲ್ಲಿವೆ. ಅಕ್ಷರ ರೂಪದ ವಚನಗಳನ್ನು ದೃಶ್ಯರೂಪಕ್ಕೆ ತಂದಿರುವುದಲ್ಲದೆ ಅದನ್ನು 'ಕೇಳುವ' ಪಠ್ಯವಾಗಿಯೂ ರೂಪಿಸಿದ್ದಾರೆ. ಶಿಲ್ಪಗಳ ಬಳಿ ಇರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ, ನಾವು ವಚನ ಮತ್ತದರ ವಿವರಣೆಯನ್ನು ಕೇಳಬಹುದು. ವಚನಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಾಮಾನ್ಯರಿಗೆ ತಲುಪಿಸಬೇಕೆಂಬ ಅನಗವಾಡಿಯವರ ಹಂಬಲ ಗಮನಾರ್ಹವಾದುದು.

ಮೊದಲ ಓದು

25 ವರ್ಷಗಳ ಸಿನಿ ಪಯಣದ ಮೆಲುಕು



ಪು: 196
₹250

ಕವಿರಾಜ್ ಮಾರ್ಗದಲ್ಲಿ
ಲೇ: ಕವಿರಾಜ್
ಪ್ರ: ಹರಿವು ಬುಕ್ಸ್
ಸಂ: 8088822171

ಸಾಮಾನ್ಯವಾಗಿ ಸೆಲೆಬ್ರಿಟಿಗಳ ಬದುಕಿನ ಬಗ್ಗೆ, ಅವರ ಸ್ನೇಹ, ವಿಶ್ವಾಸ ಹೇಗಿರುತ್ತೆ, ಇಬ್ಬರು ಸೆಲೆಬ್ರಿಟಿಗಳ ನಡುವಿನ ಸಂಬಂಧಗಳು ಹೇಗಿರುತ್ತವೆ? ಎಂಬುದರ ಕುರಿತು ಸಣ್ಣದೊಂದು ಕುತೂಹಲ ಮನೆ ಮಾಡಿಯೇ ಇರುತ್ತದೆ. ಅಂಥ ಕುತೂಹಲವನ್ನು ತಣಿಸುವ, ಸರಾಗವಾಗಿ ಓದಿಸಿಕೊಂಡು ಹೋಗುವ ಪುಸ್ತಕವೇ ಗೀತ ಸಾಹಿತಿ ಕವಿರಾಜ್ ಅವರ 'ಕವಿರಾಜ್ ಮಾರ್ಗದಲ್ಲಿ'. ಇದು 25 ವರ್ಷಗಳ ಕವಿರಾಜ್ ಅವರ ಸಿನಿ ಜೀವನದ 28 ರಸಮಯ ಕಥಾನಕಗಳ ಗುಚ್ಛವೂ ಆಗಿದೆ. ಇಲ್ಲಿ ಕವಿರಾಜ್ ಕಂಡುಕೊಂಡ ಚಂದದ ಗಾಂಧಿನಗರವಿದೆ. ಹಾಗೆಂದು ಸಂಬಂಧಗಳಲ್ಲಿನ ಏರಿಳಿತವನ್ನು ಮುಚ್ಚಿಡಲು ಪ್ರಯತ್ನಿಸಿಲ್ಲ. ಈ ಬರಹದಿಂದ ಯಾರಿಗೋ ನೋವಾಗಬಹುದು ಎಂಬ ಲೆಕ್ಕಾಚಾರ ಹಾಕದೇ, ಆಗಿರುವ ಘಟನೆಗಳನ್ನು ಯಥಾವತ್ತು ನಿರೂಪಿಸಲು ಪ್ರಯತ್ನಿಸಿದ್ದಾರೆ. ಇದು ಈ ಪುಸ್ತಕದ ಹೆಗ್ಗಳಿಕೆಯೇ ಸರಿ. ಜನಪ್ರಿಯ ಸಿನಿ ಕಲಾವಿದರ ಜತೆಗಿನ ಒಡನಾಟವನ್ನು ಬಹಳ ಸರಳ ಭಾಷೆಯಲ್ಲಿ ವಿವರಿಸಿದ್ದಾರೆ. ಬಿಡಿ ಬಿಡಿಯಾಗಿ ನೋಡಿದಾಗ ಕತೆಯಾಗಿ ಕಂಡರೂ ಒಟ್ಟಂದದಲ್ಲಿ ನೋಡುವಾಗ ಆತ್ಮಕತೆಯ ತುಣುಕಿನಂತೆ ಭಾಸವಾಗುತ್ತದೆ. ಮನುಷ್ಯ ದೊಡ್ಡವನಾಗುವ ಬಗೆ ಯಾವುದು? ಹೆಸರಿನಿಂದಲೇ, ಆಸ್ತಿಯಿಂದಲೇ, ಸಾಮಾಜಿಕ ಸ್ಥಾನಮಾನದಿಂದಲೇ, ಹುದ್ದೆಯಿಂದಲೇ ಅಥವಾ ಪ್ರತಿ ಹಂತದಲ್ಲಿಯೂ ಸಣ್ಣತನವನ್ನು ಮೀರಲು ಯತ್ನಿಸಿದಾಗಲೇ ಎಂಬ ಜಿಜ್ಞಾಸೆ ಸದಾ ಇರುತ್ತದೆ. ಈ ಒಟ್ಟು ಕಥಾನಕವನ್ನು ಓದಿದಾಗ ನಿಮಗೆ ಈ ಜಿಜ್ಞಾಸೆ ಮೂಡಿದರೆ ಆಶ್ಚರ್ಯವಿಲ್ಲ. ಇದು ಕೇವಲ ಕವಿರಾಜ್ ಅವರ ಕಥೆಯಲ್ಲ. ಸಿನಿ ತಾರೆಯರ ಹಲವು ವ್ಯಕ್ತಿತ್ವಗಳ ಅನಾವರಣವೂ ಹೌದು.

ವೈರಾಗ್ಯದ ಒಳ ಹೊರಗು ಅವಲೋಕನ

ಪು: 262
₹250

ಬಹುರೂಪಿ
ಲೇ: ಪ್ರೇಮಕುಮಾರ್ ಹರಿಯಬ್ಬೆ
ಪ್ರ: ಪಾಂಚಜನ್ಯ ಪ್ರಕಾಶನ
ಸಂ: 9740066842

ಕರ್ನಾಟಕ ರಾಜ್ಯದ ಎಲ್ಲ ಮಠ ಪರಂಪರೆಗಳನ್ನು ಹಾದು ಬಂದು, ಸ್ವಾಮೀಜಿಗಳನ್ನು ಸುತ್ತಿಕೊಂಡಿರುವ ವಾದ–ವಿವಾದಗಳು, ಆಯಾ ಮಠಗಳ ವಿಶೇಷಗಳು ಎರಡೂ ಒಟ್ಟುಗೂಡಿಸಿದ ಕಥಾಹಂದರವಿರುವ ಕಾದಂಬರಿ ಇದು.

ವೈರಾಗ್ಯವೆಂಬುದು ಆಯ್ಕೆ ಆಗಬೇಕು, ಅನಿವಾರ್ಯವಲ್ಲ ಎಂಬ ತೀರ್ಪಿಗೆ ಓದುಗರು ಬರುವಂತೆ ಮಾಡುವ ಈ ಕಾದಂಬರಿಯು ಅನೇಕ ಸ್ವಾಮೀಜಿಗಳನ್ನು, ಸಂತರನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿ ಬರುವಂತೆ ಮಾಡುತ್ತದೆ.

ಎಂಥವೇ ರೋಚಕವೆನಿಸುವ ಸನ್ನಿವೇಶಗಳಿದ್ದರೂ ಸ್ವಾಮೀಜಿಯೇ ಕತೆ ನಿರೂಪಿಸುತ್ತಿರುವುದರಿಂದ ಇಲ್ಲಿ ಅಪರಾಧಿ ಮನೋಭಾವವೇ ಢಾಳಾಗಿ ಕಂಡು ಬರುತ್ತದೆ. ಪ್ರೇಮ, ಕಾಮ ಮತ್ತು ಜೀವಕ್ಕೆ ಅಂಟಿಕೊಳ್ಳುವ ನಂಟು ಎಲ್ಲವೂ ತಪ್ಪು ಎನ್ನುವ ಭಾವದಲ್ಲಿಯೇ ಬರುತ್ತ ನೈತಿಕ ಮೌಲ್ಯಗಳ ಕುರಿತ ಪ್ರಶ್ನೆಗಳನ್ನು ಎತ್ತುತ್ತ ಹೋಗುತ್ತವೆ. ಆದರೆ ಎಲ್ಲಿಯೂ ಯಾವ ತೀರ್ಪನ್ನೂ ನೀಡುವುದಿಲ್ಲ. ಯಾವ ಕಡೆಯೂ ವಾಲುವುದಿಲ್ಲ. ಕಾದಂಬರಿಕಾರರು ಪತ್ರಕರ್ತರಾಗಿದ್ದು, ವರದಿಗಾರರಾಗಿಯೇ ಬಹುಪಾಲು ಸಮಯ ಕಳೆದಿರುವುದರಿಂದ ಆ ನಿರುದ್ವಿಗ್ನ ಮತ್ತು ನಿರ್ಲಿಪ್ತ ಬರೆಹ ಇಲ್ಲಿ ಎದ್ದು ಕಾಣುತ್ತಿದೆ. ಹಲವಾರು ಸ್ವಾಮೀಜಿಗಳು, ಮಠ ಪರಂಪರೆ, ರಾಜ್ಯ ರಾಜಕಾರಣ, ಇವುಗಳ ನಡುವಿನ ಬಂಧ ಮತ್ತು ಸಂಬಂಧಗಳನ್ನು ವಸ್ತುನಿಷ್ಠವಾಗಿ ವಿವರಿಸುತ್ತ ಹೋಗಿರುವುದೇ ಈ ಕಾದಂಬರಿಯ ವಿಶೇಷ. ಹಲವಾರು ಸ್ವಾಮೀಜಿಗಳು ಮತ್ತು ರಾಜಕಾರಣಿಗಳು ಓದುಗರ ಊಹೆಗೆ ನಿಲುಕುತ್ತ, ಕೈಗೆಟಕುತ್ತ ಹೋಗುತ್ತಾರೆ.

ಸಂಸ್ಕೃತಿ ಬಿಂಬಿಸುವ ಬರಹಗಳು



ಪು: 420
₹525

ಸಮ್ಮುಖ
ಲೇ: ಗ.ನಾ. ಭಟ್ಟ
ಪ್ರ: ಮಹಿಮಾ ಪ್ರಕಾಶನ
ಸಂ:9448759815

ವೃತ್ತಿಯಿಂದ ಸಂಸ್ಕೃತ ಶಿಕ್ಷಕರಾದ ಗ.ನಾ.ಭಟ್ಟರು ಪತ್ರಿಕೆಗಳಿಗಾಗಿ ಬರೆದ ಲೇಖನಗಳ ಸಂಗ್ರಹ ಈ ಕೃತಿಯಲ್ಲಿದೆ. ಹೀಗಾಗಿ ಇಂದಿನ ರಾಜಕೀಯ ವಿದ್ಯಮಾನದ ವಿಶ್ಲೇಷಣೆ, ವ್ಯಕ್ತಿಚಿತ್ರದಿಂದ ಹಿಡಿದು ತಾಳಮದ್ದಲೆ ವಿಮರ್ಶೆ, ಪುಸ್ತಕ ವಿಮರ್ಶೆ ತನಕ ಎಲ್ಲ ಕ್ಷೇತ್ರಗಳ ಕುರಿತಾದ ಬರಹಗಳೂ ಇದರಲ್ಲಿ ಕಾಣಸಿಗುತ್ತವೆ.

ಕೃತಿಯಲ್ಲಿ ಐವತ್ತೆಂಟು ಲೇಖನಗಳಿವೆ. ಒಟ್ಟಾರೆಯಾಗಿ ಗಮನಿಸಿದಾಗ ಇಲ್ಲಿ ಪರಿಚಯಿಸಿರುವ ವ್ಯಕ್ತಿಗಳು, ವಿಶ್ಲೇಷಿಸಿರುವ ಘಟನೆಗಳು ಎಲ್ಲವೂ ರಾಷ್ಟ್ರೀಯತೆ, ಸಂಸ್ಕೃತಿ, ಆಚಾರ ವಿಚಾರಗಳನ್ನು ಝಳಪಿಸುವ ಸಂಗತಿಗಳೇ ಆಗಿವೆ.'ತಾಳಮದ್ದಳೆ ಸಾಗುತ್ತಿರುವ ಹಾದಿ' ಲೇಖನದಲ್ಲಿ ಬದಲಾದ ತಾಳಮದ್ದಲೆ ಪ್ರಸಂಗಗಳು ಮತ್ತು ಪ್ರೇಕ್ಷಕನ ಅಭಿರುಚಿ ಕುರಿತು ಆತಂಕ ವ್ಯಕ್ತಪಡಿಸುತ್ತಾರೆ. ಇದೇ ರೀತಿ ಹಲವು ಬರಹಗಳಲ್ಲಿ ನಾವು ನಮ್ಮತನ ಕಳೆದುಕೊಳ್ಳುತ್ತಿರುವುದನ್ನು ವಿಶ್ಲೇಷಿಸಿದ್ದಾರೆ.

ಗುಣ, ಮನುಷ್ಯ ಸ್ವಭಾವಗಳ ಕುರಿತು ಚಿಂತನೆಗೆ ಹಚ್ಚುವ ಬರಹಗಳಿವೆ. ಇಲ್ಲಿನ ಭಾಷೆ ಸರಳವಾಗಿ, ಸುಲಭವಾಗಿ ಓದಿಸಿಕೊಂಡು ಹೋಗುವಂತಿದೆ. ಸಾಕಷ್ಟು ಕಡೆ ವಿಚಾರಗಳು ಪುನರಾವರ್ತನೆಗೊಂಡಂತೆ ಭಾಸವಾದರೂ, ಪೌರಾಣಿಕ ಸನ್ನಿವೇಶಗಳೊಂದಿಗೆ ಪ್ರಸ್ತುತದ ವಿಶ್ಲೇಷಣೆ ಓದುಗನನ್ನು ಆಳವಾದ ಚಿಂತನೆಗೆ ಹಚ್ಚುತ್ತದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೋದಂಡ ಚಂದ್ರ

ಕೋದಂಡ ಚಂದ್ರ (ನಾ). ಬಿಲ್ಲಿನಾಕಾರದ ಚಂದ್ರ

ಕುವೆಂಪು ಅವರು ಯಜ್ಞ ಪುರುಷನ ಕೈಯಲ್ಲಿಯ ಚಿನ್ನದ ಪಾತ್ರೆಯಲ್ಲಿರುವ ಸುಪಾಯಸ ರಸವನ್ನು – ಕೋದಂಡ ಚಂದ್ರನಲ್ಲಿ ಹೊನ್ನ ಬೆಳುದಿಂಗಳ ಜಲ ಹೊಳೆಯುವಂತೆ ತಳತಳಿಸಿ ನಲಿದು ಕುಣಿಯುತ್ತಿತ್ತು ಎಂದು ವರ್ಣಿಸಿದ್ದಾರೆ. ಅರ್ಧಚಂದ್ರನನ್ನು ಬಿಲ್ಲಿಗೆ ಹೋಲಿಸಿ ಅದರಲ್ಲಿ ಹೊನ್ನ ಬೆಳದಿಂಗಳ ಜಲ ಹೊಳೆಯುವಂತೆ ಪಾಯಸ ಹೊಳೆಯುತ್ತಿತ್ತು ಎನ್ನುವುದು ಕವಿ ಪ್ರತಿಭೆಯಿಂದ ಹೊಮ್ಮಿ ಬಂದ ತಳತಳಿಸುವ ಉಪಮಾನಲಂಕಾರ. ಜೊತೆಗೆ ಅದು ಕೋದಂಡ ರಾಮಚಂದ್ರನ ಉದಯವನ್ನು ಧ್ವನಿಸುತ್ತದೆ.

ಮಿಸುಪ ಮಿಸುನಿಯ ಪಾತ್ರೆಯಲಿ ಸುಪಾಯಸ ರಸಂ,
ಕೋದಂಡ ಚಂದ್ರನಲಿ ಪೊನ್ನಜನ್ನದ ಜಲಂ
ಪೊಳೆವಂತೆ, ತಳತಳ ನಲಿದು ಕುಣಿಯೆ.

ರೂಕ್ಷಜ್ವಾಲೆ

ಕುವೆಂಪು ಅವರು 'ಭೈರವನಾರಿ' ಕವನದಲ್ಲಿ ರಣರಂಗದಲ್ಲಿ ರೌದ್ರವನ್ನು ತೋರುತ್ತ, ತಾಂಡವನೃತ್ಯ ಗೈಯುವ ಶಂಕರನಾರಿಯನ್ನು ಚಿತ್ರಿಸಿದ್ದಾರೆ. ಅವಳ ಕಂಠದಲ್ಲಿ ಭಯವನ್ನುಂಟು ಮಾಡುವ 'ನರಶಿರಮಾಲೆ' ಇದ್ದರೆ, ಕೈಯಲ್ಲಿ ಹೊಳೆಯುವ 'ರೂಕ್ಷಜ್ವಾಲೆ'ಯಿದೆ ಎಂದು ಬಣ್ಣಿಸಿದ್ದಾರೆ. ಜ್ವಾಲೆ ಧಗಧಗಿಸಿ ಉರಿಯುವ ಬೆಂಕಿಯ ನಾಲಗೆ. ಅದನ್ನು ಇನ್ನೂ ತೀವ್ರವಾಗಿಸಲು ಅದಕ್ಕೆ ಪೂರಕವಾಗಿ 'ರೂಕ್ಷ' ಪದ ಬಳಸಿದ್ದಾರೆ. ತೀಕ್ಷ್ಣಕ್ರೂರವಾದುದು ರೂಕ್ಷ. ಕವಿಯು ರೂಪಿಸಿರುವ 'ರೂಕ್ಷಜ್ವಾಲೆ' ಪದ ಬೆಂಕಿಯ ನಾಲಗೆಯನ್ನು ಇನ್ನೂ ಕ್ರೂರವಾಗಿ ತೀಕ್ಷ್ಣಗೊಳಿಸಿದೆ.

'ಕಂಠದೊಳಂಜಿಪ ನರಶಿರಮಾಲೆ!
ಕರದಲಿ ರಂಜಿಪ ರೂಕ್ಷಜ್ವಾಲೆ!

ಕುಳದ ಕಲಿ

'ಕುಳ'ವೆಂದರೆ ನೇಗಿಲುಗಳ ಬಾಯಿಗೆ ತೊಡಿಸುವ ಕಬ್ಬಿಣದ ಪಟ್ಟಿ'. ಹೊಲವನ್ನು ನೇಗಿಲಿನಿಂದ ಉತ್ತು, ಬೆಳೆ ತೆಗೆದು ನಾಡಿನ ಜನಕ್ಕೆ ನೀಡುವ ರೈತನನ್ನುದ್ದೇಶಿಸಿ ಕುವೆಂಪು ಅವರು 'ಕುಳದ ಕಲಿಗೆ' ಕವನ ರಚಿಸಿದ್ದಾರೆ. 'ಕುಳದ ಕಲಿ' ಅವರು ರಚಿಸಿರುವ ಪದ. ಅದರಲ್ಲಿ ರೈತನನ್ನು ನಾಡಿನ ಹಣೆಬರಹ ಬರೆಯುವವನೆಂದಿದ್ದಾರೆ. ಅವನನ್ನು 'ಹೊಲದ ನಾಂದಿ' ಎಂದು ಕರೆದಿದ್ದಾರೆ. ಅದು ಬೇಸಾಯ ಕಲ್ಪನೆಯ ನಾಂದಿ ಪುರುಷ ಎಂಬ ಅರಿವು. ಅವನ ಸತ್ಯ, ಶಾಂತಿ, ಅಹಿಂಸಾ ಜೀವನ ರೀತಿಯನ್ನು ಕಂಡು 'ನೆಲದ ಗಾಂಧಿ' ಎಂದು ವಿಶೇಷ ಪದದಲ್ಲಿ ಚಿತ್ರಿಸುತ್ತ, 'ನೀನೆ ರಾಷ್ಟ್ರ ಶಕ್ತಿ' ಎಂದು ಬಣ್ಣಿಸಿದ್ದಾರೆ.

ಬರಿಯ ಉಳುವ ಕುಳದ ಗೆರೆಯೆ?
ನಾಡ ಹಣೆಯ ಬರೆಹ ಬರೆವೆ!
ಹೊಲದ ಗಾಂಧಿ, ನೆಲದ ನಾಂದಿ
ನೀನೆ ರಾಷ್ಟ್ರ ಶಕ್ತಿ. (ಕುಳದ ಕಲಿಗೆ- ಪ್ರೇತ-ಕ್ಯೂ)

ಕುವೆಂಪು ಅವರು 'ಹಾಡು ನೇಗಿಲಯೋಗಿ' ಕವನದಲ್ಲಿ ರೈತನು ತನ್ನ ಮುದಕ್ಕಾಗಿ ಹಾಡುತ್ತ ಹೊಲ ಉಳುತ್ತಾನೆ. ಆಗ ಆಚಾರಿ ಹದಗೆಂಪಾಗಿ ಕಾಯಿಸಿ ತಟ್ಟಿದ ಕುಳಹರಿತವಾಗಿದ್ದು ಹೊಲದ ಹೃದಯಕ್ಕೆ ತಾಗುತ್ತದೆ. ಆಗ ಹೊಲದ ದಯೆಯಿಂದ ರಾಗಿ ಚಿಮ್ಮಿ ಹೊಮ್ಮುವುದು ಎಂದು ರೈತ, ಹಾಡು, ಕುಳ, ಹೊಲ, ರಾಗಿಯನ್ನು ಒಂದಾಗಿಸಿ ಬೌದ್ಧಿಕ ಸೌಂದರ್ಯದಲ್ಲಿ ಅನನ್ಯವಾಗಿ ಹೀಗೆ ಬಣ್ಣಿಸಿದ್ದಾರೆ.

ಹಾಡು ನೇಗಿಲಯೋಗಿ;
ಹಾಡೆ ಹದಗೆಂಪಾಗಿ
ಹಲದ ಕುಳ ಹರಿತಾಗಿ
ಹೊಲದ ಹೃದಯಕೆ ತಾಗಿ
ದಯೆ ಚಿಮ್ಮುವುದು ರಾಗಿ;
ಹಾಡು, ನೇಗಿಲಯೋಗಿ!
(ಹಾಡು ನೇಗಿಲಯೋಗಿ – ಪ್ರೇತ-ಕ್ಯೂ)

ಕುವೆಂಪು ಅವರು 'ನೇಗಿಲಯೋಗಿ' ಕವನದಲ್ಲಿ ನೇಗಿಲ ಕುಳದಲ್ಲಿ ಕರ್ಮ-ಕರ್ತವ್ಯ ಅಡಗಿದೆ. ರೈತ ನೆಲ ಉತ್ತು ಬಿತ್ತಿ ಬೆಳೆದರೆ ಮಾತ್ರ ರಾಗಿ, ಜೋಳ, ಭತ್ತ ಆಹಾರ ಸಮೃದ್ಧಿಯಿಂದ ಜನರ ಬದುಕು ಉತ್ತಮವಾಗುವುದು. ಅದು ಧರ್ಮಚಿಂತನೆಗೆ ಅಸ್ತಿಭಾರ. ಎಂಬ ಅರಿವಿನಲ್ಲಿ ಹೀಗೆ ಹೇಳಿದ್ದಾರೆ:

ನೇಗಿಲ ಕುಳದೊಳಡಗಿದೆ ಕರ್ಮ;
ನೇಗಿಲ ಮೇಲೆಯೆ ನಿಂತಿದೆ ಧರ್ಮ. (ಕೊಳಲು)

'ಗ್ಯೂ'ನಲ್ಲಿರುವ ಬೌದ್ಧ ದೇವಾಲಯ

'ಗ್ಯೂ'ನ ನೆತ್ತಿಮೇಲೆ ಮಮ್ಮಿ!

ಹಿಮಾಚಲ ಪ್ರದೇಶದಲ್ಲಿರುವ ನ್ಯಾಕೊ ಮತ್ತು ಗ್ಯೂ ಎಂಬ ಹಳ್ಳಿಗಳ ಸೌಂದರ್ಯ ಅವರ್ಣನೀಯ. ಈ ಹಳ್ಳಿಗಳನ್ನು ಸುತ್ತಿದರೆ ಆಗುವ ಅನುಭವ ವಿಶೇಷ...


ನ್ಯಾಕೊ ಹಳ್ಳಿಯ ವಿಹಂಗಮ ನೋಟ

ಶ್ರೀಧರ್ ಎಸ್. ಸಿದ್ದಾಪುರ

ಆಗ ನಾವು ಹಿಮಾಚಲ ಪ್ರದೇಶದ ತುತ್ತತುದಿಯ 'ನ್ಯಾಕೊ ಊರಿನ ದಾರಿಯಲ್ಲಿದ್ದೆವು. ಮೂರು ದಿನಗಳಿಂದ ಬಿಡುವಿಲ್ಲದೆ ಸಂಚರಿಸಿ ದಣಿದಿದ್ದ ನಮಗೆ ಚೈತನ್ಯ ಬಂದಿದ್ದೇ ಇಲ್ಲಿ.

ಸ್ಪಿಟಿ ಕಣಿವೆಯ ಅತ್ಯಂತ ದುರ್ಗಮ ರಸ್ತೆಗಳಲ್ಲಿ ಪ್ರಯಾಣಿಸಿ, ಸ್ಪಿಟಿ ಮತ್ತು ಸಟ್ಲೇಜ್ ನದಿಗಳ ಮಿಲನಕ್ಕೆ ಸಾಕ್ಷಿಯಾದೆವು. ನದಿ ಹರಿವಿನ ವಿಚಿತ್ರ ಬಳುಕಿಗೆ ಅಚ್ಚರಿಗೊಂಡು 'ನ್ಯಾಕೊ' ಹಳ್ಳಿಯ ಸರೋವರದ ದಂಡೆಯಲಿ ತಂಗಿದೆವು. ಸಮುದ್ರ ಮಟ್ಟದಿಂದ ಹತ್ತು ಸಾವಿರ ಮೀಟರ್ ಎತ್ತರದಲ್ಲಿರುವ ಪುಟಾಣಿ ಹಳ್ಳಿಯಿದು. ಸುತ್ತಲೂ ಹಳದಿಗೆ ತಿರುಗಿದ ಭೋಜಪತ್ರೆಯ ಮರಗಳಿವೆ. ಬೆಳಿಗ್ಗೆ ಸೂರ್ಯೋದಯಕ್ಕೆ ಸಾಕ್ಷಿಯಾಗಲು ಊರ ಸನಿಹದ ಬೌದ್ಧ ದೇವಾಲಯಕ್ಕೆ ಹೋಗಿ ಬಂದೆವು.

'ನ್ಯಾಕೊ' ಹಳ್ಳಿಯ ಸೌಂದರ್ಯಕ್ಕೆ ಬೆರಗಾದರೂ ಮನಸ್ಸಿಲ್ಲದ ಮನಸ್ಸಿನಿಂದ 'ಗ್ಯೂ' ಎಂಬ ಹಳ್ಳಿ ಕಡೆಗೆ ಹೊರಟೆವು.

'ನ್ಯಾಕೊ' ಮತ್ತು 'ಗ್ಯೂ' ಹಳ್ಳಿಯ ನಡುವೆ ಸಿಗುವ ಸ್ಪಿಟಿ ಮತ್ತು ಸಟ್ಲೇಜ್ ಸಂಗಮದಲ್ಲಿನ ಬಂಡೆಗಳು ಭೂಮಿ ಹುಟ್ಟಿನ ರಹಸ್ಯ ಹೇಳುತ್ತವೆ. ಕೆಲವು ಕಡೆಗಳಲ್ಲಿ ಸಾಗರವಿದ್ದ ಕುರುಹುಗಳನ್ನು ಇಲ್ಲಿನ ಬಂಡೆಗಳು ಹರವಿ ನಿಂತಿವೆ. ಅಲ್ಲಲ್ಲಿ ಸಮುದ್ರವಿತ್ತು ಎನ್ನುವುದಕ್ಕೆ ಅವಶೇಷಗಳು ಸಿಗುತ್ತವೆ. ಎರಡೂ ನದಿಗಳ ಬಣ್ಣವೂ ಕಣ್ಮನ ಸೆಳೆಯುತ್ತದೆ.

ಲಾಮಾ ಸಾಂಗಾ ತೇನ್ಜಿನ್ ಮಮ್ಮಿ



ವಿಶಿಷ್ಟ ಹಳ್ಳಿ 'ಗ್ಯೂ'

ಯಾವುದೋ ಕಣಿವೆಯ ತುತ್ತತುದಿಯ ಹಿಮ ಕಂದರದಲಿ ಹುಟ್ಟುವ ಹಿಮನದಿಯೊಂದು ದಾರಿಯುದ್ದಕ್ಕೂ ನಮಗೆ ಜೊತೆಯಾಗಿತ್ತು. ಮೋಡಗಳ ತೀಡಿ ತೀಡಿ ಸ್ವರ ನುಡಿಸುವ ಪಗೋಡದ ತುದಿಯೊಂದು ದೂರದ ಕಣಿವೆಯಲ್ಲೇ ಕಂಡು ರೋಮಾಂಚಿತರಾದೆವು. ಅದುವೇ 'ಗ್ಯೂ' ಊರಿನ ತುದಿಯಲ್ಲಿರುವ ಬೌದ್ಧ ದೇವಾಲಯ. ನೋಡಿದಷ್ಟು ಖುಷಿ ಕೊಡುವ ಸುಂದರ ಹಳ್ಳಿ. ಉಚ್ಚಾರಣೆ ಮತ್ತು ಅರ್ಥದಲ್ಲೂ ವಿಚಿತ್ರ ಹೆಸರಿನ ಊರು. ಗಾಳಿ ಮಾತ್ರ ಇಲ್ಲಿ ಶಬ್ದ ಮಾಡುತ್ತದೆ. ಮೌನವೇ ಇಲ್ಲಿನ ಭಾಷೆ.

ಕೆಂಡದಂತೆ ಸುಡುವ ಸೂರ್ಯನಡಿಯಲಿ ಕುಡಿಯುವ ಹನಿ ನೀರಿಗೂ ತತ್ವಾರ ಪಡುವ ಇಂತಹ ದುರ್ಗಮ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ದಿವ್ಯ ಏಕಾಂತದಲಿ ಲೀನವಾದ ಬದುಕು. ಒಂದು ಪೋಸ್ಟ್ ಆಫೀಸ್, ಸಣ್ಣದೊಂದು ಔಷಧಾಲಯ ಮಾತ್ರ ಇವರಿಗಿರುವ ಸೌಲಭ್ಯ. ಇಲ್ಲಿಗೆ ಬಂದು ಹೋಗಲು ನೇರ ಬಸ್ ವ್ಯವಸ್ಥೆ ಇಲ್ಲ.

ಬೇಸರವಾದರೆ ಬೆಟ್ಟ ನೋಡುತ್ತಾ ಕೂರಬೇಕು. ಇಲ್ಲವೇ ರಗ್ಗಿನೊಳಗೆ ತೂರಿ ಚಳಿಯೊಂದಿಗೆ ಗುದ್ದಾಡಬೇಕು. ಸಾರಿಗೆ ಬಿದ್ದ ಸಾಸಿವೆಯಂತೆ ಅಲ್ಲೊಂದು ಇಲ್ಲೊಂದು ಭೋಜಪತ್ರೆಯ ಮರಗಳು. ಈ ಊರ ಪೂರ್ವಕ್ಕೊಂದು ಚಂದದ ಬೌದ್ಧ ದೇವಾಲಯ. ಹಿಮ ಬೀಳುವ ಬೆಟ್ಟಗಳು ದೇವಾಲಯದ ರಕ್ಷಣೆಗೆ ನಿಂತಿವೆ.

ಚೀನಾ ಗಡಿಯಲ್ಲಿ...

'ಗ್ಯೂ' ಯಾವುದೇ ನೆಟ್‌ವರ್ಕ್ ಸಿಗದ ಹಳ್ಳಿ. ಇಲ್ಲಿಂದ ಚೀನಾ ಕೆಲವೇ ಕೆಲವು ಕಿಲೋಮೀಟರ್‌ಗಳ ದೂರದಲ್ಲಿದೆ. ತನ್ನ ನೆಲವಿದು ಎಂದು ಚೀನಾ ಸದಾ ಜಗಳ ತೆಗೆಯುತ್ತದೆ. ಮೊಬೈಲ್ ತೆಗೆದರೆ ಕೂಡಲೇ ಚೀನಾದ ಸಮಯವನ್ನು ತೋರಿಸುತ್ತದೆ! ಇದು ತನ್ನ ನೆಲವೆಂದು ಸಾಧಿಸಲು ದೊಡ್ಡ ದೊಡ್ಡ ಟವರ್‌ಗಳನ್ನು ಚೀನಾ ಹಾಕಿದೆ. ಭಾರತದಲ್ಲಿ ಬೆಳಗ್ಗೆ 11.45 ಆಗಿದ್ದರೆ, ಚೀನಾದ ಸಮಯ ಮಧ್ಯಾಹ್ನ 2.16 ಎಂದು ತೋರಿಸುತ್ತದೆ. ಅಲ್ಲಿನವರಿಗೂ ತಾವು ಯಾವ ಕಡೆ ಒಲವು ತೋರಬೇಕೆಂಬ ಗೊಂದಲ ಇರುವಂತೆ ಕಂಡಿತು.

ದೇವಾಲಯದ ಸುತ್ತ...

'ಗ್ಯೂ' ಹಳ್ಳಿಯ ನೆತ್ತಿಯಲ್ಲಿರುವ ಬೌದ್ಧ ದೇವಾಲಯದಲ್ಲಿ ಕೆಲವು ಆಸಕ್ತಿಕರ ಮೂರ್ತಿಗಳಿವೆ. ಸ್ತ್ರೀಯೊಬ್ಬಳು ಪುರುಷನ ತೊಡೆ ಮೇಲೆ ಕುಳಿತು ಆತನನ್ನು ಅಪ್ಪಿ ಹಿಡಿದುಕೊಂಡ ಮೂರ್ತಿಯೊಂದಿದೆ. ದೇವಾಲಯದ ಹೊರಭಿತ್ತಿಯಲ್ಲಿ 1975ರಲ್ಲಿ ಲಾಮಾ ಸಾಂಗಾ ತೇನ್ಜಿನ್ ಅವರ ಮಮ್ಮಿ ಸಿಕ್ಕಿತ್ತು. ಇದು ಭಾರತದಲ್ಲಿ ಸಿಕ್ಕ ಏಕೈಕ ಮಮ್ಮಿ. ಇವರು ಟಿಬೆಟ್‌ನಿಂದ ಇಲ್ಲಿಗೆ ಬಂದು ಪ್ರಾಣ ಬಿಟ್ಟರು ಎನ್ನುತ್ತದೆ ಇತಿಹಾಸ. ಚರ್ಮ, ಹಲ್ಲು ಮತ್ತು ಕೂದಲು ಇನ್ನೂ ಸುಸ್ಥಿತಿಯಲ್ಲಿವೆ! 1975ರಲ್ಲಿ ಇಲ್ಲಿ ಸಂಭವಿಸಿದ ಭೂಕಂಪದಲ್ಲಿ ಹಾಳಾದ ಸ್ತೂಪವೊಂದರ ಅವಶೇಷಗಳಲ್ಲಿ ಇದು ಸಿಕ್ಕಿತ್ತು. ವಿಜ್ಞಾನಿಗಳು ಇದನ್ನು 600 ವರ್ಷ ಹಿಂದಿನದು ಎಂದು ಘೋಷಿಸಿದ್ದಾರೆ.

ಈಜಿಪ್ಟ್‌ನ ತಂತ್ರಕ್ಕಿಂತ ಭಿನ್ನವಾಗಿ ಲಾಮಾ ಅವರನ್ನು ಮಮ್ಮಿ ಮಾಡಲಾಗಿದೆ. ದೇಹದ ರಸ ಮತ್ತು ಮಾಂಸವನ್ನು ನಿರ್ಜಲೀಕರಣ ಮಾಡಿ ಮಮ್ಮಿ ಮಾಡುತ್ತಾರೆ. ಈ ವಿಧಾನವನ್ನು ಶೋಕಾಸಿನಬುಟೆಸ್ (Shokushinbutsu) ಎನ್ನುವರು. ಈ ಪ್ರಕ್ರಿಯೆಗೆ ಸುಮಾರು ಹತ್ತು ವರ್ಷ ಬೇಕಾಗಿತ್ತು ಎನ್ನುವ ಮಾಹಿತಿ ಸಿಕ್ಕಿತು. ವಿಷಕಾರಿಯಾದ ಬೀಜ, ಬೇರು, ಎಲೆ ತಿನ್ನುತ್ತಾ ತನ್ನ ದೇಹದ ನೀರಿನಂಶ ಕಳೆದುಕೊಳ್ಳುತ್ತಾ ವಿಶಿಷ್ಟವಾಗಿ ಮಮ್ಮಿ ಮಾಡುವ ಕ್ರಿಯೆ ಇದಾಗಿದೆ.

ಸುಮಾರು ಎರಡು ಸಾವಿರ ದಿನಗಳ ಆಹಾರದ ತೀವ್ರ ನಿಯಂತ್ರಣದ ನಂತರ ವಿಷಕಾರಿ ಉರುಶಿ ಮರದ ರಸದಿಂದ ಮಾಡಲಾದ ಚಹಾ ಕುಡಿಯಲಾಗುತ್ತದೆ. ಈ ಚಹಾದಿಂದಾಗಿ ತೀವ್ರ ವಾಂತಿಯಾಗಿ ದೇಹದ ನೀರಿನಂಶ ಹೊರ ಹೋಗುತ್ತದೆ. ಆ ವಿಷಕಾರಿ ಚಹಾ ದೇಹದಲ್ಲಿ ಸಂರಕ್ಷಕ ರೀತಿಯ ಕೆಲಸ ಮಾಡಿ, ದೇಹವನ್ನು ಬ್ಯಾಕ್ಟೀರಿಯದಿಂದಾಗುವ ಕೊಳೆಯುವಿಕೆಯಿಂದ ರಕ್ಷಿಸುತ್ತದೆ. ಇದರ ನಂತರ ದೇಹವು ಸರಿಯಾಗಿ ಮಮ್ಮಿಯಾಗಿದೆಯೇ ಎಂದು ಪರೀಕ್ಷಿಸಲಾಗುತ್ತದೆ. ದೇಹ ಸರಿಯಾಗಿ ಮಮ್ಮಿಯಾದರೆ ಆತ ಬುದ್ಧನ ಎತ್ತರಕ್ಕೆ ಏರುತ್ತಾನೆ. ಬುದ್ಧನಾದ ಖುಷಿಯಲ್ಲಿ ಜನ ಧಾರ್ಮಿಕ ಆಚರಣೆಯಲ್ಲಿ ತೊಡಗುತ್ತಾರೆ. ಕೆಲವು ಸ್ಥಳೀಯರ ಹೇಳಿಕೆಯಂತೆ ಆತ ಚೇಳಿನ ಕಡಿತದಿಂದ ಊರನ್ನು ರಕ್ಷಿಸಲು ಮಮ್ಮಿಯಾದ ಎನ್ನುತ್ತಾರೆ. ಆತ ತೀರಿ ಹೋದ ಬಳಿಕ ಆಕಾಶದಲ್ಲಿ ಕಾಮನಬಿಲ್ಲು ಮೂಡಿತು ಎನ್ನುತ್ತದೆ ಜನಪದ.

ಇಂತಹದೊಂದು ಕಾಲಾತೀತ ಚಮತ್ಕಾರಿ ಮಮ್ಮಿಯನ್ನು ನೋಡಲು, ನೀರವ ರಾತ್ರಿಗಳನ್ನು ಕಳೆಯಲು, ಆಧ್ಯಾತ್ಮಿಕ ಅನುಭೂತಿಯೊಂದನ್ನು ಪಡೆಯಲು ನೀವಿಲ್ಲಿಗೆ ಭೇಟಿ ನೀಡಲೇಬೇಕು. ❖

ಸಂತೇಬಾಚಹಳ್ಳಿ ಕ್ರಾಸ್‌ನಲ್ಲಿ ಬಾಂಬೆ ಬಸ್

ಕೆ.ಆರ್. ಪೇಟೆ ಟು ಬಾಂಬೆ

2ನೇ ಪುಟದಿಂದ...

ಅಪ್ಪ, ಅಣ್ಣ ಯಾವಾಗ ಬರ್ತಾರೆ?

ಬಾಂಬೆಗೆ ಹೋದ ಅಪ್ಪ, ಅಣ್ಣಂದಿರಿಗಾಗಿ ಕಾದ ಮಕ್ಕಳ ಕಥೆಯನ್ನೂ ಕೇಳಲೇಬೇಕು. ಅದಕ್ಕಾಗಿ ಸಂತೇಬಾಚಹಳ್ಳಿಗೆ ಹೋದಾಗ ಸೂರ್ಯ ವಿಶ್ರಾಂತಿಗೆಂದು ಜಾರುತ್ತಿದ್ದ.

'ಅಪ್ಪ ನಂಜೇಗೌಡ ಬಾಂಬೆಯಲ್ಲಿ ಟೀ ಮಾರುತ್ತಿದ್ದರು. ಕ್ಯಾಂಟಿನಿಂದ ಪೈಸೆ ಲೆಕ್ಕದಲ್ಲಿ ಕಮಿಷನ್ ಸಿಗುತ್ತಿತ್ತಂತೆ. ಮೂರು ಗಂಡು, ಮೂರು ಹೆಣ್ಣು ಮಕ್ಕಳ ಕುಟುಂಬವನ್ನು ಸಾಕಲೆಂದೇ ಬಾಂಬೆಯತ್ತ ಪ್ರಯಾಣ ಬೆಳೆಸಿದವರು. ತಮ್ಮಂದಿರನ್ನೂ ಅಲ್ಲಿಗೇ ಕರೆಸಿಕೊಂಡರು. ಎರಡು ವರ್ಷಕ್ಕೊಮ್ಮೆ ಉಗಾದಿಗೆ ಬರೋರು' ಎಂಬುದು ಸಂತೇಬಾಚಹಳ್ಳಿಯ ಮಲ್ಲೇಶ ಅವರ ನೆನಪು.

'ಬಾಂಬೆಯಲ್ಲಿ ಬೇಸಿಗೆ ಇದ್ದರೆ, ಅಲ್ಲಿನವರೆಲ್ಲ ಊರಿಗೆ ಬಂದುಬಿಡೋರು. ಕೆಲವೊಮ್ಮೆ ಹದಿನೈದು ದಿನ ಇರೋರು. ಪಾರ್ಲೇಜಿ ಬಿಸ್ಕತ್ ಪ್ಯಾಕ್ ಜೊತೆಗೆ ಸಾಬೂನುಗಳನ್ನು ಕೊಡಲೆಂದು ನೆಂಟರ ಮನೆ ಸುತ್ತೋರು. ನಾನು ತಂದೆಯನ್ನು ನೋಡಿದ್ದು ಬಹಳ ಕಡಿಮೆ. ಮತ್ತೆ ಬಾಂಬೆಗೆ ಹೋಗಲು ಮೂರು ದಿನವಾದರೂ ಬೇಕಿತ್ತು. ಅವರಿಗಾಗಿ ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ ಮಾಡುತ್ತಿದ್ದೆವು. ಬಾಂಬೆಗೆ ವಾಪಸಾಗುವವರನ್ನು ವೈರಿಗಳೂ ಕೂಡ ಅಳುತ್ತಲೇ ಕಳುಹಿಸಿಕೊಡುತ್ತಿದ್ದರು. ಹೋದವರು ಮತ್ತೆ, ಇಲ್ಲಿ ಬಂಧುಗಳು ಸತ್ತರೂ ಬರಲಾಗುತ್ತಿರಲಿಲ್ಲ. ಅವರು ಬರೋದು ತಡವಾಗುತ್ತೆ, ಹೆಣ ಎತ್ತಿ ಅನ್ನೋರು ಜನ' ಎಂದು ಸಂಕಟದಿಂದ ಮೌನಕ್ಕೆ ಜಾರಿದರು. ಅವರ ಮಾತುಗಳು ಅಸ್ತವ್ಯಸ್ತವಾಗಿದ್ದವು. ಆದರೆ ಸಂಕಟಗಳು ನಿಜ ಚಿತ್ರಗಳಾಗಿದ್ದವು.

ಈ ಹಳ್ಳಿಗಳ ಹಲವು ಯುವಕರು ಸ್ವಂತ ಕಾರುಗಳನ್ನು ಖರೀದಿಸಿ, ಬೆಂಗಳೂರು, ಮೈಸೂರಿನಲ್ಲಿ ಕಂಪನಿಗಳಿಗೆ ಬಾಡಿಗೆಗೆ ಕೊಟ್ಟು ಓಡಿಸುತ್ತಿದ್ದಾರೆ. ಅಂದು ಅವರ ಹಿರಿಯರನ್ನು ಬಾಂಬೆ ಸಲಹಿದ್ದರೆ, ಇಂದು ಇವರನ್ನು ಬೆಂಗಳೂರು, ಮೈಸೂರು ಸಲಹುತ್ತಿವೆ.

ಈಗ ಯಾರೂ ಈ ಹಳ್ಳಿಗಳಿಂದ ಬಾಂಬೆಗೆ ಹೋಗುವವರಿಲ್ಲ. ಆದರೆ ಅಲ್ಲಿ ವ್ಯವಹಾರ ನಡೆಸುತ್ತಿರುವವರು, ನೆಲೆಸಿರುವವರಿಗೋಸ್ಕರವೇ ದಿನವೂ 'ಕಾವೇರಿ', 'ಶ್ರೀಕೃಷ್ಣ' ಹೆಸರಿನ ಎರಡು ಬಸ್‌ಗಳು ಬಾಂಬೆಗೆ ಹೋಗಿ ಬರುತ್ತವೆ. ಬಾಂಬೆ ಮತ್ತು ಇಲ್ಲಿನ ಹಳ್ಳಿಗರ ಬಾಂಧವ್ಯ ಮಾತ್ರ ಸದಾ ಹಸಿರು. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ದಡ	+	ಬಾವು	+	ಹೂ	=	
2	ರಣ	+	ಕಾಡು	+	ಕೊ	=	
3	ಉಡಿ	+	ಬಣ	+	ಸು	=	
4	ದರಿ	+	ಹುಳು	+	ಕಾ	=	
5	ಕೆಲ	+	ಕರ	+	ಬೆ	=	

ತಿರುವು ಮುರುವು ತಮಾಷೆ

ಈ ಗುಣಾಕಾರಗಳಲ್ಲಿ ಬಂದ ಉತ್ತರವನ್ನು ಗಮನಿಸಿ...

2618 x 11 =**28798** | 8162 x 11 =**89782**

ಸಣ್ಣಾಟ ▶ BANANA

ಈ ಪದವನ್ನು ಓದು. ನಂತರ ಮೊದಲ ಅಕ್ಷರ 'B'ಯನ್ನು ತೆಗೆದುಕೊಂಡು ಕೊನೆಯಲ್ಲಿ ಇಟ್ಟು ಎಡದಿಂದ ಓದು. ಆಗಲೂ ಅದೇ ಪದವಾಗುತ್ತದೆ. ಪ್ರಯತ್ನಿಸು

ನೀವೂ ಆಡಿ ನೋಡಿ ಈ ಆಟ

ಐದು ಅಂಕಿಗಳಿರುವ ಯಾವುದಾದರೂ ಸಂಖ್ಯೆ ಬರೆದುಕೊಳ್ಳಿ. ಅದಕ್ಕೆ ಮೊದಲು 11ರಿಂದ ಗುಣಿಸಿಕೊಳ್ಳಿ. ಈಗ ಬಂದ ಉತ್ತರಕ್ಕೆ 9091 ರಿಂದ ಮತ್ತೆ ಗುಣಿಸಿ. ಬಂದ ಉತ್ತರವನ್ನು ಸೂಕ್ಷ್ಮವಾಗಿ ಗಮನಿಸಿ. ಅದರಲ್ಲಿ ಎರಡು ಭಾಗ ಮಾಡಿದರೆ, ಎರಡೂ ಭಾಗಗಳಲ್ಲಿ ಅಂಕಿಗಳು ಒಂದೇ ಆಗಿರುತ್ತದೆ.

ಉದಾ 1: 12581 x 11 = 138391.
ಇದಕ್ಕೆ 9091ರಿಂದ ಮತ್ತೆ ಗುಣಿಸಿದರೆ
138391 x 9091
= 1258112581

ಉದಾ 2: 45698 x 11 = 502678
ಇದಕ್ಕೆ 9091ರಿಂದ ಮತ್ತೆ ಗುಣಿಸಿದರೆ
502678 x 9091
= 4569845698

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಕನ್ನಡ ಸ್ವರಾಕ್ಷರಗಳಿಂದ ಪ್ರಾರಂಭವಾಗುವ ನಿಮಗೆ ಗೊತ್ತಿರುವ ಊರಿನ ಹೆಸರುಗಳನ್ನು ಬರೆಯಿರಿ.

ಉದಾ: ಅ = ಅಣ್ಣಿಗೇರಿ

1	ಅ	
2	ಆ	
3	ಇ	
4	ಈ	
5	ಉ	
6	ಊ	
7	ಎ	
8	ಏ	
9	ಐ	
10	ಒ	
11	ಓ	
12	ಔ	
13	ಅಂ	

ಡಗ್ಗು ಚಕ್ಕು ಕೇಶ್ರಷ್ಟ ಕಥೆಯ — ಕಾರ್ಖಾನೆಗಳಿಂದಲೇ ಧೂಮಪಾನ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ. ಆಗ ಗೋಡೆ ಮೇಲೆ ಬರೆದಿದ್ದ ಬರಹವನ್ನು ನೋಡಿದ. ಅದರಲ್ಲಿ 'ಇದು ಕಾರ್ಖಾನೆ ವಲಯ ಧೂಮಪಾನ ನಿಷೇಧಿಸಲಾಗಿದೆ' ಎಂದು ಬರೆಯಲಾಗಿತ್ತು. ಗೋಡೆಯಾಚೆ ಏನಿರಬಹುದು ಎಂಬ ಕುತೂಹಲದಿಂದ ಗುಂಡ ಏಣಿ ತಂದು ಅದನ್ನೇರಿ ನೋಡಿದ. ಆಗ ಅಲ್ಲಿದ್ದ ಕಾರ್ಖಾನೆಗಳೇ ಧೂಮಪಾನ ಮಾಡಿ ಹೊಗೆಯುಗುಳುತ್ತಿರುವಂತೆ ಆತನಿಗೆ ಭಾಸವಾಯಿತು.



ಗಣಿತದಲ್ಲಿ ಗರ್ದಿಗಮ್ಮತ್ತು ರಜಾ–ಮಜಾ ಆಟ

ಇಲ್ಲಿ ಕೊಟ್ಟಿರುವ ಚೌಕಟ್ಟಿನ ಒಳಗಿರುವ ವೃತ್ತಗಳಲ್ಲಿ 1 ರಿಂದ 8ರವರೆಗಿನ ಅಂಕಿಗಳನ್ನು ತುಂಬಿ ಎಡದಿಂದ ಕೂಡಿಸಿದರೆ 13 ಮೊತ್ತ ಹಾಗೂ ಮೇಲಿನಿಂದ ಕೆಳಕ್ಕೆ ಕೂಡಿದರೂ 13 ಮೊತ್ತ ಆಗುವಂತೆ ಅಂಕಿಗಳನ್ನು ಹೊಂದಿಸಿ. (1ರಿಂದ 8 ಅಂಕಿಗಳು ಒಮ್ಮೆ ಮಾತ್ರ ಬರಬೇಕು.

○	○	○	= 13
○	= 13	○	
○	○	○	= 13
= 13		= 13	

① ② ③ ④ ⑤ ⑥ ⑦ ⑧

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ತೆರಿಗೆ ದಾಳಿ 2.ತೆರಿಗೆ ಕಟ್ಟು 3.ತೆರಿಗೆ ಹಾಕು 4.ತೆರಿಗೆ ದರ 5.ತೆರಿಗೆ ಭಾರ

ಜಾಣಪದ ಆಟ: 1.ಜನನ 2.ಸವತಿ 3.ಮಕರ 4.ಸರಳ 5.ಹರವಿ 6.ನಕಲಿ 7.ಕಾವಲು 8.ನನಸು

ಸಂಖ್ಯಾ ಪಿರಮಿಡ್:

255
141 114
78 63 51
54 24 39 12

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ತನುಶ್ರೀ ಎ.
ಬಾದಾಮಿ

ದಿಯಾ ಚ. ಹುಡೇದಗಡ್ಡಿ
ಮೈಸೂರು

ಕಲಾವತಿ ಎಂ.ಕೆ.
ಕೆ.ಆರ್.ನಗರ

ಸಾತ್ವಿಕ್ ಬಿ.
ಬೆಂಗಳೂರು

ಅನ್ವಿತಾ. ಎ.ಆರ್.
ಜಕ್ಕೂರು

ಶ್ರೀರಾಮ್ ಎಲ್.
ಬೆಂಗಳೂರು

ಷರತ್ತು ಪಾಲಿಸಿದರಷ್ಟೇ ಹೆಚ್ಚುವರಿ 432 ಎಕರೆ ಅರಣ್ಯ ಬಳಕೆಗೆ ಅನುಮತಿ: ಅರಣ್ಯ ಸಚಿವಾಲಯ

ಎತ್ತಿನಹೊಳೆ ಅಕ್ರಮ ವ್ಯಾಪಕ: ಕೇಂದ್ರ ತಂಡ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ₹23 ಸಾವಿರ ಕೋಟಿ ವೆಚ್ಚದ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯನ್ನು ಷರತ್ತು ಹಾಗೂ ನಿಯಮಗಳನ್ನು ಉಲ್ಲಂಘಿಸಿ ನಡೆಸಿರುವುದನ್ನು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದ ತಂಡ ಪತ್ತೆ ಹಚ್ಚಿದೆ. ರಾಜ್ಯ ಸರ್ಕಾರವು ಲೋಪಗಳನ್ನು ಸರಿಪಡಿಸಿ ಸೂಕ್ತ ಸಮಜಾಯಿಷಿ ನೀಡಿದ ಬಳಿಕವೇ ಹೆಚ್ಚುವರಿಯಾಗಿ 432 ಎಕರೆ (173 ಹೆಕ್ಟೇರ್) ಅರಣ್ಯ ಬಳಕೆಗೆ ಅನುಮೋದನೆ ನೀಡಬಹುದು ಎಂದು ಸಮಿತಿ ಶಿಫಾರಸು ಮಾಡಿದೆ.

ಗುರುತ್ವಾಕರ್ಷಣೆ ಕಾಲುವೆ ನಿರ್ಮಾಣಕ್ಕೆ ಹಾಸನ ಹಾಗೂ ತುಮಕೂರು ಜಿಲ್ಲೆಗಳಲ್ಲಿ 432 ಎಕರೆ ಅರಣ್ಯ ಬಳಕೆಗೆ ಒಪ್ಪಿಗೆ ನೀಡುವಂತೆ ಕೋರಿ ರಾಜ್ಯ ಸರ್ಕಾರವು ಪರಿಸರ ಸಚಿವಾಲಯಕ್ಕೆ ಮಾರ್ಚ್‌ನಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು. ಸಚಿವಾಲಯದ ಡಿಐಜಿಎಫ್ ಪ್ರಣಿತಾ ಪೌಲ್ ನೇತೃತ್ವದ ಅಧಿಕಾರಿಗಳ ತಂಡವು ಇದೇ 7ರಿಂದ 9ರ ವರೆಗೆ ಯೋಜನಾ ಸ್ಥಳದಲ್ಲಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದೆ. ಕಾಮಗಾರಿಯ ಸಂದರ್ಭದಲ್ಲಿ ನಿಯಮಗಳನ್ನು ಮನಸೋ ಇಚ್ಛೆ ಉಲ್ಲಂಘಿಸಲಾಗಿದೆ ಎಂದು ಬೊಟ್ಟು ಮಾಡಿ ತೋರಿಸಿದೆ. ನಿಯಮ ಉಲ್ಲಂಘಿಸಿದ ವಿಶ್ವೇಶ್ವರಯ್ಯ ಜಲ ನಿಗಮದ ವಿರುದ್ಧ ಅರಣ್ಯ ಇಲಾಖೆ ಎಫ್‌ಐಆರ್ ದಾಖಲಿಸಿ ಕೈತೊಳೆದುಕೊಂಡಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಕೇಂದ್ರ ತಂಡದ ವರದಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ಇದು ನೀರಾವರಿ ಯೋಜನೆಯೊ’

ಈ ಯೋಜನೆಯಿಂದಾಗಿ ಪಶ್ಚಿಮ ಘಟ್ಟದ ಮೇಲಾಗುವ ಪರಿಣಾಮದ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಈ ಹಿಂದೆ ನಿರ್ದೇಶನ ನೀಡಲಾಗಿತ್ತು. ಆದರೆ, ಈ ವರೆಗೆ ವರದಿ ಸಲ್ಲಿಕೆಯಾಗಿಲ್ಲ. ಇದು ಕುಡಿಯುವ ನೀರಿನ ಯೋಜನೆಯೋ ಅಥವಾ ಕುಡಿಯುವ ನೀರು ಹಾಗೂ ನೀರಾವರಿ ಯೋಜನೆಯ ಸಂಯೋಜನೆಯೋ ಎಂಬುದು ಸ್ಪಷ್ಟವಾಗಿಲ್ಲ. ಎತ್ತಿನಹೊಳೆ ನೀರನ್ನು ಬಳಸಿ ಕೆರೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ವಿಶ್ವೇಶ್ವರಯ್ಯ ಜಲ ನಿಗಮವು ತನ್ನ ಸಮರ್ಥನೆಯಲ್ಲಿ ತಿಳಿಸಿದೆ. ಈ ಬಗ್ಗೆಯೂ ಸ್ಪಷ್ಟನೆ ನೀಡಬೇಕು ಎಂದು ತಂಡ ಸೂಚಿಸಿದೆ.

ಯೋಜನೆಯ ಬಗ್ಗೆ ಸಮಗ್ರ ಪ್ರಸ್ತಾವನೆ ಸಲ್ಲಿಸುವಲ್ಲಿ ಜಲನಿಗಮ ವಿಫಲವಾಗಿದೆ. ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಹಾಸನ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ನಿಗಮವು ಈ ಹಿಂದೆ ತಿಳಿಸಿತ್ತು. ಆದರೆ, ವಿಸ್ತೃತ ಪ್ರಸ್ತಾವನೆಯಲ್ಲಿ ತುಮಕೂರು ಹಾಗೂ ಹಾಸನ ಜಿಲ್ಲೆಗಳನ್ನಷ್ಟೇ ಉಲ್ಲೇಖಿಸಲಾಗಿದೆ ಎಂದು ತಂಡವು ತಿಳಿಸಿದೆ.

ಪಶ್ಚಿಮ ಘಟ್ಟದ ಎತ್ತಿನಹೊಳೆಯಿಂದ 24 ಟಿಎಂಸಿ ನೀರು ಹರಿಸುವ ಈ ಯೋಜನೆಗೆ ಈ ಹಿಂದೆ 13.93 ಹೆಕ್ಟೇರ್ ಅರಣ್ಯ ಬಳಕೆಗೆ 2016ರಲ್ಲಿ ಪ್ರಸ್ತಾವ ಸಲ್ಲಿಸಲಾಗಿತ್ತು. 33 ಷರತ್ತುಗಳನ್ನು ವಿಧಿಸಿ 2016ರಲ್ಲಿ ಅನುಮೋದನೆ ಕೊಡಲಾಗಿತ್ತು. ಆದರೆ, ಬಹುತೇಕ ಷರತ್ತುಗಳನ್ನು ಪಾಲನೆ ಮಾಡಿಲ್ಲ. ಕಾಮಗಾರಿ ಸಂದರ್ಭದಲ್ಲಿ ಭೂಕುಸಿತ ಹಾಗೂ ಮಣ್ಣಿನ ಕೊರೆತ ಉಂಟಾಗಿದೆ ಎಂದು ಎನ್‌ಜಿಟಿಯ ಮೇಲ್ವಿಚಾರಣಾ ತಂಡವು 2019ರಲ್ಲಿ ವರದಿ ಸಲ್ಲಿಸಿತ್ತು. ಭೂಕುಸಿತ ತಡೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದರ ಜತೆಗೆ, ಅನುಮೋದನೆಗಿಂತ ಹೆಚ್ಚುವರಿ ಅರಣ್ಯ ಬಳಸಲಾಗಿದೆ. ಕಾಮಗಾರಿಯಿಂದಾಗಿ ಅನೇಕ ಮನೆಗಳಿಗೆ ಹಾನಿಯಾಗಿದೆ. ಆದರೆ, ಸಂತ್ರಸ್ತರಿಗೆ ಯಾವುದೇ ಪರಿಹಾರ ನೀಡಿಲ್ಲ ಎಂದು ತಂಡ ಆಕ್ಷೇಪಿಸಿದೆ.

ತಂಡದ ವರದಿಯ ಆಧಾರದಲ್ಲಿ ಸಚಿವಾಲಯದ ಡಿಡಿಜಿಎಫ್ ಎಸ್.ಸೆಂಥಿಲ್ ಕುಮಾರ್, “ಈ ಯೋಜನೆಗೆ 2000 ಹೆಕ್ಟೇರ್ ಅರಣ್ಯೇತರ ಜಾಗ ಬಳಸಿಕೊಳ್ಳಲಾಗುತ್ತದೆ. ಆದರೆ, ಅವಶೇಷಗಳನ್ನು ಸುರಿಯಲು ಅರಣ್ಯ ಬಳಸುತ್ತಿರುವುದು ಸರಿಯಲ್ಲ. ಅರಣ್ಯದಲ್ಲಿ ಆಳವಾದ ಹಾಗೂ ಅಸುರಕ್ಷಿತ ಸುರಂಗ ನಿರ್ಮಾಣ ಮಾಡುವುದರಿಂದ ಕಾಡುಪ್ರಾಣಿಗಳಿಗೆ ಆಪತ್ತು ಉಂಟಾಗಲಿದೆ. ರಾಜ್ಯ ಸರ್ಕಾರ ಷರತ್ತುಗಳನ್ನು ಪಾಲಿಸಿದ ಬಳಿಕವೇ 177 ಹೆಕ್ಟೇರ್ ಬಳಸಲು ಒಪ್ಪಿಗೆ ನೀಡಬಹುದು. ನಿಯಮ ಉಲ್ಲಂಘನೆಯಾಗಿ ದಂಡ ವಿಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಶಿಫಾರಸು ಮಾಡಿದ್ದಾರೆ.

ಕಾಡುಪ್ರಾಣಿಗಳ ಸಂಚಾರಕ್ಕೆ ತೊಂದರೆ

ಈ ಯೋಜನೆಯಿಂದಾಗಿ ಆನೆ ಸೇರಿದಂತೆ ಕಾಡುಪ್ರಾಣಿಗಳ ಸಂಚಾರಕ್ಕೆ ಭಾರಿ ತೊಂದರೆ ಆಗಲಿದೆ. ನೀರಿನ ಕಾಲುವೆಗಳಿಗೆ ಬೇಲಿ ನಿರ್ಮಿಸುವ ಬಗ್ಗೆ ರಾಜ್ಯ ಪ್ರಸ್ತಾಪಿಸಿಲ್ಲ. ಇದರಿಂದಾಗಿ, ಕಾಡುಪ್ರಾಣಿಗಳು ಕಾಲುವೆಗೆ ಬಿದ್ದು ಗಾಯ/ಸಾಯುವ ಸಂಭವ ಇದೆ. ಕಾಲುವೆಯ ಸುತ್ತ ಬೇಲಿ ನಿರ್ಮಿಸಬೇಕಾದ ತುರ್ತು ಅಗತ್ಯ ಇದೆ. ಇದಕ್ಕಾಗಿ ಪಿಸಿಸಿಎಫ್ (ವನ್ಯಜೀವಿ) ನೇತೃತ್ವದಲ್ಲಿ ಅಧ್ಯಯನ ನಡೆಸಿ ಸಮಗ್ರ ವರದಿ ಸಲ್ಲಿಸಬೇಕು ಎಂದು ತಂಡ ಸೂಚಿಸಿದೆ.

ಪ್ರಜಾವಾಣಿ ವಿಶೇಷ

ಎಫ್‌ಐಆರ್ ನಂತರ ಮತ್ತಷ್ಟು ಉಲ್ಲಂಘನೆ

173 ಹೆಕ್ಟೇರ್ ಅರಣ್ಯ ಬಳಕೆಗೆ ರಾಜ್ಯ ಸರ್ಕಾರ ಅನುಮೋದನೆ ಕೇಳಿದೆ. ಆದರೆ, ಕಾಲುವೆ ನಿರ್ಮಾಣಕ್ಕಾಗಿ ಹಾಸನ ವಿಭಾಗದಲ್ಲಿ ಈಗಾಗಲೇ 108 ಹೆಕ್ಟೇರ್ ನಿಯಮಬಾಹಿರವಾಗಿ ಬಳಸಿಕೊಳ್ಳಲಾಗಿದೆ. ಈ ಸಂಬಂಧ 2019ರಲ್ಲೇ ಅರಣ್ಯ ಇಲಾಖೆ ಎಫ್‌ಐಆರ್ ದಾಖಲಿಸಿದೆ. ಇದರ ಬಗ್ಗೆ ಸಮಗ್ರ ವಿಶ್ಲೇಷಣೆ ನಡೆಸಲು ಉಪಗ್ರಹ ಚಿತ್ರಗಳನ್ನು ಪರಿಶೀಲನೆ ನಡೆಸಲಾಗಿದೆ. ಎಫ್‌ಐಆರ್ ದಾಖಲಿಸಿದ ಬಳಿಕ ಅರಣ್ಯ ಕಾಯ್ದೆ ಉಲ್ಲಂಘನೆಯ ಇನ್ನಷ್ಟು ಪ್ರಕರಣಗಳು ನಡೆದಿವೆ. ಇದರ ವಿರುದ್ಧ ಅರಣ್ಯ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರವು ಸಮಗ್ರ ವರದಿ ಸಲ್ಲಿಸಬೇಕು ಎಂದು ತಂಡ ನಿರ್ದೇಶನ ನೀಡಿದೆ.

ಅವಶೇಷ ಸುರಿಯಲು 103 ಹೆಕ್ಟೇರ್

173 ಹೆಕ್ಟೇರ್‌ನ ಪೈಕಿ 103 ಹೆಕ್ಟೇರ್ ಅನ್ನು ಮಣ್ಣು ಹಾಗೂ ಅವಶೇಷ ಸುರಿಯಲು ಬಳಸಿಕೊಳ್ಳಲಾಗುತ್ತಿದೆ. ಅಂದರೆ, ಶೇ 60ರಷ್ಟು ಜಾಗ ಇದಕ್ಕೆ ಬಳಕೆಯಾಗುತ್ತಿದೆ. ಅರಣ್ಯದ ಹೊರಗಡೆ ತ್ಯಾಜ್ಯ/ಅವಶೇಷಗಳನ್ನು ವಿಲೇವಾರಿ ಮಾಡಬೇಕು ಎಂದು ಕರ್ನಾಟಕ ಅರಣ್ಯ ಇಲಾಖೆಯೇ ಷರತ್ತು ವಿಧಿಸಿದೆ. ಕಾಲುವೆ ನಿರ್ಮಾಣಕ್ಕೆ ಬೇಕಿರುವುದು 69 ಹೆಕ್ಟೇರ್ ಅರಣ್ಯವಷ್ಟೇ. ಹೀಗಾಗಿ, ಪ್ರಸ್ತಾವದ ಪರಿಷ್ಕರಣೆ ಅಗತ್ಯ ಎಂದು ತಂಡ ಶಿಫಾರಸು ಮಾಡಿದೆ.

ತುಮಕೂರು ಜಿಲ್ಲೆಯಲ್ಲಿ ಬಳಸಲು ಉದ್ದೇಶಿಸಿರುವ 12.84 ಹೆಕ್ಟೇರ್ ಅರಣ್ಯವು ಮಾರಶೆಟ್ಟಿಹಳ್ಳಿ ಮೀಸಲು ಅರಣ್ಯದ ವ್ಯಾಪ್ತಿಯಲ್ಲಿದೆ. ಇಲ್ಲಿ ಅಪರೂಪದ ಮರಗಳು ಹಾಗೂ ವನ್ಯಜೀವಿಗಳಿವೆ. 7,500 ಮರಗಳನ್ನು ಕಡಿಯಬೇಕಾಗುತ್ತದೆ. ಇಲ್ಲಿ ಕಾಮಗಾರಿ ನಡೆಸಿದರೆ ಅರಣ್ಯ ಎರಡು ಭಾಗಗಳಾಗಿ ವಿಭಜನೆಯಾಗುತ್ತದೆ. ಅವಶೇಷ ಸಂಗ್ರಹದಿಂದ ಅರಣ್ಯಕ್ಕೆ ಮತ್ತಷ್ಟು ಹಾನಿಯಾಗಲಿದೆ. ಹೀಗಾಗಿ, ಇಲ್ಲಿ ಭೂಗತ ಸುರಂಗ ನಿರ್ಮಿಸುವುದು ಸೂಕ್ತ ಎಂದು ತಂಡ ಸಲಹೆ ನೀಡಿದೆ.

ಸುದ್ದಿ 2 ನಿಮಿಷ

ಜಾತಿ ಜನಗಣತಿ ತಿರಸ್ಕಾರಕ್ಕೆ ಆಗ್ರಹ

ಬೆಂಗಳೂರು: ಜಾತಿ ಜನಗಣತಿ ಅವೈಜ್ಞಾನಿಕವಾಗಿದ್ದು, ಆ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ನಾಥಪಂಥ ಜೋಗಿ ಮಹಾಸಭಾ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಎಚ್.ಎಸ್. ಕುಮಾರಸ್ವಾಮಿ, ‘ರಾಜ್ಯದಲ್ಲಿ ಜೋಗಿ ಜನಾಂಗದ ಜನಸಂಖ್ಯೆ 3 ಲಕ್ಷಕ್ಕೂ ಅಧಿಕವಿದೆ. ಆದರೆ, ಜಾತಿ ಜನಗಣತಿ ವರದಿಯಲ್ಲಿ ನಮ್ಮ ಸಮುದಾಯದ ಜನಸಂಖ್ಯೆಯನ್ನು ಕೇವಲ 25,546 ಎಂದು ಉಲ್ಲೇಖಿಸಲಾಗಿದೆ.

ಇದು ಜೋಗಿ ಜನಾಂಗಕ್ಕೆ ಮಾಡುವ ದ್ರೋಹವಾಗಿದ್ದು, ಈ ವರದಿಯನ್ನು ಒಪ್ಪಿಕೊಳ್ಳವುದಕ್ಕೆ ಸಾಧ್ಯವಿಲ್ಲ’ ಎಂದು ಹೇಳಿದರು.

‘ಅತಿ ಹಿಂದುಳಿದ ಪ್ರವರ್ಗ–1ರ ಪಟ್ಟಿಯಲ್ಲಿ ಬರುವ 46 ಅಲೆಮಾರಿ, ಅರೆ ಅಲೆಮಾರಿ ಜಾತಿಗಳಲ್ಲಿ ಜೋಗಿ ಜನಾಂಗವೂ ಒಂದು. ನಮ್ಮ ಸಮುದಾಯ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿದೆ. ಈಗಿನ ಜಾತಿ ಜನಗಣತಿ ವರದಿಯಲ್ಲಿ ಇರುವ ನಮ್ಮ ಸಮುದಾಯದ ಜನಸಂಖ್ಯೆಯ ಅಂಕಿ–ಅಂಶಗಳು ಸತ್ಯಕ್ಕೆ ದೂರವಾಗಿವೆ’ ಎಂದರು.

‘ಜಾತಿ ಗಣತಿ ಮಾಡುವ ಸಂದರ್ಭದಲ್ಲಿ ನಮ್ಮ ಮನೆಗಳಿಗೆ ಆಯೋಗದ ಯಾವುದೇ ಅಧಿಕಾರಿಗಳು ಭೇಟಿ ನೀಡಿಲ್ಲ. ಆದ್ದರಿಂದ ಮತ್ತೊಮ್ಮೆ ವೈಜ್ಞಾನಿಕವಾಗಿ ಜಾತಿ ಜನಗಣತಿ ನಡೆಸಬೇಕು’ ಎಂದು ಒತ್ತಾಯಿಸಿದರು.

‘ಮತ್ತೊಮ್ಮೆ ಜಾತಿ ಗಣತಿ ನಡೆಸಿ’

ಬೆಂಗಳೂರು: ಜಾತಿ ಜನಗಣತಿಯಲ್ಲಿ ನಮ್ಮ ಸಮುದಾಯದ ಜನಸಂಖ್ಯೆಯ ಅಂಕಿ–ಅಂಶಗಳನ್ನು ತಪ್ಪಾಗಿ ನಮೂದಿಸಲಾಗಿದೆ. ಇದರಿಂದ ನಮ್ಮ ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದೆ ಉಳಿಯಲಿದೆ. ಆದ್ದರಿಂದ ರಾಜ್ಯ ಸರ್ಕಾರ ಮತ್ತೊಮ್ಮೆ ವೈಜ್ಞಾನಿಕವಾಗಿ ಜಾತಿ ಜನಗಣತಿ ನಡೆಸಬೇಕು ಎಂದು ಕಮ್ಮವಾರಿ ಸಂಘ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಧ ಅಧ್ಯಕ್ಷ ಆರ್. ರಾಜಗೋಪಾಲ್ ನಾಯ್ಡು, ‘ರಾಜ್ಯದಲ್ಲಿ ಕಮ್ಮ, ನಾಯ್ಡು ಹಾಗೂ ಕಮ್ಮವಾರಿ ಸಮುದಾಯ ಜನಸಂಖ್ಯೆ 20 ಲಕ್ಷಕ್ಕೂ ಅಧಿಕವಿದೆ. ಆದರೆ ಜಾತಿ ಜನಗಣತಿ ವರದಿಯಲ್ಲಿ ಕಮ್ಮ ಜಾತಿಯ ಜನಸಂಖ್ಯೆಯನ್ನು 1,11,739, ಕಮ್ಮ ನಾಯ್ಡುಗಳ ಜನಸಂಖ್ಯೆ 18,361, ನಾಯ್ಡುಗಳ ಜನಸಂಖ್ಯೆ 1,50,601 ಎಂದು ಉಲ್ಲೇಖಿಸಲಾಗಿದೆ. ಈ ಅಂಕಿಅಂಶಗಳು ಸತ್ಯಕ್ಕೆ ದೂರವಾಗಿವೆ ಎಂದು ದೂರಿದರು.

ಕಮ್ಮ ಸಮುದಾಯವ ಪ್ರವರ್ಗ 3–ಎ ಜಾತಿ ಪಟ್ಟಿಯಲ್ಲಿ ಬರುತ್ತದೆ. ಇಲ್ಲಿ ಶೇಕಡ 4ರಷ್ಟು ಮೀಸಲಾತಿ ಸೌಲಭ್ಯ ನೀಡಲಾಗಿದೆ. ಈ ಪಟ್ಟಿಯಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಮುಂದೆ ಇರುವ ಪ್ರಬಲ ಸಮುದಾಯಗಳಿವೆ. ಅವರೊಂದಿಗೆ ನಮ್ಮ ಸಮುದಾಯ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕಮ್ಮ ಸಮುದಾಯವನ್ನು ಪ್ರವರ್ಗ 1–ಬಿ ಪಟ್ಟಿಯಲ್ಲಿ ಸೇರಿಸಬೇಕು’ ಎಂದು ಒತ್ತಾಯಿಸಿದರು.

ಅಪಘಾತ: ಹೋಟೆಲ್ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಭಟ್ಟರಹಳ್ಳಿ ಜಂಕ್ಷನ್‌ನಲ್ಲಿ ಕಾರು ಹಾಗೂ ಬೈಕ್ ಮಧ್ಯೆ ಶನಿವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಹೋಟೆಲ್ ಕಾರ್ಮಿಕ ಮೃತಪಟ್ಟಿದ್ದಾರೆ.

ಟಿ.ಸಿ. ಪಾಳ್ಯದ ನಿವಾಸಿ ಕುಮಾರ್ (57) ಮೃತಪಟ್ಟವರು. ಕುಮಾರ್ ಅವರು ಶನಿವಾರ ಮುಂಜಾನೆ ಮನೆಗೆ ತೆರಳುತ್ತಿದ್ದಾಗ ಅಪಘಾತವಾಗಿದೆ.

‘ಭಟ್ಟರಹಳ್ಳಿ ಜಂಕ್ಷನ್ ಬಳಿ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ವೇಗವಾಗಿ ಬಂದ ಕಾರೊಂದು ಡಿಕ್ಕಿ ಹೊಡೆದಿದ್ದರಿಂದ ಕೆಳಕ್ಕೆ ಬಿದ್ದ ಕುಮಾರ್ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಸಮೀಪದ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಕುಮಾರ್ ಮೃತಪಟ್ಟರು’ ಎಂದು ಮೂಲಗಳು ತಿಳಿಸಿವೆ.

ಚಾಲಕ ಕಾರನ್ನು ನಿಲುಗಡೆ ಮಾಡದೇ ತೆರಳಿದ್ದಾನೆ. ಘಟನೆ ನಡೆದ ಸುತ್ತಮುತ್ತಲ ಪ್ರದೇಶದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ. ಕಾರಿನ ನೋಂದಣಿ ಸಂಖ್ಯೆ ಪತ್ತೆಯಾಗಿದ್ದು, ಚಾಲಕನನ್ನು ವಶಕ್ಕೆ ಪಡೆದು ಘಟನೆ ಕುರಿತು ವಿಚಾರಣೆ ನಡೆಸಲಾಗುವುದು ಎಂದು ಸಂಚಾರ ಪೊಲೀಸ್ ಮೂಲಗಳು ತಿಳಿಸಿವೆ.

ಮಹಡಿಯಿಂದ ಬಿದ್ದು ವ್ಯಕ್ತಿ ಸಾವು: ಮನೆಯ ಮಹಡಿಯಿಂದ ಕಾಲು ಜಾರಿ ಬಿದ್ದ ಪರಿಣಾಮ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ದೇವಸಂದ್ರದ ನೇತ್ರಾವತಿ ಲೇಔಟ್‌ನ ನಿವಾಸಿ ಚಂದ್ರಕಾಂತ್ ಸಿಂಗ್ (38) ಮೃತಪಟ್ಟವರು.

‘ಶುಕ್ರವಾರ ತಡರಾತ್ರಿ ಚಂದ್ರಕಾಂತ್ ಸಿಂಗ್ ಅವರು ಮೂರು ಅಂತಸ್ತಿನ ಮಹಡಿಗೆ ತೆರಳಿದ್ದರು. ಮಹಡಿಯಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ, ಕತ್ತಲು ವಾತಾವರಣ ಇತ್ತು. ಕಾಲು ಜಾರಿ ಕೆಳಕ್ಕೆ ಬಿದ್ದು ಅವರು ಮೃತಪಟ್ಟಿದ್ದಾರೆ’ ಎಂದು ಮೂಲಗಳು ತಿಳಿಸಿವೆ. ಕೆಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ರೈತರ ಆದಾಯ ಹೆಚ್ಚಿಸಲು ಸಂತೆ’

ಜಿಕೆವಿಕೆ ಆವರಣದಲ್ಲಿ ನಡೆದ ರೈತ ಸಂತೆಗೆ ಚಾಲನೆ ನೀಡಿದ ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ಹವಾಮಾನ ವೈಪರಿತ್ಯ ನಿರ್ವಹಣೆ ರೈತರಿಗೆ ದೊಡ್ಡ ಸವಾಲಾಗಿದೆ. ಇಂತಹ ಸಂದರ್ಭದಲ್ಲಿ, ಮಧ್ಯವರ್ತಿಗಳ ಹಾವಳಿ ಇಲ್ಲದೆ, ನೇರ ಮಾರುಕಟ್ಟೆ ಒದಗಿಸುವ ರೈತ ಸಂತೆಗಳಿಂದ ರೈತರಿಗೆ ಹೆಚ್ಚಿನ ಆದಾಯ ಕಲ್ಪಿಸುತ್ತವೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರೈತ ಸಂತೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ರೈತರು ಆರ್ಥಿಕವಾಗಿ ಸದೃಢರಾಗಬೇಕಾದರೆ ತಾವು ಬೆಳೆದ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಬೇಕು. ಮುಂದಿನ ದಿನಗಳಲ್ಲಿ ರೈತರ ನೇರ ಮಾರುಕಟ್ಟೆಗೆ ಉತ್ತಮ ಅವಕಾಶಗಳಿವೆ’ ಎಂದು ಹೇಳಿದರು.

‘ಹಿಂದಿನ ದಿನಗಳಲ್ಲಿ ನಡೆಸುತ್ತಿದ್ದ ವಾರದ ಸಂತೆಗಳನ್ನು ಮಹಿಳಾ ಸ್ವಸಹಾಯ ಸಂಘಗಳ ಮೂಲಕ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಮತ್ತೆ ಆಯೋಜಿಸಬೇಕು. ಇದರಿಂದ ಉತ್ತಮ ಲಾಭಾಂಶದ ಜೊತೆಗೆ ಗ್ರಾಹಕರಿಗೆ ತಾಜಾ ಉತ್ಪನ್ನಗಳನ್ನು ಒದಗಿಸಲು ಅನುಕೂಲವಾಗಲಿದೆ’ ಎಂದರು.

ಜಿಕೆವಿಕೆ ಆವರಣದಲ್ಲಿ ಶನಿವಾರ ನಡೆದ ರೈತ ಸಂತೆಯಲ್ಲಿ ಸಾರ್ವಜನಿಕರು ದ್ರಾಕ್ಷಿ ಖರೀದಿಸಿದರು

ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ್ ದಳವಾಯಿ ಮಾತನಾಡಿ, ‘ರೈತ ಸಂತೆಯಲ್ಲಿ ಕಡಿಮೆ ದರದಲ್ಲಿ ತಾಜಾ ಕೃಷಿ ಉತ್ಪನ್ನಗಳು ನೇರವಾಗಿ ಗ್ರಾಹಕರಿಗೆ ತಲುಪಿಸಲಾಗುತ್ತದೆ. ಕೃಷಿ ವಿಶ್ವವಿದ್ಯಾಲಯದಲ್ಲಿ ಇಂತಹ ಸಂತೆ ಆಯೋಜನೆ ಮಾಡಿರುವುದರಿಂದ ಗ್ರಾಮೀಣ ಭಾಗದ ಸಂತೆಯ ವಾತಾವರಣ ಇಲ್ಲೂ ಭಾಸವಾಗುತ್ತಿದೆ. ನಗರವಾಸಿಗಳು ಅದರಲ್ಲೂ ಮುಖ್ಯವಾಗಿ ರೈತರು ಈ ಸಂತೆಯ ಲಾಭ ಪಡೆದುಕೊಳ್ಳಬೇಕು’ ಎಂದು ಕರೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಮಾತನಾಡಿ, ರೈತರು ಹಾಗೂ ಗ್ರಾಹಕರಿಗೆ ಒಂದೇ ಸೂರಿನಡಿ ಮಾರುಕಟ್ಟೆಯನ್ನು ಕಲ್ಪಿಸುವ ಉದ್ದೇಶದಿಂದ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಕಾಲೇಜು ಹಾಗೂ ವಿಸ್ತರಣಾ ಕೇಂದ್ರಗಳಲ್ಲಿ ಬೆಳೆದ ಕೃಷಿ ಉತ್ಪನ್ನಗಳು ಹಾಗೂ ಕೃಷಿ ತಂತ್ರಜ್ಞಾನ ಮತ್ತು ತಾಂತ್ರಿಕತೆಗಳನ್ನು ಪರಿಚಯಿಸಲಾಗುತ್ತಿದೆ ಎಂದು ಹೇಳಿದರು.

ಬಿತ್ತನೆ ಬೀಜ, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ವಿವಿಧ ಸಸ್ಯಾಭಿವೃದ್ಧಿ ತೋಟಗಾರಿಕಾ ಬೆಳೆಗಳಾದ ಹಣ್ಣು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳು, ಜೇನುಕೃಷಿ, ರಾಸಾಯನಿಕ ಮುಕ್ತ ಬೆಲ್ಲ ಸೇರಿದಂತೆ ಅನೇಕ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ರೈತ ಸಂತೆಯ ಅಂಗವಾಗಿ ಹಲಸಿನ ಹಣ್ಣಿನ ಮೇಳ, ತರಕಾರಿಗಳ ಸೆಲ್ಫಿ ಪಾಯಿಂಟ್ ಬಳಿ ಸಾರ್ವಜನಿಕರು ಫೋಟೊ ತೆಗೆಸಿಕೊಳ್ಳುತ್ತಿದ್ದರು.

ಬೇಸಿಗೆಯಲ್ಲೂ ಹಾಲಿನ ಹೊಳೆ

ಒಂದನೇ ಪುಟದಿಂದ...

ಲಭ್ಯವಿರುವ ದಾಖಲೆಗಳ ಪ್ರಕಾರ, ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದಲ್ಲಿ ಕಳೆದ ವರ್ಷ ಬೇಸಿಗೆ ಅವಧಿಯಲ್ಲಿ ನಿತ್ಯ 2.30 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿತ್ತು. ಈ ವರ್ಷ 2.44 ಲಕ್ಷ ಲೀಟರ್‌ನಷ್ಟು ಸಂಗ್ರಹವಾಗುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ಬಾರಿ 1.60 ಲಕ್ಷ ಲೀಟರ್ ಸಂಗ್ರಹವಾಗುತ್ತಿತ್ತು. ಈ ವರ್ಷ 1.91 ಲಕ್ಷ ಲೀಟರ್‌ಗೆ ಹೆಚ್ಚಿದೆ. ಬೆಳಗಾವಿಯ ಬೆಮುಲ್ ಒಕ್ಕೂಟದಲ್ಲಿ ಕಳೆದ ವರ್ಷ1.80 ಲಕ್ಷ ಲೀಟರ್ ಸಂಗ್ರಹವಾಗುತ್ತಿತ್ತು. ಈ ವರ್ಷ 2.11 ಲಕ್ಷ ಲೀಟರ್‌ಗೆ ಏರಿಕೆಯಾಗಿದೆ ಎಂದು ಒಕ್ಕೂಟದ ಮೂಲಗಳು ತಿಳಿಸಿವೆ.

ಖರೀದಿ ದರ ಹೆಚ್ಚಳದ ಪರಿಣಾಮ: ‘ಏಪ್ರಿಲ್ 1ರಿಂದ ಹಾಲಿನ ಖರೀದಿ ದರವನ್ನು ಪ್ರತಿ ಲೀಟರ್‌ಗೆ ₹ 4ರಷ್ಟು ಹೆಚ್ಚಿಸಲಾಗಿದೆ. ಆ ಬಳಿಕ ಹಾಲು ಪೂರೈಕೆಯಲ್ಲಿ ಹೆಚ್ಚಳವಾಗಿದೆ’ ಎನ್ನುತ್ತಾರೆ ಕರ್ನಾಟಕ ಹಾಲು ಮಹಾಮಂಡಳದ ಅಧ್ಯಕ್ಷ ಭೀಮಾನಾಯ್ಕ.

ಭೀಮಾನಾಯ್ಕ

ಹಸಿರು ಮೇವಿನ ಲಭ್ಯತೆ: ಈ ಬಾರಿ ರಾಜ್ಯದ ಬಹುತೇಕ ಕಡೆ ಪೂರ್ವ ಮುಂಗಾರು ಉತ್ತಮವಾಗಿದೆ. ಫೆಬ್ರುವರಿಯಿಂದಲೂ ರಾಜ್ಯದ ಕೆಲವೆಡೆ ಆಗಾಗ ಮಳೆಯಾಗುತ್ತಿದೆ. ಮಾರ್ಚ್ ತಿಂಗಳಲ್ಲಿ ರಾಜ್ಯದ 13 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ ಎಂದು ಹವಾಮಾನ ಇಲಾಖೆಯ ಅಂಕಿ–ಅಂಶಗಳು ಹೇಳುತ್ತಿವೆ. ‘ಸ್ವಲ್ಪ ಮಳೆಯಾಗಿದ್ದರಿಂದ, ಅಲ್ಲಲ್ಲಿ ಹಸಿರು ಮೇವು ಲಭ್ಯವಾಗಿದೆ. ವಾತಾವರಣವೂ ರಾಸುಗಳಿಗೆ ಪೂರಕವಾಗಿದೆ. ಹೀಗಾಗಿ, ಹಾಲಿನ ಇಳುವರಿ ಕಡಿಮೆಯಾಗಿಲ್ಲ’ ಎಂಬುದು ಹೈನುಗಾರರೊಬ್ಬರ ಅಭಿಪ್ರಾಯವಾಗಿದೆ.

ನೃತ್ಯ ಕಲರವ

ಬೆಂಗಳೂರಿನ ರೇಣುಕಾಚಾರ್ಯ ವಿದ್ಯಾ ಸಂಸ್ಥೆ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಮನನೊಂದು ವ್ಯಕ್ತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿದ್ದ ಮಧುಸೂದನ್ (40) ಅವರು ದಾಸರಹಳ್ಳಿಯ ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಧುಸೂದನ್ ಅವರು ದಾಸರಹಳ್ಳಿಯ ನೆಲಮಹೇಶ್ವರಮ್ಮ ದೇವಸ್ಥಾನದ ಬಳಿಯ ಮನೆಯಲ್ಲಿ ವಾಸವಾಗಿದ್ದರು. ಸಾಲ ನೀಡಿದವರ ಕಾಟಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

‘ಮಧುಸೂದನ್ ಅವರು ಹಲವು ವ್ಯಕ್ತಿಗಳಿಂದ ಸಾಲ ಮಾಡಿದ್ದರು. ಹಣ ನೀಡಿದವರು ಸಾಲ ವಾಪಸ್ ನೀಡುವಂತೆ ಒತ್ತಾಯಿಸುತ್ತಿದ್ದರು. ಇದರಿಂದ ಮಧುಸೂದನ್ ಅವರು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಮನೆಯಲ್ಲಿ ಯಾರು ಇಲ್ಲದ ಸಂದರ್ಭದಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಆತ್ಮಹತ್ಯೆಗೆ ಮೊದಲು ಪತ್ನಿಗೆ ವಾಟ್ಸ್ ಆ್ಯಪ್ ಮೂಲಕ ‘ಮನೆಗೆ ಬೇಗ ಬಾ’ ಎಂದು ಸಂದೇಶ ಕಳುಹಿಸಿದ್ದರು. ಅವರು ಮನೆಗೆ ಬಂದು ಕಿಟಕಿಯ ಮೂಲಕ ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ.

ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕಳಿಸಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಪತ್ನಿಗೆ ಹಸ್ತಾಂತರಿಸಲಾಗಿದೆ. ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪ್ರಭಾವಿಗಳ ಜತೆ ಐಶ್ವರ್ಯ ಗೌಡ ವ್ಯವಹಾರ’

ಒಂದನೇ ಪುಟದಿಂದ...

ವಂಚನೆಯಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ ಎಂಬ ದಿಕ್ಕಿನಲ್ಲಿ ತನಿಖೆ ನಡೆಸುತ್ತಿದ್ದೇವೆ’ ಎಂದು ಇ.ಡಿ ಹೇಳಿದೆ.

‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಐಶ್ವರ್ಯ ಗೌಡ, ಹರೀಶ್ ಅವರ ಮನೆಗಳು ಮತ್ತು ಅವರ ಸಂಪರ್ಕದಲ್ಲಿ ಇದ್ದ ಕೆಲ ಪ್ರಭಾವಿಗಳ ಮನೆಯೂ ಸೇರಿ 14 ಕಡೆ ಎರಡು ದಿನ ಸತತ ತಪಾಸಣೆ ನಡೆಸಿದ್ದೇವೆ. ಈ ವೇಳೆ ಬ್ಯಾಂಕ್ ಖಾತೆ ವಹಿವಾಟು ದಾಖಲೆಗಳು, ಹೂಡಿಕೆ ಪತ್ರಗಳು, ₹2.25 ಕೋಟಿ ನಗದು ಮತ್ತು ಹಲವು ದುಬಾರಿ ಬೆಲೆಯ ಚರಾಸ್ತಿಗಳನ್ನು ವಶಕ್ಕೆ ಪಡೆದಿದ್ದೇವೆ’ ಎಂದು ತನ್ನ ಪ್ರಕಟಣೆಯಲ್ಲಿ ವಿವರಿಸಿದೆ.

‘ತಮ್ಮಲ್ಲಿ ಹೂಡಿಕೆ ಮಾಡಿದವರು ಹಣ ವಾಪಸ್ ಕೇಳಿದಾಗ ಐಶ್ವರ್ಯ ಅವರು ರಾಜ್ಯದ ಕೆಲ ಪ್ರಭಾವಿ ರಾಜಕಾರಣಿಗಳ ಹೆಸರು ಬಳಸಿಕೊಂಡಿದ್ದಾರೆ. ಹಣ ಕೇಳಿದರೆ ಪರಿಣಾಮ ಕೆಟ್ಟದಾಗಿರುತ್ತದೆ ಎಂದು ಬೆದರಿಕೆ ಹಾಕಿದ್ದಾರೆ. ಕೆಲ ರಾಜಕಾರಣಿಗಳ ಜತೆ ಐಶ್ವರ್ಯ ಸಂಪರ್ಕದಲ್ಲಿ ಇದ್ದುದಕ್ಕೆ ಮತ್ತು ಅವರೊಂದಿಗೆ ಹಣಕಾಸು ವ್ಯವಹಾರ ನಡೆಸಿರುವುದಕ್ಕೆ ಸಾಕ್ಷ್ಯಗಳು ದೊರೆತಿವೆ. ವಂಚನೆಯಲ್ಲಿ ರಾಜಕಾರಣಿಗಳ ಪಾತ್ರ ಇದೆಯೇ ಎಂಬ ದಿಕ್ಕಿನಲ್ಲಿ ತನಿಖೆ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.

‘ನನ್ನನ್ನು ಮುಗಿಸಲು ಷಡ್ಯಂತ್ರ’

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ವಿನಯ್ ಕುಲಕರ್ಣಿ, ‘ತನಿಖೆಯ ಹೆಸರಿನಲ್ಲಿ ಒಂದು ತಿಂಗಳಿಂದ ನನಗೆ ಹಿಂಸೆ ನೀಡಲಾಗುತ್ತಿದೆ. ಐಶ್ವರ್ಯ ಜತೆಗೆ ನನ್ನ ಆರ್ಥಿಕ ವ್ಯವಹಾರ ಇದ್ದರೆ, ಸುಲಭವಾಗಿ ಪತ್ತೆ ಮಾಡಬಹುದಿತ್ತು. ಆದರೆ ಅಂಥದ್ದೇನೂ ಇಲ್ಲ. ಹೀಗಾಗಿಯೇ ಅನಗತ್ಯವಾಗಿ ಹಿಂಸೆ ನೀಡುತ್ತಿದ್ದಾರೆ’ ಎಂದಿದ್ದಾರೆ.

‘ಅವಸಾನದ ಅಂಚಿನಲ್ಲಿ ಪಾರಂಪರಿಕ ಕಲೆಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದ ಅಂಚಿನ ಸಮುದಾಯಗಳು ಅವನತಿಯ ಹಾದಿಯಲ್ಲಿವೆ. ಅವುಗಳ ಕುಲಕಸುಬುಗಳು ಮತ್ತು ಪಾರಂಪರಿಕ ಕಲೆಗಳು ಕಣ್ಮರೆಯಾಗುತ್ತಿವೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.

ನಗರದ ರಾಜಾಜಿನಗರದ ಶಿವಶಕ್ತಿ ನೃತ್ಯ ಶಾಲೆಯ ರಜತ ಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಈಚಿನ ದಶಕಗಳಲ್ಲಿ ಜಗತ್ತಿನಾದ್ಯಂತ ಸಾವಿರಾರು ಸಣ್ಣ– ಪುಟ್ಟ ಭಾಷೆಗಳು ಸಂಪೂರ್ಣವಾಗಿ ಇಲ್ಲವಾಗಿವೆ. ಭಾಷೆಗಳ ಜತೆಗೆ ಆ ಜನ ಸಮುದಾಯಗಳ ಪಾರಂಪರಿಕ ಕಲೆಗಳೂ ನಶಿಸಿಹೋಗುತ್ತವೆ. ಮುಂದಿನ ಐವತ್ತು ವರ್ಷಗಳಲ್ಲಿ ಜಗತ್ತಿನ ಎಲ್ಲ ಜನರ ಮೇಲೆ ಕೆಲವೇ ಭಾಷೆಗಳು ಅಧಿಪತ್ಯ ಸಾಧಿಸುವ ಅಪಾಯವಿದೆ’ ಎಂದರು.

‘ಈ ಅಪಾಯಗಳಿಂದ ಪಾರಂಪರಿಕ ಕಲೆ ಮತ್ತು ಸಂಸ್ಕೃತಿಗಳನ್ನು ರಕ್ಷಿಸಲು ಪರಿಣಾಮಕಾರಿ ಪ್ರಯತ್ನ ಅಗತ್ಯ. ಆ ಯತ್ನದ ಭಾಗವಾಗಿ ಸಂಗೀತ, ನೃತ್ಯ, ನಾಟಕ, ಯಕ್ಷಗಾನ ಸೇರಿದಂತೆ ಇನ್ನಿತರ ಕಲಾ ಪ್ರಕಾರಗಳಿಗೆ ಪ್ರೋತ್ಸಾಹ ನೀಡಬೇಕು’ ಎಂದು ಹೇಳಿದರು.

ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಶಾಸಕ ಸಿ.ಎನ್.ಅಶ್ವತ್ಥನಾರಾಯಣ ಭಾಗಿಯಾಗಿದ್ದರು.

ಅಧಿಸೂಚನೆ ಹಿಂಪಡೆಯುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಸಚಿವ ಮುನಿಯಪ್ಪಗೆ ಆಗ್ರಹ

ಭೂಸ್ವಾಧೀನ ಪ್ರತಿ ಸುಟ್ಟು ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ (ದೇವನಹಳ್ಳಿ): ಚನ್ನರಾಯಪಟ್ಟಣ ಭೂಸ್ವಾಧೀನ ಅಧಿಸೂಚನೆ ವಿರೋಧಿಸಿ ಶನಿವಾರ ಧರಣಿನಿರತ ರೈತರು ಪ್ರತಿಯನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ರೈತರ ಪ್ರತಿರೋಧ ಲೆಕ್ಕಿಸದೆ ಫಲವತ್ತಾತ ಭೂಸ್ವಾಧೀನಕ್ಕೆ ಮುಂದಾಗಿರುವ ಸರ್ಕಾರ ಎರಡು ದಿನಗಳ ಹಿಂದಷ್ಟೇ ಹೋಬಳಿಯ ಎಂಟು ಹಳ್ಳಿಗಳ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ ಹೋರಾಟ ಸಮಿತಿಯು ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

‘ಯಾವುದೇ ಕಾರಣಕ್ಕೂ ಭೂಮಿ ಬಿಡುವ ಪ್ರಶ್ನೆಯೇ ಇಲ್ಲ. ಪ್ರಾಣತ್ಯಾಗ ಮಾಡಿಯಾದರೂ ಸರಿಯೇ ಭೂಮಿ ಬಿಡುವುದಿಲ್ಲ. ನಮ್ಮ ಭೂಮಿ ತಂಟೆಗೆ ಬಂದರೆ ಸುಮ್ಮನೆ ಬಿಡುವುದಿಲ್ಲ’ ಎಂದು ರೈತರು ಎಚ್ಚರಿಕೆ ನೀಡಿದರು.

ಕಳೆದ ಮೂರೂವರೆ ವರ್ಷಗಳಿಂದ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1777 ಎಕರೆ ಭೂಸ್ವಾಧೀನವನ್ನು ವಿರೋಧಿಸಿ ನಿರಂತರ ಧರಣಿ ನಡೆಸುತ್ತಿದ್ದರೂ ಸರ್ಕಾರ ಎರಡು ಹಂತದಲ್ಲಿ 10 ಹಳ್ಳಿಗಳ 1280 ಎಕರೆ ಭೂಮಿಗೆ ಅಂತಿಮ ಅಧಿಸೂಚನೆ ಹೊರಡಿಸಿದೆ.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ನಾಡಕಚೇರಿ ಮುಂದೆ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಸದಸ್ಯರು ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಸುಟ್ಟು ಪ್ರತಿಭಟನೆ ನಡೆಸಿದರು

ಸರ್ಕಾರದ ಈ ಆದೇಶವನ್ನು ಖಂಡಿಸಿ ಮಾತನಾಡಿದ ರೈತರು, ‘ಜನರ ಸಂಪೂರ್ಣ ವಿರೋಧದ ನಡುವೆಯು ಸರ್ಕಾರ ಬಲವಂತವಾಗಿ ಭೂಸ್ವಾಧೀನಕ್ಕೆ ಮುಂದಾಗಿರುವುದು ರೈತ ಸಮುದಾಯಕ್ಕೆ ಮಾಡುತ್ತಿರುವ ದ್ರೋಹ. ಇದನ್ನು ಸಹಿಸಲು ಸಾಧ್ಯವೇ ಇಲ್ಲ’ ಎಂದರು.

ಏಪ್ರಿಲ್ 27ರಂದು ಜಿಲ್ಲೆಯಲ್ಲಿ ಸರ್ಕಾರದ ಸಾಧನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಬಡ ರೈತರ ಭೂಮಿ ಕಸಿದುಕೊಂಡು ಬೀದಿಗೆ ತಳ್ಳುತ್ತಿರುವುದೇ ಇವರ ಅತಿದೊಡ್ಡ ಸಾಧನೆ. ಇದೇ ಈ ಕಾಲದ ವ್ಯಂಗ್ಯ. ಇದು ಈ ತಾಲ್ಲೂಕಿನ ಬಡ ರೈತರ ಸಮಾಧಿಗಳ ಮೇಲೆ ನಡೆಸುತ್ತಿರುವ ಸಮಾವೇಶ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉಸ್ತುವಾರಿ ಸಚಿವ ಕೆ.ಎಚ್ ಮುನಿಯಪ್ಪ ಈಚೆಗೆ ಭೇಟಿಯಾದಾಗಲೂ ‘ರೈತರಿಗೆ ಯಾವುದೇ ಆತಂಕ ಬೇಡ. ನಾನು ರೈತರ ಪರವಾಗಿದ್ದು ಭೂಮಿ ಉಳಿಸುತ್ತೇನೆ’ ಎಂದು ಭರವಸೆ ನೀಡಿದ್ದರು. ರೈತರಿಗೆ ವಿಶ್ವಾಸದ್ರೋಹ ಮಾಡದೆ ತಕ್ಷಣವೇ ಈ ಅಧಿಸೂಚನೆ ಹಿಂಪಡೆಯುವಂತೆ ಸರ್ಕಾರದ ಮೇಲೆ ಒತ್ತಡ ಹೇರಿ ರೈತರಿಗೆ ನ್ಯಾಯ ಒದಗಿಸಬೇಕು’ ಎಂದು ಒತ್ತಾಯಿಸಿದರು.

ಸರ್ಕಾರಕ್ಕೆ ಕಿಂಚಿತ್ತಾದರೂ ಬದ್ಧತೆ ಇದ್ದರೆ ಸಾಧನಾ ಸಮಾವೇಶದಲ್ಲಿ ಚನ್ನರಾಯಪಟ್ಟಣ ಹೋಬಳಿ ರೈತರ ಭೂಮಿಯನ್ನು ಸ್ವಾಧೀನದಿಂದ ಕೈಬಿಡುವ ಘೋಷಣೆ ಮಾಡುವ ಮೂಲಕ ತಮ್ಮ ಘನತೆ ಉಳಿಸಿಕೊಳ್ಳಲಿ ಎಂದು ಆಗ್ರಹಿಸಿದರು.

ಸಭೆಯಲ್ಲಿ ನೀರಾವರಿ ಹೋರಾಟಗಾರ ಆಂಜನೇಯರೆಡ್ಡಿ, ಪ್ರಾಂತ ರೈತ ಸಂಘದ ಚಂದ್ರತೇಜಸ್ವಿ, ಪ್ರಭಾ ಬೆಳವಂಗಲ, ರೈತ ಮುಖಂಡರಾದ ಕಾರಳ್ಳಿ ಶ್ರೀನಿವಾಸ್, ನಲ್ಲಪ್ಪನಹಳ್ಳಿ ನಂಜಪ್ಪ, ಅಶ್ವತ್ಥಪ್ಪ, ತಿಮ್ಮರಾಯಪ್ಪ, ವೆಂಕಟೇಶ್, ಮುಕುಂದ, ಪ್ರಮೋದ್, ಮೋಹನ್, ಮಂಜುನಾಥ್, ಮಾರೇಗೌಡ ಸೇರಿದಂತೆ ನೂರಾರು ರೈತರು ಭಾಗಿಯಾಗಿದ್ದರು.

ಭೂಸ್ವಾಧೀನ ಕಾಯ್ದೆ ಉಲ್ಲಂಘನೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಪ್ರದೇಶದ ಅಭಿವೃದ್ಧಿ, ನೂತನ ಬಡಾವಣೆಗಳ ನಿರ್ಮಾಣದ ಹೆಸರಿನಲ್ಲಿ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರ 2013ರ ಭೂಸ್ವಾಧೀನ ಕಾಯ್ದೆಯನ್ನು ಉಲ್ಲಂಘಿಸಿ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಖಂಡನೀಯ ಎಂದು ಭಾರತೀಯ ಕಿಸಾನ್ ಸಂಘ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಿ.ಎಂ. ಕೋಕರೆ, ‘ಕೈಗಾರಿಕೆಗಳಿಗಾಗಿ ಕೃಷಿ ಭೂಮಿಯನ್ನು ಭೂ ಸ್ವಾಧೀನ ಮಾಡಿಕೊಳ್ಳುವುದನ್ನು ಕೂಡಲೇ ಕೈಬಿಡಬೇಕು. ಇಲ್ಲದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ಭೂ ಸ್ವಾಧೀನ ವಿರೋಧಿ ಹೋರಾಟವನ್ನು ಕೈಗೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

‘ಬೆಂಗಳೂರಿನ ಸುತ್ತಮುತ್ತಲೂ ಅನೇಕ ಕಾರ್ಖಾನೆಗಳು ಸ್ಥಾಪನೆಯಾಗಿದ್ದು, ಇವುಗಳಿಂದ ಹೊರ ಬರುತ್ತಿರುವ ಇ–ತ್ಯಾಜ್ಯದ ಸೂಕ್ತ ವಿಲೇವಾರಿ ಮತ್ತು ಸಂಸ್ಕರಣೆ ಕೆಲಸಗಳು ನಡೆಯುತ್ತಿಲ್ಲ. ಸೀಸಾ, ಕ್ಯಾಡ್ಮಿಯಂ, ಸಿಲಿಕಾನ್, ತಾಮ್ರ, ಕೋಬಾಲ್ಟ್‌ದಂತಹ ಲೋಹಗಳು ಜಲ ಮತ್ತು ಮಣ್ಣಿನಲ್ಲಿ ಸೇರಿ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಇದು ಸಾರ್ವಜನಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ’ ಎಂದು ಆರೋಪಿಸಿದರು.

‘ಜನರ ಜೀವನಾಧಾರವಾಗಿರುವ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಸರಿಯಲ್ಲ. ಸಾರ್ವಜನಿಕರಿಗೆ ಬೇಕಾಗುವ ಉದ್ಯೋಗ ಸೃಷ್ಟಿಸುವ ಬದಲು, ಉಚಿತ ಯೋಜನೆಗಳನ್ನು ಜಾರಿಗೊಳಿಸಿ, ಭಿಕ್ಷುಕರನ್ನಾಗಿಸುತ್ತಿರುವುದು ಭಾರತದ ಸಂವಿಧಾನಕ್ಕೆ ವಿರುದ್ಧವಾಗಿದೆ’ ಎಂದು ದೂರಿದರು.

ಸಂಘದ ಉಪಾಧ್ಯಕ್ಷ ರಮೇಶ್ ರಾಜು, ಕಾನೂನು ಸಲಹೆಗಾರ ಟಿ. ರಾಮಸ್ವಾಮಿರೆಡ್ಡಿ ಉಪಸ್ಥಿತರಿದ್ದರು.